ಹುಬ್ಬಳ್ಳಿ
ಸೋಮವಾರ, 4 ಮೇ 2026
ಸಂಪುಟ 16, ಸಂಚಿಕೆ 40, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಅನುರಾಧೆ

ದಿನದ ಮಾತು

ಅವಕಾಶ ಸಿಗದ ಪ್ರತಿಭೆ, ಪ್ರತಿಭೆ ಇಲ್ಲದ ಅವಕಾಶ ಎರಡೂ ಪ್ರಯೋಜನಕ್ಕೆ ಬರುವುದಿಲ್ಲ.

– ಕಣ್ಣದಾಸನ್

ಹರೆಯದವರಲ್ಲಿ ಆತ್ಮಹತ್ಯೆ

ತಾರುಣ್ಯ ತಲ್ಲಣ

• ಡಾ.ಕೆ.ಆರ್. ಶ್ರೀಧರ್

• ಪುಟ ೬

ಕಿರುಸುದ್ದಿ

ಕೆಪಿಎಸ್ಸಿ ಸುಧಾರಣೆಗೆ ಸದನ ಸಮಿತಿ ರಚನೆ

• **ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್ಸಿ) ನಡೆಯುತ್ತಿರುವ ಅಕ್ರಮಗಳನ್ನು ತಡೆಯಲು ಮತ್ತು ಆಯೋಗದಲ್ಲಿ ಮತ್ತಷ್ಟು ಸುಧಾರಣೆಗಳನ್ನು ತರುವ ಉದ್ದೇಶದಿಂದ ಕಾಂಗ್ರೆಸ್ ಶಾಸಕ ಆರ್.ವಿ. ದೇಶಪಾಂಡೆ ನೇತೃತ್ವದಲ್ಲಿ ವಿಧಾನಸಭೆ ಸದಸ್ಯರನ್ನೊಳಗೊಂಡ ಸದನ ಸಮಿತಿ ರಚಿಸಲಾಗಿದೆ. ಪುಟ ೪

ಎಲ್‌ಇಟಿ ಉಗ್ರ ಭೋಟಾ ಉಸ್ಮಾನ್‌ಗೆ 7 ವರ್ಷ ಜೈಲು

• **ಹೊಸದಿಲ್ಲಿ:** ಬೆಂಗಳೂರು ಜೈಲು ಉಗ್ರವಾದ ಪ್ರಸರಣ ಪ್ರಕರಣದಲ್ಲಿ ಲಷ್ಕರ್-ಇ-ತೊಯ್ಬಾ (ಎಲ್‌ಇಟಿ) ಉಗ್ರ ಸಂಘಟನೆಯ ಮತ್ತೊಬ್ಬ ಪ್ರಮುಖ ಉಗ್ರನಿಗೆ ಎನ್‌ಐಎ ವಿಶೇಷ ನ್ಯಾಯಾಲಯವು ಏಳು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ವಿಕ್ರಮ್ ಕುಮಾರ್ ಅಲಿಯಾಸ್ ಭೋಟಾ ಉಸ್ಮಾನ್ ಎಂಬಾತನಿಗೆ ನ್ಯಾಯಾಲಯವು 7 ವರ್ಷಗಳ ಜೈಲು ಶಿಕ್ಷೆಯ ಜತೆ 30 ಸಾವಿರ ರೂ. ದಂಡ ವಿಧಿಸಿದೆ.

• ಪುಟ ೪

ಡಿಸಿಎಂ ಹೇಳಿಕೆ ಸಂವಿಧಾನಕ್ಕೆ ಅಪಮಾನ: ಛಲವಾದಿ

• ಪುಟ ೫

ಮೇ 6ಕ್ಕೆ ಅರ್ಜುನ ಸ್ಮಾರಕ ಉದ್ಘಾಟನೆ: ಈಶ್ವರ ಖಂಡ್ರೆ

• ಪುಟ ೫

ದಿಲ್ಲಿ ವಸತಿ ಕಟ್ಟಡದಲ್ಲಿ ಬೆಂಕಿ: 9 ಜನರ ಸಾವು

• ಪುಟ ೭

ಇಸ್ರೇಲ್‌ನಿಂದ ಅಮೆರಿಕದ ಫೈಟರ್ ಜೆಟ್‌ಗಳ ಖರೀದಿ

• ಪುಟ ೭



ಮಮತಾಗೆ ಅಗ್ನಿಪರೀಕ್ಷೆ

ಪಶ್ಚಿಮ ಬಂಗಾಳದ ಫಲಿತಾಂಶದ ದಿನ: ಬಿಜೆಪಿ ಐತಿಹಾಸಿಕ ಜಯ ಸಾಧಿಸಲಿದೆಯೇ?

• ಪುಟ ೭

ಸುದ್ದಿ ಸಮಗ್ರ

ಪ.ಬಂಗಾಳ, ತ.ನಾಡಿನ ಅಧಿಕಾರದ ದಿಕ್ಕು ಬದಲಾಗುತ್ತದೆಯೇ?

ಇಂದು ಫಲಿತಾಂಶ

- ಕೇರಳ ಸೇರಿ 4 ರಾಜ್ಯ, 1 ಕೇಂದ್ರಾಡಳಿತ ಪ್ರದೇಶದಲ್ಲಿ ಬೆಳಗ್ಗೆ 8ರಿಂದ ಮತ ಎಣಿಕೆ
- ಅನಧಿಕೃತ ಪ್ರವೇಶ ತಡೆಯಲು ಕ್ಯುಆರ್ ಕೋಡ್ ಆಧಾರಿತ ಗುರುತಿನ ಚೀಟಿ ವ್ಯವಸ್ಥೆ
- 3 ಹಂತದ ಭದ್ರತೆ, ಮತ ಎಣಿಕೆ ಕೇಂದ್ರಗಳಿಗೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಕಾವಲು

• **ಹೊಸದಿಲ್ಲಿ/ಕೋಲ್ಕತ್ತಾ/ಚೆನ್ನೈ:** ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಕೇರಳ ಹಾಗೂ ಪುದುಚೇರಿಯಲ್ಲಿ ನಡೆದ ಭಾರೀ ರಾಜಕೀಯ ಪೈಪೋಟಿಯ ಅಂತಿಮ ಫಲಿತಾಂಶ ಸೋಮವಾರ ಹೊರಬೀಳಲಿದೆ. ಬೆಳಗ್ಗೆ 8 ಗಂಟೆಯಿಂದ ಮತ ಎಣಿಕೆ ಆರಂಭವಾಗಲಿದ್ದು, ಅಧಿಕಾರದ ಗದ್ದುಗೆ ಯಾರ ಪಾಲಾಗಲಿದೆ ಎಂಬ ಕುತೂಹಲಕ್ಕೆ ಉತ್ತರ ಸಿಗಲಿದೆ.

ಮೊದಲಿಗೆ ಅಂಚೆ ಮತಪತ್ರಗಳ ಎಣಿಕೆ ನಡೆಯಲಿದ್ದು, ಬಳಿಕ ಇವಿಎಂ ಮತಗಳ ಎಣಿಕೆ ಪ್ರಾರಂಭವಾಗಲಿದೆ. ಮತ ಎಣಿಕೆ ಕೇಂದ್ರಗಳಲ್ಲಿ ಈ ಬಾರಿ ಚುನಾವಣಾ ಆಯೋಗ ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆ ಜಾರಿಗೊಳಿಸಿದೆ. ಅನಧಿಕೃತ ಪ್ರವೇಶ ತಡೆಯಲು ಮೊದಲ ಬಾರಿಗೆ ಕ್ಯುಆರ್ ಕೋಡ್ ಆಧಾರಿತ ಗುರುತಿನ ಚೀಟಿ ವ್ಯವಸ್ಥೆ ಜಾರಿಗೆ ತರಲಾಗಿದೆ.

ದೇಶದ ಐದು ಪ್ರಮುಖ ರಾಜ್ಯಗಳ ಫಲಿತಾಂಶಗಳು ಮುಂದಿನ ರಾಷ್ಟ್ರೀಯ ರಾಜಕೀಯದ ದಿಕ್ಕು ನಿರ್ಧರಿಸುವ ಸೂಚಕವಾಗುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗಿದೆ.



ತ.ನಾಡಲ್ಲಿ ಡಿಎಂಕೆ-ಎಐಎಡಿಎಂಕೆ ಸಮರ

ತಮಿಳುನಾಡಿನಲ್ಲಿ ಆಡಳಿತಾರೂಢ ಡಿಎಂಕೆ ಮತ್ತೊಮ್ಮೆ ಅಧಿಕಾರ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಆದರೆ, ಈ ಬಾರಿ ರಾಜಕೀಯ ಸಮೀಕರಣಗಳು ಬದಲಾಗಿದ್ದು, ನಟ-ರಾಜಕಾರಣಿ ವಿಜಯ್ ನೇತೃತ್ವದ ಟಿವಿಕೆ ಹಾಗೂ ಸೀಮಾನ್ ಅವರ ಎನ್‌ಟಿಕೆ ಪಕ್ಷಗಳು ಹೊಸ ಸವಾಲು ಎಸೆದಿವೆ. ಪುಟ ೪

ಬಂಗಾಳದಲ್ಲಿ ತುರುಸಿನ ಸ್ಪರ್ಧೆ

ಪಶ್ಚಿಮ ಬಂಗಾಳದಲ್ಲಿ 293 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ 77 ಕೇಂದ್ರಗಳಲ್ಲಿ ನಡೆಯಲಿದೆ. ರಾಜ್ಯದಲ್ಲಿ ಈ ಬಾರಿ ದಾಖಲೆ ಮಟ್ಟದ ಶೇ.92.47 ಮತದಾನ ನಡೆದಿದ್ದು, ಚುನಾವಣೆಯ ನಂತರ ರಾಜಕೀಯ ಉದ್ವಿಗ್ನತೆ ತಾರಕಕ್ಕೇರಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸತತ ನಾಲ್ಕನೇ ಬಾರಿ ಅಧಿಕಾರ ಉಳಿಸಿಕೊಳ್ಳುವ ವಿಶ್ವಾಸದಲ್ಲಿದೆ. ಮತ್ತೊಂದೆಡೆ ಬಿಜೆಪಿ ಬಲಿಷ್ಠ ಸವಾಲು ಹಾಕಿದೆ. ಸಿಪಿಐ(ಎಂ)-ಕಾಂಗ್ರೆಸ್ ಮೈತ್ರಿ ಮತ್ತೆ ರಾಜ್ಯ ರಾಜಕಾರಣದಲ್ಲಿ ನೆಲೆ ಕಂಡುಕೊಳ್ಳಲು ಯತ್ನಿಸುತ್ತಿದೆ.ದಕ್ಷಿಣ 24 ಪರಗಣ ಜಿಲ್ಲೆಯ ಫಾಲ್ಟಾ ಕ್ಷೇತ್ರದಲ್ಲಿ ಗಂಭೀರ ಚುನಾವಣಾ ಅಕ್ರಮ ಆರೋಪಗಳ ಹಿನ್ನೆಲೆಯಲ್ಲಿ ಮತದಾನ ರದ್ದುಪಡಿಸಲಾಗಿದ್ದು, ಮೇ 21ರಂದು ಮರು ಮತದಾನ ನಡೆಯಲಿದೆ. ಚುನಾವಣಾ ಆಯೋಗ ಹೆಚ್ಚುವರಿ 165 ಮತ ಎಣಿಕೆ ವೀಕ್ಷಕರು ಹಾಗೂ 77 ಪೊಲೀಸ್ ವೀಕ್ಷಕರನ್ನು ನಿಯೋಜಿಸಿದೆ. ರಿಟರ್ನಿಂಗ್ ಅಧಿಕಾರಿಗಳು ಮತ್ತು ವೀಕ್ಷಕರ ಹೊರತು ಮೊಬೈಲ್ ಬಳಕೆ ನಿಷೇಧಿಸಲಾಗಿದೆ.

ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ ಕನಸು

• ಪುಟ ೪

ಕದನ ಕುತೂಹಲ ಹೆಚ್ಚಿಸಿದ ದಾವಣಗೆರೆ, ಬಾಗಲಕೋಟೆ

ಬಿಗಿ ಬಂದೋಬಸ್ತ್‌ನಲ್ಲಿ ಇಂದು ಮತ ಎಣಿಕೆ

• **ಬೆಂಗಳೂರು:** ತೀವ್ರ ಕುತೂಹಲ ಕೆರಳಿಸಿರುವ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಮತ ಎಣಿಕೆ ಸೋಮವಾರ(ಮೇ 4) ನಡೆಯಲಿದೆ. ಮತ ಎಣಿಕೆ ಕೇಂದ್ರದ ಸುತ್ತ 100 ಮೀಟರ್ ವ್ಯಾಪ್ತಿಯಲ್ಲಿ ಮುಕ್ತ ವಲಯ ಎಂದು ಘೋಷಿಸಲಾಗಿದೆ. ಬೆಳಗ್ಗೆ 8 ಗಂಟೆಗೆ ಅಂಚೆ ಮತ ಎಣಿಕೆ ಆರಂಭವಾಗಲಿದ್ದು, 8.30ರಿಂದ ಮತ ಯಂತ್ರಗಳ ಮತ ಎಣಿಕೆ ಆರಂಭವಾಗಲಿದೆ. ಮತ ಎಣಿಕೆ ಹಿನ್ನೆಲೆಯಲ್ಲಿ ಮತ ಎಣಿಕೆ ಕೇಂದ್ರಗಳ ಸುತ್ತ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದ್ದು, ಮಧ್ಯಾಹ್ನದ ವೇಳೆಗೆ ಎರಡು ಕ್ಷೇತ್ರಗಳ ಫಲಿತಾಂಶ ಹೊರಬೀಳಲಿದೆ. ಈ ಎರಡು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಮತ ಎಣಿಕೆ ಕಾರ್ಯದ ನಂತರ ವಿಜಯಮಾಲೆ ಯಾರಿಗೆ ಎಂಬುದು ಗೊತ್ತಾಗಲಿದೆ. ಶಾಮನೂರು ಶಿವಶಂಕರಪ್ಪನವರ ನಿಧನದಿಂದ ತೆರವಾಗಿದ್ದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸಚಿವ ಮಲ್ಲಿಕಾರ್ಜುನ ಪುತ್ರ ಸಮರ್ಥ್ ಶಾಮನೂರು ಹಾಗೂ ಬಿಜೆಪಿಯಿಂದ ಶ್ರೀನಿವಾಸ ದಾಸಕರಿಯಪ್ಪ ಸ್ಪರ್ಧಿಸಿದ್ದಾರೆ. ಟಿಕೆಟ್ ಘೋಷಣೆ ಸಂದರ್ಭದಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಟಿಕೆಟ್ ನೀಡುವ ವಿಚಾರದಲ್ಲಿ ಗೊಂದಲ ಉಂಟಾಗಿತ್ತು. ಹೀಗಾಗಿ ಈ ಕ್ಷೇತ್ರದ ಫಲಿತಾಂಶ ಕುತೂಹಲಕ್ಕೆ ಎಡೆಮಾಡಿ ಚುನಾವಣೆ ಕೊಟ್ಟಿದೆ. ಈ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕು ಎಂಬ ಬಗ್ಗೆ ಕಾಂಗ್ರೆಸ್‌ನಲ್ಲಿ ಪ್ರಬಲ ಒತ್ತಾಯ ಕೇಳಿಬಂದಿತ್ತು. ಪುಟ ೪

ಫಲಿತಾಂಶದ ಅಧಿಕೃತ ಘೋಷಣೆ ಬಾಕಿ

ಬಿಜೆಪಿ ಶೃಂಗೇರಿ ಅಭ್ಯರ್ಥಿ ಜೀವರಾಜ್‌ಗೆ ಮುನ್ನಡೆ



ಅಂಚೆ ಮತಪತ್ರ ಮರು ಎಣಿಕೆ

• **ಚಿಕ್ಕಮಗಳೂರು:** ಹೈಕೋರ್ಟ್ ಆದೇಶದ ಮೇರೆಗೆ 2023ರ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಪತ್ರಗಳ ಮರು ಎಣಿಕೆ ಪ್ರಕ್ರಿಯೆ ಶನಿವಾರ ತಡರಾತ್ರಿ ಪೂರ್ಣಗೊಂಡಿದ್ದು, ಪರಾಜಿತ ಅಭ್ಯರ್ಥಿಯಾಗಿದ್ದ ಬಿಜೆಪಿಯ ಡಿ.ಎನ್. ಜೀವರಾಜ್ ಅವರು ಒಟ್ಟು 52 ಮತಗಳ ಮುನ್ನಡೆ ಸಾಧಿಸಿದ್ದಾರೆ ಎಂಬ ಅಚ್ಚರಿಯ ಫಲಿತಾಂಶ ಹೊರಬಿದ್ದಿದೆ.

ಎಣಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಜಿಲ್ಲಾ ಚುನಾವಣಾಧಿಕಾರಿ ಗೌರವ ಕುಮಾರ್ ಶೆಟ್ಟಿ ಅವರು ಮಾಧ್ಯಮ ಪ್ರತಿನಿಧಿಗಳಿಗೆ ನೀಡಿದ ಮರು ಎಣಿಕೆ ಅಂಕಿ ಅಂಶಗಳ ಪ್ರಕಾರ ಜೀವರಾಜ್ ಅವರು ಮುನ್ನಡೆ ಸಾಧಿಸಿರುವುದು ದೃಢಪಟ್ಟಿದೆ. ಎಣಿಕೆ ಪ್ರಕ್ರಿಯೆ ವರದಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸುವುದಾಗಿ ಚುನಾವಣಾಧಿಕಾರಿಗಳು ತಿಳಿಸಿದ್ದು, ಫಲಿತಾಂಶದ ಅಧಿಕೃತ ಘೋಷಣೆ ಬಾಕಿ ಇದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ.ರಾಜೇಗೌಡ ಅವರು, 201 ಅಲ್ಪ ಮತಗಳ ಅಂತರದಿಂದ ಬಿಜೆಪಿಯ ಜೀವರಾಜ್ ವಿರುದ್ಧ ಗೆಲುವು ಸಾಧಿಸಿದ್ದರು. ಅಂದು ಫಲಿತಾಂಶ ಹೊರಬಿದ್ದ ತಕ್ಷಣವೇ ಅಂಚೆ ಮತಪತ್ರಗಳ ಎಣಿಕೆಯಲ್ಲಿ ವ್ಯತ್ಯಾಸವಾಗಿರುವ ಕಾರಣಕ್ಕೆ ಮರು ಎಣಿಕೆ ಮಾಡಬೇಕೆಂದು ಡಿ.ಎನ್.ಜೀವರಾಜ್ ಅವರು ಚುನಾವಣಾಧಿಕಾರಿಗಳಿಗೆ ಮನವಿ ಮಾಡಿದ್ದರು. ಪುಟ ೪

ಮತ್ತೆ ಕಾನೂನು ಹೋರಾಟ

ಶೃಂಗೇರಿ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಮತಗಟ್ಟೆ ಏಜೆಂಟ್ ಸುಧೀರ್ ಕುಮಾರ್ ಮುರೊಳ್ಳಿ ಮಾಧ್ಯಮಗಳಿಗೆ ಮರು ಮತ ಎಣಿಕೆಯ ಫಲಿತಾಂಶದ ಬಗ್ಗೆ ಪ್ರತಿಕ್ರಿಯೆ ನೀಡಿ, ಇದರಲ್ಲಿ ಬಿಜೆಪಿಯಿಂದ ದೊಡ್ಡ ಮಟ್ಟದ ಅಕ್ರಮಗಳು ನಡೆದಿವೆ. ಇದರ ವಿರುದ್ಧ ನಾವು ನ್ಯಾಯಾಂಗ ಹೋರಾಟ ನಡೆಸುತ್ತೇವೆಂದು ತಿಳಿಸಿದರು.

ಹೈಕೋರ್ಟ್ ಆದೇಶ ಪಾಲಿಸಿ • ಪುಟ ೪

ದೊಡ್ಡ ಪ್ರಮಾಣದ ಷಡ್ಯಂತ್ರ: ಡಿಸಿಎಂ

• **ಬೆಂಗಳೂರು:** ಬಿಜೆಪಿ ಮರು ಮತ ಎಣಿಕೆಯಲ್ಲಿ ಮುನ್ನಡೆ ಸಾಧಿಸಿದ ಬೆನ್ನಲ್ಲೇ, ಕಾಂಗ್ರೆಸ್ ಹಾಗೂ ಬಿಜೆಪಿ ಪರಸ್ಪರ ವಾಗ್ದಾಳಿ ನಡೆಸಿವೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಚಿಕ್ಕಮಗಳೂರಿನ ಶೃಂಗೇರಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಷಡ್ಯಂತ್ರ ಹಾಗೂ ವ್ಯವಸ್ಥಿತ ಅಪರಾಧ ನಡೆದಿದೆ. ಇದು ದೇಶ, ಪ್ರಜಾಪ್ರಭುತ್ವಕ್ಕೆ ಕಳಂಕ ಎಂದು ಕಿಡಿಕಾರಿದರು. ಭಾನುವಾರ ಸದಾಶಿವನಗರ ನಿವಾಸದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ರೀತಿ ಮಾಡುತ್ತಾರೆ ಎಂದು ಊಹೆ ಮಾಡಿರಲಿಲ್ಲ, ಮಾಜಿ ಶಾಸಕ ಡಿ.ಎನ್. ಜೀವರಾಜ್ ಅವರು ಅಧಿಕಾರಿಗಳ ದುರ್ಬಳಕೆ ಮಾಡಿಕೊಂಡು ಅಂಚೆ ಮತಗಳಲ್ಲಿ ಅಕ್ರಮ ಮಾಡಿದ್ದಾರೆ ಎಂದು ವರದಿಯಾಗಿದೆ. ನಮ್ಮ ಸ್ಥಳೀಯ ಅಭ್ಯರ್ಥಿಗಳು, ಏಜೆಂಟರು ದೂರು ನೀಡಿದ್ದರು. ಮತ ಎಣಿಕೆ ಬಳಿಕ ನಮ್ಮ ಏಜೆಂಟರು ಅವರ ಏಜೆಂಟರು, ಅಧಿಕಾರಿಗಳು ಸಹಿ ಹಾಕಿದ್ದಾರೆ. ಇದಾದ ಬಳಿಕ ಈ ರೀತಿ ನಡೆಸಿದ್ದಾರೆ ಎಂದರು. ಪುಟ ೪



ಇಂಥ ಕಾರ್ಯಕ್ರಮ ರಾಜ್ಯದಲ್ಲೇ ಮೊದಲು: ಬಿ.ವೈ. ವಿಜಯೇಂದ್ರ

ಬಿಎಸ್‌ವೈಗೆ ಅಭಿಮಾನದ ಗೌರವ



• **ಚಿತ್ರದುರ್ಗ:** ಅಧಿಕಾರ ಇದ್ದಾಗ ಅಭಿಮಾನೋತ್ಸವ, ಸಂಭ್ರಮೋತ್ಸವ ಆಚರಣೆ ಮಾಡುವುದು ಸಾಮಾನ್ಯ. ಆದರೆ ಯಾವುದೇ ಅಧಿಕಾರ ಇಲ್ಲದಿರುವ ವ್ಯಕ್ತಿಗೆ ಗೌರವ ಸೂಚಿಸಲು ಕಾರ್ಯಕ್ರಮ ಆಯೋಜಿಸಿರುವುದು ರಾಜ್ಯದಲ್ಲಿ ಇದೇ ಮೊದಲು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ತಿಳಿಸಿದರು.


ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷದ ರಾಜಕೀಯ ಜೀವನದ ಹಿನ್ನೆಲೆಯಲ್ಲಿ ಮೇ 9ರಂದುನಡೆಸಲುಉದ್ದೇಶಿಸಿರುವಅಭಿಮಾನೋತ್ಸವಅಂಗವಾಗಿ ಭಾನುವಾರ ವಾಲ್ಮೀಕಿ ಭವನದಲ್ಲಿ ಹಮ್ಮಿಕೊಂಡಿದ್ದ ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಅಧಿಕಾರಕ್ಕಾಗಿ ಹೋರಾಡುವುದು ಒಂದು ಭಾಗವಾದರೆ, 50 ವರ್ಷಗಳ ಕಾಲ ಸುದೀರ್ಘ ಕಾಲ ನಾಡಿನ ರೈತರು, ಬಡವರು, ಶೋಷಿತರ ಪರವಾಗಿ ಧ್ವನಿ ಎತ್ತುವುದು, ನಿರಂತರ ಹೋರಾಟ ಮಾಡುವುದು ಮತ್ತೊಂದು ಭಾಗ. ಯಡಿಯೂರಪ್ಪನವರು ಜೀವನದುದ್ದಕ್ಕೂ ಹೋರಾಟ ಮಾಡುವ ಮೂಲಕ ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದ್ದಾರೆ. ಅವರ ಹೋರಾಟಕ್ಕೆ ಗೌರವ ಸಲ್ಲಿಸುವ ಕಾರ್ಯ ನಡೆಸಲಾಗುವುದು ಎಂದರು. ಪುಟ ೪

ವೈಭವದ ಕಾರ್ಯಕ್ರಮ

ಬಿ.ಎಸ್. ಯಡಿಯೂರಪ್ಪನವರು ಅಧಿಕಾರದಿಂದ ಇಳಿದು ಇಷ್ಟು ವರ್ಷಗಳು ಕಳೆದರೂ ಅವರ ಕೆಲಸಗಳನ್ನು ಜನರು ಮನಸ್ಸಿನಲ್ಲಿ ಇಟ್ಟುಕೊಂಡಿದ್ದಾರೆ. ಯಡಿಯೂರಪ್ಪನವರಿಗೆ ರಾಜ್ಯದ ಜನರು ತಮ್ಮ ಹೃದಯದಲ್ಲಿ ಸ್ಥಾನ ನೀಡಿದ್ದಾರೆ. ಎಲ್ಲ ಕ್ಷೇತ್ರಗಳಿಂದ ನಿರೀಕ್ಷೆಗೂ ಮೀರಿ ಜನರು ಆಗಮಿಸಲಿದ್ದಾರೆ. ರಾಜ್ಯದ ಇತಿಹಾಸದಲ್ಲೇ ಹಿಂದೆ ಆಗಿಲ್ಲ, ಮುಂದೆಯೂ ಆಗದಂತಹ ಮಹತ್ವದ ಕಾರ್ಯಕ್ರಮವಾಗಲಿದೆ. ದುಬೈನಿಂದ ಅಭಿಮಾನಿಗಳು ಬರುತ್ತಿದ್ದಾರೆ. ಹಾಗಾಗಿ ಇದು ಸುವರ್ಣಾಕ್ಷರದಲ್ಲಿ ಬರೆದಿಡುವ ಕಾರ್ಯಕ್ರಮವಾಗಲಿದೆ ಎಂದು ಬಿ.ವೈ. ವಿಜಯೇಂದ್ರ ಹೇಳಿದರು.

ಕರ್ಮಯೋಗಿ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ: ಡಾ.ಭಾಗ್ವತ್

ಎಸ್‌ಸಿ, ಎಸ್‌ಟಿ ಅಭಿವೃದ್ಧಿ ಅಗತ್ಯ



ಪರರ ಸೇವೆಯಿಂದ ನಮ್ಮ ಅಭಿವೃದ್ಧಿ

• **ಮುಂಬೈ:** ವಿದೇಶಿ ದಾಳಿಕೋರರ ಸತತ ದಾಳಿ ನಡುವೆಯೂ ದೇಶದ ಬುಡಕಟ್ಟು ಸಮುದಾಯ ಮತ್ತು ಪರಿಶಿಷ್ಟ ಜಾತಿ ಸಮುದಾಯಗಳು ರಾಷ್ಟ್ರದ ಅಸ್ಮಿತೆ ಮತ್ತು ಆತ್ಮವನ್ನು ಸಂರಕ್ಷಿಸಿದವು. ಈ ಹಿನ್ನೆಲೆಯಲ್ಲಿ ಈ ಸಮುದಾಯಗಳನ್ನು ಅಭಿವೃದ್ಧಿ ಪ್ರಕ್ರಿಯೆಯ ಪ್ರಧಾನ ಹೆದ್ದರಿಯಲ್ಲಿ ಸಮಗ್ರಗೊಳಿಸುವುದು ಅಗತ್ಯವೆಂದು ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಕರೆನೀಡಿದ್ದಾರೆ.

ನಾವೆಲ್ಲರೂ ಒಂದು ಮಹಾನ್ ಕುಟುಂಬದ ಭಾಗಗಳಾಗಿದ್ದು, ಸಮಾಜದಿಂದ ಪಡೆದದ್ದನ್ನು ಮರಳಿ ಜಗತ್ತಿಗೆ ವಾಪಸ್ ನೀಡುವುದೇ ಮಾನವ ಬದುಕೆಂದು ವಿಶ್ಲೇಷಿಸಲಾಗುತ್ತದೆ. ವ್ಯಕ್ತಿಯೊಬ್ಬ ಸಮಾಜಕ್ಕಾಗಿ ದುಡಿಯುತ್ತಾನೆ, ಸಮಾಜದ ಏಳಿಗೆಗಾಗಿ ಸಮಯ, ಹಣ ವ್ಯಯಿಸುತ್ತಾನೆಂದರೆ ಯಾರ ಪರವಾಗಿ ಅಥವಾ ಓಲೈಕೆಗಾಗಿ ಅಲ್ಲ, ಸಮಾಜದ ಕಲ್ಯಾಣಕ್ಕಾಗಿ ದುಡಿಯುವುದು ನಮ್ಮ ಕರ್ತವ್ಯ. ಪರರ ಸೇವೆ ಮಾಡುವುದೆಂದರೆ ನಾವು ಸ್ವಯಂ ಅಭಿವೃದ್ಧಿಯನ್ನು ಉತ್ತೇಜಿಸಿದಂತೆ. ಇತರರಿಗೆ ನೆರವಾಗುವ ಮೂಲಕ ನಾವು ನಮಗರಿಯದಂತೆ ಎತ್ತರಕ್ಕೇರುತ್ತೇವೆ ಮತ್ತು ನೈಜ ಮಾನವರಾಗಿ ಬೆಳೆಯುತ್ತೇವೆ. ಭರತಖಂಡದ ಅಥವಾ ಹಿಂದು ಸಮಾಜದ ಪ್ರಧಾನ ಸಿದ್ಧಾಂತ ಇದೇ ಆಗಿದೆ ಎಂದು ಮುಂಬೈನ ಕರ್ಮಯೋಗಿ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಭಾಗ್ವತ್ ಹೇಳಿದರು. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಉಪಸ್ಥಿತರಿದ್ದರು.

ತೆರಬೇಕಾಯ್ತು ಭಾರೀ ಬೆಲೆ: ಹಿಂದು ಸಮಾಜದ ಪ್ರಧಾನ ಸಿದ್ಧಾಂತ ಅಥವಾ ಸಮಾಜದ ಶಾಶ್ವತ ಗುಣಧರ್ಮಗಳನ್ನು ಸಾವಿರಾರು ವರ್ಷಗಳಿಂದ ಜತನದಿಂದ ಸಂರಕ್ಷಿಸಿಕೊಂಡು ಬರಲಾಗಿದೆ. ಆದರೂ ಭಾಗಶಃ ನಮ್ಮ ವಿಮುಖತೆ ಮತ್ತು ಭಾಗಶಃ ವಿದೇಶಿ ಆಕ್ರಮಣಗಳಿಂದಾಗಿ ಇವನ್ನು ಸಂರಕ್ಷಿಸಿದವರು ಭಾರೀ ಬೆಲೆ ತೆರಬೇಕಾಗಿ ಬಂತು. ಪುಟ ೪

ಭೂಕಕ್ಷೆಗೆ ಮಿಷನ್ ದೃಷ್ಟಿ ಉಪಗ್ರಹ



ಬೆಂಗಳೂರುಮೂಲದ ನವೋದ್ಯಮ ಗ್ಯಾಲಕ್ಸ್‌ಐ ಬಾಹ್ಯಾಕಾಶ ಸಾಧನೆ

• **ಹೊಸದಿಲ್ಲಿ:** ಬೆಂಗಳೂರಿನ ಬಾಹ್ಯಾಕಾಶ ನವೋದ್ಯಮ ಗ್ಯಾಲಕ್ಸ್‌ಐ, ತನ್ನ ಮಿಷನ್ ದೃಷ್ಟಿ ಉಪಗ್ರಹವನ್ನು ಭಾನುವಾರ ಕ್ಯಾಲಿಫೋರ್ನಿಯಾದಿಂದ ಸ್ಪೇಸ್‌ಎಕ್ಸ್ ಫಾಲ್ಕನ್ 9 ರಾಕೆಟ್ ಮೂಲಕ ಉಡಾವಣೆ ಮಾಡಿದೆ. ವಿಶ್ವದ ಮೊದಲ ಒಪ್ಟೊಸಾರ್ ಉಪಗ್ರಹ ಇದಾಗಿದ್ದು, ಎಲೆಕ್ಟ್ರೋ-ಆಪ್ಟಿಕಲ್ (ಇಒ) ಮತ್ತು ಸಿಂಥೆಟಿಕ್ ಅಪರ್ಚರ್ ರಡಾರ್(ಸಾರ್) ಸಂವೇದಕಗಳನ್ನು ಒಂದೇ ವೇದಿಕೆಯಲ್ಲಿ ಸಂಯೋಜಿಸಿದೆ ಎಂದು ಗ್ಯಾಲಕ್ಸ್‌ಐ ಕಂಪನಿ ತಿಳಿಸಿದೆ. ಇಒ ಸಂವೇದಕಗಳು ಸೂರ್ಯಪ್ರಕಾಶ ಮತ್ತು ಸ್ಪಷ್ಟವಾದ ಹವಾಮಾನದಲ್ಲಿ ಹೆಚ್ಚಿನ ರೆಸಲ್ಯೂಷನ್ ಚಿತ್ರಗಳನ್ನು ಸೆರೆಹಿಡಿಯುತ್ತವೆ. ಪುಟ ೪

20 ಇಎಸ್‌ಐಸಿ ವೈದ್ಯ ಕಾಲೇಜು ಸ್ಥಾಪನೆ

ಕೇಂದ್ರ ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವಿಯ ಹೇಳಿಕೆ

• **ದೊಡ್ಡಬಳ್ಳಾಪುರ:** ದೇಶಾದ್ಯಂತ 20 ಇಎಸ್‌ಐಸಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ಮೂಲಕ ಕಾರ್ಮಿಕರ ಕುಟುಂಬಗಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಚಿಕಿತ್ಸೆಯ ಭರವಸೆ ನೀಡಲಾಗಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಹಾಗೂ ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವೀಯ ಹೇಳಿದರು.

• ವಿವರ ಪುಟ ೫





ಕಿರುಸುದ್ದಿ

ಪ್ರತಿಭೆಗಳಿಗೆ ಪ್ರೋತ್ಸಾಹಿಸಿ

ಧಾರವಾಡ: ಇಂದಿನ ಆಧುನಿಕ ಜಗತ್ತಿನಲ್ಲಿ ಕೇವಲ ಓದಿಗೆ ಅವಲಂಬಿತವಾಗಿರುವ ಮಕ್ಕಳ ಸಾಂಸ್ಕೃತಿಕ ಕಲೆಗಳನ್ನು ಗುರುತಿಸಿ, ಪ್ರೋತ್ಸಾಹಿಸುವ ರಂಗಾಯಣದ ಕಾರ್ಯವನ್ನು ಸಾಹಿತಿ ಡಾ.ಬಸು ಬೇವಿನಗಿಡದ ಶ್ಲಾಘಿಸಿದರು. ನಗರದ ರಂಗಾಯಣದ ಬಸವರಾಜ ರಾಜಗುರು ಬಯಲು ರಂಗ ಮಂದಿರದಲ್ಲಿ ನಡೆದ ಮಕ್ಕಳ ರಂಗ ತರಬೇತಿ ಶಿಬಿರದ ಸಮಾರೋಪ, ಚಿಣ್ಣರ ನಾಟಕೋತ್ಸವ ಲಗಾರಿ ಬಾರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು. ಪಾಲಕರು ಮಕ್ಕಳಲ್ಲಿ ಇರುವ ಪ್ರತಿಭೆಗೆ ಪೂರಕವಾದ ವಾತಾವರಣ ಮನೆಗಳಲ್ಲಿ ಕಲ್ಪಿಸಿಕೊಡಬೇಕು. ಅಂದಾಗ ಮಾತ್ರ ಪ್ರತಿಯೊಂದು ಮಗು ಆಸ್ತಿಯ ಕ್ಷೇತ್ರದಲ್ಲಿ ಸಾಧನೆ ಮಾಡಲು ಸಾಧ್ಯವಾಗಲಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ರಂಗಾಯಣದ ನಿರ್ದೇಶಕ ರ್ಯುಹೀರ ನದಾಫ್ ಮಾತನಾಡಿ, ರಂಗಭೂಮಿ ಮಕ್ಕಳಿಗೆ ಉತ್ತಮ ಸಂಸ್ಕಾರ ಹಾಗೂ ಸಂಸ್ಕೃತಿ ಕಲಿಸುತ್ತದೆ. ಹೀಗಾಗಿ ಪಾಲಕರು ಮಕ್ಕಳಿಗೆ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳಲು ಪಾಲಕರು ಉತ್ತೇಜನ ನೀಡಬೇಕು ಎಂದರು. ಚಿಣ್ಣರ ಮೇಳದ ಕಿರುಹೊತ್ತಿಗೆ ಬಿಡುಗಡೆ ಮಾಡಲಾಯಿತು. ರಂಗಾಯಣ ಆಡಳಿತಾಧಿಕಾರಿ ಶಶಿಕಲಾ ಹುಡೇದ, ಅರುಣಕುಮಾರ ಮೇದಾರ, ರಾಜು ಕವಡೆನವರ, ಸುನಂದಾ ನಿಂಬನಗೌಡರ ಇದ್ದರು.

ದ್ಯಾಮವ್ವ, ದುರ್ಗಮ್ಮ ಜಾತ್ರಾ ಮಹೋತ್ಸವ

ನವಲಗುಂದ: ತಾಲೂಕಿನ ಹನಸಿ ಗ್ರಾಮದಲ್ಲಿ ಮೇ 4ರಂದು ದ್ಯಾಮವ್ವ ಮತ್ತು ದುರ್ಗಮ್ಮ ಜಾತ್ರಾ ಮಹೋತ್ಸವ ಹಾಗೂ ಗುದ್ದಲೀಶ್ವರ ಸ್ವಾಮೀಜಿಯ 75ನೇ ಹುಟ್ಟು ಹಬ್ಬದ ವಾರ್ಷಿಕೋತ್ಸವದ ಕಾರ್ಯಕ್ರಮವು ಹನಸಿ ಗ್ರಾಮದ ರೇವಣಸಿದ್ಧೇಶ್ವರ ಗುಡಿ ಆವರಣದಲ್ಲಿ ಸಂಜೆ 4 ಗಂಟೆಗೆ ಜರುಗಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗುದ್ದಲೀಶ್ವರ ಸ್ವಾಮೀಜಿ, ನಿವೃತ್ತ ಬ್ಯಾಂಕ್ ಮ್ಯಾನೇಜರ್ ಕೆ. ಎಸ್. ಪಾಟೀಲ, ಶಾಸಕ ಎನ್.ಎಚ್. ಕೋನರಡ್ಡಿ, ಮಾಜಿ ಶಾಸಕ ಶಂಕರ ಬಿ. ಪಾಟೀಲ, ಮುನೇನಕೊಪ್ಪ, ತಾಲೂಕು ಬಿಜೆಪಿ ಅಧ್ಯಕ್ಷ ಜಿ.ಬಿ.ಮನಮಿ, ಜಿಲ್ಲಾ ಬಿಜೆಪಿ ಅಧ್ಯಕ್ಷ ನಿಂಗಪ್ಪ ಸುತಗಟ್ಟಿ, ಹಾವೇರಿ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಸಿದ್ದರಾಜ ಕಲಕೋಟಿ, ಧಾರವಾಡ ಜಿಪಂ ಮಾಜಿ ಅಧ್ಯಕ್ಷೆ ಶಾಂತಮ್ಮ ಗುಜ್ಜಳ, ನಿವೃತ್ತ ಜನರಲ್ ಮ್ಯಾನೇಜರ್ ಎಸ್. ಜಿ. ಪಾಟೀಲ, ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಎಂ. ಬಿ. ಸಂಕದ, ಶಿವಾನಂದ ಕೆಸರಿ, ಮುಖಂಡರಾದ ವಿನೋದ ಅಸೂಟಿ, ದೇವರಾಜ ದಾಡಿಭಾವಿ, ಗಣ್ಯಮಾನ್ಯರಾದ ಸದುಗೌಡ ಪಾಟೀಲ, ದೇವಪ್ಪ ಮಲ್ಲಪ್ಪ ಕುರಿ, ಈರನಗೌಡ ಕಬ್ಬರೂ, ಸಿ.ಆರ್. ಪಾಟೀಲ, ವಿ.ಆರ್. ಪಾಟೀಲ, ಸಂತೋಷ ಮಾ. ಗುಜ್ಜಳ ಭಾಗವಹಿಸಿವರು ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಮಿನಿಗೆ ಪಿಎಚ್‌ಡಿ

ಧಾರವಾಡ: ಸಂಶೋಧನಾ ವಿದ್ಯಾರ್ಥಿನಿ ಮಿನಿ ಕೆ.ಜಿ. ಅವರು ಮಂಡಿಸಿದ ಆನ್ ಇಫೆಕ್ಟ್ ಆಫ್ ಟೀಚರ್ಸ್ ಪಾರ್ಟಿಸಿಪೇಷನ್ ಇನ್ ಸ್ಕೂಲ್ ಅಡ್ಮಿನಿಸ್ಟ್ರೇಶನ್ ಟೀಚಿಂಗ್ ಆ್ಯಟಿಟ್ಯೂಡ್ ಆ್ಯಂಡ್ ಜಾಬ್ ಪರ್ಫಾರ್ಮೆನ್ಸ್ ಆನ್ ಅಕ್ಯಾಡೆಮಿ ಅಚೀವ್‌ಮೆಂಟ್ ಅಮಂಗ್ ಸೆಕೆಂಡರಿ ಸ್ಟೂಡೆಂಟ್ಸ್ ಆಫ್ ಕೊಡಗು ಡಿಸ್ಟ್ರಿಕ್ಟ್ ಎಂಬ ಪ್ರೌಢಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿ ಪ್ರದಾನಿಸಿದೆ. ಇವರಿಗೆ ಪ್ರಾಧ್ಯಾಪಕ ಡಾ. ಆರ್. ಆರ್.ಮದನಕರ್ ಮಾರ್ಗದರ್ಶಕರಾಗಿದ್ದರು.



ಅರ್ಜಿ ಆಹ್ವಾನ

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯವು ಹೊರಡಿಸಿದ ಪ್ರವೇಶಾತಿ ಅಧಿಸೂಚನೆಯಂತೆ 2026-27ನೇ ಶೈಕ್ಷಣಿಕ ಸಾಲಿಗೆ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಪ್ರಥಮ ವರ್ಷದ ಪದವಿ ತರಗತಿಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳು ಪದವಿ ವಿಷಯಗಳಾದ ಬಿ.ಎ, ಬಿ.ಕಾಂ, ಬಿ.ಎಸ್.ಡಬ್ಲು, ಬಿ.ಬಿ.ಎ, ಬಿ.ಕಾಂ.(ಸಿ.ಎಸ್), ಬಿ.ಕಾಂ (ಇ-ಕಾಮರ್ಸ್), ಬಿ.ಕಾಂ (ಕಾರ್ಪೊರೇಟ್ ಸೇಕ್ರೇಟರಿಶಿಫ್), ಬಿ.ಬಿ.ಎ.(ಲಾಜಿಸ್ಟಿಕ್ಸ್) ಬಿ.ಟಿ.ಟಿ.ಎಮ್ (ಪ್ರವಾಸೋದ್ಯಮ), ಬಿ.ಎಸ್ .ಸಿ(ಹೋಟೆಲ್ ಮ್ಯಾನೇಜ್ಮೆಂಟ್) ಬಿ.ಎ. ಪತ್ರಿಕೋದ್ಯಮ (ಐಚ್ಛಿಕ ವಿಷಯ) ಕೋರ್ಸುಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿಗಳು UUCMS https://uucms.karnataka.gov.in ಜಾಲತಾಣದ ಲಿಂಕ್ ಮೂಲಕ ಏ.27 ರಿಂದ ಮೇ 8 ರ ಒಳಗಾಗಿ ಅರ್ಜಿಸಲ್ಲಿಸಲು ಸಲ್ಲಿಸಬೇಕು. ಆಯ್ಕೆ ಮಾಡಿಕೊಳ್ಳುವ ವಿಷಯಗಳ ಸಂಯೋಜನೆ UUCMS ಲಿಂಕ್‌ನಲ್ಲಿ ಲಭ್ಯವಿವೆ. ಆದ್ದರಿಂದ ಹೊಸದಾಗಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು https://uucms.karnataka.gov.in/Login/Online Student Registration Form ಮೂಲಕ ಸಲ್ಲಿಸಲು ಕಾಲೇಜಿನ ಪ್ರಾಚಾರ್ಯ ಡಾ.ಐ.ಸಿ.ಮುಳಗುಂದ ಮತ್ತು ಕರ್ನಾಟಕ ಕಲಾ ಕಾಲೇಜಿನ ಪದವಿ ಪ್ರವೇಶ ಸಮಿತಿ ಅಧ್ಯಕ್ಷ ಪ್ರೊ. ವಿ.ಜಗದೀಶ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಧಾರವಾಡ: ನಗರದ ರಂಗಾಯಣದ ಬಸವರಾಜ ರಾಜಗುರು ಬಯಲು ರಂಗ ಮಂದಿರದಲ್ಲಿ ನಡೆದ ಮಕ್ಕಳ ರಂಗ ತರಬೇತಿ ಶಿಬಿರದ ಸಮಾರೋಪ, ಚಿಣ್ಣರ ನಾಟಕೋತ್ಸವ ಲಗಾರಿ ಬಾರಿಸುವ ಮೂಲಕ ಸಾಹಿತಿ ಡಾ.ಬಸು ಬೇವಿನಗಿಡದ ಚಾಲನೆ ನೀಡಿದರು.

ನೇರ ಮಾರಾಟ ಕಾರ್ಯಕ್ರಮಕ್ಕೆ ಚಾಲನೆ

ಧಾರವಾಡ: ನಗರದ ಗಾಂಧಿ ಶಾಂತಿ ಪ್ರತಿಷ್ಠಾನದಲ್ಲಿ ಮಾವು ಬೆಳೆಗಾರರ ಬಳಗದ ವತಿಯಿಂದ ಆಯೋಜಿಸಿದ್ದ ಬೆಳೆಗಾರರಿಂದ ಬಳಕೆದಾರರಿಗೆ ನೇರ ಮಾರಾಟ ಕಾರ್ಯಕ್ರಮಕ್ಕೆ ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ ಚಾಲನೆ ನೀಡಿದರು.

ನಂತರ ಮಾತನಾಡಿದ ಎಡಿಸಿ ಗೀತಾ, ಹವಾಮಾನ ವೈಪರೀತ್ಯದಿಂದ ಮಾವು ಬೆಳೆಗಾರರು ತೊಂದರೆಗೆ ಒಳಗಾಗಿದ್ದಾರೆ. ಮಾವಿನ ಇಳುವರಿ ಮತ್ತು ಗುಣಮಟ್ಟದ ಹಣ್ಣು ಬೆಳೆಯುವ ಕುರಿತು ಕೃಷಿ ವಿಶ್ವವಿದ್ಯಾಲಯ, ವಾಲ್ಮಿ ಹಾಗೂ ಮಾವು ಬೆಳೆಗಾರರ ಸಂಘದವರು ಸೇರಿ ಬೆಳೆಗೆ ಸೂಕ್ತ ಕ್ರಮ ನಡೆಸಿ ಬೆಳೆಗಾರರಲ್ಲಿ ಅರಿವು ಮೂಡಿಸಬೇಕು ಎಂದರು. ಮಾವು ಬೆಳೆಗಾರರ ಬಳಗ ಗೌರವಾಧ್ಯಕ್ಷ ರಾಜೇಂದ್ರ ಪೋದ್ದಾರ ಮಾತನಾಡಿ, ಸಂಸ್ಥೆಯು ಬೆಳೆಗಾರರಿಂದ ನೇರವಾಗಿ ಬಳಕೆದಾರರಿಗೆ ನೈಸರ್ಗಿಕವಾಗಿ, ರಾಸಾಯನಿಕ ಮುಕ್ತವಾಗಿ ಮಾಗಿಸಿದ ಮಾವು ಪೂಸುವುದು ಹಾಗೂ ರೈತರಿಗೆ ಅತ್ಯುತ್ತಮ ದರ ಕೊಡಿಸುವ ನಿಟ್ಟಿನಲ್ಲಿ ಮಾವು ನೇರ ಮಾರಾಟ ಪ್ರಕ್ರಿಯೆ ಆರಂಭಿಸಲಾಗಿದೆ. ಆದ್ದರಿಂದ ಗ್ರಾಹಕರು ಇದರ ಲಾಭ ಪಡೆದುಕೊಳ್ಳಬೇಕು ಎಂದರು.

ಉತ್ತರ ಕರ್ನಾಟಕದಲ್ಲಿ 60 ಸಾವಿರಕ್ಕೂ ಅಧಿಕ ಎಕರೆಯಲ್ಲಿ ಮಾವು ಬೆಳೆಯಲಾಗುತ್ತಿದೆ. ಹೊರ ದೇಶಗಳಲ್ಲಿ ಇಲ್ಲಿಯ ಭಾಗದ ಆಫೂಸ್ ಮಾವಿಗೆ ಉತ್ತಮ ಬೇಡಿಕೆಯಿದೆ. ಅದರಂತೆ ಈ ಬಾರಿ ಹೊರ ದೇಶಗಳಿಗೆ ಮಾವು ಕಳುಹಿಸಲು ಹೆಚ್ಚು ಬೆಳೆಗಾರರು ತೋಟಗಾರಿಕೆ ಇಲಾಖೆಯಿಂದ ಹಾಟಿರ್ನೆಟ್ ಪ್ರಮಾಣಪತ್ರ ಪಡೆದುಕೊಂಡಿದ್ದಾರೆ ಎಂದರು. ಸಂತೋಷ ಸಪ್ಪಂಡಿ, ಇಮ್ತಿಯಾಜ್ ಚಂಗಾಪುರಿ ಸೇರಿದಂತೆ ಇತರರಿದ್ದರು.



ಧಾರವಾಡ: ನಗರದ ವಕೀಲರ ಸಂಘದ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂತನ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಅನಿರುದ್ಧ ಜೋಶಿ, ಸುಧಾ ಪಟ್ಟಣಶೆಟ್ಟಿ ಹಾಗೂ ಖುತೇಜಾ ಪಾಟೀಲ ಅವರನ್ನು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದಿಂದ ಸನ್ಮಾನಿಸಲಾಯಿತು. ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ವಿ.ಡಿ.ಕಾಮರೆಡ್ಡಿ, ವಕೀಲರ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ ನೇಗಿಹಾಳ, ವಕೀಲರಾದ ಬಸವಪ್ರಭು ಹೊಸಕೇರಿ, ಶಿವಾನಂದ ಭಾವಿಕಟ್ಟಿ, ಸುವರ್ಣ ಸುರಕೋಡ, ಎಂ.ಡಿ.ಪಾಟೀಲ ಇದ್ದರು.

ಇಬ್ಬರಿಗೆ ರಂಗಚಂದ್ರ ಪ್ರಶಸ್ತಿ ಪ್ರದಾನ | ಈರೇಶ ಅಂಚಟಗೇರಿ ಅಭಿಮತ

ರಂಗಭೂಮಿಗೆ ಜಗುಚಂದ್ರ ಕೊಡುಗೆ ಅಪಾರ

ಧಾರವಾಡ: ಪಂ. ಪುಟ್ಟರಾಜ ಗವಾಯಿಗಳ ಕಲಾ ಪ್ರತಿಷ್ಠಾನ, ಕನ್ನಡ-ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ರಂಗಚಂದ್ರ ಪ್ರಶಸ್ತಿ ಪ್ರದಾನ ಸಮಾರಂಭ ನಗರದ ಆಲೂರು ವೆಂಕಟರಾವ್ ಭವನದಲ್ಲಿ ಭಾನುವಾರ ಜರುಗಿತು.

ಬೆಳಗಾವಿಯ ಕಲಾವಿದರಾದ ಪ್ರಮೀಳಾ ಜಕ್ಕಣ್ಣವರ ಹಾಗೂ ಭೀಮಗೊಂಡ ಖಟಾವಿ ಅವರಿಗೆ 2026ನೇ ಸಾಲಿನ ರಂಗಚಂದ್ರ ಪ್ರಶಸ್ತಿಯನ್ನು ಮಾಜಿ ಮೇಯರ್, ಸಭಾನಾಯಕ ಈರೇಶ ಅಂಚಟಗೇರಿ ಪ್ರದಾನ ಮಾಡಿದರು. ಪ್ರಶಸ್ತಿ ಪ್ರದಾನಿಸಿದ ಈರೇಶ ಅಂಚಟಗೇರಿ ಮಾತನಾಡಿ, ದಿ.ಜಗುಚಂದ್ರ ಕೂಡಲ ಅವರು, ರಂಗಭೂಮಿಗೆ ನೀಡಿದ ಕೊಡುಗೆ ಅಪಾರ. ಕಲಾ ಚಿಂತನೆಗಳು, ಮೌಲ್ಯ ಹಾಗೂ ಸಾಮಾಜಿಕ ನ್ಯಾಯ ಇತರರಿಗೂ ಮಾದರಿ ಎಂದರು.



ಉದ್ಘಾಟಿಸಿದ ಬಯಲಾಟ-ಯಕ್ಷಗಾನ ಅಕ್ಯಾಡೆಮಿಅಧ್ಯಕ್ಷಕೆ.ಆರ್.ದುರ್ಗಾದಾಸ, ರಂಗಭೂಮಿ ಕೇವಲ ಮನರಂಜನೆ ಮಾತ್ರವಲ್ಲ, ಅದು ಸಮಾಜದ ಪ್ರತಿಬಿಂಬವೂ ಹೌದು. ಪ್ರಶಸ್ತಿ ಕಲಾವಿದರ ಸಾಧನೆಗೆ ಬೆಲೆ ತರಲಿದೆ ಎಂದರು. ಶಿಕ್ಷಕರ ಫೆಡರೇಷನ್ ರಾಷ್ಟ್ರೀಯ ಅಧ್ಯಕ್ಷ ಬಸವರಾಜ ಗುರಿಕಾರ, ವಕೀಲರಾದ ಪ್ರಕಾಶ ಉಡಕೇರಿ, ಪಿ.ಎಚ್.ನೀರಲಕೇರಿ, ಸಾಹಿತಿ ಡಾ.ಸಂಗಮನಾಥ ಲೋಕಾಪುರ, ಡಾ.ಉದಯ ರಾಯ್ಕರ್, ಎಸ್.ಎಫ್. ಸಿದ್ದನಗೌಡರ, ಡಾ.ವೀಣಾ ಬಿರಾದಾರ, ಸುನೀಲ ಬಾಗೇವಾಡಿ ಅನೇಕರು ಮಾತನಾಡಿದರು. ಗಾಯಕ ಶಿವಾನಂದ ಹೂಗಾರ ಪ್ರಾರ್ಥಿಸಿದರು. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಮಾರ್ತಾಂಡಪ್ಪ ಕತ್ತಿ ಸ್ವಾಗತಿಸಿದರು. ದೀಪಾ ವಸ್ತ್ರದ, ಅಪೂರ್ವ ನಿರೂಪಿಸಿದರು. ಕೃಷ್ಣಮೂರ್ತಿ ಗೊಲ್ಲರ ವಂದಿಸಿದರು.

ಹಲವರಿಗೆ ಸನ್ಮಾನ

ಕಾರ್ಯಕ್ರಮದಲ್ಲಿ ಡಾ. ಪಾರ್ವತೆವ್ವ ಹೊಂಗಲ, ಸಿ.ಎಸ್.ನೇಗಿಹಾಳ, ಡಾ.ಅನಿತಾ ಕಡಪಟ್ಟಿ, ಶಕ್ತಿ ಹಿರೇಮಠ, ಸುರೇಶ ಕಾಟಕರ, ಡಾ.ಕಾಂತಾ ಪಾಟೀಲ ಕುಲಕರ್ಣಿ, ಡಾ.ಸುಜಾತಾ ಆನಿಶೆಟ್ಟರ ಅನೇಕರನ್ನು ಸನ್ಮಾನಿಸಲಾಯಿತು.

ಭಕ್ತರ ಕಣ್ಮನ ಸೆಳೆದ ಹೊನ್ನಾಟ



ಧಾರವಾಡ: ನಗರದ ಹಾವೇರಿಪೇಟೆಯ ದ್ಯಾಮವ್ವ ಹಾಗೂ ದುರ್ಗವ್ವ ದೇವಿಯರ ಜಾತ್ರಾ ಮಹೋತ್ಸವ ಸಂಭ್ರಮದಿಂದ ಜರುಗುತ್ತಿದ್ದು, ಭಾನುವಾರ ನಡೆದಂತಹ ಹೊನ್ನಾಟ ಭಕ್ತರ ಕಣ್ಮನ ಸೆಳೆಯಿತು.

ಮುಂಜಾನೆಯಿಂದ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅಭಿಷೇಕಗಳು ನೆರವೇರಿದವು. ನಂತರ ಅಲಂಕೃತ ಪಲ್ಲಕ್ಕಿಯಲ್ಲಿ ದೇವಿಯರ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ ಬಳಿಕ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಹೊನ್ನಾಟದ ಅಂಗವಾಗಿ ಭಕ್ತರು ಪರಸ್ಪರ ಬಂಡಾರ ಎರಚುವ ಮೂಲಕ ಸಂಭ್ರಮಿಸಿದರು. ದೇವಿಯರ ಪಲ್ಲಕ್ಕಿಯ ಮೇಲೆ ಹೂಮಳೆ ಸುರಿಸುತ್ತ, ಜಯಘೋಷ ಹಾಕುತ್ತ ಸಾಗಿದ ದೃಶ್ಯ ಭಕ್ತಿಯ ಪರಾಕಾಷ್ಠೆಯನ್ನು ತಲುಪಿದ್ದಂತೂ ವಿಶೇಷವಾಗಿತ್ತು. ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ಕೆ.ಎಸ್ .ಭೀಮಣ್ಣವರ, ಗಂಗಣ್ಣ ಜಮದಾಳೆ, ಗೌರವ ಕಾರ್ಯದರ್ಶಿ ವಿಜಯ ಬೋಸ್ಲೆ, ಖಜಾಂಚಿ ಆರ್.ಜಿ.ಕೆಲಗೇರಿ, ಸಮಿತಿಯ ಪದಾಧಿಕಾರಿಗಳು, ಸ್ಥಳೀಯ ಮುಖಂಡರು, ಮಕ್ಕಳು, ತಾಯಂದಿರು ಸಡಗರದಿಂದ ಪಾಲ್ಗೊಂಡಿದ್ದರು. ಹಾವೇರಿಪೇಟೆ, ಮೃತ್ಯುಂಜಯ ನಗರ, ರಾಜನಗರ ಮೌರ್ಯ ಪ್ಲಾಟ್, ಶಿವಳ್ಳಿ ಪ್ಲಾಟ್, ಮಟ್ಟಿ ಪ್ಲಾಟ್, ಪತ್ತೇಶ್ವರ ನಗರ, ಕಮತಿ ಪ್ಲಾಟ್, ಮಹಾಂತನಗರ, ವೇದರ ಓಣಿ, ರೇಣುಕಾ ನಗರ, ಕೌಲಗೇರಿ ಕ್ರಾಸ್, ಗಣೇಶನಗರ, ಮಲ್ಲಿಕಾರ್ಜುನ ನಗರ, ಶಿವಬಸವ ನಗರ, ಮೈಲಾರ ನಗರ, ಶಿವಗಂಗಾ ನಗರ, ತೆಲಗರ ಓಣಿ, ಮದಿಹಾಳ, ಮುರುಗಾ ಮಠ, ಅಶೋಕನಗರ, ಶಾಂತಿ ಕಾಲೋನಿ ಮುಂತಾದ ಬಡಾವಣೆಗಳ ಭಕ್ತರು ದೇವಿಯರ ಹೊನ್ನಾಟವಾಡಿ ಸಂಭ್ರಮಿಸಿದರು.

ಗ್ಯಾರಂಟಿ ಸಮರ್ಪಕ ಅನುಷ್ಠಾನಕ್ಕೆ ಸೂಚನೆ

ಧಾರವಾಡ: ಸರ್ಕಾರದ ಮಹತ್ವಾಕಾಂಕ್ಷೆಯ ಪಂಚ ಗ್ಯಾರಂಟಿ ಯೋಜನೆ ಕುರಿತು ಸಾರ್ವಜನಿಕರ ಕುಂದುಕೊರತೆ ಆಲಿಸುವ ಮೂಲಕ ಯೋಜನೆಗಳ ಸಮರ್ಪಕ ಅನುಷ್ಠಾನಿಸಲು ಧಾರವಾಡ ಗ್ಯಾರಂಟಿ ಸಮಿತಿ ಅಧ್ಯಕ್ಷ ಅರವಿಂದ ಏಗನಗೌಡರ ಸೂಚಿಸಿದರು.

ನಗರದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ನಡೆದ ಗ್ಯಾರಂಟಿ ಸಮಿತಿಯ ಸಭೆ ನಡೆಸಿದ ಅವರು, ಗ್ಯಾರಂಟಿ ಯೋಜನೆ ಅನುಷ್ಠಾನದಲ್ಲಿ ಕೆಲವು ದೂರುಗಳು ಬರುತ್ತಿದ್ದು, ಸಂಬಂಧಿಸಿದ ಅಧಿಕಾರಿಗಳು ತಕ್ಷಣವೇ ಸ್ಪಂದಿಸಿ ಇತ್ಯರ್ಥಪಡಿಸಲು ಆದೇಶಿಸಿದರು. ಗ್ಯಾರಂಟಿಯ ಗೃಹಲಕ್ಷ್ಮೀ ಯೋಜನೆ ಅಡಿಯಲ್ಲಿ ಧಾರವಾಡ ತಾಲೂಕಿನ ಅರ್ಹ ಯಜಮಾನಿಗೆ ಈವರೆಗೂ ರೂ.58 ಸಾವಿರ ಹಣ ನೇರವಾಗಿ ಖಾತೆಗೆ ಜಮೆ ಆಗಿದೆ. ಗೃಹಲಕ್ಷ್ಮೀ ಯೋಜನೆಯಡಿ ತಾಲೂಕಿನಲ್ಲಿ 56,943 ಫಲಾನುಭವಿಗಳು ಲಾಭ ಪಡೆಯುತ್ತಿದ್ದು, ಈ ವರೆಗೂ 29 ಕಂತುಗಳಲ್ಲಿ ಒಟ್ಟು ರೂ. 6,10,91,92,000 ಸಂದಾಯ ಮಾಡಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮಾಹಿತಿ ನೀಡಿದರು. ಅನ್ನಭಾಗ್ಯ ಯೋಜನೆಯಡಿ ಗ್ರಾಮೀಣದಲ್ಲಿ ಒಟ್ಟು 52,526 ಪಡಿತರ ಚೀಟಿ ಇದ್ದು, 70 ನ್ಯಾಯಬೆಲೆ ಅಂಗಡಿಗಳ ಮೂಲಕ ಸುಗಮವಾಗಿ ವಿತರಿಸುತ್ತಿದೆ. ಹೊಸದಾಗಿ ಸಲ್ಲಿಕೆಯಾದ 273 ಅರ್ಜಿಗಳು ಪ್ರಸ್ತುತ ಪರಿಶೀಲನಾ ಹಂತದಲ್ಲಿವೆ ಎಂದರು. ಗೃಹಜ್ಯೋತಿ ಯೋಜನೆಯಡಿ ಹೆಸ್ಕಾಂ ವ್ಯಾಪ್ತಿಯಲ್ಲಿ ಒಟ್ಟು 52,195 ಫಲಾನುಭವಿಗಳು ಶೂನ್ಯ ದರದ ವಿದ್ಯುತ್ ಸೌಲಭ್ಯ ಪಡೆಯುತ್ತಿದ್ದು, ಇಲ್ಲಿಯವರೆಗೆ ಸರ್ಕಾರದಿಂದ ರೂ. 5429.39 ಲಕ್ಷಗಳಷ್ಟು ವೆಚ್ಚ ಭರಿಸಲಾಗಿದೆ ಎಂದರು. ಶಕ್ತಿ ಯೋಜನೆಯಡಿ ಮಾರ್ಚ್-2026ರ ಅಂತ್ಯಕ್ಕೆ ಶಹರ ಮತ್ತು ಗ್ರಾಮೀಣ ಘಟಕಗಳ ಮೂಲಕ ಒಟ್ಟು 45,44,395 ಮಹಿಳಾ ಪ್ರಯಾಣಿಕರು ಪ್ರಯಾಣಿಸಿ, ಸಾರಿಗೆ ಸಂಸ್ಥೆಗೆ ಒಟ್ಟು ರೂ.7,97,69,206 ಹಣ ಆದಾಯ ಸಂದಾಯವಾಗಿದೆ ಎಂದರು. ಯುವನಿಧಿ ಯೋಜನೆಯಡಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವರದಿಯಂತೆ 3,898 ಅಭ್ಯರ್ಥಿಗಳು ನೋಂದಾಯಿಸಿದ್ದು, ಪದವಿ, ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಒಟ್ಟು ರೂ.8,57,58,000 ನಿರುದ್ಯೋಗ ಭತ್ಯೆ ವಿತರಿಸಿದೆ ಎಂದರು. ತಾಪಂ ಇಒ ಕಾರ್ಯದರ್ಶಿ ಗಂಗಾಧರ ಕಂದಕೂರ, ಸಮಿತಿ ಸದಸ್ಯ ಚಂದ್ರಶೇಖರ ಕದಂ, ಮಂಜುನಾಥ ಉಡಿಕೇರಿ, ಮೈಲಾರಗೌಡ ಪಾಟೀಲ, ಕಾರ್ತಿಕ ಗೋಕಾಕ ಇತರರಿದ್ದರು.



ವಿದ್ಯಾರ್ಥಿಗಳಲ್ಲಿ ಜ್ಞಾನದ ಹಸಿವು ಹೆಚ್ಚಾಗಲಿ

ನವಲಗುಂದ: ವಿದ್ಯಾರ್ಥಿಗಳಲ್ಲಿ ಜ್ಞಾನದ ಹಸಿವು ಹೆಚ್ಚಾದಂತೆ ಜ್ಞಾನಾರ್ಜನೆಗೆ ಸುಗಮ ಮಾರ್ಗ ದೊರಕಲು ಸಾಧ್ಯ. ಗಳಿಸಿದ ಆಸ್ತಿ ನಶಿಸಿ ಹೋಗಬುಹುದು. ಆದರೆ ಕಲಿತ ವಿದ್ಯೆ ಜೀವನಪರ್ಯಂತರ ಕೈಹಿಡಿದು ನಡೆಸುತ್ತಿದೆ ಎಂದು ಗವಿಮಠದ ಬಸವಲಿಂಗಸ್ವಾಮೀಜಿ ಹೇಳಿದರು.

ಪಟ್ಟಣದ ಗವಿಮಠದ ಶ್ರೀ ಸಿದ್ದಲಿಂಗೇಶ್ವರ ದಾಸೋಹ ಭವನದಲ್ಲಿ ಶ್ರೀ ಸಿದ್ದಲಿಂಗೇಶ್ವರ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಹಾಗೂ ಪಾಲಕರಿಗಾಗಿ ಆಯೋಜಸಿದ್ದ ಸತ್ಕಾರ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಲೂಕಿನಲ್ಲಿಯೇ ಪ್ರಥಮಬಾರಿಗೆ ಆಂಗ್ಲ ಮಾಧ್ಯಮ ಶಾಲೆಯನ್ನು ತೆರೆಯುವ ಮೂಲಕ ಶ್ರೀಮಠವು ಗ್ರಾಮೀಣ ಭಾಗದ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಒದಗಿಸುವಲ್ಲಿ ಯಶಸ್ವಿಯಾಗಿದ್ದು, ನುರಿತ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರ ಶ್ರಮದಿಂದಾಗಿ ಈ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶವು ನೂರರಷ್ಟು ಬಂದಿದ್ದು ಮುಂಬರುವ ವಿದ್ಯಾರ್ಥಿಗಳಿಗೆ ಮಾದರಿಯಾಗಲಿದೆ ಎಂದರು.

ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಅಣ್ಣಪ್ಪ ಬಾಗಿ ಮಾತನಾಡಿ, ಶ್ರೀ ಸಿದ್ದಲಿಂಗೇಶ್ವರ ಆಂಗ್ಲ ಮಾಧ್ಯಮ ಶಾಲೆಯ 10 ವರ್ಷಗಳ ಶೈಕ್ಷಣಿಕ ಅವಧಿಯಲ್ಲಿ ನಿರಂತರ ಶ್ರಮ ವಹಿಸುವ ಮೂಲಕ ಉತ್ತಮ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದ್ದು, ಬರುವ ದಿನಗಳಲ್ಲಿ ಇನ್ನಷ್ಟು ಆಧುನಿಕ ಪಠ್ಯಕ್ರಮಗಳೊಂದಿಗೆ ವಿದ್ಯಾರ್ಥಿಗಳ ಉನ್ನತಿಗೆ ಶ್ರಮಿಸಲಾಗುವುದೆಂದರು.

ಈ ಸಂದರ್ಭದಲ್ಲಿ ಶಾಲಾ ಆಡಳಿತ ಮಂಡಳಿಯ ನಿರ್ದೇಶಕರಾದ ಸಿದ್ದಲಿಂಗಯ್ಯ ಹಿರೇಮಠ, ದೇವರಾಜ ಕರಿಯಪ್ಪನವರ, ಉಮೇಶ ಶಿರಕೋಳ, ಎಸ್.ಎಂ. ಪಟ್ಟಣಶೆಟ್ಟಿ, ವಿ.ಟಿ.ಕರಿಸಕ್ರಣ್ಣವರ(ಭೋವಿ), ಎಸ್.ಎಸ್. ಅಂಗಡಿ. ವೀರಣ್ಣ ಚವಡಿ, ಮಹಾಂತೇಶ ಬಾಗಿ, ಎಸ್.ಎ.ಕಾಳಗಿ ಹಾಗೂ ಶಾಲಾ ಸಿಬ್ಬಂದಿ ಉಪಸ್ಥಿತರಿದ್ದರು. ಪ್ರೊ. ಎಸ್. ಕೆ.ದೂಟಿಕಲ್ ಸ್ವಾಗತಿಸಿದರು. 95ಕ್ಕೂ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಾದ ಜಗದೀಶ ಮಾಳಗಿಮನಿ, ಭೂಮಿಕಾ ಸಂಗಮದ, ವರುಣ ಭೋವಿ, ದಸ್ತಗೀರಸಾಬ ನದಾಫ ಹಾಗೂ ಪ್ರಣಿತಾ ವಡ್ಡರ ಅವರನ್ನು ಶಿಕ್ಷಣ ಸಂಸ್ಥೆಯಿಂದ ಸತ್ಕರಿಸಲಾಯಿತು.



ಮನೋಹರ ಅಟ್ಟದಲ್ಲಿ ಗೋಕಾಕ್ ಸ್ಮರಣೆ



ಧಾರವಾಡ: ನಗರದ ಮನೋಹರ ಗ್ರಂಥಮಾಲೆ ಅಟ್ಟದ ಮೇಲೆ ವಿ.ಕೃ. ಗೋಕಾಕ ಪುಣ್ಯಸ್ಮರಣೆ ಕಾರ್ಯಕ್ರಮದಡಿ ಗೋಕಾಕರ ಗದ್ಯ ಹಾಗೂ ಪದ್ಯ ಓದುವುದರ ಜೊತೆಗೆ ಹಾಡುವುದರ ಮೂಲಕ ಜ್ಞಾನಪೀಠಿ ವಿ.ಕೃ.ಗೋಕಾಕ್ ಅವರ ಸಾಧನೆ ಸ್ಮರಿಸಲಾಯಿತು. ಡಾ. ಹ.ವೆಂ.ಕಾಖಂಡಕಿ, ರಂಗಕರ್ಮಿ ಡಾ.ಶಶಿಧರ ನರೇಂದ್ರ, ಡಾ.ವಿನಾಯಕ ನಾಯಕ, ರಾಜೀವ ಪಾಟೀಲ ಕುಲಕರ್ಣಿ, ಶ್ರೀನಿವಾಸ ವಾಡಪ್ಪಿ, ಅರವಿಂದ ಕುಲಕರ್ಣಿ, ಸಮೀರ ಜೋಶಿ, ಪ್ರಜ್ಞಾ ಮತ್ತಿಹಳ್ಳಿ, ಪ್ರೇಮಾ ನಡುವಿನಮನಿ, ದೀಪಾ ಕುಲಕರ್ಣಿ, ಸುಜಾತ ಕಂಬಳಿ, ಶಿಲ್ಪಾ ಮೊಕಾಶಿ, ಶರಭೇಂದ್ರ ಸ್ವಾಮಿ ಹಾಗೂ ವೀರಣ್ಣ ಪತ್ತಾರ ಇದ್ದರು.

ಸ್ವಚ್ಛ ಪಟ್ಟಣಕ್ಕೆ ಸರ್ವರೂ ಸಹಕರಿಸಲಿ



ಅಳ್ನಾವರ: ಪಟ್ಟಣ ಪಂಚಾಯಿತಿ ವತಿಯಿಂದ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮದಡಿ ಪಟ್ಟಣದಲ್ಲಿ ಸ್ವಚ್ಛತೆ ಜಾಗೃತಿ ಜಾಥಾ ಮತ್ತು ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಪ್ರಕಾಶ ಮಗದುಮ್ ಮಾತನಾಡಿ, ಜಾಗತಿಕ ತಾಪಮಾನ ನಿಯಂತ್ರಣ ಹಾಗೂ ಮಾರಕ ರೋಗಗಳನ್ನು ತಡೆಯಲು ಸ್ವಚ್ಛ ವಾತಾವರಣ ನಿರ್ಮಾಣಕ್ಕೆ ಸಾರ್ವಜನಿಕರ ಸಹಕಾರ ಅಗತ್ಯವಿದೆ. ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ಕ್ರಮಬದ್ಧ ಸ್ವಚ್ಛತಾ ಕಾರ್ಯಗಳು ನಡೆಯುತ್ತಿವೆ. ಮನೆಗಳಲ್ಲಿ ಉತ್ಪಾದಿಸುವ ತೇವ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಕಸ ಸಂಗ್ರಹಣಾ ವಾಹನಕ್ಕೆ ನೀಡಬೇಕು. ರಸ್ತೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.ಸಮುದಾಯ ಅಭಿವೃದ್ಧಿ ಅಧಿಕಾರಿ ಎಂ.ಎಸ್. ಬೆಂತೂರ, ಪರವೀನ್ ಎಸ್. ನದಾಫ್, ಪ್ರವೀಣ ದೊಡ್ಡಮನಿ, ಜ್ಯೋತಿ ತಂಬಾಕದವರ, ನೇತ್ರಾ ಕಲಾದಗಿ, ಪೌರ ಕಾರ್ಮಿಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಅಹಿಂಸಾತ್ಮಕ ಧರ್ಮವೇ ನೈಜ ಧರ್ಮ

ಧಾರವಾಡ: ಮಾನವೀಯ ನೆಲೆಯಲ್ಲಿ ಭಗವಂತನನನ್ನು ಕಾಣುವುದು ಧರ್ಮದ ಉದ್ದೇಶ. ದಯವೇ ಧರ್ಮದ ಮೂಲವಾಗಿರುವ ಅಹಿಂಸಾತ್ಮಕ ಧರ್ಮವೇ ನೈಜ ಧರ್ಮ ಎಂದು ಪದ್ಮಶ್ರೀ ಪಂ. ಎಂ.ವೆಂಕಟೇಶಕುಮಾರ್ ಹೇಳಿದರು. ಇಲ್ಲಿನ ಚನ್ನಬಸವೇಶ್ವರ ನಗರದ ಲಿಂಗಾಯತ ಸಭಾಭವನದಲ್ಲಿ ವೀರಶೈವ ಲಿಂಗಾಯತ ಜಿಲ್ಲಾ ಮಹಾಸಭಾ ಏರ್ಪಡಿಸಿದ್ದ ಸಾಂಸ್ಕೃತಿಕ ನಾಯಕ ಬಸವಣ್ಣನವರ ಉಪನ್ಯಾಸ ಮತ್ತು ಸಂಗೀತ ಕಾರ್ಯಕ್ರಮದಲ್ಲಿ ಮಾತನಾಡಿದರು. ಪ್ರಾಧ್ಯಾಪಕಿ ಡಾ.ವೀಣಾ ಹೂಗಾರ ಮಾತನಾಡಿ, ಬಸವಾದಿ ಶರಣರು ಸಮಾಜದಲ್ಲಿ ಮನೆ ಮಾಡಿದ್ದ ಅಂಧಕಾರ, ಮೂಢನಂಬಿಕೆ, ಕಂದಾಚರ ತೊಲಗಿಸಲು ಪ್ರಯತ್ನ ಮಾಡಿದರು. ಶಿವಶರಣರ ಅಣತಿಯಂತೆ ನಡೆಯಲು ಹೇಳಿದರು. ಮಹಾಸಭಾ ಜಿಲ್ಲಾಧ್ಯಕ್ಷ ಪ್ರದೀಪಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ವಿ.ಸಿ. ಸವಡಿ, ಬಸವರಾಜ ಗೊಲ್ಲಪನವರ, ಮಹೇಶ ಬಿಳಿಹಾಳ, ಶಂಕರ ಕುಂಬಿ, ಸಂಧ್ಯಾ ಅಂಬಡಗಟ್ಟಿ, ಡಾ.ಪಾರ್ವತಿ ಹಾಲಬಾವಿ, ಡಾ.ಸುವರ್ಣಾ ಬಿರಾದಾರ, ವಿಜಯಲಕ್ಷ್ಮೀ ಕಲ್ಯಾಣಶೆಟ್ಟರ್ ಇದ್ದರು.



ಸಮಾಜ ಸುಧಾರಕರ ಸ್ಮರಣೆ ಅಗತ್ಯ

ಧಾರವಾಡ: ಸಮಾಜದ ಬದಲಾವಣೆಗಾಗಿ ಶ್ರಮಿಸಿದ ಸಮಾಜ ಸುಧಾರಕರನ್ನು ಸ್ಮರಿಸುವುದು ನಮ್ಮೆಲ್ಲರ ಜವಾಬ್ದಾರಿ ಆಗಿದೆ ಎಂದು ರಾಯಚೂರಿನ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ಕುಲಪತಿ ಪ್ರೊ. ಶಿವಾನಂದ ಕೆಳಗಿನಮನಿ ಅಭಿಪ್ರಾಯಪಟ್ಟರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದ ರ.ಹಾ.ದೇಶಪಾಂಡೆ ಸಭಾಂಗಣದಲ್ಲಿ ಧಾರವಾಡ ಕಟ್ಟೆ ಆಯೋಜಿಸಿದ್ದ ಶ್ರಾವಣ-ಶ್ರವಣ ಕಾರ್ಯಕ್ರಮವನ್ನು ಉದ್ಘಾಟಿಸಿ ಬಸವಣ್ಣ, ಅಂಬೇಡ್ಕರ್, ಶೇಕ್ಸ್‌ಪಿಯರ್ ಮತ್ತು ರಾಜಕುಮಾರ ಪ್ರಸ್ತುತತೆ ಕುರಿತು ಮಾತನಾಡಿದರು. ಕೇಂದ್ರೀಯ ವಿಶ್ವವಿದ್ಯಾಲಯ ಪ್ರಾಧ್ಯಾಪಕ ಗಣೇಶ ಪವಾರ್, ರಂಗಕರ್ಮಿ ಡಾ.ಶಶಿಧರ ನರೇಂದ್ರ, ಧಾರವಾಡ ಕಟ್ಟೆ ಅಧ್ಯಕ್ಷ ಡಾ.ಬಸವರಾಜ ಡೋಣೂರ, ಪ್ರೊ.ಮುಕುಂದ ಲಮಾಣಿ, ಡಾ.ಡಿ.ಎಂ.ಹಿರೇಮಠ, ಡಾ.ಪ್ರೊಲೀಸ್ ಪಾಟೀಲ, ಪ್ರೊ.ಗುಂಡೂರ, ಪ್ರೊ. ಗಣೇಶ ಪವಾರ, ಸುಶೀಲಾ ಡೋಣೂರ ಡಾ.ಹರಿಹರ ಸೇರಿ ಸಂಶೋಧಕರು ಇದ್ದರು.



ನೂತನ ಶ್ರೀಗಳ ಪಟ್ಟಾಧಿಕಾರ ಮಹೋತ್ಸವ: ಪ್ರವಚನ

ನವಲಗುಂದ: ಪಂಚಗ್ರಹ ಹಿರೇಮಠದ ಗುರುಪಟ್ಟಾಧಿಕಾರ ಮಹೋತ್ಸವ ನಿಮಿತ್ತ 11 ದಿನಗಳು ನಿರಂತರವಾಗಿ ಪ್ರವಚನವನ್ನು ಆಯೋಜಿಸುವ ಮೂಲಕ ಆಧ್ಯಾತ್ಮ ಜ್ಯೋತಿಯನ್ನು ಭಕ್ತರಲ್ಲಿ ಮೂಡಿಸುತ್ತಿರುವುದರಿಂದ ನಾಗರಿಕರು ಸಾಂಸ್ಕೃತಿಕ ಚಿಂತನೆಯಲ್ಲಿ ಮುಳುಗುವಂತೆ ಮಾಡಿರುವುದು ಶ್ಲಾಘನೀಯ ಎಂದು ಹುಬ್ಬಳ್ಳಿ ಮೂರುಸಾವಿರ ಮಠದ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಹಿರೇಮಠದಲ್ಲಿ ಮೇ 12-13ರಂದು ಪಂಚಪೀಠಾಧೀಶ್ವರರ ನೇತೃತ್ವದಲ್ಲಿ ಜರುಗಲಿರುವ ನೂತನ ಶ್ರೀಗಳ ಪಟ್ಟಾಧಿಕಾರ ಮಹೋತ್ಸವ ಅಂಗವಾಗಿ ಆಯೋಜಿಸಿಲಾದ 11 ದಿನಗಳ ಪ್ರವಚನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಭೀಮರಾಶಿ ಹೂಗಾರ ರಚಿಸಿದ ಸಾಹಿತ್ಯದ ಹಾಡುಗಳ ಸಿದ್ದೇಶ್ವರ ಶ್ರೀ ಧ್ವನಿ ಸುರುಳಿ ಬಿಡುಗಡೆ ಮಾಡಿ ಮಾತನಾಡಿದ ಅವರು, ಯುಟೂಬ್,ಬ್ಲೂಟೂತ್ ಯುಗದಲ್ಲಿ ನಶಿಸಿ ಹೋಗುತ್ತಿರುವ ಭಕ್ತಿ ಸಂಗೀತಕ್ಕೆ ಮೆರಗು ನೀಡುವಂತೆ ಸಾವಿರ ವರ್ಷಗಳ ಇತಿಹಾಸ ಇರುವ ಹಿರೇಮಠದ ಕತೃ ಸಿದ್ದೇಶ್ವರ ಶ್ರೀಗಳ ಕುರಿತಾಗಿ ರಚಿತವಾದ ಭಕ್ತಿಗೀತೆಗಳು ಇಂದಿನ ಪೀಳಿಗೆಗೆ ಅವಶ್ಯವಾಗಿದೆ ಎಂದರು.



ಮಾಜಿ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ ಮಾತನಾಡಿ, ತಾಲೂಕಿನ ಎಲ್ಲ ಜನತೆಯು ನೂತನ ಶ್ರೀಗಳ ಪಟ್ಟಾಧಿಕಾರ ಮಹೋತ್ಸವ ಆಚರಣೆಗೆ ವಿಜೃಂಭನೆಯಿಂದ ನಡೆಸಿದ್ದು ಜಗದ್ಗುರು ಪಂಚಾಚಾರ್ಯರ ಸಮ್ಮುಖದಲ್ಲಿ ಪೀಠಾಧಿಕಾರ ಮಹೋತ್ಸವ ನಡೆಸಲು ಉದ್ದೇಶಿಸಿರುವುದು ಹಾಗೂ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉತ್ಸವ ನಡೆಸುತ್ತಿರುವುದು ಈ ನೆಲದ ಹೆಮ್ಮೆಯಾಗಿದ್ದು ಜಗದ್ಗುರುಗಳ ಸಾನ್ನಿಧ್ಯದಲ್ಲಿ ನವಲಗುಂದ ಪುಣ್ಯಭೂಮಿಯಾಗಿ ರೂಪಗೊಳ್ಳಲಿ ಎಂದರು.

ಹಿರೇಮಠದ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ತುಪ್ಪದಕುರಟ್ಟಿಯ ಪಂಡಿತಾರಾಧ್ಯ ಸ್ವಾಮೀಜಿ, ಗವಿಮಠದ ಬಸವಲಿಂಗ ಸ್ವಾಮೀಜಿ, ನಿಯೋಜಿತ ಪೀಠಾಧಿಕಾರಿ ವೀರಬಸವದೇವರು, ಅಣ್ಣಪ್ಪ ಬಾಗಿ, ವರ್ತಕರ ಸಂಘದ ಅಧ್ಯಕ್ಷ ರಾಘವೇಂದ್ರ ಧಾರವಾಡ, ವಿರೇಶ ಕೂಗುಮಠ, ಶ್ರೀಶೈಲ ಮೂಲಿಮನಿ, ಪಾಂಡಪ್ಪ ಕೋನರಡ್ಡಿ, ಸಿದ್ದಲಿಂಗಯ್ಯ ಹಿರೇಮಠ, ಅಲ್ಲಾಸಾಬ ಕಲ್ಲಕುಟ್ರಿ, ಅಪ್ಪಣ್ಣ ಹಳ್ಳದ, ಅಡಿವೆಪ್ಪ ಶಿರಸಂಗಿ, ಯಲ್ಲಪ್ಪ ಭೋವಿ ಮತ್ತಿತರರಿದ್ದರು.

ತಾಳವು ನೃತ್ಯದ ಜೀವಾಳ

ಹುಬ್ಬಳ್ಳಿ: ವಿಶ್ವ ನೃತ್ಯ ದಿನದ ಅಂಗವಾಗಿ ಮಯೂರ ನೃತ್ಯ ಅಕಾಡೆಮಿ ವತಿಯಿಂದ ತಾಳ ತರಬೇತಿ ಶಿಬಿರ ಕಾರ್ಯಕ್ರಮವನ್ನು ಇಲ್ಲಿಯ ಕೋಟಿಲಿಂಗ ನಗರದಲ್ಲಿರುವ ಮಯೂರಾಂಗಣದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು. ಗಣ್ಯರ ಸಾನ್ನಿಧ್ಯದಲ್ಲಿ ದೀಪ ಬೆಳಗಿಸುವುದರ ಮೂಲಕ ಹಾಗೂ ದೇವಿ ಸರಸ್ವತಿ ಮತ್ತು ನಾಟರಾಜ ಸ್ವಾಮಿಗೆ ಪುಷ್ಪಾರ್ಚನೆ ಸಲ್ಲಿಸುವುದರ ಮೂಲಕ ಆರಂಭಗೊಂಡಿತು.

ಡಿ.ಪಿ. ಪ್ರಸನ್ನ ಕುಮಾರ್ ಮಾತನಾಡಿ, ತಾಳವು ನೃತ್ಯದ ಜೀವಾಳವಾಗಿದ್ದು, ನೃತ್ಯಗಾರರ ಚಲನೆ, ಲಯ ಮತ್ತು ಅಭಿವ್ಯಕ್ತಿಯನ್ನು ಸಮನ್ವಯಗೊಳಿಸುತ್ತದೆ. ತಾಳದ ಅರಿವು ನೃತ್ಯವನ್ನು ಶಿಸ್ತಿನಿಂದ ಮತ್ತು ಸೌಂದರ್ಯದಿಂದ ನಿರ್ವಹಿಸಲು ಅಗತ್ಯವಾಗಿದೆ ಎಂದರು.

ವಿಶೇಷ ಅತಿಥಿ ವನಿತಾ ಮಹಾಲೆ ಮಾತನಾಡಿ, ನೃತ್ಯವು ವ್ಯಕ್ತಿಯ ಜೀವನದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ನೃತ್ಯವು ಶಾರೀರಿಕ ಆರೋಗ್ಯ, ಮಾನಸಿಕ ಸಮತೋಲನ ಹಾಗೂ ಆತ್ಮವಿಶ್ವಾಸವನ್ನು ಹೆಚ್ಚಿಸುವುದರ ಜೊತೆಗೆ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುತ್ತದೆ ಎಂದರು.

ಮಯೂರ ನೃತ್ಯ ಅಕಾಡೆಮಿಯ ಅಧ್ಯಕ್ಷೆ ಹೇಮಾ ವಾಘ್ಮೋಡೆ ಸ್ವಾಗತಿಸಿ, ಅಂತಾರಾಷ್ಟ್ರೀಯ ವಿಶ್ವ ನೃತ್ಯ ದಿನದ ಮಹತ್ವವನ್ನು ವಿವರಿಸಿದರು. ಮಯೂರ ನೃತ್ಯ ಅಕಾಡೆಮಿಯ ಕಾರ್ಯದರ್ಶಿ ದಿನೇಶ್ ವಾಘ್ಮೋಡೆ ವಂದಿಸಿದರು.



ಕಾಲು ಬಾಯಿ ಬೇನೆ ಲಸಿಕೆ ಕಡ್ಡಾಯ: ಡಾ. ಕುರಗುಂದ



ಕಲಘಟಗಿ: ಪಶುಗಳಿಗೆ ಕಾಲು ಬಾಯಿ ಬೇನೆ ಲಸಿಕೆಯನ್ನು ಕಡ್ಡಾಯವಾಗಿ ಹಾಕಿಸಿರಿ ಎಂದು ಪಶುವೈದ್ಯಾಧಿಕಾರಿ ಡಾ. ಎಂ ವಿ. ಕುರಗುಂದ ಹೇಳಿದರು.

ಕರ್ನಾಟಕ ಸರ್ಕಾರ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಧಾರವಾಡ, ಧಾರವಾಡ ಹಾಲು ಒಕ್ಕೂಟ, ಪಶು ಇಲಾಖೆ ಕಲಘಟಗಿ ಸಹಯೋಗದಲ್ಲಿ ತಾಲೂಕಿನ ಹುಲ್ಲಂಬಿ ಗ್ರಾಮದಲ್ಲಿ 9ನೇ ಸುತ್ತಿನ ಲಸಿಕಾ ಶಿಬಿರದಲ್ಲಿ ಮಾತನಾಡಿದ ಅವರು, ರೈತನಿಗೆ ಪಶುಗಳೇ ಸಂಪತ್ತು. ಇವುಗಳನ್ನು ಪೋಶಿಸಿ ರಕ್ಷಿಸುವದು ಎಲ್ಲರ ಜವಾಬ್ದಾರಿ. ಇವು ಸಾಂಕ್ರಮಿಕ ರೋಗಗಳು, ಗಾಳಿಯಿಂದ ಬಹುಬೇಗ ಹರಡುತ್ತವೆ. ಒಮ್ಮೆ ಈ ರೋಗಗಳಿಗೆ ಜಾನುವಾರುಗಳು ತುತ್ತಾದರೆ ಹಾಲಿನ ಪ್ರಮಾಣ ತುಂಬಾ ಕಡಿಮೆ ಆಗುತ್ತದೆ, ಸಾವುಗಳೂ ಸಂಭವಿಸುತ್ತವೆ. ಸರ್ಕಾರಗಳೂ ಈ ದಿಶೆಯಲ್ಲಿ ನಿರಂತರ ಸಹಾಯ ನೀಡುತ್ತಿದೆ ಎಂದರು.

ಲಸಿಕೆದಾರರಾದ ಎಂ ಎಸ್ ಘಂಟಿ, ಮಾದೇವಪ್ಪ ಹರಿಜನ, ಚನ್ನಪ್ಪ ವಾಲಿಶೆಟ್ಟರ್, ಮಹದೇವಿ ನಾಯ್ಕರ, ಪಶುಸಖಿಯರಾದ ರಂಜಿತ ಲಕ್ಕಪ್ಪನವರ್, ದೀಪ ಕಟ್ಟಿಮನಿ ಮನೆಗಳಿಗೆ ತೆರಳಿ ಪಶುಗಳಿಗೆ ಲಸಿಕೆ ನೀಡಿದರು. ಹೆಚ್ಚಿನ ಮಾಹಿತಿಗಳಿಗೆ ಉಚಿತ ಸಹಾಯವಾಣಿ 1962 ಸಂಪರ್ಕಿಸಲು ಕೊರಿದ್ದಾರೆ.

ಈ ಸಂದರ್ಭದಲ್ಲಿ ಗ್ರಾ. ಪಂ. ಸದಸ್ಯ ರಾಚಪ್ಪ ಬಿಸರಳ್ಳಿ, ರೈತರಾದ ಕಲ್ಲಪ್ಪ ಕುಡುಭಾವಿ, ಬಸವರಾಜ ಬು. ಕುಡುಭಾವಿ, ದ್ಯಾಮಣ್ಣ ಹುಲಕೊಪ್ಪ, ಈರಪ್ಪ ಬ. ಬಿಸರಳ್ಳಿ, ಆನಂದ ಕ. ಕುಡುಭಾವಿ, ವಿನಾಯಕ ಭಟ್ ಉಪಸ್ಥಿತರಿದ್ದರು.



ಸವದತ್ತಿ ಯಲ್ಲಮ್ಮ ದೇವಸ್ಥಾನ ಪುಣ್ಯಕ್ಷೇತ್ರ

ದಕ್ಷಿಣ ಭಾರತದಲ್ಲಿ ತಿರುಪತಿ ಹೊರತು ಪಡಿಸಿದರೆ ಅತ್ಯಧಿಕ ಭಕ್ತ ಸಮೂಹವನ್ನು ಹೊಂದಿದ ಶ್ರೀ ರೇಣುಕಾದೇವಿ (ಯಲ್ಲಮ್ಮ) ಜಾತ್ರೆಗೆಂದು ನಾಡಿನ ಎಲ್ಲೆಡೆಯಿಂದ ಅಸಂಖ್ಯಾತ ಭಕ್ತರು ಬರುತ್ತಾರೆ. ವರ್ಷ ವಿಡೀ ಇಲ್ಲಿ ಭಕ್ತ ಸಮೂಹ ಇದ್ದೇ ಇರುತ್ತದೆ. ಇದು ಬೆಂಗಳೂರಿನಿಂದ 475 ಕಿ.ಮೀ.ಬೆಳಗಾವಿಯಿಂದ 90 ಕಿ.ಮೀ., ಧಾರವಾಡದಿಂದ 45 ಕಿ.ಮೀ ಅಂತರದಲ್ಲಿರುವ ಯಲ್ಲಮ್ಮನ ಗುಡ್ಡ ಏಳು ಕೊಳ್ಳಗಳಿಂದಲೂ,ಏಳು ಗುಡ್ಡಗಳಿಂದಲೂ ಸುತ್ತುವರಿದ ಐತಿಹಾಸಿಕ, ಚಾರಿತ್ರಿಕ, ಧಾರ್ಮಿಕ ಪುಣ್ಯಕ್ಷೇತ್ರ.

ಸ್ಕಂದ ಪುರಾಣದಲ್ಲಿ,ಜನಪದ ಗೀತೆಗಳಲ್ಲಿ, ಚರಿತ್ರೆಯಲ್ಲಿ ಈ ಕುರಿತು ದೊರಕಿರುವ ಮಾಹಿತಿಗಳು, ಅಷ್ಟೇ ಅಲ್ಲ, ಮೂರು ಕನ್ನಡ ಚಲನಚಿತ್ರಗಳು ಕೂಡ ಶ್ರೀದೇವಿಮಹಿಮೆಕುರಿತುತಯಾರಿಗಿದ್ದು ವಿಶೇಷ. ಅಗಸ್ತ್ಯ ಮುನಿಗಳ ಆಶೀರ್ವಾದದಂತೆ ಪುತ್ರಕಾಮೇಷ್ಟಿಯಾಗ ಮಾಡಿದ ಕಾಶ್ಮೀರದ ಅರಸ 'ರೇಣುಕ ರಾಜ' ಹಾಗೂ 'ಭೋಗವತಿ' ದಂಪತಿ ಜನಿಸಿದ 'ರೇಣುಕಾ' ಆದಿಶಕ್ತಿಯ ಸ್ವರೂಪ, ಜಮದಗ್ನಿ ಪತ್ನಿಯಾಗಿ, ಪತಿವ್ರತೆಯಾಗಿ ತೋರಿದ ಅವಳ ಕುರಿತ ಕಥೆಯು ನಿಜಕ್ಕೂ ದೈವೀ ಸ್ವರೂಪವಾಗಿದೆ. ಮಾವ ರುಚಿಕಮುನಿ, ಅತ್ತೆ ಸತ್ಯವತಿ ಯರನ್ನು ಹೆತ್ತ ತಂದೆ ತಾಯಿಗಳ ಸಮಾನವಾಗಿ ಕಂಡು ಪ್ರೀತಿ ವಿಶ್ವಾಸ ಗಳಿಸುವ ಜೊತೆಗೆ ವಸು, ವಿಶ್ವವಸು, ಬೃಹದ್ಭಾನಿ. ಬೃಹತ್ಕರ್ಣ, ರಾಮಭದ್ರ(ಪರಶುರಾಮ) ರೆಂಬ ಮಕ್ಕಳಿಗೆ ಜನ್ಮ ನೀಡಿ, ಪಾತಿವ್ರತ್ಯವನ್ನು ಕಾಪಾಡಿ ಜಗತ್ತಿಗೆ ತನ್ನ ಆದರ್ಶಪಾತ್ರಯಳಾಗಿ ಚಿರಸ್ಥಾಯಿಯಾಗಿರುವಳು.

ಗಿರೀಶಪ್ರಸಾದ ವೇ. ರೇವಡಿ

ಪ್ರಾಗೈತಿಹಾಸಿಕ ಹಿನ್ನೆಲೆ: ಖ್ಯಾತ ಸಂಶೋಧಕ ಡಾ. ಕೆ.ಜಿ.ಶ್ರೀಗುರುಮೂರ್ತಿಯವರುತಮ್ಮ ಸಂಶೋಧನೆಯಿಂದ ಈ ಕುರಿತು ಒಂದು ಮಾಹಿತಿಯನ್ನೇ ಕಲೆ ಹಾಕಿದ್ದು, ವಿವಿಧ ಶತಮಾನಗಳಿಂದಲೂ ಅನೇಕ ರಾಜ ಮಹಾರಾಜರುಗಳ ಅಧೀನ ದೇವತೆಯಾಗಿ ಪೂಜೆಗೊಳ್ಳುತ್ತಾ ಬಂದಿದ್ದು, ಯಲ್ಲಮ್ಮ-ಸತ್ಯವತಿ ಪಾಳೇಗಾರರ ಅಧೀನದಲ್ಲಿ ಬಂದರೆ, ಎರಡನೇ ಶತಮಾನದಲ್ಲಿ ರಟ್ಟರ ಪೂರ್ವ ರಾಜರ ಆಳ್ವಿಕೆಯಲ್ಲಿ ಯಲ್ಲಮ್ಮ ಕಾಳಾಮುಖಿ ಅಧೀನ, 6-9 ನೇ ಶತಮಾನದಲ್ಲಿ ರಟ್ಟರ ಕಾಲದ ಪದ್ಮಾವತಿ ದೇವಿ. 10-12ನೇ ಶತಮಾನದ ವಿಜಯನಗರದ ಅರಸರ ಅವಧಿಯಲ್ಲಿ ರೇಣುಕಾ(ಶಾಕ್ತ) ಸಂಪ್ರದಾಯದಲ್ಲಿ, 12-13ನೇ ಶತಮಾನದಲ್ಲಿ ಇದೇ ಅರಸರ ಅವಧಿ ರೇಣುಕ ಜಮದಗ್ನಿ(ವೈಷ್ಣವ) 13ನೇ ಶತಮಾನದಲ್ಲಿ ಬಿಜಾಪುರ ಸುಲ್ತಾನರ ಪಾಲಿಗೆ ಯಲ್ಲಮ್ಮಳಾಗಿ, ಮರಾಠಿಗರಿಗೆ ಜಗದಂಭ ಹೆಸರಲ್ಲಿ ಹೈದರಾಲಿ-ಟಿಪ್ಪು ಅವರು ರೇಣುಕಾ ಯಲ್ಲಮ್ಮ, ಹದಿನೆಂಟನೇ ಶತಮಾನದಲ್ಲಿ ಆಂಗ್ಲರು ಈ ಪ್ರದೇಶವನ್ನು ಸಿರಸಂಗಿ ದೇಸಾಯರಿಗೆ ನೀಡಲಾಗಿ ಇವರ ಆಳ್ವಿಕೆಯ ಕಾಲಕ್ಕೆ ಯಲ್ಲಮ್ಮ (ಮಾತೃದೇವತೆ) ಎಂದು ಪೂಜಿಸಿದ್ದಾರೆ. ಅಂದಿನಿಂದ ಇಂದಿನವರೆಗೂ ರೇಣುಕಾದೇವಿ, ಯಲ್ಲಮ್ಮ ಹೆಸರುಗಳಿಂದ ಕರ್ನಾಟಕ, ಮಹಾರಾಷ್ಟ್ರ,ಆಂಧ್ರಪ್ರದೇಶ,ತಮಿಳುನಾಡುಮೊದಲಾದ ರಾಜ್ಯಗಳ ಭಕ್ತರು ದೇವಿಯ ಆರಾಧಕರಾಗಿರುವರು.

ಏಳು ಕೊಳ್ಳಗಳ ಆಧಿದೇವತೆ: ಯಲ್ಲಮ್ಮನ ಗುಡ್ಡದ ಪರಿಸರ ವ್ಯಾಪ್ತಿಯಲ್ಲಿ ಸಿದ್ಧರಕೊಳ್ಳ, ಪರಸಗಡಕೊಳ್ಳ, ಗೊರ ವನಕೊಳ್ಳ, ತಮ್ಮಣ್ಣನ ಕೊಳ್ಳ, ಮಾವಿನಕೊಳ್ಳ, ಸಂಗ ಪ್ಪನಕೊಳ್ಳ, ಬೋರೇಸಾಬನ ಕೊಳ್ಳ ಹೀಗೆ ಏಳು ಕೊಳ್ಳ ಗಳಿದ್ದು ಚರಿತ್ರೆಯಲ್ಲಿ ನಡೆಯುವ ಘಟನೆಗಳ ದೃಷ್ಟಾಂತಕ್ಕೆ ಪೂರಕವಾಗಿವೆ.

'ತಿರುಪತಿ' ಮಾದರಿಯಲ್ಲಿ ಯಲ್ಲಮ್ಮನಗುಡ್ಡ ಅಭಿವೃದ್ಧಿ

ಅಷ್ಟೇ ಅಲ್ಲ ಸರ್ಕಾರಿ ಬಸ್ ಪ್ರಯಾಣದ ಜೊತೆಗೆ ನೆರೆಯ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಕಡೆಗಳಲ್ಲಿನ ಅನೇಕರು ತಮ್ಮ ಖಾಸಗಿ ವಾಹನಗಳಲ್ಲಿ ಆಗಮಿಸಿ ದರ್ಶನ ಪಡೆಯುವರು. ದೇವಾಲಯ ಹತ್ತಿರದ ಪ್ರದೇಶಗಳಲ್ಲಿ ಯಾತ್ರಿ ನಿವಾಸವಿದ್ದು ವಸತಿಗೆ ಅನುಕೂಲತೆ ಕಲ್ಪಿಸಿದ್ದು ನಿತ್ಯವೂ ಇಲ್ಲಿ ಅನ್ನದಾಸೋಹ ಕೂಡ ಅನ್ನದಾಸೋಹ ಛತ್ರದಲ್ಲಿ ನೆರವೇರಿಸಲಾಗುತ್ತಿದೆ. ಉದ್ಯಾನವನ, ಕಾರಂಜಿ, ಇತ್ಯಾದಿ ಕಾರ್ಯಗಳು ಕೂಡ ಇಲ್ಲಿ ಭರದಿಂದ ಸಾಗಿದ್ದು ರಾಜ್ಯ ಸರ್ಕಾರ ಹಾಗೂ ವಿಶ್ವಸ್ಥ ಮಂಡಳಿ ಈ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡು 'ತಿರುಪತಿ' ಮಾದರಿಯಲ್ಲಿ ಇದನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿವೆ.

- ಅತ್ಯಧಿಕ ಭಕ್ತ ಸಮೂಹ ಹೊಂದಿದ ಕ್ಷೇತ್ರ
- ಏಳು ಕೊಳ್ಳ, ಏಳು ಗುಡ್ಡಗಳಿಂದಲೂ ಸುತ್ತುವರಿದ ಐತಿಹಾಸಿಕ ಕ್ಷೇತ್ರ

ವಿಶೇಷ ಕಳೆ

ಯಲ್ಲಮ್ಮ ಗುಡ್ಡಕ್ಕೆ ಬರುವ ಭಕ್ತಾದಿಗಳಲ್ಲಿ ಗ್ರಾಮೀಣ ಜನರು ತಮ್ಮ ಚಕ್ಕಡಿಗಳಲ್ಲಿ ಕುಟುಂಬ ಸಹಿತ ಇಡೀ ಗ್ರಾಮಕ್ಕೆ ಗ್ರಾಮವೇ ಸುಗ್ಗಿ ಕಾಲದಲ್ಲಿ ಅಂದರೆ ಭಾರತ ಹುಣ್ಣಿಮೆ, ದವನದ ಹುಣ್ಣಿಮೆ ಕಾಲದಲ್ಲಿ ಬರುವುದುಂಟು ಇಂಥ ಸಂದರ್ಭ ಎಲ್ಲಿ ನೋಡಿದರೂ ವಿನೂತನ ಚಕ್ಕಡಿ ಗಳು ಎತ್ತುಗಳ ಕೊರಳ ಗಂಟೆಯ ಸದ್ದು ಒಂದು ವಿಶೇಷ ಕಳೆಯನ್ನೇ ಈ ಪರಿಸರದಲ್ಲಿ ಕಟ್ಟಿರುತ್ತದೆ.

ಏಳು ಗುಡ್ಡಗಳು: ಮುರಗೋಡ, ಸೊಗಲ, ನವಿಲುತೀರ್ಥ, ಪರಸಗಡ, ಸವದತ್ತಿ, ಮುನವಳ್ಳಿ, ಯಲ್ಲಮ್ಮನಗುಡ್ಡ ಈ ವ್ಯಾಪ್ತಿಯಲ್ಲಿ ಬರುವ ಏಳು ಗುಡ್ಡ(ಬೆಟ್ಟ, ಪರ್ವತ)ಗಳಿಂದಲೂ ಈ ಪರಸರ ಐತಿಹ್ಯ ಹೊಂದಿದೆ. ಅದಕ್ಕೆ ಜನರು ಏಳು ಕೊಳ್ಳದ ಯಲ್ಲಮ್ಮ ನೀನು ಎಂಬ ಹಾಡಿನ ಸಾಲಿನಲ್ಲಿ ಈ ಕುರಿತು ಸ್ಮರಿಸುವರು.

ದೇವಾಲಯ ವಿಶೇಷತೆ: ಈ ದೇವಾಲಯಕ್ಕೆ ಪ್ರವೇಶಿ ಸುವಮೊದಲುಎಣ್ಣೆಹೊಂಡದಮಾರ್ಗವಾಗಿ ಬರುವುದು ರೂಢಿ. ಅಲ್ಲಿ ಇರುವ ಜಲದಿಂದ ಮುಖಮಾರ್ಜನ ಮಾಡಿ ಕೈಕಾಲು ತೊಳೆದುಕೊಂಡು ಮಡಿಯಿಂದ ದೇವಾಲಯ ಆವರಣಕ್ಕೆ ಪ್ರವೇಶ ಪಡೆಯುವರು. ಈಗ ಸರ್ಕಾರ ವಿಶೇಷ ಕಾರ್ಯಗಳನ್ನು ಈ ಪ್ರದೇಶದಲ್ಲಿ ಕೈಗೊಂಡಿದ್ದು, ವಿಶಾಲವಾದ ಪ್ರಾಂಗಣದಲ್ಲಿ ಪ್ರವೇಶಿಸಲು ಎಲ್ಲ ಅನುಕೂಲತೆ ಕಲ್ಪಿಸಿರುವುದು ಶ್ಲಾಘನೀಯ. ಪರಶುರಾಮ ದೇವಾಲಯ, ಮಲ್ಲಿಕಾರ್ಜುನ ದೇವಾ ಲಯ ದರ್ಶನ ಮಾಡಿಕೊಂಡು ರೇಣುಕಾ ಮಾತೆಯ ದೇವಾಲಯ ಪ್ರಾಂಗಣ ಪ್ರವೇಶಿಸಿ, ದೇವಿಗೆ ತಮ್ಮ ಭಕ್ತಿ ಅರ್ಪಿಸುವ ಮೂಲಕ ಪುನೀತರಾಗಿ ದೇವಾಲಯಕ್ಕೆ ಆಗಮಿಸುವವರು ಹಳದಿ ವರ್ಣದ ಭಂಡಾರ ಹಣೆಗೆ ಲೇಪಿಸಿಕೊಳ್ಳುವ ಜೊತೆಗೆ 'ಯಲ್ಲಮ್ಮ ನಿನ್ನ ಪಾದಕೆ ಉಧೋ, ಉಧೋ'ಎನ್ನುತ್ತ ದೇವಾಲಯ ಪ್ರದಕ್ಷಿಣೆ ಹಾಕುವುದನ್ನು ಕಾಣಬಹುದು.

ಈ ಭಂಡಾರ ತಮ್ಮ ಸಿರಿ ಸಂಪತ್ತಿನ ಭಾಗ್ಯವೆಂದು ವಿಶೇಷ ಗೌರವದಿಂದ ತೆಗೆದುಕೊಂಡು ಹೋಗುವುದು ಇಲ್ಲಿನ ವಾಡಿಕೆ. ಇಲ್ಲಿ ಹರಕೆ ಹೊತ್ತವರು ದೇವಾಲಯ ಆವರಣದಲ್ಲಿ ದೀಡ್ ನಮಸ್ಕಾರ ಹಾಕುವುದು, ಪಡ್ಡಲಿಗೆ ತುಂಬುವ ಕಾರ್ಯ ಜರುಗಿಸುವ ಮೂಲಕ ತಮ್ಮ ಭಕ್ತಿ ಸಮರ್ಪಿಸುತ್ತಾರೆ.





ಭೋಟಾ ಉಸ್ಮಾನ್‌ಗೆ 7 ವರ್ಷ ಜೈಲು

- ಲಷ್ಕರ್ ಎ ತೊಯ್ಬಾ ಉಗ್ರನಿಗೆ ಕಠಿಣ ಶಿಕ್ಷೆ
- ಎನ್‌ಐಎ ಕೋರ್ಟ್‌ನಿಂದ ತೀರ್ಪು ಪ್ರಕಟ

ಹೊಸದಿಲ್ಲಿ: ಬೆಂಗಳೂರು ಜೈಲು ಉಗ್ರವಾದ ಪ್ರಸರಣ ಪ್ರಕರಣದಲ್ಲಿ ಲಷ್ಕರ್-ಇ-ತೊಯ್ಬಾ (ಎಲ್‌ಇಟಿ) ಉಗ್ರ ಸಂಘಟನೆಯ ಮತ್ತೊಬ್ಬ ಪ್ರಮುಖ ಉಗ್ರನಿಗೆ ಎನ್‌ಐಎ ವಿಶೇಷ ನ್ಯಾಯಾಲಯವು ಏಳು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿದೆ.

ವಿಕ್ರಮ್ ಕುಮಾರ್ ಅಲಿಯಾಸ್ ಭೋಟಾ ಉಸ್ಮಾನ್ ಎಂಬಾತನಿಗೆ ನ್ಯಾಯಾಲಯವು 7 ವರ್ಷಗಳ ಜೈಲು ಶಿಕ್ಷೆಯ ಜೊತೆಗೆ 30,000 ರೂ. ದಂಡ ವಿಧಿಸಿದೆ. ಭಾರತೀಯ ದಂಡ ಸಂಹಿತೆ(ಬಿಎನ್‌ಎಸ್), ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ ಹಾಗೂ ಸ್ಫೋಟಕ ವಸ್ತುಗಳ ಕಾಯ್ದೆಗಳಡಿ ಶಿಕ್ಷೆ ನೀಡಲಾಗಿದೆ.

ಈ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾದವರಲ್ಲಿ ಭೋಟಾ ಉಸ್ಮಾನ್ ಎಂಟನೇ ಆರೋಪಿ. ಕಳೆದ ತಿಂಗಳು ಇದೇ ಪ್ರಕರಣದಲ್ಲಿ ಏಳು ಮಂದಿಗೆ ಶಿಕ್ಷೆ ವಿಧಿಸಲಾಗಿತ್ತು. ಆ ವೇಳೆ ಪ್ರಮುಖ ಸಂಚುಕೋರನಾಗಿದ್ದ ಲಷ್ಕರ್ ಸದಸ್ಯ ಟಿ ನಸೀರ್ ಕೂಡ ಶಿಕ್ಷೆಗೆ ಗುರಿಯಾಗಿದ್ದ. 2008ರ ಬೆಂಗಳೂರು ಸರಣಿ ಸ್ಫೋಟ ಪ್ರಕರಣದಲ್ಲಿ ಬಂಧನದಲ್ಲಿದ್ದಾಗಲೇ ಈ ಉಗ್ರವಾದ ಪ್ರಸರಣ ಸಂಚು ರೂಪಿತವಾಗಿತ್ತು ಎಂಬುದು ತನಿಖೆಯಲ್ಲಿ ಬಹಿರಂಗವಾಗಿದೆ. ಎನ್‌ಐಎ ತನಿಖೆಯ ಪ್ರಕಾರ, ಉಗ್ರ ಉಸ್ಮಾನ್ ಜೈಲಿನಲ್ಲಿದ್ದಾಗಲೇ ನಸೀರ್ ಮತ್ತು ಇನ್ನೊಬ್ಬ ಆರೋಪಿ ಜುನೈದ್ ಅಹ್ಮದ್‌ನಿಂದ ಪ್ರಭಾವಿತನಾಗಿ ಉಗ್ರ ಚಟುವಟಿಕೆಗಳಿಗೆ ಸೆಳೆಯಲ್ಪಟ್ಟಿದ್ದನು. ಜೈಲಿನಿಂದ ಬಿಡುಗಡೆಯಾದ ಬಳಿಕವೂ ಇವರೊಂದಿಗೆ ಸಂಪರ್ಕದಲ್ಲಿದ್ದ ಆತ, 2023ರ ಮೇ ತಿಂಗಳಲ್ಲಿ ಹರಿಯಾಣದ ಅಂಬಾಲಾದಿಂದ ಹ್ಯಾಂಡ್ ಗ್ರನೇಡ್‌ಗಳು ಮತ್ತು ವಾಕಿ-ಟಾಕಿಗಳನ್ನು ಪಡೆದು ಬೆಂಗಳೂರಿನ ಸಹ ಆರೋಪಿಗಳಿಗೆ ಒಪ್ಪಿಸಿದ್ದಾನೆ.

ಇದಲ್ಲದೆ, ಜುನೈದ್‌ನ ಆರ್ಥಿಕ ನೆರವಿನಿಂದ, ನಸೀರ್‌ನ್ನು ನ್ಯಾಯಾಲಯಕ್ಕೆ ಕರೆದೊಯ್ಯುವ ಸಂದರ್ಭದಲ್ಲೇ ತಪ್ಪಿಸಿಕೊಳ್ಳಲು ನೆರವಾಗುವ ಸಂಚಿನಲ್ಲಿ ಭಾಗಿಯಾಗಿದ್ದನು. ದೇಶದ ಭದ್ರತೆ ಹಾಗೂ ಸುರಕ್ಷತೆಗೆ ಧಕ್ಕೆಯುಂಟುಮಾಡುವ ಉದ್ದೇಶದಿಂದ ಈ ಕಾರ್ಯಚಟುವಟಿಕೆಗಳು ನಡೆದಿದ್ದವು ಎಂದು ಎನ್‌ಐಎ ಹೇಳಿದೆ. ಈ ಪ್ರಕರಣವನ್ನು ಮೂಲತಃ 2023ರ ಜುಲೈನಲ್ಲಿ ಬೆಂಗಳೂರು ಸೆಂಟ್ರಲ್ ಕ್ರೈಂ ಬ್ರಾಂಚ್ (ಸಿಸಿಬಿ) ದಾಖಲಿಸಿತ್ತು. ಕೆಲವು ಶಂಕಿತರಿಂದ ಶಸ್ತ್ರಾಸ್ತ್ರಗಳು, ಸ್ಫೋಟಕ ವಸ್ತುಗಳು ಮತ್ತು ಡಿಜಿಟಲ್ ಸಾಧನಗಳನ್ನು ವಶಪಡಿಸಿಕೊಂಡ ಬಳಿಕ ಪ್ರಕರಣ ಬೆಳಕಿಗೆ ಬಂದಿತ್ತು. ಬಳಿಕ ಎನ್‌ಐಎ ತನಿಖೆ ಕೈಗೆತ್ತಿಕೊಂಡು ಹೆಚ್ಚಿನ ಸಂಚುಗಳನ್ನು ಪತ್ತೆಹಚ್ಚಿತು. ಈ ಪ್ರಕರಣದಲ್ಲಿ ಒಟ್ಟು 12 ಮಂದಿಗೆ ವಿರುದ್ಧ ಆರೋಪಪಟ್ಟಿ ಸಲ್ಲಿಸಲಾಗಿದ್ದು, ಜುನೈದ್ ಇನ್ನೂ ಪರಾರಿಯಾಗಿದ್ದಾನೆ. ಅವನಿಗಾಗಿ ಶೋಧ ಮುಂದುವರಿದಿದೆ.

ಇಂದು ಫಲಿತಾಂಶ

ತ.ನಾಡಲ್ಲಿ ಡಿಎಂಕೆ-ಎಐಎಡಿಎಂಕೆ ಸಮರ

ಪುಟ ೧➜ ರಾಜ್ಯದ 62 ಮತ ಎಣಿಕೆ ಕೇಂದ್ರಗಳಲ್ಲಿ ಮೂರು ಹಂತದ ಭದ್ರತಾ ವ್ಯವಸ್ಥೆ ಜಾರಿಯಲ್ಲಿದೆ. ಸುಮಾರು 1.25 ಲಕ್ಷ ಸಿಬ್ಬಂದಿಯನ್ನು ಮತ ಎಣಿಕೆ ಕರ್ತವ್ಯಕ್ಕೆ ನಿಯೋಜಿಸಲಾಗಿದೆ. 234 ವಿಧಾನಸಭಾ ಕ್ಷೇತ್ರಗಳಿಗೆ ಪ್ರತ್ಯೇಕ ವೀಕ್ಷಕರನ್ನು ಚುನಾವಣಾ ಆಯೋಗ ನೇಮಿಸಿದೆ.

ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ ಕನಸು

ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೂರನೇ ಅವಧಿಗೆ ಅಧಿಕಾರಕ್ಕೇರುವ ವಿಶ್ವಾಸದಲ್ಲಿದೆ. 126 ಕ್ಷೇತ್ರಗಳ 722 ಅಭ್ಯರ್ಥಿಗಳ ರಾಜಕೀಯ ಭವಿಷ್ಯ ನಿರ್ಧಾರವಾಗಲಿದೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮ, ಕಾಂಗ್ರೆಸ್ ನಾಯಕ ಗೌರವ್ ಗೊಗೊಯ್ ಹಾಗೂ ರೈಜೋರ್ ದಳದ ನಾಯಕ ಅಖಿಲ್ ಗೊಗೊಯ್ ಪ್ರಮುಖ ಅಭ್ಯರ್ಥಿಗಳಾಗಿದ್ದಾರೆ. ರಾಜ್ಯದ 40 ಮತ ಎಣಿಕೆ ಕೇಂದ್ರಗಳಿಗೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ಭದ್ರತೆ ಒದಗಿಸಲಾಗಿದೆ. ಏಪ್ರಿಲ್ 9ರಂದು ನಡೆದ ಮತದಾನದಲ್ಲಿ 85.96 ಶೇಕಡಾ ಮತದಾನ ದಾಖಲಾಗಿತ್ತು.

ಕೇರಳದಲ್ಲಿ ಎಲ್‌ಡಿಎಫ್‌ಗೆ ಅಸ್ತಿತ್ವದ ಹೋರಾಟ

ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್, ಎರಡು ಅವಧಿಗಳಿಂದ ಆಡಳಿತದಲ್ಲಿರುವ ಎಲ್‌ಡಿಎಫ್ ಸರ್ಕಾರವನ್ನು ಪತನಗೊಳಿಸುವ ವಿಶ್ವಾಸದಲ್ಲಿದೆ. ಎಲ್‌ಡಿಎಫ್ ಸೋತರೆ 1960ರ ದಶಕದ ನಂತರ ದೇಶದ ಯಾವುದೇ ರಾಜ್ಯದಲ್ಲಿ ಎಡಪಕ್ಷಗಳ ಸರ್ಕಾರ ಇರುವುದಿಲ್ಲ ಎಂಬ ವಿಶೇಷ ಸ್ಥಿತಿ ಉಂಟಾಗಲಿದೆ. 140 ಕ್ಷೇತ್ರಗಳಿಗೆ ಒಟ್ಟು 883 ಅಭ್ಯರ್ಥಿಗಳು ಕಣಕ್ಕಿಳಿದಿದ್ದಾರೆ. ರಾಜ್ಯಾದ್ಯಂತ 140 ಕೇಂದ್ರಗಳಲ್ಲಿ ಬಿಗಿ ಭದ್ರತೆಯಲ್ಲಿ ಮತ ಎಣಿಕೆ ನಡೆಯಲಿದೆ.

ಪುದುಚೇರಿಯಲ್ಲಿ ಎನ್‌ಡಿಎ-ಇಂಡಿ ಪೈಪೋಟಿ

ಪುದುಚೇರಿಯಲ್ಲಿ ಎನ್‌ಡಿಎ ಮೈತ್ರಿ ಹಾಗೂ ಇಂಡಿ ಮೈತ್ರಿ ನಡುವೆ ನೇರ ಪೈಪೋಟಿ ಇದೆ. ಅಲ್ಲದೆ ಗೋವಾ, ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ನಾಗಾಲ್ಯಾಂಡ್ ಹಾಗೂ ತ್ರಿಪುರಾದ ಎಂಟು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಮತ ಎಣಿಕೆಯೂ ಸೋಮವಾರ (ಮೇ 4) ನಡೆಯಲಿದೆ.

ಕದನ ಕುತೂಹಲ ಹೆಚ್ಚಿಸಿದ ದಾವಣಗೆರೆ, ಬಾಗಲಕೋಟೆ

ಪುಟ ೧➜ ಕಡೆಗಳಿಗೆಯವರೆಗೂ ಬಂಡಾಯದ ಬಿಸಿ ತಟ್ಟಿತ್ತು. ಆದರೆ ವರಿಷ್ಠರ ಸಂಧಾನ ಯಶಸ್ವಿಯಾದ ಹಿನ್ನೆಲೆಯಲ್ಲಿ ಬಂಡಾಯ ಅಭ್ಯರ್ಥಿ ಸಾಧಿಕ್ ಪೈಲ್ವಾನ್ ಕಣದಿಂದ ಹಿಂದೆ ಸರಿದಿದ್ದರು. ಹೀಗಾಗಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ.

ಮೇಟಿ ವರ್ಸಸ್ ಚರಂತಿಮಠ

ಮತ್ತೊಂದೆಡೆ ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲೂ ತೀವ್ರ ಪೈಪೋಟಿ ಏರ್ಪಟ್ಟಿದ್ದು, ಚುನಾವಣಾ ಅಖಾಡ ಜಿದ್ದಾಜಿದ್ದಿನಿಂದ ಕೂಡಿದೆ. ಕಾಂಗ್ರೆಸ್ ಶಾಸಕ ಎಚ್.ವೈ. ಮೇಟಿ ನಿಧನದಿಂದ ಈ ಕ್ಷೇತ್ರಕ್ಕೆ ಉಪಚುನಾವಣೆ ನಡೆದಿದ್ದು, ಕಾಂಗ್ರೆಸ್‌ನಿಂದ ದಿ.ಎಚ್.ವೈ. ಮೇಟಿ ಪುತ್ರ ಉಮೇಶ್ ಮೇಟಿ ಹಾಗೂ ಬಿಜೆಪಿಯಿಂದ ವೀರಣ್ಣ ಚರಂತಿಮಠ ಸ್ಪರ್ಧಿಸಿದ್ದು, ಗೆಲುವಿನ ಮಾಲೆ ಯಾರಿಗೆ ಎಂಬುದು ಸಹ ಕೌತುಕಕ್ಕೆ ಕಾರಣವಾಗಿದೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸುವ ಉತ್ಸಾಹದಲ್ಲಿದೆ. ಶತಾಯ-ಗತಾಯ ಗೆಲ್ಲಲೇಬೇಕೆಂಬ ಹುಮ್ಮಸ್ಸಿನಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ರಾಜ್ಯ ಕಾಂಗ್ರೆಸ್ ನಾಯಕರ ದಂಡು ಬಿರುಸಿನ ಪ್ರಚಾರ ನಡೆಸಿ ಮತ ಯಾಚಿಸಿತ್ತು. ಈ ಎರಡು ಕ್ಷೇತ್ರಗಳ ಲೆಕ್ಕಾಚಾರಗಳು ಏನೇ ಇರಲಿ, ಮತ ಎಣಿಕೆ ನಂತರ ಜಯದ ಮಾಲೆ ಯಾರ ಕೊರಳಿಗೆ ಎಂಬ ಕುತೂಹಲಕ್ಕೆ ತೆರೆ ಬೀಳಲಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಉಕ್ರೇನ್ ರಷ್ಯಾ ಮತ್ತು ಇಸ್ರೇಲ್ ಇರಾನ್ ಅಮೇರಿಕಾ ನಡುವಿನ ಸಂಘರ್ಷಗಳಂತಹ ಬಿಕ್ಕಟ್ಟುಗಳಿಗೆ ನಾನು ನನ್ನದು ಎಂಬ ಸ್ವಾರ್ಥಪರ ಭಾವನೆಯೇ ಕಾರಣ
- ಮೋಹನ್ ಭಾಗ್ವತ್

- ನಾನು ನನ್ನದು ಎಂಬ ಮನೋಭಾವ ಹೆಚ್ಚಾದಾಗ ನಮ್ಮ ನಮ್ಮೊಳಗೆ ಜಗಳ ಹೆಚ್ಚಾಗುತ್ತೆ, ಆದರಿಂದಾಗಿ ನನಗೂ ಸುಖವಿಲ್ಲ ನಮಗೂ ನೆಮ್ಮದಿ ಇಲ್ಲ

ದಿನ ಭವಿಷ್ಯ

ಮೇಷ ವೃತ್ತಿ ಒತ್ತಡ ಅಧಿಕ. ಆದರೆ ಅಪರಾಹ್ನದ ವೇಳೆ ಒತ್ತಡ ನಿವಾರಣೆ. ಕೌಟುಂಬಿಕ ವಿಚಾರದಲ್ಲಿ ಪೂರಕ ಪರಿಸ್ಥಿತಿ. ಖರ್ಚು ನಿಯಂತ್ರಿಸಲು ಯತ್ನಿಸಿ.

ವೃಷಭ ದಿನದಂತ್ಯಕ್ಕೆ ಅನಿರೀಕ್ಷಿತ ಬೆಳವಣಿಗೆ ನಿರೀಕ್ಷಿಸುವಿರಿ. ಹಣದ ಬೆಂಬತ್ತಬೇಡಿ. ಮಾನಸಿಕ ಒತ್ತಡ ಕಡಿಮೆ ಮಾಡಲು ಗಮನ ಕೊಡಿ.

ಮಿಥುನ ಬದುಕು ನೀವು ಇಚ್ಚಿಸದ ಕಡೆ ಸಾಗುತ್ತಿದೆ. ಅದರ ಮೇಲೆ ನಿಯಂತ್ರಣ ಸಾಧಿಸಿ. ಇತರರ ಏಳಿಗೆಗೆ ಶ್ರಮಿಸುವ ಮುನ್ನ ನಿಮ್ಮ ಬೇಡಿಕೆಗೆ ಗಮನ ಕೊಡಿ.

ಕಟಕ ನಿಮ್ಮ ಕರ್ತವ್ಯ ಪಾಲನೆಗೆ ಗಮನ ಕೊಡಿ. ಇತರ ವಿಷಯ ದೂರುತ್ತಾ ಕೂರಬೇಡಿ. ಸಮಸ್ಯೆ ತರುವ ವ್ಯಕ್ತಿಗಳನ್ನು ದೂರ ಇಡಿ. ಆರ್ಥಿಕ ಉನ್ನತಿ

ಸಿಂಹ ಇಂದು ಕೆಲವಾರು ಬೆಳವಣಿಗೆ ಉಂಟಾದೀತು. ಹಳೆಯ ವಿಷಯ ಕೆದಕಬೇಡಿ. ಸಮಸ್ಯೆ ಹೆಚ್ಚಬಹುದು. ಕಿರಿಕಿರಿ ವ್ಯಕ್ತಿಗಳಿಂದ ದೂರವಿರಿ.

ಕನ್ಯಾ ಕಹಿಸಿಹಿ ಬೆಳವಣಿಗೆ ಎರಡೂ ಸಂಭವ. ಕಚೇರಿ ರಾಜಕೀಯ ನೆಮ್ಮದಿ ಕೆಡಿಸುವುದು. ವೆಚ್ಚ ತುಂಬಾ ಹೆಚ್ಚಲಿದೆ. ಹಳೆ ಸ್ನೇಹಿತರ ಸಂಪರ್ಕ.

ತುಲಾ ಹೊಸ ಪ್ರಯೋಗ ಮಾಡಲು ಹೋಗಬೇಡಿ. ಇರುವ ಸ್ಥಿತಿಯನ್ನೆ ಮುಂದುವರಿಸಿ. ದೇಹಾರೋಗ್ಯ ಕಾಯಲು ಆದ್ಯತೆ ಕೊಡಿ.

ವೃಶ್ಚಿಕ ಪಾಲುದಾರರ ಜತೆ ಸಂಘರ್ಷ ಉಂಟಾದೀತು. ಅರಿತು ವ್ಯವಹರಿಸಿ. ಅನೂಹ್ಯ ಪ್ರಸಂಗ ಎದುರಿಸಬೇಕಾದೀತು. ಆರೋಗ್ಯ ಸಮಸ್ಯೆ.

ಧನು ಶುಭ ಬೆಳವಣಿಗೆ. ಉದ್ಯೋಗವಕಾಶ ಹೆಚ್ಚಳ. ಸ್ವಂತ ಉದ್ದಿಮೆದಾರರಿಗೆ ಯಶಸ್ಸು. ಬಂಧು ಭೇಟಿ. ದೈಹಿಕ ಅಸೌಖ್ಯ ತುಸು ಕಾಡಬಹುದು.

ಮಕರ ಹಣದ ವಿಚಾರ ಚಿಂತೆ ಕಾರಣವಾಗಲಿದೆ. ವೃತ್ತಿಯಲ್ಲಿ ಕಿರಿಕಿರಿ. ಹಿರಿಯರ ಬೇಡಿಕೆ ಅರಿತು ವ್ಯವಹರಿಸಿ. ಆರೋಗ್ಯ ಸುಸ್ಥಿರ, ಚಿಂತೆ ನಿವಾರಣೆ.

ಕುಂಭ ಮಹತ್ವದ ಹೊಣೆ ನಿಮ್ಮ ಮೇಲೆ ಬೀಳಲಿದೆ. ತಪ್ಪಾಗದಂತೆ ಎಚ್ಚರ ವಹಿಸಿ. ಶಾಪಿಂಗ್‌ನಲ್ಲಿ ಹೆಚ್ಚು ಕಾಲ ಕಳೆಯದಿರಿ. ಅನವಶ್ಯ ವೆಚ್ಚ ಹೆಚ್ಚಳ.

ಮೀನ ವಿಶ್ವಾಸ ವೃದ್ಧಿ. ಬಾಕಿ ಇರುವ ಕೆಲಸ ಪೂರ್ಣ. ಹಣದ ವಿಚಾರದಲ್ಲಿ ನೀಡುವ ಹಿತವಚನಕ್ಕೆ ಕಿವಿಗೊಡಿ. ಸಾಂಸಾರಿಕ ಸಾಮರಸ್ಯ ಹೆಚ್ಚಳ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 5,2,7,1

ತುಂಗಭದ್ರಾ ಅಣೆಕಟ್ಟೆ 33 ಗೇಟ್‌ಗಳ ದುರಸ್ತಿ ಯಶಸ್ವಿ: ಡಿಸಿಎಂ

ಮೇ 15ಕ್ಕೆ ಲೋಕಾರ್ಪಣೆ?

ವಿಜಯನಗರ: ತುಂಗಭದ್ರಾ ಅಣೆಕಟ್ಟೆ 33 ಕ್ರಸ್ಟ್ ಗೇಟ್‌ಗಳನ್ನು ಸಂಪೂರ್ಣವಾಗಿ ದುರಸ್ತಿಗೊಳಿಸಲಾಗಿದೆ. ತಿಂಗಳ ಅಂತ್ಯದೊಳಗೆ ಕ್ರಸ್ಟ್ ಗೇಟ್‌ಗಳ ಚೈನ್‌ಗಳೂ ಅಳವಡಿಕೆಯಾಗಲಿವೆ. ಮೇ 15ರಂದು ಈ ಭಾಗದ ನಾಲ್ಕು ಜಿಲ್ಲೆಗಳ ರೈತರನ್ನು ಸೇರಿಸಿ ದೊಡ್ಡಮಟ್ಟದ ಕಾರ್ಯಕ್ರಮ ಆಯೋಜಿಸಿ ಲೋಕಾರ್ಪಣೆ ಮಾಡಲು ಚಿಂತನೆ ನಡೆಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ತುಂಗಭದ್ರಾ ಜಲಾಶಯ ಕ್ರಸ್ಟ್ ಗೇಟ್ ಕಾರ್ಯ ಪರಿಶೀಲನೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಡ್ಯಾಂನ 33 ಗೇಟ್‌ಗಳ ಪೈಕಿ 22 ಗೇಟ್‌ಗಳಿಗೆ ಸ್ಪ್ಲೈಸ್ ಪ್ಲೇಟ್‌ಗಳನ್ನು ಅಳವಡಿಸುವ ಕಾರ್ಯ ಪೂರ್ಣಗೊಂಡಿದೆ.

ತಜ್ಞರ ವರದಿಯಂತೆ ಹಳೆಯ ಚೈನ್‌ಗಳು ಸದೃಢವಾಗಿದ್ದರೂ, ಮುನ್ನೆಚ್ಚರಿಕಾ ಕ್ರಮವಾಗಿ ಹೊಸ ಚೈನ್‌ಗಳನ್ನು ಅಳವಡಿಸಲು ನಿರ್ಧರಿಸಲಾಗಿದೆ. ಮೊದಲ ಸೆಟ್ ಹೊಸ ಚೈನ್‌ಗಳು ಮೇ 7ರಂದು ಆಗಮಿಸಲಿದ್ದು, ಮೇ ಅಂತ್ಯದೊಳಗೆ ಚೈನ್ ಅಳವಡಿಕೆ ಕಾರ್ಯ ಸಂಪೂರ್ಣ ಪ್ರಕ್ರಿಯೆ ಮುಗಿಯಲಿದೆ. ಮುಂಬರುವ ಮಳೆಗಾಲವನ್ನು ಗಮನದಲ್ಲಿಟ್ಟುಕೊಂಡು ಮೇ 15ರಂದು ಯೋಜನೆಯನ್ನು ಅಧಿಕೃತವಾಗಿ ಉದ್ಘಾಟಿಸಲು ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

2024ರ ಆಗಸ್ಟ್ 10ರಂದು ರಾತ್ರಿ ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್ ಗೇಟ್ ಕಿತ್ತು ಹೋಗಿದ್ದರಿಂದ ಮೂರೂ ರಾಜ್ಯಗಳಿಗೆ ಬಹುದೊಡ್ಡ ಸಮಸ್ಯೆ ಎದುರಾಗಿತ್ತು. ಅಂದು ಬೆಳಗಾಗುತ್ತಿದ್ದಂತೆ ನಾನು ಡ್ಯಾಂಗೆ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದೆ. ರಾಜ್ಯ ಸರ್ಕಾರ ಅಂದು ತಕ್ಷಣ ಸ್ಪಂದಿಸಿತ್ತು. ಗೇಟ್‌ಗಳ ದುರಸ್ತಿಗೆ ಸುಮಾರು 54 ಕೋಟಿ ರೂ.ವೆಚ್ಚ ಮಾಡಲಾಗಿದೆ. ಕಾಲುವೆಗಳ ದುರಸ್ತಿ ಮತ್ತು ಇತರೆ ಕೆಳಹಂತದ ಕಾಮಗಾರಿಗಳಿಗೆ ಒಟ್ಟು 315 ಕೋಟಿ ರೂ.ವ್ಯಯಿಸಲಾಗಿದೆ. ತಜ್ಞರ ವರದಿಯಂತೆ ಈ ದುರಸ್ತಿ ಕಾರ್ಯದಿಂದಾಗಿ ಅಣೆಕಟ್ಟಿನ ಆಯಸ್ಸು ಮುಂದಿನ 50 ವರ್ಷಗಳವರೆಗೆ ವೃದ್ಧಿಸಲಿದೆ ಎಂದು ತಿಳಿಸಿದರು. ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳು 64:34 ಅನುಪಾತದಲ್ಲಿ ಬಂಡವಾಳ ಹೂಡುತ್ತಿದ್ದು, ಡ್ಯಾಂ ಮಂಡಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಈ ಇಡೀ ಕಾರ್ಯಾಚರಣೆಯು ದೇಶಕ್ಕೆ ಒಂದು ದೊಡ್ಡ ಸವಾಲು ಮತ್ತು ತಾಂತ್ರಿಕ ಮಾದರಿಯಾಗಿದೆ ಎಂದು ಡಿಸಿಎಂ ಹರ್ಷ ವ್ಯಕ್ತಪಡಿಸಿದರು.

ಈ ವೇಳೆ ಸಂಸದ ಈ.ತುಕಾರಾಂ, ಸಚಿವರಾದ ಕೆ.ಎಚ್. ಮುನಿಯಪ್ಪ, ಈಶ್ವರ್ ಖಂಡ್ರೆ, ಶಿವರಾಜ್ ತಂಗಡಗಿ, ಶಾಸಕರಾದ ಎಚ್.ಆರ್.ಗವಿಯಪ್ಪ, ಡಾ.ಎನ್.ಟಿ ಶ್ರೀನಿವಾಸ, ಅನ್ನಪೂರ್ಣ ತುಕಾರಾಂ, ಸಂಸದರಾದ ಈ.ತುಕಾರಾಂ, ರಾಜಶೇಖರ್ ಹಿಟ್ನಾಳ್, ಡಿಸಿ ಕವಿತಾ ಎಸ್ ಮನ್ನಿಕೇರಿ, ಎಸ್‌ಪಿ ಜಾಹ್ನವಿ ಇದ್ದರು.



ಜಲಾಶಯದ ಸುರಕ್ಷತೆಗೆ ಬದ್ಧ

ರಾಜಕೀಯ ಟೀಕೆಗಳಿಗೆ ಕಿವಿಗೊಡದೆ ರೈತರ ಹಿತರಕ್ಷಣೆ ಮತ್ತು ಜಲಾಶಯದ ಸುರಕ್ಷತೆಗೆ ಸರ್ಕಾರ ಬದ್ಧವಾಗಿದೆ. ಜಲಾಶಯ ಕ್ರಸ್ಟ್ ಗೇಟ್ ಕಳಚಿದ್ದರಿಂದಾಗಿ ಮೂರು ಜಿಲ್ಲೆಯ ರೈತರು ಒಂದು ಬೆಳೆಯನ್ನು ತ್ಯಾಗ ಮಾಡಿ ಗೇಟ್ ಅಳವಡಿಕೆ ಕಾರ್ಯಕ್ಕೆ ಸಹಕರಿಸಿದ್ದಾರೆ. ಆದ್ದರಿಂದ ಕಾಮಗಾರಿ ಪೂರ್ಣಗೊಂಡ ನಂತರ ರಾಯಚೂರು, ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಸೇರಿದಂತೆ ನಾಲ್ಕು ಜಿಲ್ಲೆಗಳ ರೈತರನ್ನು ಆಹ್ವಾನಿಸಿ ಬೃಹತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಮತ್ತು ಅಣೆಕಟ್ಟಿಗೆ ವಿಶೇಷ ಪೂಜೆ ಸಲ್ಲಿಸಲಾಗುವುದು ಎಂದು ಡಿ.ಕೆ. ಶಿವಕುಮಾರ ತಿಳಿಸಿದರು.

ಮತಪತ್ರಗಳ ತಿದ್ದುಪಡಿ: ದೇಶಕ್ಕೆ ಮಾಡಿದ ಅಪರಾಧ

ವಿಜಯನಗರ: ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ 2023ರಲ್ಲಿ ನಡೆದ ಚುನಾವಣೆಯಲ್ಲಿ ಸುಮಾರು 200ಕ್ಕೂ ಹೆಚ್ಚು ಅಂಚೆ ಮತಗಳನ್ನು ತಿದ್ದಿರುವುದು ದೇಶಕ್ಕೆ ಮಾಡಿದ ಮಹಾಪರಾಧ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು. ಶೃಂಗೇರಿ ಕ್ಷೇತ್ರದಲ್ಲಿ ಅಧಿಕಾರಿಗಳನ್ನು ಬಳಸಿಕೊಂಡು ಮತಪತ್ರಗಳಲ್ಲಿ ಹಸ್ತಕ್ಷೇಪ ನಡೆದಿದೆ. ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ ವಿಚಾರದಲ್ಲಿ ಬಹಳ ದೊಡ್ಡ ಅಪರಾಧ ನಡೆದಿದೆ. ಇದನ್ನು ನಾವು ನ್ಯಾಯಾಲಯದಲ್ಲಿ ಪ್ರಶ್ನಿಸುತ್ತೇವೆ ಎಂದು ತಿಳಿಸಿದರು. ಶಾಸಕ ಟಿ.ಡಿ.ರಾಜೇಗೌಡ ಮತ್ತು ಡಿ.ಎನ್.ಜೀವರಾಜ್ ಇಬ್ಬರ ಕಡೆಯವರೂ ಸರಿಯಾಗಿ ಸಹಿ ಹಾಕಿಲ್ಲ ಎಂದು ಗೃಹ ಸಚಿವರೇ ಹೇಳಿದ್ದಾರಲ್ಲ ಎಂದು ಕೇಳಿದಾಗ, ಸಹಿ ಸರಿಯಾಗಿಯೇ ಮಾಡಿದ್ದಕ್ಕೆ ದಾಖಲೆ ಇದೆ. ನಾನೂ ವರದಿ ತರಿಸಿಕೊಂಡಿದ್ದೇನೆ ಎಂದು ಪ್ರತಿಕ್ರಿಯಿಸಿದರು.

ಯಡಿಯೂರಪ್ಪಗೆ ಅಭಿಮಾನದ ಗೌರವ



ಪುಟ ೧➜ ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ, ಮಾಜಿ ಶಾಸಕ ಜಿ.ಎಚ್.ತಿಪ್ಪಾರೆಡ್ಡಿ, ವಿಧಾನಪರಿಷತ್ ಮಾಜಿ ಸದಸ್ಯ ವೈ.ಎ.ನಾರಾಯಣಸ್ವಾಮಿ ಮಾತನಾಡಿದರು. ಬಿಜೆಪಿ ರಾಜ್ಯ ಕಾರ್ಯದರ್ಶಿ ಅಂಬಿಕಾ ಹುಲಿನಾಯ್ಕರ್, ಜಿಲಾಧ್ಯಕ್ಷ ಕೆ.ಟಿ.ಕುಮಾರಸ್ವಾಮಿ, ಉಪಾಧ್ಯಕ್ಷ ಡಾ.ಸಿದ್ದಾರ್ಥ, ವಿಭಾಗ ಸಹ ಪ್ರಭಾರಿ ಎ. ಮುರಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಾಧುರಿ ಗಿರೀಶ್, ವೆಂಕಟೇಶ್ ಯಾದವ್, ಮೋಹನ್‌ಕುಮಾರ್, ಎಸ್.ಲಿಂಗಮೂರ್ತಿ, ಹನುಮಂತೇಗೌಡ, ಪಟೇಲ್ ಶಿವಕುಮಾರ್, ಸಂಪತ್‌ಕುಮಾರ್, ಜಿಲ್ಲಾ ವಕ್ತಾರ ನಾಗರಾಜ್ ಬೇದ್ರೆ, ಎಸ್‌ಸಿ ಮೋರ್ಚಾದ ಅಧ್ಯಕ್ಷ ಪರಶುರಾಮ್ ಮತ್ತಿತರರಿದ್ದರು.

ತೀವ್ರ ಬಿಸಿಲ ತಾಪಕ್ಕೆ ವ್ಯಕ್ತಿ ಸಾವು

ದಾವಣಗೆರೆ: ತೀವ್ರ ಬಿಸಿಲಿನ ಪರಿಣಾಮ ಜಿಲ್ಲೆಯ ಜಗಳೂರು ಮೂಲದ ವ್ಯಕ್ತಿಯೊಬ್ಬರು ಆಂಧ್ರಪ್ರದೇಶದಲ್ಲಿ ಮೃತಪಟ್ಟಿರುವ ಘಟನೆ ವರದಿಯಾಗಿದೆ.

ಜಗಳೂರು ಪಟ್ಟಣದ ನಿವೃತ್ತ ಶಿಕ್ಷಕ ಇಬ್ರಾಹಿಂ ಸಾಬ್ ಪುತ್ರ ಫಯಾಜ್ ಅಹಮ್ಮದ್(45 ವರ್ಷ) ಮೃತ ವ್ಯಕ್ತಿ. ಇವರು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆ ಆದೋನಿಯ ಗುಡಿಕಲ್ ದರ್ಗಾದ ಉರುಸ್‌ಗೆ ಕುಟುಂಬ ಸಮೇತ ತೆರಳಿದ್ದರು.

ಉರುಸ್ ಮುಗಿಸಿಕೊಂಡು ಆದೋನಿಯಿಂದ ಬಸ್ ಹತ್ತುವಾಗ ತೀವ್ರ ಬಿಸಿಲಿನಿಂದಾಗಿ ಫಯಾಜ್ ಅಹಮದ್ ಕುಸಿದು ಬಿದ್ದು ಅಸ್ವಸ್ಥರಾಗಿದ್ದರು. ತಕ್ಷಣವೇ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಭೂಕಕ್ಷೆಗೆ ಮಿಷನ್ ದೃಷ್ಟಿ ಉಪಗ್ರಹ

ಪುಟ ೧➜ ಆದರೆ ಎಸ್‌ಎಆರ್ ಸಂವೇದಕಗಳು ರಡಾರ್ ಅಲೆಗಳನ್ನು ಬಳಸಿಕೊಂಡು ಯಾವುದೇ ಹವಾಮಾನದಲ್ಲಿ, ಹಗಲು-ರಾತ್ರಿ ಎಲ್ಲಾ ಸಮಯದಲ್ಲಿ ಚಿತ್ರಗಳನ್ನು ಪಡೆಯಲು ಸಹಕಾರಿಯಾಗುತ್ತವೆ. ಉಪಗ್ರಹ ಈಗ ಯಶಸ್ವಿಯಾಗಿ ಭೂಕಕ್ಷೆಗೆ ಪ್ರವೇಶಿಸಿದ್ದು, ಅದರ ಕಾರ್ಯಾಚರಣಾ ಪ್ರಕ್ರಿಯೆ ಯನ್ನು ಪೂರ್ಣಗೊಳಿಸುವ ಕೆಲಸ ಮುಂದುವರಿಯುತ್ತಿದೆ. ಒಪ್ಟೊಸಾರ್ ತಂತ್ರಜ್ಞಾನದಿಂದ ಸಿಗುವ ವಿಶೇಷ ಡೇಟಾಗೆ ಜಾಗತಿಕ ಮಟ್ಟದಲ್ಲಿ ಹೆಚ್ಚಿನ ಆಸಕ್ತಿ ವ್ಯಕ್ತವಾಗುತ್ತಿದೆ ಎಂದು ಗ್ಯಾಲಕ್ಸ್‌ಐ ಸ್ಥಾಪಕ ಮತ್ತು ಸಿಇಒ ಸುಯಶ್ ಸಿಂಗ್ ಹೇಳಿದ್ದಾರೆ.

> ಒಂದೇ ಉಪಗ್ರಹದಲ್ಲಿ ಆಪ್ಟಿಕಲ್ ಮತ್ತು ಸಾರ್ ಸಾಮರ್ಥ್ಯಗಳನ್ನು ಸಂಯೋಜನೆ ಮಾಡುವುದು ಬಹುದೊಡ್ಡ ಸಾಧನೆ
> ■ ನಿವೃತ್ತ ಲೆ.ಜನರಲ್ ಎ.ಕೆ.ಭಟ್, ಭಾರತೀಯ ಬಾಹ್ಯಾಕಾಶ ಸಂಘದ ನಿರ್ದೇಶಕ

> ಈ ಸಾಧನೆ ಭಾರತದ ಬಾಹ್ಯಾಕಾಶ ಕ್ಷೇತ್ರದಲ್ಲಿ ಒಂದು ಮಹತ್ವದ ಮೈಲಿಗಲ್ಲು.
> ■ ಜಿತೇಂದ್ರ ಸಿಂಗ್, ಕೇಂದ್ರ ಸಚಿವ

2030ಕ್ಕೆ 10 ಉಪಗ್ರಹಗಳ ಸಮೂಹ ರಚನೆ?

ಗ್ಯಾಲಕ್ಸ್‌ಐ ಕಂಪನಿ 2030ರೊಳಗೆ 10 ಉಪಗ್ರಹಗಳ ಸಮೂಹವನ್ನು ರಚಿಸುವ ಯೋಜನೆ ಹೊಂದಿದ್ದು, ಭಾರತಕ್ಕೆ ಬಲಿಷ್ಠ ಮತ್ತು ಸ್ವಾಯತ್ತ ಭೂ ಅವಲೋಕನ ವ್ಯವಸ್ಥೆ ಅಭಿವೃದ್ಧಿಪಡಿಸಲು ಉದ್ದೇಶಿಸಿದೆ.

ಪ್ರಧಾನಿ ಅಭಿನಂದನೆ



ನಮ್ಮ ಬಾಹ್ಯಾಕಾಶ ಪಯಣದಲ್ಲಿ ಗ್ಯಾಲಕ್ಸ್‌ಐನ ಮಿಷನ್ ದೃಷ್ಟಿ ಪ್ರಮುಖ ಸಾಧನೆ ಮಾಡಿದೆ. ಭಾರತದಲ್ಲಿ ಖಾಸಗಿಯಾಗಿ ನಿರ್ಮಿಸಲ್ಪಟ್ಟ ಅತಿ ದೊಡ್ಡ ಮತ್ತು ವಿಶ್ವದ ಮೊದಲ ಒಪ್ಟೊಸಾರ್ ಉಪಗ್ರಹದ ಉಡಾವಣೆ ಯಶಸ್ವಿಯಾಗಿದ್ದು, ಇದು ದೇಶ ನಿರ್ಮಾಣ ಮತ್ತು ನಾವೀನ್ಯತೆಯಲ್ಲಿ ಯುವ ಜನತೆಗಿರುವ ಆಸಕ್ತಿಗೆ ಹಿಡಿದ ಕನ್ನಡಿ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ.

ಭೂ ಅವಲೋಕನ ಉಪಗ್ರಹ

ಈ ಉಪಗ್ರಹವು ವಿಷಮ ಪರಿಸರ ಪರಿಸ್ಥಿತಿಗಳಲ್ಲಿಯೂ ವಿಶ್ವಾಸಾರ್ಹ ಮತ್ತು ನಿರಂತರ ಡೇಟಾ ಸಂಗ್ರಹಣೆಗೆ ನೆರವಾಗುತ್ತದೆ. ಇದು ಡ್ಯುಯಲ್-ಯೂಸ್ ಭೂ ಅವಲೋಕನ ಉಪಗ್ರಹವಾಗಿದ್ದು, ವಿವಿಧ ಕ್ಷೇತ್ರಗಳಿಗೆ ಸಹಾಯ ಮಾಡಲಿದೆ

- ರಕ್ಷಣಾ ಕ್ಷೇತ್ರ (ಡಿಫೆನ್ಸ್)
- ಕೃಷಿ
- ವಿಪತ್ತು ನಿರ್ವಹಣೆ
- ಸಾಗರೋತ್ತರ ಕಣ್ಗಾವಲು
- ಮೂಲಸೌಕರ್ಯ ಯೋಜನೆ

ಈ ಮಿಷನ್, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ವರದಿಯಲ್ಲಿ ಉಲ್ಲೇಖಿಸಿರುವ 29 ಸಕ್ರಿಯ ಭೂ ಅವಲೋಕನ ಉಪಗ್ರಹಗಳಿಗೆ ಪೂರಕವಾಗಿರಲಿದೆ. ಐದು ವರ್ಷಗಳ ಸ್ವದೇಶಿ ಸಂಶೋಧನೆ ಮತ್ತು ಅಭಿವೃದ್ಧಿಯ ನಂತರ, ಈ ಉಪಗ್ರಹವನ್ನು ಯಶಸ್ವಿಯಾಗಿ ನಿರ್ಮಿಸಲಾಗಿದೆ ಮತ್ತು ಪರೀಕ್ಷಿಸಲಾಗಿದೆ.

ಕೆಪಿಎಸ್ಸಿ ಸುಧಾರಣೆಗೆ ಸದನ ಸಮಿತಿ ರಚನೆ

ಪುಟ ೧➜ ಸಮಿತಿಯಲ್ಲಿ ಕಾಂಗ್ರೆಸ್‌ನ ಹಂಪನಗೌಡ ಬಾದರ್ಲಿ, ಎಚ್.ಸಿ. ಬಾಲಕೃಷ್ಣ, ಎ.ಎಸ್. ಪೊನ್ನಣ್ಣ, ಕೆ.ಎಂ. ಶಿವಲಿಂಗೇಗೌಡ, ರಾಘವೇಂದ್ರ ಹಿಟ್ನಾಳ, ಎಂ. ರೂಪಕಲಾ, ಬಿಜೆಪಿಯ ಆರಗ ಜ್ಞಾನೇಂದ್ರ, ಎಸ್. ಸುರೇಶ್ ಕುಮಾರ್, ಮಹೇಶ್ ಟೆಂಗಿನಕಾಯಿ, ಜೆಡಿಎಸ್‌ನ ಎಂ.ಟಿ. ಕೃಷ್ಣಪ್ಪ ಸದಸ್ಯರಾಗಿದ್ದಾರೆ. ಅಧ್ಯಯನ ನಡೆಸಿ ಶಿಫಾರಸುಗಳ ಸಹಿತ ವರದಿ ಸಲ್ಲಿಸಲು ಸಮಿತಿಗೆ ಮೂರು ತಿಂಗಳ ಕಾಲಾವಕಾಶ ನೀಡಲಾಗಿದೆ ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಪಿಎಸ್ಸಿ ಅಕ್ರಮಗಳ ಕುರಿತು ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಸುದೀರ್ಘ ಚರ್ಚೆ ನಡೆದಿತ್ತು. ಅಕ್ರಮಗಳನ್ನು ತಡೆಯಲೇಬೇಕು ಎಂದು ಪಕ್ಷಾತೀತವಾಗಿ ಸದಸ್ಯರು ಪ್ರಸ್ತಾಪಿಸಿದ್ದರು.

ಎಸ್‌ಸಿ, ಎಸ್‌ಟಿ ಅಭಿವೃದ್ಧಿ ಅಗತ್ಯ

ಪುಟ ೧➜ ಹಿಂದು ಸಮಾಜದ ಈ ಸಿದ್ಧಾಂತಗಳು, ಮೌಲ್ಯ ಪದ್ಧತಿಗಳು ಸಮಾಜದ ಆತ್ಮವಿದ್ದಂತೆ. ಹಾಗಾಗಿ ಇವನ್ನು ಜೀವಂತ ಕಾಪಾಡುವುದು ಅಗತ್ಯವೆಂಬ ಸತ್ಯ ವಿದೇಶಿ ದಾಳಿಕೋರರಿಗೆ ಮನವರಿಕೆಯಾಗುತ್ತಲೇ, ಇವುಗಳ ಸಂರಕ್ಷಣೆಗೆ ಪ್ರಯತ್ನಿಸಿದವರಿಗೆ ತೀರಾ ಹಿಂಸೆ- ಸಂಕಷ್ಟಗಳ ನೀಡಿ ದಮನಿಸಿಯೇ ಬಿಡಲು ದಾಳಿಕೋರರು ತೀರ್ಮಾನಿಸಿದ್ದರು. ಆದರೆ ವಿದೇಶಿ ಆಕ್ರಮಣಕೋರರ ಸತತ ದಾಳಿ ಹೊರತೂ, ದೇಶದ ಆತ್ಮ-ಅಸ್ಮಿತೆಗಳನ್ನು ಸಂರಕ್ಷಿಸುವ ವಿಚಾರದಲ್ಲಿ ನಮ್ಮ ಬುಡಕಟ್ಟು ಸಮುದಾಯ, ಪರಿಶಿಷ್ಟ ಜಾತಿ-ಪಂಗಡಗಳ ಜನರು ಹಿಂದಡಿ ಇಡಲಿಲ್ಲ, ಬದಲಾಗಿ ಭಾರೀ ಬೆಲೆತೆತ್ತು ಸಂರಕ್ಷಿಸಿದರು. ಹಾಗಾಗೇ ಪ್ರತಿಕೂಲ ಸನ್ನಿವೇಶಗಳ ಹೊರತೂ ದೇಶದ ಪ್ರಧಾನ ಅಸ್ಮಿತೆಯು ದೇಶದ ಮೂಲವಾಸಿ ಬುಡಕಟ್ಟು ಸಮುದಾಯ, ಪರಿಶಿಷ್ಟ ಜಾತಿ -ಪಂಗಡಗಳ ಮಡಿಲಲ್ಲಿ ಸುರಕ್ಷಿತವಾಗಿತ್ತು ಎಂದು ಭಾಗ್ವತ್ ಅಭಿಪ್ರಾಯಪಟ್ಟರು.

ಸ್ಥಿರತೆ ಮೂಡಿಸಬಲ್ಲ ಶಕ್ತಿ ಭಾರತ ಮಾತ್ರ

ಪ್ರಸಕ್ತ ಜಗತ್ತು ಮುಗ್ಗರಿಸುತ್ತಾ ಮುಂದೆ ಸಾಗುತ್ತಿದೆ. ಸಮತೋಲನ ಕಾಯ್ದುಕೊಳ್ಳಲು ಹರಸಾಹಸಪಡುತ್ತಿದೆ. ಇಂತಹ ಸನ್ನಿವೇಶದಲ್ಲಿ ಭಾರತವು ಸ್ಥಿರತೆ ಮೂಡಿಸುವ ಶಕ್ತಿಯಾಗಿ ಹೊರಹೊಮ್ಮಬಲ್ಲುದು ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ರಾಷ್ಟ್ರವು ತನ್ನ ಹಿತಾಸಕ್ತಿಗಳ ಕಾಪಾಡೋ ಜತೆ ಜತೆಗೆ ಜಗತ್ತಿಗೆ ಬೆಂಬಲವನ್ನೂ ನೀಡಬೇಕು. ಏಕಕಾಲಕ್ಕೆ, ಭಾರತವು ತನ್ನ ಸಂಕಷ್ಟ-ಸಮಸ್ಯೆಗಳಿಗೆ ಸ್ಪಂದಿಸುವ ಜತೆಗೆ ಇಂತಹ ಸಮಸ್ಯೆ ಬಗೆಹರಿಸುವಲ್ಲಿ ಜಗತ್ತಿಗೂ ನೆರವಾಗುತ್ತಿದೆ ಎಂಬ ವಾಸ್ತವವನ್ನು ಜಗತ್ತು ಕೂಡ ಮನಗಾಣಬೇಕೆಂದು ಹೇಳಿದರು.

ಬಿಜೆಪಿ ಶೃಂಗೇರಿ ಅಭ್ಯರ್ಥಿ ಜೀವರಾಜ್‌ಗೆ ಮುನ್ನಡೆ

ಪುಟ ೧➜ ಆದರೆ ಅದಕ್ಕೆ ಪುರಸ್ಕಾರ ಸಿಗದ ಹಿನ್ನೆಲೆಯಲ್ಲಿ ಅವರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಇದರ ವಿರುದ್ಧ ಶಾಸಕ ಟಿ.ಡಿ.ರಾಜೇಗೌಡ ಅವರು ಎರಡು ಬಾರಿ ಹೈಕೋರ್ಟ್‌ನಲ್ಲೂ, ಒಂದು ಬಾರಿ ಸುಪ್ರೀಂ ಕೋರ್ಟ್‌ನಲ್ಲೂ ಜೀವರಾಜ್ ಅವರ ಅರ್ಜಿಗೆ ತಡೆ ನೀಡಬೇಕೆಂದು ಮನವಿ ಮಾಡಿದ್ದರು. ಅಂತಿಮವಾಗಿ ನ್ಯಾಯಾಲಯ ಜೀವರಾಜ್ ಅವರ ಕೋರಿಕೆಯನ್ನು ಪರಿಗಣಿಸಿ ಅಂಚೆ ಮತ ಪತ್ರಗಳ ಮರು ಎಣಿಕೆಗೆ ಆದೇಶಿಸಿತ್ತು.

ಜಿಲ್ಲಾಡಳಿತವು ಶನಿವಾರ ಜಿಲ್ಲಾ ಚುನಾವಣಾಧಿಕಾರಿ ಗೌರವಕುಮಾರ್ ಶೆಟ್ಟಿ ನೇತೃತ್ವದಲ್ಲಿ ಅಂಚೆ ಮತಪತ್ರಗಳ ಮರು ಎಣಿಕೆ ನಡೆಸಿತ್ತು. ಪ್ರಾರಂಭದಲ್ಲಿ ತಿರಸ್ಕೃತಗೊಂಡಿದ್ದ 279 ಮತಪತ್ರಗಳ ಎಣಿಕೆ ಕೈಗೊಳ್ಳಲಾಯಿತು. ಆದರಲ್ಲಿ ಟಿ.ಡಿ.ರಾಜೇಗೌಡ ಅವರಿಗೆ ಹೆಚ್ಚುವರಿಯಾಗಿ 2 ಮತಗಳು ಲಭಿಸಿದ್ದವು. ಇದನ್ನೇ ಆಧಾರವಾಗಿಟ್ಟುಕೊಂಡು ನಮ್ಮದೇ ಗೆಲುವಾಯಿತೆಂದು ಟಿ.ಡಿ.ರಾಜೇಗೌಡ ಅವರನ್ನು ಹೆಗಲ ಮೇಲೆ ಹೊತ್ತು ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವವನ್ನೂ ಆಚರಿಸಿದ್ದರು.

ಅತ್ತ ಬಿಜೆಪಿಯ ಡಿ.ಎನ್.ಜೀವರಾಜ್ ಅವರು ಮತ ಎಣಿಕೆಯಲ್ಲಿ ಪುರಸ್ಕೃತಗೊಂಡಿದ್ದ ಎಲ್ಲ 1822 ಅಂಚೆ ಮತಪತ್ರಗಳನ್ನು ಮರು ಎಣಿಕೆ ಮತ್ತು ಪರಿಶೀಲನೆ ಮಾಡಬೇಕೆಂದು ಪಟ್ಟುಹಿಡಿದಿದ್ದರು. ಅಂತಿಮವಾಗಿ ಅಧಿಕಾರಿಗಳು ಪುರಸ್ಕೃತ ಮತಪತ್ರಗಳ ಮರುಎಣಿಕೆ ನಡೆಸಿದಾಗ, ಟಿ.ಡಿ. ರಾಜೇಗೌಡ ಅವರಿಗೆ ಚಲಾವಣೆಯಾಗಿದ್ದ ಒಟ್ಟು 569 ಅಂಚೆ ಮತಪತ್ರಗಳ ಪೈಕಿ 255 ಮತಗಳು ಕಡಿಮೆಯಾದವು. ಜೀವರಾಜ್ ಅವರಿಗೆ ಚಲಾವಣೆಯಾಗಿದ್ದ 692 ಮತಗಳ ಪೈಕಿ 2 ಮತಗಳು ಕಡಿಮೆಯಾದವು. ಇದರ ಆಧಾರದ ಮೇಲೆ ಡಿ.ಎನ್. ಜೀವರಾಜ್ ಅವರ ಒಟ್ಟಾರೆ ಮತಗಳ ಗಳಿಕೆ ಟಿ.ಡಿ.ರಾಜೇಗೌಡರಿಗಿಂತ 52 ಮತಗಳು ಹೆಚ್ಚಾದವು. ಈ ಮಾಹಿತಿ ಹೊರಬೀಳುತ್ತಿದ್ದಂತೆ ರಾತ್ರಿ 2 ಗಂಟೆಗೆ ಬಿಜೆಪಿ ಕಾರ್ಯಕರ್ತರು ಎಣಿಕೆ ಕೇಂದ್ರದ ಬಳಿ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಮಧ್ಯಾಹ್ನ ನಾವೇ ಗೆದ್ದೆವೆಂದು ವಿಜಯೋತ್ಸವ ಆಚರಿಸಿಕೊಂಡಿದ್ದ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿಯಿಂದ ಭಾರೀ ಅಕ್ರಮ ನಡೆದಿದೆ. ಓಟು ಟ್ಯಾಂಪರಿಂಗ್ ನಡೆಸಿದ್ದಾರೆ ಎಂದೆಲ್ಲಾ ಆರೋಪಿಸಿ ಪ್ರತಿಭಟನೆ ನಡೆಸಿದರು.

ಕಾನೂನು ಹೋರಾಟ: ಡಿಸಿಎಂ

ಪುಟ ೧➜ **ದೊಡ್ಡ ತನಿಖೆಯಾಗಲಿ:** ಎಲ್ಲಾ ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ನಮ್ಮ ಅಭ್ಯರ್ಥಿಗೆ ಬಂದ ಅಂಚೆ ಮತಗಳನ್ನು ತಿದ್ದಿ ಅವುಗಳನ್ನು ಅಸಿಂಧುಗೊಳಿಸಲು ಷಡ್ಯಂತ್ರ ಮಾಡಲಾಗಿತ್ತು. ಈ ವಿಚಾರವಾಗಿ ದೊಡ್ಡ ತನಿಖೆ ಆಗಬೇಕು. ಕಾನೂನು ಹಾಗೂ ನ್ಯಾಯಾಲಯದಲ್ಲಿ ಇರುವ ಅವಕಾಶದಲ್ಲಿ ಹೋರಾಟ ಮಾಡಲಾಗುವುದು. ಜಯನಗರ ಕ್ಷೇತ್ರದಲ್ಲೂ ಇದೇ ರೀತಿ ಅನ್ಯಾಯ ಮಾಡಲಾಗಿದೆ. ನಾವು ಕಾನೂನು ಹೋರಾಟ ಮಾಡುತ್ತೇವೆ ಎಂದು ತಿಳಿಸಿದರು.

ಹೈಕೋರ್ಟ್ ಆದೇಶ ಪಾಲಿಸಿ: ಅಶೋಕ

ಬೆಂಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಚುನಾವಣಾ ಫಲಿತಾಂಶವನ್ನು ಚುನಾವಣಾಧಿಕಾರಿ ಪ್ರಕಟಿಸದಂತೆ ಕಾಂಗ್ರೆಸ್ ಸರ್ಕಾರ ಒತ್ತಡ ಹೇರಿದೆ. ಚುನಾವಣಾಧಿಕಾರಿಗಳು ಕೂಡಲೇ ಫಲಿತಾಂಶ ಪ್ರಕಟಿಸಿ ಹೈಕೋರ್ಟ್ ಆದೇಶ ಪಾಲಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದ್ದಾರೆ. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ 52 ಅಂಚೆ ಮತಗಳು ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್ ಅವರಿಗೆ ದೊರೆತಿವೆ. ಮತ ಎಣಿಕೆಯಲ್ಲಿ ಯಾರಿಗೆ ಹೆಚ್ಚು ಮತ ಬರುತ್ತದೋ ಅದನ್ನು ಘೋಷಿಸಬೇಕೆಂದು ಕೋರ್ಟ್ ಆದೇಶದಲ್ಲಿ ಹೇಳಲಾಗಿದೆ. ಈ ಬಗ್ಗೆ ಚುನಾವಣಾ ಆಯೋಗಕ್ಕೆ ಕೇಳಿದಾಗ, ಹೈಕೋರ್ಟ್‌ಗೆ ಮಾಹಿತಿ ನೀಡುತ್ತೇವೆ ಎಂದು ಸಬೂಬು ಹೇಳಿದ್ದಾರೆ. ಕಾಂಗ್ರೆಸ್ ಸರ್ಕಾರ ಚುನಾವಣಾಧಿಕಾರಿಯ ಮೇಲೆ ಒತ್ತಡ ಹೇರಿ ಫಲಿತಾಂಶವನ್ನು ತಡೆಹಿಡಿದಿದೆ. ಈ ಮೂಲಕ ಕೋರ್ಟ್ ಆದೇಶ ಉಲ್ಲಂಘಿಸಲಾಗಿದೆ. ಇದು ರಾಜ್ಯದ ಜನತೆಗೆ ಬಗೆದ ದ್ರೋಹ ಎಂದು ಆರ್.ಅಶೋಕ್ ಆರೋಪಿಸಿದರು.

ಬೆತ್ತಲೆ ಪೂಜೆಗೆ ಜ್ಯೋತಿಷಿ ಒತ್ತಡ: ದೂರು

ರಾಮನಗರ: ವಿಶೇಷ ಪೂಜೆಗೆ ನಿನ್ನ ಬೆತ್ತಲೆ ಫೋಟೋ ಕಳುಹಿಸು, 30 ಲಕ್ಷ ರೂ. ನೀಡುವುದಾಗಿ ಮಹಿಳೆಯೊಬ್ಬರಿಗೆ ಜ್ಯೋತಿಷಿ ಕಿರುಕುಳ ನೀಡಿದ ಆರೋಪ ತಾಲೂಕಿನ ದೊಡ್ಡಮಣ್ಣುಗುಡ್ಡೆ ಗ್ರಾಮದಲ್ಲಿ ಕೇಳಿ =ಬಂದಿದೆ. ಗ್ರಾಮದ ಕಿರಣ್ ಎಂಬಾತ ಮಹಿಳೆಯೊಬ್ಬರಿಗೆ ಮನಿ ಡಬ್ಲಿಂಗ್ ಮಾಡುವ ಪೂಜೆಗೆ ನಿನ್ನನ್ನು ಸೆಲೆಕ್ಟ್ ಮಾಡಬೇಕಾದರೆ ನೀನು ಬೆತ್ತಲೆ ಫೋಟೋ ಕಳುಹಿಸು ಎಂದು ರಾತ್ರಿ ವೇಳೆ ಮೆಸೇಜ್ ಮಾಡುತ್ತಿದ್ದನು. ಮೆಸೇಜ್‌ನಲ್ಲಿ ನಾನು ಬೆಂಗಳೂರಿನಲ್ಲಿ ವಿಶೇಷ ಪೂಜೆ ಮಾಡಿಸ್ತಿದ್ದೀನಿ, ಇದಕ್ಕೆ ಮೈ ಮೇಲೆ ಮಚ್ಚೆ ಇಲ್ಲದ ಮಹಿಳೆ ನಗ್ನವಾಗಿ ಕೂರಬೇಕು. ಆ ಪೂಜೆಗೆ ನಿನ್ನನ್ನು ಆಯ್ಕೆ ಮಾಡಲು ನಿನ್ನ ಬೆತ್ತಲೆ ಫೋಟೊ ಕಳುಹಿಸು. ಪೂಜೆ ಮುಗಿದ ಬಳಿಕ 30 ಲಕ್ಷ ರೂ. ಹಣ ನೀಡುವುದಾಗಿ ಕಿರುಕುಳ ನೀಡುತ್ತಿದ್ದನೆಂದು ದೂರಲಾಗಿದೆ. ಕಳೆದ ಒಂದು ವಾರದಿಂದ ಜ್ಯೋತಿಷಿ ಕಿರುಕುಳ ನೀಡುತ್ತಿದ್ದಾನೆ. ಎರಡು ದಿನಗಳ ಹಿಂದೆ ಮಹಿಳಾ ಠಾಣೆಗೆ ದೂರು ನೀಡಿದ್ದ ಆರೋಪಿಯನ್ನು ಬಂಧಿಸಿಲ್ಲ, ಆರೋಪಿ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮಹಿಳೆ ಮನವಿ ಮಾಡಿದ್ದಾರೆ.

ಕಾರು-ಲಾರಿ ಮುಖಾಮುಖಿ: ಮೂವರ ಸಾವು

ಗುಂಡ್ಲುಪೇಟೆ: ಮಣ್ಣು ಸಾಗಿಸುತ್ತಿದ್ದ ಲಾರಿಯು ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಮೂವರು ಮೃತಪಟ್ಟ ಘಟನೆ ಗುಂಡ್ಲುಪೇಟೆ ತಾಲೂಕಿನ ಕೇರಳ ರಸ್ತೆಯ ಮದ್ದಯ್ಯನಹುಂಡಿ ಬಳಿ ಭಾನುವಾರ ನಡೆದಿದೆ.

ಕೇರಳ ಮೂಲದ ಕಾರು ಚಾಲಕ ಮುನೀರ್(30), ಮುನಿರಾ(45) ಹಾಗೂ ಮೋಹಿಜ್ (3) ಎಂಬ ಬಾಲಕ ಮೃತಪಟ್ಟವರು. ಅಪಘಾತದಲ್ಲಿ ಸಾನಿಯಾ ಮಿರ್ಜಾ(22), ಸಾಹಲ್ ಪರ್ವಿನ್ (28) ಹಾಗೂ ಬಿಲಾಲ್ ಎಂಬುವರು ತೀವ್ರವಾಗಿ ಗಾಯಗೊಂಡಿದ್ದು, ಇವರಿಗೆ ಸಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಲಾರಿ ಡಿಕ್ಕಿಯಾದ ರಭಸಕ್ಕೆ ಕಾರು ಹಳ್ಳಕ್ಕೆ ಬಿದ್ದಿದ್ದು, ನಜ್ಜುಗುಜ್ಜಾಗಿದೆ. ಗುಂಡ್ಲುಪೇಟೆ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ರೈತಸಂಘದ ಕಾರ್ಯಕರ್ತರು ದೌಡಾಯಿಸಿ ಆಕ್ರೋಶ ಹೊರಹಾಕಿದ್ದಾರೆ.

ಕೇರಳ ರಸ್ತೆಯಲ್ಲಿ ನಿರಂತರ ಅಪಘಾತಗಳಾಗುತ್ತಿದ್ದು, ಕೆಲವು ದಿನಗಳ ಹಿಂದೆಯಷ್ಟೇ ಟಿಪ್ಪರ್ ಡಿಕ್ಕಿಯಾಗಿ ಒಂದೇ ಕುಟುಂಬದ ನಾಲ್ವರು ಮೃತಪಟ್ಟಿದ್ದರು.

ಈಗ ಮೂವರು ಅಸುನೀಗಿದ್ದಾರೆ. ಗುಂಡ್ಲುಪೇಟೆ ಪೊಲೀಸರು ಕೇಸ್ ದಾಖಲಿಸಿಕೊಂಡು ಎರಡು ವಾಹನಗಳನ್ನು ವಶಕ್ಕೆ ಪಡೆದು ತನಿಖೆ ಮುಂದುವರೆಸಿದ್ದಾರೆ.

ಮೇ 6ಕ್ಕೆ ಅರ್ಜುನ ಸ್ಮಾರಕ ಉದ್ಘಾಟನೆ: ಈಶ್ವರ ಖಂಡ್ರೆ

ಬೆಂಗಳೂರು: ಹಾಸನ ಜಿಲ್ಲೆ ಯಸಳೂರು ವಲಯದಲ್ಲಿ ಕಳೆದ 2023 ಡಿಸೆಂಬರ್ 4ರಂದು ಆನೆ ಸೆರೆ ಕಾರ್ಯಾಚರಣೆ ವೇಳೆ ವೀರಾವೇಶದಿಂದ ಹೋರಾಡಿ, ಪಶುವೈದ್ಯರು, ಸಿಬ್ಬಂದಿ ಜೀವ ಉಳಿಸಿ ಹುತಾತ್ಮನಾದ ಅರ್ಜುನ ಆನೆಯ ಸಮಾಧಿ ಸ್ಥಳದಲ್ಲಿ ನಿರ್ಮಿಸಿರುವ ಸ್ಮಾರಕವನ್ನು ಮೇ 6ರ ಬುಧವಾರ ಉದ್ಘಾಟಿಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.



ದಸರಾ ಮಹೋತ್ಸವದಲ್ಲಿ 8 ಬಾರಿ ಚಿನ್ನದ ಅಂಬಾರಿ ಹೊತ್ತು ಗಜಗಾಂಭೀರ್ಯದಿಂದ ಹೆಜ್ಜೆಹಾಕಿ, ಜನರ ಪ್ರೀತಿಗೆ ಪಾತ್ರನಾಗಿದ್ದ ಅರ್ಜುನ ಆನೆಯ ಸಾವು ಇಲಾಖೆಗೆ ದೊಡ್ಡ ನಷ್ಟವಾಗಿದ್ದು, ಸಮಾಧಿ ಸ್ಥಳದಲ್ಲಿ ಮತ್ತು ನಾಗರಹೊಳೆಯ ಬಳ್ಳೆಯಲ್ಲಿ ಸ್ಮಾರಕ ನಿರ್ಮಿಸುವುದಾಗಿ ಸರ್ಕಾರ ತಿಳಿಸಿತ್ತು. ಅದರಂತೆ ಈಗಾಗಲೇ ಬಳ್ಳೆ ಶಿಬಿರದಲ್ಲಿ ಅರ್ಜುನನ ಹಿರಿಮೆ, ಸಾಹಸಗಾಥೆಗಳನ್ನು ಇಂದಿನ ಮತ್ತು ಮುಂದಿನ ಪೀಳಿಗೆಗೂ ತಿಳಿಸುವ ರೀತಿಯಲ್ಲಿ ಸ್ಮಾರಕ ಅನಾವರಣ ಮಾಡಲಾಗಿದೆ. ಮೇ 6ರಂದು ಯಸಳೂರಿನ ಸಮಾಧಿ ಸ್ಥಳದ ಸ್ಮಾರಕ ಉದ್ಘಾಟಿಸಲಾಗುವುದು ಎಂದು ವಿವರಿಸಿದರು. ಈ ಎರಡೂ ಸ್ಥಳದಲ್ಲಿ ಅರ್ಜುನ ಆನೆಯ ಪ್ರತಿರೂಪದಂತಿರುವ ಪ್ರತಿಮೆಗಳನ್ನು ನಿರ್ಮಿಸಲಾಗಿದ್ದು, ಅರ್ಜುನ ವಿವಿಧ ಆನೆ ಕಾರ್ಯಾಚರಣೆ, ಹುಲಿ ಮತ್ತು ಚಿರತೆ ಕಾರ್ಯಾಚರಣೆಯಲ್ಲಿ ಮತ್ತು ದಸರಾ ಮಹೋತ್ಸವದಲ್ಲಿ ಪಾಲ್ಗೊಂಡ ಚಿತ್ರಗಳನ್ನು ಹಾಕುವಂತೆ ಸೂಚಿಸಲಾಗಿದೆ ಎಂದರು.

ಯಸಳೂರಿನಲ್ಲಿ ಸ್ಮಾರಕ ಸಿದ್ಧವಾಗಿ ಹಲವು ತಿಂಗಳುಗಳೇ ಕಳೆದಿದೆ. ಆದರೆ ಕಾರಣಾಂತರದಿಂದ ಸ್ಮಾರಕ ಉದ್ಘಾಟನೆ ವಿಳಂಬವಾಗಿದ್ದು, ಈಗ ಉದ್ಘಾಟನಾ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಸಚಿವ ಖಂಡ್ರೆ ತಿಳಿಸಿದರು.



ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರ ಬಸನಗೌಡ ಫೌಂಡೇಷನ್ ವತಿಯಿಂದ ಸಿಂಧನೂರು ತಾಲೂಕು ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಸಾಮೂಹಿಕ ಉಚಿತ ವಿವಾಹ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಾಲ್ಗೊಂಡು ನವ ಜೋಡಿಗಳಿಗೆ ಶುಭ ಹಾರೈಸಿದರು. ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್, ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಕೆ.ಎಚ್. ಮುನಿಯಪ್ಪ, ಎನ್.ಎಸ್ .ಬೋಸರಾಜು, ಈಶ್ವರ್ ಖಂಡ್ರೆ, ಆರ್.ಬಿ.ತಿಮ್ಮಾಪುರ್, ನಟ ಸುದೀಪ್ ಇದ್ದರು.

ಮುಂದಿನ ಸಿಎಂ ಯಾರು: ಅಶೋಕ

ಬೆಂಗಳೂರು: ಮೇ 15 ಕ್ಕೆ ಸಿದ್ದರಾಮಯ್ಯ ಅವರ ಕಥೆ ಮುಗಿಯಿತು ಎಂದು ಡಿ.ಕೆ. ಶಿವಕುಮಾರ್ ತಂಡ ಹೇಳುತ್ತಿದೆ. ಆದರೆ, ಮೂರು ವರ್ಷಗಳ ಸಂಭ್ರಮಾಚರಣೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಹೇಳುತ್ತಿದ್ದಾರೆ. ಇದು ಮುಕ್ತಾಯದ ಸಮಾರಂಭವೂ ಆಗಿರಬಹುದು. ಇನ್ನೂ ಯಾರು ಮುಖ್ಯಮಂತ್ರಿ ಎಂದು ಯಾರಿಗೂ ಗೊತ್ತಿಲ್ಲ ಎಂದು ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ ವ್ಯಂಗ್ಯವಾಡಿದ್ದಾರೆ.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಒಡೆದು ಮನೆಯೊಂದು ಮೂರು ಬಾಗಿಲು ಎಂಬಂತಾಗಿದೆ. ಮಲ್ಲಿಕಾರ್ಜುನ ಖರ್ಗೆ ಹೊಸ ಬಾಗಿಲು ತೆರೆದಿದ್ದಾರೆ. ಸಮಾವೇಶ ಮಾಡುವ ಮುನ್ನ ಯಾರ ನೇತೃತ್ವದಲ್ಲಿ ಮಾಡುತ್ತೇವೆಂದು ತಿಳಿಸಬೇಕಾಗುತ್ತದೆ ಎಂದರು. ನೌಕರರಿಗೆ ಸಂಬಳವಿಲ್ಲದೆ ಮುಷ್ಕರ ನಡೆಯುತ್ತಿದೆ. ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿಲ್ಲ.

ಗೃಹಲಕ್ಷ್ಮಿಯ 5,000 ಕೋಟಿ ರೂ. ಇನ್ನೂ ಕೊಟ್ಟಿಲ್ಲ, ಅನ್ನಭಾಗ್ಯದ 750 ಕೋಟಿ ರೂ. ಬಾಕಿ ಇದೆ. ಎಲ್ಲ ಕಡೆ ಬರಗಾಲವಿದ್ದು, ನೀರಿನ ಹಾಹಾಕಾರ ಕೇಳಿಬಂದಿದೆ. ಬೆಂಗಳೂರಿನಲ್ಲಿ ರಸ್ತೆಯ ಒಂದು ಗುಂಡಿ ಮುಚ್ಚಲು ಒಂದು ಲಕ್ಷ ರೂ. ಖರ್ಚು ಮಾಡಿದ್ದಾರೆ. ಬಿದ್ದಿರುವ ಮರ ಕೊಂಬೆಗಳನ್ನು ಇನ್ನೂ ತೆರವು ಮಾಡಿಲ್ಲ, ಬೌರಿಂಗ್ ಆಸ್ಪತ್ರೆಯ ಗೋಡೆ ಬಿದ್ದು ಏಳು ಮಂದಿಯ ಸಾವಾಗಿದೆ. ಅಂದಮೇಲೆ ಮೂರು ವರ್ಷದ ಸಾಧನೆ ಏನು? ಪಕ್ಷ ಮೂರು ಬಾಗಿಲು ಆಗಿರುವುದೇ ಮೂರು ವರ್ಷದ ಸಾಧನೆಯಾಗಿದೆ ಎಂದು ಅಭಿಪ್ರಾಯಪಟ್ಟರು.



ಎಲ್ಲ ರಾಜ್ಯಗಳಲ್ಲಿ ಬಿಜೆಪಿಗೆ ಉತ್ತಮ ಫಲಿತಾಂಶ ಬರಲಿದೆ. ಕೇರಳದಲ್ಲಿ ಬಿಜೆಪಿ ಖಾತೆ ತೆರೆಯಲಿದೆ. ತಮಿಳುನಾಡಲ್ಲೂ ಹೆಜ್ಜೆ ಗುರುತು ಮೂಡಲಿದೆ. ಚುನಾವಣಾ ಸಮೀಕ್ಷೆಗಳಲ್ಲಿ ಬಿಜೆಪಿ ಪರ ಫಲಿತಾಂಶ ಬಂದಿದೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲ್ಲುವ ವಿಶ್ವಾಸವಿದೆ.

■ ಆರ್.ಅಶೋಕ, ವಿಧಾನಸಭೆ ಪ್ರತಿಪಕ್ಷ ನಾಯಕ

ಕಿರುಸುದ್ದಿ

ಕಾಂಗ್ರೆಸ್‌ನಿಂದ ಚುನಾವಣೆ ಅಕ್ರಮ: ಬಿವೈವಿ ಆರೋಪ

ಚಿತ್ರದುರ್ಗ: ವೋಟ್ ಚೋರಿ, ವೋಟ್ ಚೋರಿ ಎಂದು ಕಾಂಗ್ರೆಸ್‌ನವರು ಜನರ ಕಿವಿಗೆ ಹೂವು ಮುಡಿಸುವ ಮೂಲಕ ಕಾಂಗ್ರೆಸ್‌ನವರು ಚುನಾವಣೆ ಅಕ್ರಮ ನಡೆಸಿದ್ದಾರೆ ಎಂಬುದು ಶೃಂಗೇರಿ ಫಲಿತಾಂಶ ನೋಡಿದರೆ ತಿಳಿಯುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿಕಾರಿದರು. ಚಿತ್ರದುರ್ಗದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕಳೆದ ಮೂರು ವರ್ಷಗಳ ಹಿಂದೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದ್ದನ್ನು ತಿಳಿದು ಇಂತಹ ಅಕ್ರಮಗಳನ್ನು ನಡೆಸಿದ್ದಾರೆ. ನ್ಯಾಯಯುತವಾಗಿ ಗೆದ್ದಿದ್ದ ಡಿ.ಎನ್. ಜೀವರಾಜ್ ಅವರನ್ನು ಕಳೆದ ಮೂರು ವರ್ಷಗಳಿಂದ ಮಾಜಿ ಶಾಸಕರನ್ನಾಗಿ ಮಾಡಿದ್ದಾರೆ. ಈಗ ದೇಶ ಹಾಗೂ ರಾಜ್ಯದ ಜನರ ಮುಂದೆ ಇವರ ಬಣ್ಣ ಬಯಲಾಗಿದೆ. ಹಾಗಾಗಿ ಕಾಂಗ್ರೆಸ್‌ನವರು ರಾಜ್ಯ ಹಾಗೂ ಶೃಂಗೇರಿ ಕ್ಷೇತ್ರದ ಜನರ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು. ಡಿ.ಎನ್.ಜೀವರಾಜ ಗೆದ್ದಿರುವ ಬಗ್ಗೆ ಅಧಿಕಾರಿಗಳು ತಿಳಿಸಿದ್ದಾರೆ. ಈ ಕುರಿತು ಡಿಸಿಎಂ ಡಿ.ಕೆ.ಶಿವಕುಮಾರ್ ಏನು ಮಾತನಾಡುತ್ತಾರೆ. ಪ್ರಜಾಪ್ರಭುತ್ವದ ಬಗ್ಗೆ ಗೌರವ ಇದ್ದಲ್ಲಿ ಈ ರೀತಿ ನಡೆದುಕೊಳ್ಳುತ್ತಿರಲಿಲ್ಲ. ವೋಟ್ ಚೋರಿ ಎಂದು ಹೇಳಿಕೊಂಡು ಅಕ್ರಮ ನಡೆಸುವ ಅಪಕೀರ್ತಿ ಕಾಂಗ್ರೆಸ್‌ಗೆ ಸಲ್ಲುತ್ತದೆ. ಮಾತೆತ್ತಿದರೆ ಅಂಬೇಡ್ಕರ್ ಬಗ್ಗೆ ಭಾಷಣ ಬಿಗಿಯುತ್ತಾರೆ. ಸಂವಿಧಾನದ ಬಗ್ಗೆ ಗೌರವ ಇದ್ದಲ್ಲಿ ಜನರು ಕೊಟ್ಟಿರುವ ತೀರ್ಪನ್ನು ಗೌರವಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ಕೇಂದ್ರ ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವೀಯ ಹೇಳಿಕೆ

20 ಇಎಸ್‌ಐಸಿ ಕಾಲೇಜು

ದೊಡ್ಡಬಳ್ಳಾಪುರ: ದೇಶಾದ್ಯಂತ 20 ಇಎಸ್‌ಐಸಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ಮೂಲಕ ಕಾರ್ಮಿಕರ ಕುಟುಂಬಗಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಚಿಕಿತ್ಸೆಯ ಭರವಸೆ ನೀಡಲಾಗಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಹಾಗೂ ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವೀಯ ಹೇಳಿದರು.

ತಾಲೂಕಿನ ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ 100 ಹಾಸಿಗೆ ಸಾಮರ್ಥ್ಯದ ಇಎಸ್‌ಐಸಿ ಆಸ್ಪತ್ರೆ ಉದ್ಘಾಟಿಸಿ ಮಾತನಾಡಿ, ವೈದ್ಯಕೀಯ ಕಾಲೇಜುಗಳಲ್ಲಿ ಕಾರ್ಮಿಕರ ಮಕ್ಕಳಿಗಾಗಿ ಮೀಸಲಾತಿಯನ್ನು ಕಲ್ಪಿಸಲಾಗಿದೆ ಎಂದರು. ಜಾರಿಗೆ ತರಲಾಗಿರುವ ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳು ಖಾಸಗಿ ವಲಯದ ಉದ್ಯೋಗಿಗಳಿಗೆ ಸಾಮಾಜಿಕ ಭದ್ರತೆ ಮತ್ತು ನೇಮಕಾತಿ ಪತ್ರದ ಖಾತರಿ ಒದಗಿಸುತ್ತವೆ. ಕಾರ್ಮಿಕರ ಆರೋಗ್ಯದ ದೃಷ್ಟಿಯಿಂದ 40 ವರ್ಷ ದಾಟಿದ ಪ್ರತಿಯೊಬ್ಬ ಕಾರ್ಮಿಕನಿಗೂ ವಾರ್ಷಿಕ ಉಚಿತ ಆರೋಗ್ಯ ತಪಾಸಣೆ ಕಡ್ಡಾಯಗೊಳಿಸಲಾಗಿದೆ. ಇದರ ಉದ್ದೇಶ ರೋಗಗಳನ್ನು ಪ್ರಾಥಮಿಕ ಹಂತದಲ್ಲೇ ಪತ್ತೆ ಹಚ್ಚಿ ಕಾರ್ಮಿಕರ ಜೀವ ರಕ್ಷಣೆಗೆ ಒತ್ತು ನೀಡಲಾಗಿದೆ ಎಂದು ಹೇಳಿದರು.

ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಹಾಗೂ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರದ ಇಚ್ಛಾಶಕ್ತಿ ಕೊರತೆಯಿಂದಾಗಿ ಕಳೆದ ಎರಡು ವರ್ಷದ ಹಿಂದೆ ಇಎಸ್‌ಐ ಆಸ್ಪತ್ರೆ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದರೂ ಉದ್ಘಾಟನೆ ಮಾಡಲು ಸಾಧ್ಯವಾಗಿರಲಿಲ್ಲ. ಈಗ ಕೇಂದ್ರ ಸರ್ಕಾರದ ಸುಪರ್ದಿಯಲ್ಲಿ ಉದ್ಘಾಟನೆಯಾಗಿದೆ ಎಂದು ಹೇಳಿದರು.

ಇಂದು ಸುಮಾರು 101 ಕೋಟಿ ರೂ. ವೆಚ್ಚದಲ್ಲಿ ಅತ್ಯಾಧುನಿಕ ಇಎಸ್‌ಐಸಿ ಆಸ್ಪತ್ರೆ ನಿರ್ಮಿಸಲಾಗಿದ್ದು, ದೊಡ್ಡಬಳ್ಳಾಪುರ ಭಾಗದಲ್ಲಿ ಕಾರ್ಮಿಕರ ಸಂಖ್ಯೆ ಹೆಚ್ಚಿದ್ದು, ಈ ಹಿಂದೆ ಉತ್ತಮ ಚಿಕಿತ್ಸೆಗಾಗಿ ಬೆಂಗಳೂರಿಗೆ ಅಲೆದಾಡುವ ಪರಿಸ್ಥಿತಿ ಇತ್ತು. ಈಗ ಕಾರ್ಮಿಕರಿಗೆ ಇಲ್ಲಿಯೇ ಗುಣಮಟ್ಟದ ವೈದ್ಯಕೀಯ ಚಿಕಿತ್ಸೆ ದೊರೆಯಲಿದೆ. ಪ್ರಸ್ತುತ ಈ ಆಸ್ಪತ್ರೆಗೆ 9 ಜನ ತಜ್ಞ ವೈದ್ಯರು, ನರ್ಸಿಂಗ್ ಸಿಬ್ಬಂದಿ ಹಾಗೂ ತಾಂತ್ರಿಕ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ ಎಂದರು.



ಇಎಸ್‌ಐಸಿ ಆಸ್ಪತ್ರೆಯು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರಿಗೆ ಉಚಿತ ಆರೋಗ್ಯ ಸೇವೆ ಒದಗಿಸುತ್ತಿದೆ.

■ ಡಾ.ಕೆ.ಸುಧಾಕರ, ಸಂಸದ

ಕಾರ್ಮಿಕರ ಆರೋಗ್ಯ ರಕ್ಷಣೆಗೆ ಕೇಂದ್ರ ಸರ್ಕಾರ ಬದ್ಧ

ದೇಶಾದ್ಯಂತ ಇರುವ 15 ಕೋಟಿ ಕಾರ್ಮಿಕರು ಮತ್ತು ಅವರ ಕುಟುಂಬದವರಿಗೆ ಗುಣಮಟ್ಟದ ಆರೋಗ್ಯ ಸೌಲಭ್ಯಗಳನ್ನು ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ದೇಶದ ಇಎಸ್‌ಐಸಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರಸ್ತುತ 1,550 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಅದರಲ್ಲಿ ವಿಶೇಷವಾಗಿ ಕಾರ್ಮಿಕರ ಮಕ್ಕಳಿಗಾಗಿ 702 ಸೀಟುಗಳನ್ನು ಮೀಸಲಿಡಲಾಗಿದೆ. ಮುಂಬರುವ ವರ್ಷದಲ್ಲಿ ಕೇಂದ್ರ ಸರ್ಕಾರದಿಂದ ನಿರ್ವಹಿಸಲ್ಪಡುವ ಇಂತಹ ಆಸ್ಪತ್ರೆಗಳ ಸಂಖ್ಯೆ ಹೆಚ್ಚಾಗಲಿದೆ ಎಂದು ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಡಿಸಿಎಂ ಹೇಳಿಕೆ ಸಂವಿಧಾನಕ್ಕೆ ಅಪಮಾನ: ಛಲವಾದಿ ಟೀಕೆ

ಬೆಂಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಮರು ಮತಎಣಿಕೆಯು ಮುಕ್ತಾಯವಾದ ಬೆನ್ನಲ್ಲೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿರುವ ಹೇಳಿಕೆಗಳು ಕೇವಲ ರಾಜಕೀಯ ಪ್ರೇರಿತವಲ್ಲ, ಅವು ಈ ದೇಶದ ಸಂವಿಧಾನ ಮತ್ತು ನ್ಯಾಯಾಂಗ ವ್ಯವಸ್ಥೆಗೆ ಮಾಡಿದ ಘೋರ ಅಪಮಾನ ದಂತಿವೆ ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.



ಸೋಲಿನ ಭೀತಿಯಿಂದ ಕಂಗೆಟ್ಟಿರುವ ಕಾಂಗ್ರೆಸ್, ಸತ್ಯವನ್ನು ಒಪ್ಪಿಕೊಳ್ಳಲಾಗದೆ ಸುಳ್ಳಿನ ಕಂತೆಗಳನ್ನು ಹೆಣೆಯುತ್ತಿದೆ. ಡಿ.ಕೆ. ಶಿವಕುಮಾರ್ ಅವರ ಹೇಳಿಕೆ ನ್ಯಾಯಾಂಗ ನಿಂದನೆ ಮತ್ತು ಹತಾಶೆಯ ಪರಮಾವಧಿ ಎಂದಿದ್ದಾರೆ.

ಕೋರ್ಟ್ ಆದೇಶವು ಕ್ರಿಮಿನಲ್ ಆಕ್ಟಿವಿಟಿಯೆ?: ಮರು ಮತಎಣಿಕೆ ಎನ್ನುವುದು ನ್ಯಾಯಾಲಯದ ನಿರ್ದೇಶನದಂತೆ ನಡೆದ ಪ್ರಕ್ರಿಯೆ. ಅದನ್ನು ಕ್ರಿಮಿನಲ್ ಆಕ್ಟಿವಿಟಿ ಎಂದು ಕರೆಯುವ ಮೂಲಕ ಡಿ.ಕೆ.ಶಿವಕುಮಾರ್ ಅವರು ಪರೋಕ್ಷವಾಗಿ ನ್ಯಾಯಾಂಗದ ವಿವೇಚನೆಯನ್ನೇ ಪ್ರಶ್ನಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಮತಯಂತ್ರಗಳ ಮೇಲೆ ನಂಬಿಕೆಯಿಲ್ಲ, ನ್ಯಾಯಾಲಯದ ಮೇಲೆ ಗೌರವವಿಲ್ಲ. ಅಧಿಕಾರ ದುರುಪಯೋಗದ ಬಗ್ಗೆ ಮಾತನಾಡುವ ಇವರು, ದಶಕಗಳಿಂದ ಚುನಾವಣಾ ವ್ಯವಸ್ಥೆಯಲ್ಲಿ ತಮಗಾಗದ ಫಲಿತಾಂಶ ಬಂದಾಗಲೆಲ್ಲಾ ಸಾಂವಿಧಾನಿಕ ಸಂಸ್ಥೆಗಳ ಮೇಲೆ ಗೂಬೆ ಕೂರಿಸುವುದು ಇವರ ಹಳೆಯ ಚಾಳಿ ಎಂದು ಟೀಕಿಸಿದ್ದಾರೆ.

ಕಾನೂನು ಸಮರ ಎಂಬ ಬೆದರಿಕೆ

ಸೋತ ಮೇಲೆ ಕಾನೂನು ಸಮರ ಎನ್ನುವುದು ಸೋಲನ್ನು ಮರೆಮಾಚುವ ತಂತ್ರವಷ್ಟೇ. ಜನಾದೇಶವನ್ನು ಗೌರವಿಸುವುದನ್ನು ಕಲಿಯದವರು ಜನಪ್ರತಿನಿಧಿಗಳಾಗಲು ಅನರ್ಹರು. ಅಂಚೆ ಮತ ಎಣಿಕೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲಾಗಿದೆ. ಅದನ್ನು ಪ್ರಶ್ನಿಸುವುದು ಎಂದರೆ ಚುನಾವಣಾ ಆಯೋಗದ ನಿಷ್ಪಕ್ಷಪಾತತೆಯನ್ನು ಅನುಮಾನಿಸಿದಂತೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಡಿ.ಕೆ.ಶಿವಕುಮಾರ್ ಅವರೇ, ನಿಮ್ಮ ಹತಾಶೆ ನಮಗೆ ಅರ್ಥವಾಗುತ್ತದೆ. ಆದರೆ, ಆ ಹತಾಶೆಯಲ್ಲಿ ನ್ಯಾಯಾಲಯದ ಘನತೆಯನ್ನು ಹರಾಜಿಗಿಡಬೇಡಿ ಎಂದು ಛಲವಾದಿ ನಾರಾಯಣಸ್ವಾಮಿ ತಿಳಿಸಿದ್ದಾರೆ.

ವೈಚಾರಿಕ, ಸೈದ್ಧಾಂತಿಕ ವಿರೋಧಿಗಳೂ ಮೆಚ್ಚಿದ ಯಡಿಯೂರಪ್ಪ

» ಎನ್. ರವಿಕುಮಾರ್, ವಿಧಾನ ಪರಿಷತ್ ಸದಸ್ಯ



ಜನರಿಂದ ಜನರಿಗಾಗಿ ಹೋರಾಡಿದ ರೈತನಾಯಕ ಬಿ.ಎಸ್.ವೈ.ಹೋರಾಟವೆಂದರೆ ಯಡಿಯೂರಪ್ಪ ಯಡಿಯೂರಪ್ಪ ಎಂದರೆ ಹೋರಾಟ. ಅದಕ್ಕೆ ಕಾರಣ ಅವರೊಳಗಿದ್ದ ರೈತರ ಬಗೆಗಿನ, ಕೃಷಿ ಕೂಲಿಕಾರರ ಬಗೆಗಿನ, ಮಹಿಳೆಯರ ಬಗೆಗಿನ, ದೀನದಲಿತ, ಹಿಂದುಳಿದ ಜನಸಾಮಾನ್ಯರ ಬಗೆಗಿನ ಪ್ರಾಮಾಣಿಕ, ನಿಷ್ಠುರ ಕಾಳಜಿಯೇ ಕಾರಣ. ವೈಚಾರಿಕ, ಸೈದ್ಧಾಂತಿಕ ವಿರೋಧಿಗಳೂ ಮೆಚ್ಚುವಂತೆ, ಅನುಸರಿಸುವಂತೆ ಬದುಕಿದ, ಆಡಳಿತ ಮಾಡಿದ ಧೀಮಂತ ರೈತನಾಯಕರು, ಜನನಾಯಕರು, ರಾಷ್ಟ್ರನಾಯಕರು ಬಿ.ಎಸ್.ಯಡಿಯೂರಪ್ಪ.

ಬಿ.ಎಸ್.ಯಡಿಯೂರಪ್ಪನವರ ಬಗ್ಗೆ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷರಾದ ಡಾ. ಸಿ.ಎಸ್.ದ್ವಾರಕಾನಾಥ್ ಅವರು ಬರೆಯುತ್ತಾ–ನನ್ನಂತವರು ಯಡಿಯೂರಪ್ಪನವರಲ್ಲಿರುವ ರಾಜಕೀಯ ಸಿದ್ಧಾಂತಕ್ಕೆ ಸೈದ್ಧಾಂತಿಕ ವಿರೋಧಿಗಳಾದ್ದರಿಂದ ಸದರಿ ಪಕ್ಷದ ನಾಯಕರಾದ ಯಡಿಯೂರಪ್ಪನವರನ್ನು ಅನಿವಾರ್ಯವಾಗಿ ವಿರೋಧಿಸಿಕೊಂಡೇ ಬಂದೆವು. ನಾವು ಅವರನ್ನು ಹತ್ತಿರದಿಂದ ನೋಡುವವರೆಗೂ ನಮ್ಮ ಪೂರ್ವಾಗ್ರಹಗಳು ಕರಗಿರಲೇ ಇಲ್ಲ!... ಆಶ್ಚರ್ಯವೆಂದರೆ ನಾನು ಆಯೋಗದ ವರದಿಯನ್ನು ಕೊಟ್ಟು ಹೋದ ನಂತರ ನಾಲ್ಕಾರು ಸರ್ಕಾರಗಳು ಬಂದವು ಹೋದವು ಇದರಲ್ಲಿ 'ಅಹಿಂದ' ಸರ್ಕಾರವೂ ಇತ್ತು. ಆದರೆ ನಮ್ಮ ವರದಿಯಲ್ಲಿನ ಶಿಫಾರಸ್ಸುಗಳಲ್ಲಿ ಕೆಲವನ್ನಾದರೂ ಜಾರಿಗೆ ತಂದಿದ್ದು ಯಡಿಯೂರಪ್ಪನವರ ಸರ್ಕಾರ ಮಾತ್ರ ಎಂದಿದ್ದಾರೆ. ಮುಂದುವರೆದು ಮುಸ್ಲಿಂ ಸಮುದಾಯದ ಡಾ. ಮಮ್ತಾಜ್ ಅಲಿಖಾನ್ ಅವರನ್ನು ಎಂ.ಎಲ್.ಸಿ ಮಾಡಿ ತಮ್ಮ ಸಂಪುಟದಲ್ಲಿ ಸಚಿವರನ್ನಾಗಿ ಮಾಡಿದರು. ಎಲ್ಲೋ ಇದ್ದ ಗಾಣಿಗ ಸಮುದಾಯದ ಪುಟ್ಟಸ್ವಾಮಿಯವರನ್ನು ಎಂ.ಎಲ್.ಸಿ. ಮಾಡಿ ತಮ್ಮ ಸಂಪುಟದಲ್ಲಿ ಮಂತ್ರಿ ಮಾಡಿದರು. ದೇವಾಂಗ ಸಮುದಾಯದ ಎಂ.ಡಿ.ಲಕ್ಷ್ಮೀನಾರಾಯಣ್ ಅವರನ್ನು ಹೆಸರೇ ತಿಳಿಯದ ಕಟುಕ ಜನಾಂಗದ ಸಿದ್ದರಾಮಪ್ಪನನ್ನು, ಬಲಿಜ ಸಮುದಾಯದ ತಾರಾ ಅವರನ್ನು, ಮಡಿವಾಳ ಸಮುದಾಯದ ಶಂಕರಪ್ಪನವರನ್ನು ಎಂ.ಎಲ್.ಸಿ. ಮಾಡಿದರು. ಶಂಕರಪ್ಪನವರನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನಾಗಿಯೂ ಮಾಡಿದರು. ಮಾದಿಗ ಸಮುದಾಯಕ್ಕೆ ಸೇರಿದ ಗೋನಾಳ ಭೀಮಪ್ಪನವರನ್ನು ಕರ್ನಾಟಕ ಲೋಕಸೇವಾ ಆಯೋಗದ (ಕೆ.ಪಿ.ಎಸ್.ಸಿ) ಅಧ್ಯಕ್ಷರನ್ನಾಗಿ ಮಾಡಿದರು.

ವಿಶ್ವಕರ್ಮ ಸಮುದಾಯದ ಕೆ.ಪಿ.ನಂಜುಂಡಿಯವರನ್ನು ಎಂ.ಎಲ್.ಸಿ. ಮಾಡಿದರು, ಇದೇ ರೀತಿ ಅನೇಕ ತಳ ಸಮುದಾಯಗಳಿಗೆ ಪ್ರಾತಿನಿಧ್ಯ ನೀಡಿದರು. ಈ ಬಗ್ಗೆ ವಿವರಗಳನ್ನು ಕೆದಕುತ್ತಾ ಹೋದರೆ ನಿರ್ಲಕ್ಷಿತ ಸಮುದಾಯಗಳಿಗೆ ಅವರು ಹಮ್ಮಿಕೊಂಡ ಕಾರ್ಯಕ್ರಮಗಳ ಬಗ್ಗೆಯೇ ಬರೆಯಬಹುದು ಎಂದು ಸರಿಯಾಗಿಯೇ ಗುರುತಿಸಿದ್ದಾರೆ. ಈ ನಿರ್ಲಕ್ಷಿತರ ಬಗೆಗಿನ ಕಾಳಜಿಯೇ ಬಿ.ಎಸ್.ವೈ ಅವರ ಹೆಗ್ಗುರುತು. ಕಡುಬಡ ರೈತ ಕೂಲಿ ಕಾರ್ಮಿಕರ ಮನೆಯಲ್ಲಿ ಹುಟ್ಟಿ ಜನರಿಂದ, ಜನರಿಗಾಗಿ ಹೋರಾಡಿದ ಜನನಾಯಕ, ರೈತನಾಯಕ ಬಿ.ಎಸ್ .ಯಡಿಯೂರಪ್ಪ ಅವರ ಪ್ರಾಥಮಿಕ ಶಾಲೆಯ ಸಹಪಾಠಿ ಎಲ್.ಶಂಕರರಾವ್ ಅವರು 1954–55ರ ಘಟನೆಯನ್ನು ಸ್ಮರಿಸುತ್ತಾ ನಾನು 5 ಅಥವಾ 6ನೇ ತರಗತಿಯಲ್ಲಿ ಮಂಡ್ಯದ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದೆ, ಆಗ ಯಡಿಯೂರಪ್ಪ ಶಾಲೆಗೆ ಬಂದು ಸೇರಿದರು. ನನಗೆ ಚೆನ್ನಾಗಿ ನೆನಪಿದೆ, ನಮಗೆ ಶ್ರೀ ಬಸವರಾಜಪ್ಪ ಎಂಬ ಒಬ್ಬ ಉಪಾಧ್ಯಾಯರಿದ್ದರು. ಅವರು ನಮ್ಮ ತರಗತಿಗೆ ಬಂದು ಎಲ್ಲ ವಿದ್ಯಾರ್ಥಿಗಳ ಜೊತೆ ಪರಿಚಯಿಸಿಕೊಂಡು, ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರ ತಂದೆ ತಾಯಿ ಅಥವಾ ಪೋಷಕರು ಸರ್ಕಾರಿ ನೌಕರಿಯಲ್ಲಿದ್ದರೆ ಕೈ ಎತ್ತುವಂತೆ ಸೂಚಿಸಿದರು. ಆಗ ಕೆಲವರು ಕೈ ಎತ್ತಿದರು. ಅವರನ್ನೆಲ್ಲ ಮುಂದಿನ ಸಾಲಿಗೆ ಬಂದು ಕೂರುವಂತೆ ಉಪಾಧ್ಯಾಯರು ಹೇಳಿ, ಮುಂದೆ ಇದ್ದ ವಿದ್ಯಾರ್ಥಿಗಳನ್ನು ಹಿಂದಿನ ಸಾಲಿಗೆ ಕಳುಹಿಸಿದರು. ಆಗ ಯಡಿಯೂರಪ್ಪನವರು ನನ್ನ ಪಕ್ಕ ಬಂದು ಕುಳಿತರು ಎಂದಿದ್ದಾರೆ. ಶಾಲೆಯಲ್ಲಿ ಮುಂದಿನಿಂದ ಹಿಂದಕ್ಕೆ ಕಳುಹಿಸಿದರು ಆದರೆ ಯಡಿಯೂರಪ್ಪನವರು ಹಿಂದುಳಿದ ವರ್ಗ, ಕೂಲಿಕಾರರ, ದೀನದಲಿತರ, ಮಹಿಳೆಯರ ಪರವಾಗಿ ಹೋರಾಡುತ್ತಾ ಸರ್ಕಾರಿ ನೌಕರ ಆಗುವ ಬದಲು ಸರ್ಕಾರ ನಡೆಸುವ ಮುಖ್ಯಮಂತ್ರಿಯೇ ಆದರು. ಎದೆಯಲ್ಲಿ



ಧೈರ್ಯವಾದ ಕಿಚ್ಚು, ಶ್ರಮ, ನಿರಂತರ, ಹೋರಾಟವಿದ್ದಲ್ಲಿ ಯಾರೂ ಯಾರನ್ನು ಶಾಶ್ವತವಾಗಿ ಹಿಂದಿನ ಬೆಂಚಿಗೆ ದೂಡಲು ಸಾಧ್ಯವಿಲ್ಲ ಎಂಬುದಕ್ಕೆ ಬಿ.ಎಸ್.ವೈ ಅವರ ಜೀವನವೇ ಸಾಕ್ಷಿ. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ತಾಯಿಯ ತಂದೆಯವರಾದ ಅಜ್ಜ ಸಂಗಪ್ಪನವರ ಆರೈಕೆಯಲ್ಲಿ ಬೆಳೆದ ಯಡಿಯೂರಪ್ಪನವರಿಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಭಾರತಮಾತೆಯನ್ನು ಚಿರಂತನವಾದ ತಾಯಿಯನ್ನಾಗಿ ನೀಡಿದ್ದು ಅವರ ಬದುಕಿನ ದಿಕ್ಕನ್ನೇ ಬದಲಾಯಿಸಿ ಬಿಟ್ಟಿದೆ.

ಬಿ.ಎಸ್.ಯಡಿಯೂರಪ್ಪನವರನ್ನು ಕುರಿತು ಪ್ರೊ. ಪಿ.ವಿ.ಕೃಷ್ಣಭಟ್ಟರು, ಯಡಿಯೂರಪ್ಪನವರದ್ದು ಕ್ರಿಯಾಶೀಲ ಸ್ವಭಾವ. ಸುತ್ತಮುತ್ತಲಿನ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸದೇ ಇರಲು ಅವರಿಗೆ ಸಾಧ್ಯವೇ ಆಗುತ್ತಿರಲಿಲ್ಲ.... ದೀನ–ದುರ್ಬಲರ ವಿಷಯದಲ್ಲಿ ಅವರಿಗಿದ್ದ ತೀವ್ರ ಸಂವೇದನೆ ಪ್ರಕಟಗೊಂಡಿದ್ದು ಇಂತಹ ಸನ್ನಿವೇಶದಲ್ಲಿ..... ಅವರು ಮೊದಲಿಗೆ ಕೈಗೆತ್ತಿಕೊಂಡ ಹೋರಾಟಗಳು ಕೂಲಿಕಾರ್ಮಿಕರು ಮತ್ತು ಜೀತದಾಳುಗಳಿಗೆ ಸಂಬಂಧಿಸಿದ್ದು. ಅಸಹಾಯಕರಾಗಿದ್ದ ಧ್ವನಿ ಇಲ್ಲದ ಈ ಜನರಿಗೆ ಅವರು ಧ್ವನಿಯಾದರು. ಅವರನ್ನು ಸಂಘಟಿಸಿ ಅವರಲ್ಲಿ ಹೋರಾಟದ ಕಿಚ್ಚನ್ನು ತುಂಬಿದರು ಎಂದಿದ್ದಾರೆ. ಈ ಸಾಮಾಜಿಕ ನ್ಯಾಯದ, ರಾಷ್ಟ್ರೀಯ ಏಕತೆಯ ಅಂತ್ಯೋದಯದಿಂದ ಸರ್ವೋದಯವೆಂಬ ಜನಸಂಘದ ಧ್ವನಿ ಬಿ.ಎಸ್.ಯಡಿಯೂರಪ್ಪನವರ ಧ್ವನಿಯಾಗಿ ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುವುದು ಎಂಬ ಜನಮಾತಾಯಿತು. ಯಡಿಯೂರಪ್ಪ ಜನನಾಯಕರಾದರು.

1983ರಲ್ಲಿ ಶಿಕಾರಿಪುರ ವಿಧಾನಸಭೆಯಲ್ಲಿ ಗೆದ್ದು ಶಾಸಕರಾದರು. ಜೀತವಿಮುಕ್ತಿ ಹೋರಾಟ ಶಿಕಾರಿಪುರದಿಂದ ಶಿವಮೊಗ್ಗಕ್ಕೆ ನಡೆಸಿದ ಪಾದಯಾತ್ರೆ ಅದಕ್ಕೆ ದೊರೆತ ಹಾರ್ದಿಕ ಬೆಂಬಲ, ಯಡಿಯೂರಪ್ಪನವರನ್ನು ಹುಲಿ ಹೋರಾಟಗಾರ ಎಂಬ ಪಟ್ಟಕ್ಕೆ ಏರಿಸಿತು. ಅವರ ಹೋರಾಟವನ್ನು ಕುರಿತು ಅವರ ಆಪ್ತರಾದ ರಾಮಚಂದ್ರ ಗೌಡರು **"Yediyurappa started fighting for the justice of the poor and oppressed, famers, and weaker sections of society. Being the son of poor agricultural laborers, this leader of the masses had experienced what poverty is, what hunger is, what unemployment is, what exploitation is and what humiliation is"** ಎಂದಿದ್ದಾರೆ.

1989 ರಲ್ಲಿ ಏಕಾಂಗಿಯಾಗಿ ವಿಧಾನಸಭೆಯಲ್ಲಿ ಯಡಿಯೂರಪ್ಪ ಈಗಿನ ಕರೆಗೆ ಅರಣ್ಯ ಸಚಿವ ರಾಚಯ್ಯನವರು ಕಣ್ಣು ತೆರೆಯುತ್ತಾರೆ. ತಾವು ಮಂಡಿಸಲು ಮುಂದಾಗಿದ್ದ ರೈತ ವಿರೋಧಿ ಕಾಯ್ದೆಯನ್ನು ಹಿಂಪಡೆಯುತ್ತಾರೆ. ಇದು ಬಿ.ಎಸ್.ವೈ ಅವರನ್ನು ರೈತ ನಾಯಕರನ್ನಾಗಿ ಮಾಡುತ್ತದೆ. ರೈತ ಬಾಂಧವ್ಯ, ಸಮಾಜಕ್ಕಾಗಿ ಸಾಧಿಸಲಾಗದ್ದನ್ನು ಬಿ.ಎಸ್.ವೈ ಸಾಧಿಸಿದರು.

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಸಂಪಾದಕರಾದ ಅರುಣ್ ಶೌರಿ ಅವರು ಯಡಿಯೂರಪ್ಪನವರ ಬಗ್ಗೆ ಬರೆಯುತ್ತಾ, ಆಗಿನ ಭಾರತೀಯ ಜನ ಸಂಘವು ಒಂದು ನಗೆಪಾಟಲಿನ ಗುಂಪು. ಸಮಾಜವಾದಿಗಳು ಅದನ್ನು 'ಭೋ ಜನ ಸಂಘ' ಎಂದೇ ಗೇಲಿ ಮಾಡುತ್ತಿದ್ದರು ಎನ್ನುತ್ತಾ ಶಿಕಾರಿಪುರದಲ್ಲಿ ಜೀತದ ವಿರುದ್ಧ ಚಳವಳಿ ಆರಂಭವಾದದ್ದು, ಆತ ಜೈಲಿನಿಂದ ಪುನರ್ವಸತಿಗೆ ಒತ್ತಾಯಿಸಿ ಶಿಕಾರಿಪುರದಿಂದ ಶಿವಮೊಗ್ಗದವರೆಗೆ ಪಾದಯಾತ್ರೆ ಮಾಡಿದ್ದು. ಈ ಹಿನ್ನೆಲೆಯಲ್ಲಿ ಬಗರ್ ಹುಕುಂ ಯೋಜನೆಯ ಅಡಿಯಲ್ಲಿ ಭ್ರಷ್ಟಾಚಾರ ವಿರೋಧಿ ಹೋರಾಟ ನಡೆಸಿದ್ದು, ಆಗಿನ ಮಂತ್ರಿಯೊಬ್ಬರು ಹಾಯಾಗಿ ಎಸಿ ರೂಮಿನಲ್ಲಿ ಕುಳಿತು ಕೋಪತಪ್ತ ಜನರಿಂದ ತಪ್ಪಿಸಿಕೊಳ್ಳುವಾಗ? ಇಂಥವರಲ್ಲಿ ಗೋಕರ್ಣ ಕ್ಷಣಕ್ಕೊಮ್ಮೆ ಅವರ ಬಾಯಲ್ಲಿ ನಡಗಾಡ ತೊಡಗಿದವು..... ಇದಕ್ಕೆಲ್ಲ ಮುಖ್ಯ ಕಾರಣವಾದದ್ದು ಯಡಿಯೂರಪ್ಪನವರ ಆವೇಶಭರಿತ ನಡವಳಿಕೆ, ಶಿಶು, ರೈತರ ಬಗ್ಗೆ ಅವರಿಗಿದ್ದ ಕಾಳಜಿ, ರೈತರಿಗಾಗಿ ಏನೂ ಮಾಡಲು ಸಿದ್ಧರಾಗಿರುತ್ತಿದ್ದ ಅವರು ಯಾವ ಕ್ಷಣದಲ್ಲಿ ಚಳವಳಿ ಆರಂಭಿಸುತ್ತಾರೆ ಎಂದೇ ಯಾರಿಗೂ ತಿಳಿಯುತ್ತಿರಲಿಲ್ಲ, ಅದು ನಿಲ್ಲುವುದು ಮಾತ್ರ ಬೇಡಿಕೆ ಈಡೇರಿದ ಮೇಲೆಯೇ ಎಂದಿದ್ದಾರೆ.

ಜೀತದ ವಿರುದ್ಧದ ಹೋರಾಟ, ಬಗರ್ ಹುಕುಂ ಹೋರಾಟ, ರೈತರ ಸಾಲಮನ್ನಾ ಹೋರಾಟ, ಶಿಕಾರಿಪುರದಿಂದ ಶಿವಮೊಗ್ಗ, ಶಿವಮೊಗ್ಗದಿಂದ ಬೆಂಗಳೂರು, ಬೆಂಗಳೂರಿನಿಂದ ರಾಜ್ಯದ ಮೂಲೆ ಮೂಲೆಗೆ ರೈತರಿಗಾಗಿ, ಅವರಿಗಾಗಿ ಪಾದಯಾತ್ರೆ, ಸೋಮಾರಿ ಗಾಂಧಿ, ಹಗಲಿರುಳು ಕೆಲಸ ಒಂದೇ ಎರಡೇ 1975ರ ಕಾಲದಲ್ಲಿ ತುರ್ತುಪರಿಸ್ಥಿತಿಯ ವಿರುದ್ಧದ ಹೋರಾಟ ಅಟ್ಟಹಾಸದಿಂದ ಆರಂಭಿಸಿ 1980ರ ದಶಕದಲ್ಲಿ ಅದಕ್ಕೆ ಒಂದು ವೇಗ ನೀಡಿ 1990ರ ನಂತರ ಕರ್ನಾಟಕವನ್ನು ಬಿಜೆಪಿಯ ರಾಜ್ಯವನ್ನಾಗಿಸಿದ ಸಂಪೂರ್ಣ ಶ್ರೇಯಸ್ಸು ಬಿ.ಎಸ್ .ಯಡಿಯೂರಪ್ಪನವರ ರೈತ ನಾಯಕತ್ವಕ್ಕೆ ಮತ್ತು ಜನ ನಾಯಕತ್ವಕ್ಕೆ ಸಲ್ಲುತ್ತದೆ. ಉಪಮುಖ್ಯಮಂತ್ರಿ, ಮುಖ್ಯಮಂತ್ರಿಯಾದ ಬಳಿಕ ತಮ್ಮ ಹೋರಾಟದ ಜೀವಮಾನದ ಕನಸುಗಳನ್ನು ನನಸು ಮಾಡಲು ಪ್ರಯತ್ನಿಸಿದರು. ಕರ್ನಾಟಕದಲ್ಲಿ ಮೊದಲ ರೈತ ಬಜೆಟ್ ಮಂಡಿಸಿದರು. ರೈತರ ಮನೆಗಳಿಗೆ, ಹೊಲಗಳಿಗೆ ವಿದ್ಯುತ್ ನೀಡಲು ರಾಜ್ಯದ ವಿದ್ಯುತ್ ಉತ್ಪಾದನೆ ಹೆಚ್ಚಿಸಿದರು. ನಿರಂತರ ಜ್ಯೋತಿಯನ್ನು ನೀಡಿ ಗ್ರಾಮೀಣರ ಜೀವನವನ್ನು ಬೆಳಗಿಸಿದರು. ರೈತರ ಸಾಲ ಮನ್ನಾ ಮಾಡುವ ಮೂಲಕ ಆರ್ಥಿಕ ಸ್ವಾತಂತ್ರ್ಯ ನೀಡಿದರು.

ಭಾರತೀಯ ಸಂಸ್ಕೃತಿಯ ಗೋಮಾತೆ, ರೈತರ ಬದುಕಿನ ಜೀವನಾಡಿ ಹಸು. ಹೈನುಗಾರಿಕೆ ಅವರ ಉಪಕಸುಬು. ಆದ್ದರಿಂದ ಹಾಲು ಉತ್ಪಾದಕರಿಗೆ ಲೀಟರಿಗೆ ಮೂರು ರೂಪಾಯಿಗಳನ್ನು ಹೆಚ್ಚಿಸಿದರು. ರೈತರ ಬೆಳೆಗೆ ಬೆಂಬಲಬೆಲೆ ನೀಡಿದರು. ರೈತನ ಖಾತೆಗೆ ಕೇಂದ್ರದ 6000 ರೂಪಾಯಿ, ರಾಜ್ಯ ಸರ್ಕಾರದ 4000 ರೂಪಾಯಿ ಸೇರಿಸಿ ಒಟ್ಟು 10000 ರೂ. ಸಿಗುವಂತೆ ಮಾಡಿದರು. ರೈತರ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಜಾರಿಗೆ ತಂದರು. ನೆರೆಹಾವಳಿ ಆದಾಗ 'ಏಕಸಚಿವ ಸಂಪುಟ'ದ ಮುಖ್ಯಮಂತ್ರಿ ಈ ಯಡಿಯೂರಪ್ಪನವರು ಪ್ರಕೃತಿ ಎಸೆದ ಸವಾಲಿಗೆ ಬೆನ್ನು ತೋರಿಸಲಿಲ್ಲ, ಬದಲಾಗಿ ಎದೆಗಾರಿಕೆ ತೋರಿಸಿದರು. ಈ ಇಳಿ ವಯಸ್ಸಿನಲ್ಲೂ ನೆರೆ ಪೀಡಿತ ಪ್ರದೇಶಗಳಲ್ಲಿ ಕಾಲುಗಳಿಗೆ ಚಕ್ರಕಟ್ಟಿಕೊಂಡು ಯಂತ್ರದಂತೆ ತಿರುಗಾಡಿದರು ಎಂದು ಸ್ವಯಂಸೇವಕ ಸಂಘದ ಹಿರಿಯ ಪ್ರಚಾರಕರಾದ ಸು. ರಾಮಣ್ಣನವರು, ಹೋರಾಟವೇ ಅವರ ರಕ್ತಗುಣ, ನಿಂತ ನೀರಲ್ಲ, ಅಲೆ ಹಾಗೂ ಪ್ರತಿಭಟಿಸುವ ಗುಣ ಅವರಲ್ಲಿ ಪ್ರಧಾನವಾದದ್ದು, ಇದು ತುಂಬಾ ಅಪರೂಪದ ಗುಣ ಎಂದಿದ್ದಾರೆ.

ಹಿರಿಯ ನಾಯಕರಾದ ಡಿ.ಎಚ್.ಶಂಕರಮೂರ್ತಿಯವರು ಕೇಂದ್ರ ಸರ್ಕಾರ ಕೂಡ ರೈತರಿಗೆ, ನೇಕಾರರಿಗೆ ಸಾಲ ಮನ್ನಾ ಮಾಡುವುದನ್ನೇ ಕಾಪಿ ಮಾಡಬೇಕಾಯಿತು. ಸತತ ನಾಲ್ಕು ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಅವರು ಸಾಧಿಸಿದ ಸಾಧನೆ ನಿಜಕ್ಕೂ ಅಚ್ಚರಿ ಉಂಟುಮಾಡಿದೆ ಎಂದಿದ್ದಾರೆ. ಶ್ರೀಮತಿ ಪ್ರಮೀಳಾ ನೇಸರ್ಗಿ, ರೈತರಿಗೆ ಸಾಲಮನ್ನಾ, ಕಡಿಮೆ ದರದಲ್ಲಿ ಬಡ್ಡಿ, ಮಹಿಳೆಯರ ಬಜೆಟ್ ಕೊಟ್ಟ ಭಾರತದ ಮೊಟ್ಟಮೊದಲನೇ ಉಪಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಾಗಿದ್ದಾರೆ ಎಂದಿದ್ದಾರೆ.

ರೈತನಾಯಕ, ಜನನಾಯಕರನ್ನಾಗಿಸಿದ ಹೊಸ ಹೊಸ ಯೋಜನೆಗಳು: ಭಾಗ್ಯಲಕ್ಷ್ಮಿ ಬಾಂಡ್, ಶಾಲಾ ಮಕ್ಕಳಿಗೆ ಸೈಕಲ್ ನೀಡಿದ್ದಷ್ಟೇ ಅಲ್ಲ ಸುವರ್ಣ ಕಾಯಕ ಕೌಶಲ್ಯ ಅಭಿವೃದ್ಧಿ, ಸಂಧ್ಯಾಸುರಕ್ಷಾ, ಕೃಷಿ ಯಂತ್ರಧಾರೆ, ಸಾವಯವ ಕೃಷಿ ಮಿಷನ್, ಶೂನ್ಯ ಬಡ್ಡಿ ದರದಲ್ಲಿ ಸಹಕಾರಿ ಸಾಲ, ರೈತರಿಗೆ ಇಸ್ರೇಲ್ ಮತ್ತು ಚೀನಾ ಪ್ರವಾಸ, ಸೆಮಿಕಂಡಕ್ಟರ್ ನೀತಿ, ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶ, ಭೂ ಚೇತನ, ಕೃಷಿ ಪ್ರೋತ್ಸಾಹಕ್ಕಾಗಿ 8000 ಕೋಟಿ ರೂ. ಮೀಸಲಿಟ್ಟಿದ್ದು ಹೀಗೆ ಸಾಲು ಸಾಲು ಸಾಧನೆಗಳು ಬಿ.ಎಸ್.ಯಡಿಯೂರಪ್ಪನವರನ್ನು ರೈತನಾಯಕ, ಜನನಾಯಕರನ್ನಾಗಿಸಿವೆ. ಅಂದು–ಇಂದು–ಮುಂದೆಂದೂ ಅವರ ಜನಸಾಮಾನ್ಯರ ಹೃದಯ ಸಿಂಹಾಸನದಲ್ಲಿ ಸದಾ ವಿರಾಜಮಾನರಾಗಿರುತ್ತಾರೆ.

ಬಿ. ಎಸ್.ಯಡಿಯೂರಪ್ಪನವರು ಬಾಲ್ಯದಲ್ಲಿಯೇ ತಂದೆ ತಾಯಿಯರನ್ನು ಕಳೆದುಕೊಂಡರು, ಆದರೆ ದೇಶ ಮತ್ತು ತನ್ನ ಸಮಾಜವನ್ನೇ ತಂದೆ ತಾಯಿಯೆಂದು ತಿಳಿದರು. ಶಿಕಾರಿಪುರದಲ್ಲಿ ಮಾರಣಾಂತಿಕ ಹಲ್ಲೆಗೆ ಒಳಗಾಗಿ ಚಲನಶೀಲಗೊಂಡಾಗ ನಮ್ಮ ಪತ್ನಿಯಾದ ಶ್ರೀಮತಿ ಮೈತ್ರಾದೇವಿಯವರಿಗೆ ಹುಚ್ಚರಾಯನ ಸನ್ನಿಧಿಯಲ್ಲಿ ಹೇಳಿದರು ನನ್ನ ಮುಂದಿನ ಜೀವನ ಸಮಾಜಕ್ಕಾಗಿ, ಮಕ್ಕಳನ್ನು ನೀನು ನೋಡಿಕೋ ಎಂದು. ಅಂತೆಯೇ ಬದುಕಿದರು. ಅವರ ಹಗಲಿರುಳಿನ ಮಾರ್ಗವೇ ದಲಿತೋದ್ಧಾರ ಹಾಗೂ ದೇಶೋದ್ಧಾರ. ಇವರ ಜನಪರ ಅಭಿವೃದ್ಧಿಯ ಕಾರ್ಯಕ್ರಮಗಳನ್ನು 'ಅಂತ್ಯೋದಯ' ಎಂದಿದ್ದಾರೆ.

ರಾಷ್ಟ್ರನಾಯಕರೆಂಬುದಕ್ಕೆ ಬಿಎಸ್‌ವೈ ಜೀವನ ಸಾಧನೆಯೇ ಸಾಕ್ಷಿ: ಯಡಿಯೂರಪ್ಪನವರು ವ್ಯಕ್ತಿಯಲ್ಲ ಒಂದು ಶಕ್ತಿ ಎನ್ನುವ ಡಿ.ಎಚ್. ವೀರಣ್ಣನವರು ರಾಜ್ಯದ ಇತಿಹಾಸದಲ್ಲಿ ಅಂಬೇಡ್ಕರ್ ಭಾವಚಿತ್ರವನ್ನು ಸರ್ಕಾರಿ ಕಚೇರಿಗಳಲ್ಲಿ, ಇಲಾಖೆಗಳಲ್ಲಿ, ಶಾಲೆಗಳಲ್ಲಿ ಹಾಕಲು ಕಾರಣರಾದವರು. ಆಶ್ರಯ ಮನೆಗಳಿಗೆ ಹಿಂದಿನ ಸರ್ಕಾರ ನೀಡುತ್ತಿದ್ದ ರೂ. 25000 ಗಳನ್ನು ರೂ. 1.25 ಲಕ್ಷಕ್ಕೆ ಏರಿಸಿದರು. ಅದು ಈಗ ಗ್ರಾಮಾಂತರದಲ್ಲಿ ರೂ. 3 ಲಕ್ಷ, ನಗರಗಳಲ್ಲಿ ರೂ. 5 ಲಕ್ಷಕ್ಕೆ ಹೆಚ್ಚಿದೆ. ಹರಿಜನರ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕಾಗಿ ತಮ್ಮ ಮೊದಲ ಬಜೆಟ್‌ನಲ್ಲಿಯೇ ರೂ.350 ಕೋಟಿ ಹಣ ಮೀಸಲಿಟ್ಟರು. ಬಡ ವರ್ಗದವರು ಪಾವತಿಸದೆ ಬಾಕಿ ಇದ್ದ ಕುಠೀರ ಜ್ಯೋತಿ, ಭಾಗ್ಯಜ್ಯೋತಿ ಯೋಜನೆಯಡಿ ಬಾಕಿ ಇದ್ದ ವಿದ್ಯುತ್ ಹಣವನ್ನು ಸಂಪೂರ್ಣವಾಗಿ ಮನ್ನಾ ಮಾಡಿದರು. ಹರಿಜನ ಕಾಲೋನಿಗಳಿಗೆ ಕಾಂಕ್ರೀಟ್ ರಸ್ತೆ, ಚರಂಡಿ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿದರು. ಶಿಕ್ಷಣಕ್ಕೆ ಒತ್ತು ಕೊಟ್ಟು ಹರಿಜನ ವಿದ್ಯಾರ್ಥಿಗಳಿಗೆ ಹಿಂದಿನ ಸರ್ಕಾರ ನೀಡುತ್ತಿದ್ದ ವೇತನವನ್ನು ರೂ.450 (ತಿಂಗಳಿಗೆ) ಇದ್ದದ್ದನ್ನು ಈಗ ರೂ. 750 ಮಾಡಲಾಗಿತ್ತು ಮತ್ತು ತಮ್ಮ ಅವಧಿಯ ಅಂತ್ಯದಲ್ಲಿ ಈ ಮೊತ್ತವನ್ನು ರೂ.1150ಕ್ಕೆ ಏರಿಸಿದರು. ಹರಿಜನ ಗಿರಿಜನರ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ ಸ್ಥಾಪನೆ, ಪ್ರತ್ಯೇಕ ಹಿಂದುಳಿದ ವರ್ಗ ಇಲಾಖೆ ಸ್ಥಾಪನೆ ಮತ್ತು ಹರಿಹರದಲ್ಲಿ ಹಾವನೂರು ಆಯೋಗ ಸ್ಥಾಪನೆ ಅಲ್ಲದೆ ಅನೇಕ ಭವನಗಳ ನಿರ್ಮಾಣ ಹೀಗೆ ಯಡಿಯೂರಪ್ಪನವರು ಮಾಡಿದ ಅನೇಕ ಸಾಧನೆ, ಕೊಡುಗೆಗಳನ್ನು ಸ್ಮರಿಸುತ್ತಾರೆ.

ಬಿ.ಎಸ್.ಯಡಿಯೂರಪ್ಪ ರೈತ ನಾಯಕರು, ಜನ ನಾಯಕರು, ರಾಷ್ಟ್ರ ನಾಯಕರು ಎಂಬುದು ಅವರ ಜೀವನ ಸಾಧನೆಯೇ ಸಾಕ್ಷಿಯಾಗಿದೆ.

ವಿರೋಧ ಪಕ್ಷದ ಮುಖ್ಯ ಸಚೇತಕರು, ಕರ್ನಾಟಕ ಸರ್ಕಾರ

ಸಂಪಾದಕೀಯ

ಮಮತಾಗೇಕೆ ಅಷ್ಟು ಭಯ?

ಚುನಾವಣೆಗಳು ಮುಗಿದರೂ ಪಶ್ಚಿಮ ಬಂಗಾಳದಲ್ಲಿನ್ನೂ ನಾಟಕ ಮುಗಿದಿಲ್ಲ. ಮೊದಲೆಲ್ಲಾ ಕೇಂದ್ರ ಸರ್ಕಾರ ಮತ್ತು ಬಿಜೆಪಿಯನ್ನು ಟೀಕಿಸುವ ಸಂದರ್ಭದಲ್ಲಿ ಮಾತ್ರ ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡಂತಾಡುತ್ತಿದ್ದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಈಗ ದಿನನಿತ್ಯ ತಮ್ಮ ಮಾನಸಿಕ ಹಿಡಿತವನ್ನು ಕಳೆದುಕೊಂಡಂತಾಡುತ್ತಿದ್ದಾರೆ. ಇದೀಗ ಚುನಾವಣೆಗಳು ಮುಗಿದು ಮತಗಳು ಭದ್ರವಾಗಿರುವ ಭದ್ರತಾ ಕೊಠಡಿಗಳತ್ತ ಮಮತಾ ಚಿತ್ತ ತಿರುಗಿದೆ. ಮಮತಾ ಬ್ಯಾನರ್ಜಿಯವರಿಗೆ ಕಾಡುತ್ತಿರುವ ಭಯವಾದರೂ ಯಾವುದು? ಬಿಜೆಪಿ ಮತಯಂತ್ರಗಳನ್ನು ಅಪಹರಿಸುತ್ತದೆ ಎಂಬ ಭಯವೋ ಅಥವಾ ಭದ್ರವಾಗಿರುವ ಮತಯಂತ್ರಗಳಲ್ಲಿ ತನ್ನ ಸೋಲು ಅಡಗಿದೆ ಎಂಬ ಭಯವೋ? ಅದರ ಜೊತೆಗೆ ಮತದಾನ ಪ್ರಕ್ರಿಯೆಗಳ ಬಗೆಗೆ ಕೂಡ ಮಮತಾ ಬ್ಯಾನರ್ಜಿಯವರಿಗೆ ತಕರಾರಿದೆ. ಪಶ್ಚಿಮ ಬಂಗಾಳದಲ್ಲಿ ಎಲ್ಲವೂ ತನ್ನ ಅಣತಿಯಂತೆಯೇ ನಡೆಯಬೇಕೆಂಬ ಸರ್ವಾಧಿಕಾರಿ ಧೋರಣೆಗೆ ಸೊಪ್ಪು ಹಾಕದ ಚುನಾವಣಾ ಆಯೋಗ ಈ ಬಾರಿ ದಿಟ್ಟ ಕ್ರಮಗಳನ್ನು ಅನುಸರಿಸಿತ್ತು. ಕೇಂದ್ರೀಯ ಮೀಸಲು ಪಡೆಗಳನ್ನು ಕರೆಸಿ ಕಟ್ಟನಿಟ್ಟಿನ ಭದ್ರತೆಗಳನ್ನು ಮಾಡಿತ್ತು. ಆದರೆ ಮಮತಾ ನಿರಂತರವಾಗಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯನ್ನು ಮತದಾರರನ್ನು ಹೊರಗಿಡುವ ಕ್ರಮ ಎಂದು ಟೀಕಿಸಿದರು. ಆದರೆ ಅಕ್ರಮ ಬಾಂಗ್ಲಾದೇಶಿ ಮತದಾರರ ಸುದ್ದಿಯ ಬಗ್ಗೆ ಅವರೆಂದೂ ಪ್ರತಿಕ್ರಿಯೆಯನ್ನು ನೀಡಲಿಲ್ಲ! ಇದೀಗ ಎಕ್ಸಿಟ್‌ಪೋಲ್‌ಗಳು ಬಿಜೆಪಿ ಪರ ವಾಲಿವೆ ಎಂಬ ಸುದ್ದಿ ಪ್ರಕಟವಾದ ಬೆನ್ನಲ್ಲೇ ಅವರ ಮನಸು ಮತ್ತಷ್ಟು ಉದ್ವಿಗ್ನವಾಗಿದೆ.



ಮತ ಎಣಿಕೆ ವೇಳೆ ಇವಿಎಂಗಳನ್ನು ತಿದ್ದುವ ಅಥವಾ ಪ್ರಕ್ರಿಯೆಯನ್ನು ಹಾಳುಮಾಡುವ ಪ್ರಯತ್ನಗಳ ಬಗ್ಗೆ ಅವರು ತೀವ್ರ ಅನುಮಾನ ವ್ಯಕ್ತಪಡಿಸಿದ್ದಾರೆ. ಅದು ಹೇಗೆ ಸಾಧ್ಯ? ಈ ಎಲ್ಲಾ ಆತಂಕಗಳು ಅವರಿಗೆ ಕಾಡುತ್ತಿರುವುದಕ್ಕೆ ಸೋಲಿನ ಭಯ ಕಾರಣವೇ ಹೊರತು ಬೇರೇನಲ್ಲ. ಮಮತಾ ಬ್ಯಾನರ್ಜಿ ಅವರ ಮುಖ್ಯ ತಕರಾರು ಏನೆಂದರೆ, ಚುನಾವಣಾ ಪ್ರಕ್ರಿಯೆಯಲ್ಲಿ ಕೇಂದ್ರ ಸರ್ಕಾರದ ಸಿಬ್ಬಂದಿ ಅಥವಾ ಕೇಂದ್ರ ನಿಯಂತ್ರಣದ ಅಧಿಕಾರಿಗಳನ್ನು ಮಾತ್ರ ಬಳಸುವ ಮೂಲಕ ಆಯೋಗ ಪಕ್ಷಪಾತ ತೋರಿಸುತ್ತಿದೆ ಎಂಬುದು. ಆದರೆ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಬಂದ ನಂತರ ನಡೆದ ಹಲವಾರು ಚುನಾವಣೆಗಳಲ್ಲಿ ಬಿಜೆಪಿ ಜಯಗಳಿಸಿಲ್ಲ. ಪ.ಬಂಗಾಳದ ಹಿಂದಿನ ಚುನಾವಣೆಯಲ್ಲಿ ಕೂಡ ಮಮತಾ ಪಕ್ಷವೇ ಜಯಗಳಿಸಿತ್ತು. ಚುನಾವಣಾ ಆಯೋಗವು ಮತ ಎಣಿಕೆ ಮೇಲ್ವಿಚಾರಕರಾಗಿ ಕೇಂದ್ರ ಸರ್ಕಾರ ಮತ್ತು ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳ ನೌಕರರನ್ನು ನಿಯೋಜಿಸುವುದಾಗಿ ಹೇಳಿತ್ತು. ಟಿಎಂಸಿ ಇದರ ವಿರುದ್ಧ ಕೋರ್ಟ್ ಮೆಟ್ಟಿಲೇರಿದ್ದು ಭಯ ತಾರಕಕ್ಕೇರಿದೆ ಎಂಬುದಕ್ಕೆ ಒಂದು ಉದಾಹರಣೆ. ಆದರೆ ಚುನಾವಣಾ ಆಯೋಗವು ತನ್ನ ಕರ್ತವ್ಯಗಳನ್ನು ಮಾಡಲು ಸ್ವತಂತ್ರವಿದೆ. ಅಲ್ಲಿ ಎಲ್ಲವೂ ಬಹಿರಂಗವಾಗಿ ನಡೆಯುತ್ತದೆ. ಇನ್ನೇಕೆ ಮಮತಾ ಭಯಪಡಬೇಕು? ನ್ಯಾಯಾಲಯ ಕೂಡ ಅದನ್ನೇ ಸ್ಪಷ್ಟಪಡಿಸಿದೆ. ಫಲಿತಾಂಶ ಎಲ್ಲದಕ್ಕೂ ಉತ್ತರವನ್ನು ಕೊಡಲಿದೆ.

ಹರೆಯದವರಲ್ಲಿ ಆತ್ಮಹತ್ಯೆ

ನಮ್ಮ ದೇಶದಲ್ಲಿ ವರ್ಷಕ್ಕೆ ಸುಮಾರು ಹತ್ತುಸಾವಿರಕ್ಕಿಂತ ಹೆಚ್ಚು 18 ವರ್ಷ ವಯಸ್ಸಿನೊಳಗಿನ ಹರೆಯದವರು ಆತ್ಮಹತ್ಯೆಯಿಂದ ಜೀವಕಳೆದುಕೊಳ್ಳುತ್ತಾರೆ.

ತಾರುಣ್ಯ ತಲ್ಲಣ

• ಡಾ.ಕೆ,ಆರ್, ಶ್ರೀಧರ್
drkrsridhar208@gmail.com



ಆತ್ಮಹತ್ಯೆಯು ಕೇವಲ ಮಾನಸಿಕ ಆರೋಗ್ಯ ಸಮಸ್ಯೆಯಾಗಿ ಉಳಿದಿಲ್ಲ. ಅದು ಸಾರ್ವಜನಿಕ ಆರೋಗ್ಯ ಸಮಸ್ಯೆಯೂ ಹೌದು. ಹರೆಯದವರಲ್ಲಿ ನಾವು ಕಾಣುವ ಆತ್ಮಹತ್ಯಾ ಸಮಸ್ಯೆಯು ಸಂಕೀರ್ಣವಾದದ್ದು. ಅದರಲ್ಲಿಯೂ ಇತ್ತೀಚಿನ ವರ್ಷಗಳಲ್ಲಿ ಹರೆಯದವರಲ್ಲಿ ಗಣನೀಯವಾಗಿ ಹೆಚ್ಚಾಗುತ್ತಿರುವ ಆತ್ಮಹತ್ಯಾ ಪ್ರಕರಣಗಳನ್ನು ಸಮಾಜ ಮತ್ತು ಮಾನಸಿಕ ಆರೋಗ್ಯ ಕ್ಷೇತ್ರಗಳಲ್ಲಿ ಕೆಲಸ ಮಾಡುವವರು ತಡೆಗಟ್ಟಲು ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇದೆ.

ವಿಶ್ವ ಆರೋಗ್ಯ ಸಂಸ್ಥೆಯು 2000ನೇ ಇಸವಿಯಲ್ಲಿ ಆತ್ಮಹತ್ಯೆ ಕುರಿತು ವ್ಯಾಪಕವಾಗಿ ಚರ್ಚೆ ನಡೆಸಿತು. ಹೆಚ್ಚುತ್ತಿರುವ ಆತ್ಮಹತ್ಯಾ ಪ್ರಕರಣಗಳನ್ನು ಗಮನಿಸಿ, ಸಮಾಜದಲ್ಲಿ ಇದರ ಅರಿವು ಮೂಡಿಸಲು ಮತ್ತು ಆತ್ಮಹತ್ಯಾ ಪ್ರಕರಣಗಳನ್ನು ತಡೆಗಟ್ಟಲು ಎರಡು ಸಾವಿರದ ಮೂರನೇ ಇಸವಿಯಲ್ಲಿ ಜಗತ್ತಿನಾದ್ಯಂತ ''ವಿಶ್ವ ಆತ್ಮಹತ್ಯಾ ತಡೆ ದಿನ''ವನ್ನು ಆಚರಿಸಿ ಆ ಮೂಲಕ ಸಮಾಜದ ಗಮನಸೆಳೆಯಬೇಕೆಂದು ಕರೆನೀಡಿತು. ಅದರ ಪ್ರಯುಕ್ತ ಪ್ರತಿವರ್ಷ ಸೆಪ್ಟಂಬರ್ ಹತ್ತನೇ ದಿನಾಂಕದಂದು ಬೇರೆ ಬೇರೆ ಘೋಷಣೆಗಳೊಂದಿಗೆ ಜಗತ್ತಿನಾದ್ಯಂತ ಆತ್ಮಹತ್ಯೆ ತಡೆ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಕಳೆದ ವರ್ಷದ ಘೋಷಣೆಯು ''ಆತ್ಮಹತ್ಯೆಯನ್ನು ತಡೆಗಟ್ಟುವುದು ಕೇವಲ ಒಬ್ಬರ ಕರ್ತವ್ಯವಲ್ಲ, ಅದು ಕುಟುಂಬದವರಿರಬಹುದು, ಸಂಬಂಧಿಗಳಾಗಿರಬಹುದು ಅಥವಾ ಪಕ್ಕದ ಮನೆಯವರಾಗಿರಬಹುದು ಎಲ್ಲರದೂ ಆದ್ಯ ಕರ್ತವ್ಯ'' ಎಂಬುದಾಗಿ ಘೋಷಿಸಿತು. ಕಳೆದ ಇಪ್ಪತ್ತಮೂರು ವರ್ಷಗಳಿಂದ ಪ್ರತಿವರ್ಷ ಆತ್ಮಹತ್ಯೆ ತಡೆ ದಿನಾಚರಣೆಯನ್ನು ಆಚರಿಸಿ, ಆ ನಿಟ್ಟಿನಲ್ಲಿ ಕ್ರಮ ತೆಗೆದುಕೊಂಡರೂ ವರ್ಷದಿಂದ ವರ್ಷಕ್ಕೆ ಆತ್ಮಹತ್ಯಾ ಪ್ರಕರಣಗಳು, ಅದರಲ್ಲಿಯೂ ಹರೆಯದವರಲ್ಲಿ ಆತ್ಮಹತ್ಯಾ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿವೆ ಎಂಬುದು ಖೇದದ ಸಂಗತಿ.

ಆತ್ಮಹತ್ಯೆಯು ಒಂದು ಸಂಕೀರ್ಣವಾದ ಪ್ರಕ್ರಿಯೆ. ಅಂಕಿಅಂಶಗಳ ಪ್ರಕಾರ ನಮ್ಮ ದೇಶದಲ್ಲಿ ವರ್ಷಕ್ಕೆ ಸುಮಾರು ಹತ್ತು ಸಾವಿರಕ್ಕಿಂತ ಹೆಚ್ಚು 18 ವರ್ಷ ವಯಸ್ಸಿನೊಳಗಿನ ಹರೆಯದವರು ಆತ್ಮಹತ್ಯೆಯಿಂದ ಜೀವಕಳೆದುಕೊಳ್ಳುತ್ತಾರೆ. ಸರಾಸರಿ ಒಂದು ಗಂಟೆಗೆ ಒಬ್ಬರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಸುಮಾರು ಶೇಕಡಾ ಹನ್ನೊಂದು ಮಂದಿ ಹರೆಯದವರು ಆತ್ಮಹತ್ಯಾ ಆಲೋಚನೆ ಮಾಡಿದರೆ, ಶೇಕಡಾ ಮೂರು ಮಂದಿ ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ. ಆತ್ಮಹತ್ಯಾ ಪ್ರಕರಣಗಳು 2022ರಿಂದ 2023 ರವರೆಗೆ ಸುಮಾರು ಶೇಕಡಾ ಆರೂವರೆಯಷ್ಟು ಹೆಚ್ಚಾಗಿದೆ ಎಂಬುದು ವರದಿಗಳ ಅಂಬೋಣ. ಆತ್ಮಹತ್ಯೆ ಮಾಡಿಕೊಳ್ಳುವವರಲ್ಲಿ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳೇ ಹೆಚ್ಚು ಪಾಲು. ಒಬ್ಬರು ಆತ್ಮಹತ್ಯೆಗೊಳಗಾದರೆ, ನೂರು ಜನರು ದುಃಖಿಸುತ್ತಾರೆ. ಅವರ ಮೇಲೆ ಅಪವಾದಗಳು ಬರಬಹುದು. ಇದು ಸಮಾಜದ ಶಾಂತಿಯ ಮೇಲೆ ಮತ್ತು ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರುತ್ತದೆ.

ಹರೆಯದವರ ಸಂಖ್ಯೆ ಹೆಚ್ಚಿರುವ ನಮ್ಮ ದೇಶದಲ್ಲಿ ಮಾನಸಿಕ ಸಮಸ್ಯೆಗೆ ಒಳಗಾಗುವವರು ಹೆಚ್ಚು ಮಂದಿ. ಹರೆಯವು ಒಬ್ಬರ ಜೀವಿತಾವಧಿಯಲ್ಲಿ ಮುಖ್ಯವಾದ ಹಂತ. ಈ ಅವಧಿಯಲ್ಲಿ ಹರೆಯದವರ ಮಾನಸಿಕ ಸಮಸ್ಯೆಗಳನ್ನು ಗುರುತಿಸದೇ ಇದ್ದಲ್ಲಿ, ಅವರು ಭವಿಷ್ಯದಲ್ಲಿ ಹಲವಾರು ಮನೋರೋಗಗಳಿಗೆ ತುತ್ತಾಗಬಹುದು. ಸುಮಾರು ಎಂಭತ್ತಕ್ಕೂ ಹೆಚ್ಚು ಆತ್ಮಹತ್ಯಾ ಪ್ರಕರಣಗಳಿಗೆ ಹರೆಯದವರಲ್ಲಿ ಉಂಟಾಗುವ ಖಿನ್ನತೆಯೇ ಕಾರಣ ಎಂಬುದು ಅಂಕಿಅಂಶಗಳಿಂದ ತಿಳಿಯುತ್ತದೆ. ಅಜ್ಞಾನ ಮತ್ತು ಕಳಂಕ ಭಾವನೆಯಿಂದ, ಇದನ್ನು ಗುರುತಿಸದೇ ಅಲಕ್ಷ್ಯ ವಹಿಸಿದರೆ, ಅದು ಅತ್ಯಂತ ಅಪಾಯಕರ ಎಂಬುದನ್ನು ಪೋಷಕರು ಮತ್ತು ಸಮಾಜ ಗಮನಿಸಬೇಕು.

ಹೆಚ್ಚುತ್ತಿರುವ ಆತ್ಮಹತ್ಯೆಗೆ ಕಾರಣಗಳಾದರೂ ಏನು ಎಂಬುದನ್ನು ಸಂಕ್ಷಿಪ್ತವಾಗಿ ತಿಳಿಯೋಣ. ಅಂಕಿ ಅಂಶಗಳ ಪ್ರಕಾರ ವರ್ಷದಲ್ಲಿ ಒಂದು ಲಕ್ಷಕ್ಕೆ ಎಂಭತ್ತು ಜನ ಹರೆಯದವರು ಆತ್ಮಹತ್ಯೆಯಿಂದ ಅಸುನೀಗುತ್ತಾರೆ. ಸುಮಾರು ಶೇಕಡಾ ಆರರಿಂದ ಇಪ್ಪತ್ತೆರಡನೇ ವಯಸ್ಸಿನ ಹರೆಯದವರು



ಆತ್ಮಹತ್ಯೆ ಕುರಿತು ಯೋಚಿಸಿದರೆ, ಶೇಕಡಾ ಆರರಿಂದ ಇಪ್ಪತ್ತೆರಡನೇ ವಯಸ್ಸಿನ ಹರೆಯದವರು ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ. ಹರೆಯದವರ ಆತ್ಮಹತ್ಯೆಗೆ ಶೈಕ್ಷಣಿಕ ಕ್ಷೇತ್ರವು ಮುಖ್ಯವಾದ ಕಾರಣ. ಪರೀಕ್ಷೆಯಲ್ಲಿ ಸ್ಪರ್ಧೆ, ವಿಶೇಷವಾಗಿ ಹರೆಯದ ವಿದ್ಯಾರ್ಥಿಗಳು ಎದುರಿಸಬೇಕಾದ ನೀಟ್, ಸಿ.ಇ.ಟಿ., ಐ.ಟಿ.ಐ, ಪರೀಕ್ಷೆಗಳಲ್ಲಿ ಕಾಣುವ ಸ್ಪರ್ಧೆಯು ಅವರನ್ನು ತೀವ್ರ ಒತ್ತಡಕ್ಕೀಡುಮಾಡುತ್ತದೆ. ತಾನು ಪಾಸಾಗುತ್ತೇನೋ ಇಲ್ಲವೋ ಎಂಬ ಸಂದೇಹ ಉಂಟಾಗಬಹುದು. ಒಮ್ಮೆ ಫೇಲಾದರೆ ವಿಫಲತೆಯೊಂದಿಗೆ, ಉಪಾಧ್ಯಾಯರು, ಗೆಳೆಯರು ಮತ್ತು ಪೋಷಕರಿಂದ ಎದುರಿಸಬೇಕಾದ ಟೀಕೆ ಟಿಪ್ಪಣಿಗಳು, ಅದರಿಂದ ಆಗುವ ಅವಮಾನಗಳಿಂದ ಹರೆಯದವರು ತೀವ್ರ ಖಿನ್ನತೆಗೊಳಗಾಗಿ ಆತ್ಮಹತ್ಯೆಯೇ ಇದಕ್ಕೆ ಪರಿಹಾರ ಎಂದು ಎಣಿಸುತ್ತಾರೆ. ವಿಶೇಷವಾಗಿ ಕೋಚಿಂಗ್ ತರಗತಿಗಳು ಏರ್ಪಡಿಸುವ ಕಠಿಣವಾದ ಶಿಸ್ತು ವಿದ್ಯಾರ್ಥಿಗಳನ್ನು ಅತಿಯಾದ ಒತ್ತಡಕ್ಕೀಡು ಮಾಡಿದಾಗ ವಿದ್ಯಾರ್ಥಿಗಳು ತೀವ್ರ ಖಿನ್ನತೆಗೊಳಗಾಗುತ್ತಾರೆ. ಸ್ಪರ್ಧಾತ್ಮಕ ಪರೀಕ್ಷಾ ಸಮಯಗಳಲ್ಲಿ, ಪರೀಕ್ಷಾ ಫಲಿತಾಂಶ ಬಂದಾಗ ವಾರ್ತಾ ಪತ್ರಿಕೆಗಳ ಮುಖಪುಟಗಳಲ್ಲಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ ವಾರ್ತೆಗಳನ್ನು ಓದುಗರು ನೆನಪಿಸಿಕೊಳ್ಳಬಹುದು.

ಹರೆಯದವರಿಗೆ ಸವಾಲುಗಳು ಎದುರಾಗುವುದು ಸಹಜ. ಅದೇ ರೀತಿ ಅವರು ಹಲವಾರು ಒತ್ತಡಗಳನ್ನು ಎದುರಿಸಬೇಕಾಗುತ್ತದೆ. ಪೋಷಕರ ನಿರೀಕ್ಷೆ, ಟೀಕೆ -ಟಿಪ್ಪಣಿಗಳು, ಭಾವನಾತ್ಮಕವಾಗಿ ಚಿಕ್ಕ ಪುಟ್ಟದ್ದಕ್ಕೂ ಮನಸ್ಸನ್ನು ಕೆಡಿಸಿಕೊಳ್ಳುವುದು ಮತ್ತು ಗೆಳೆಯರ ಟೀಕೆಗಳು, ನಕಾರಾತ್ಮಕ ಗೆಳೆಯರ ಸಹವಾಸ ಇವು ಹರೆಯದ ಮನಸ್ಸನ್ನು ಒತ್ತಡಕ್ಕೀಡು ಮಾಡಿ, ತಾನು ಅಸಹಾಯಕ, ಒಂಟಿ, ಎನ್ನುವ ಭಾವನೆಯಿಂದ, ತಾನು ಇದ್ದು ಏನು ಪ್ರಯೋಜನ ಎಂಬ ನಕಾರಾತ್ಮಕ ಭಾವನೆಗಳು ಮನಸ್ಸನ್ನು ಆವರಿಸಿ ಖಿನ್ನತೆಗೊಳಗಾಗುತ್ತಾರೆ. ಇದೂ ಒಂದು ಆತ್ಮಹತ್ಯೆಗೆ ಕಾರಣ.

ಗೊಂದಲದ ಕೌಟುಂಬಿಕ ವಾತಾವರಣವು ಹರೆಯದವರಲ್ಲಿ ಖಿನ್ನತೆಯನ್ನುಂಟು ಮಾಡುತ್ತದೆ. ಪೋಷಕ-ಮಕ್ಕಳ ಸಂಬಂಧದಲ್ಲಿ ಆಗುವ ವ್ಯತ್ಯಾಸಗಳು, ಕುಟುಂಬದ ಸದಸ್ಯರಲ್ಲಿ ಪರಸ್ಪರ ದ್ವೇಷ, ಜಗಳ, ಅಸೂಯೆ, ಆತ್ಮೀಯತೆಯ ಕೊರತೆ, ಭಾವನಾತ್ಮಕ ಸಂಬಂಧದ ಕೊರತೆ, ಪೋಷಕರ ತಿರಸ್ಕಾರ ಮನೋಭಾವ, ಇಲ್ಲಸಲ್ಲದ ಬೈಗುಳಗಳು ಇವು ಹರೆಯದವರ ಮಾನಸಿಕ ಆರೋಗ್ಯವನ್ನು ಹಾಳು ಮಾಡಿ ಇದಕ್ಕೆ ಪರಿಹಾರವೆಂಬಂತೆ ಹರೆಯದವರು ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ.

ಹರೆಯದಲ್ಲಿ ಆಗುವ ಲೈಂಗಿಕ ವಿಕಾಸವನ್ನು ಯಶಸ್ವಿಯಾಗಿ ಎದುರಿಸಿ, ಅದನ್ನು ಸಹಜವಾಗಿ ಸ್ವೀಕರಿಸುವುದು ಒಂದು ಸವಾಲು. ಹರೆಯದಲ್ಲಿ ಸ್ರವಿಸುವ ''ಲೈಂಗಿಕ ಚೋದನಿಕೆ (Sex Hormone)''ಗಳಿಂದ ಲೈಂಗಿಕ ಅಂಗಾಂಗಗಳು ವಿಕಾಸಗೊಳ್ಳುತ್ತವೆ. ಅದರಿಂದ ಹರೆಯದವರು ಲೈಂಗಿಕ ಆಕರ್ಷಣೆಗೊಳಗಾಗುತ್ತಾರೆ. ಇದರಿಂದ ಗಂಡು-ಹೆಣ್ಣು ಪ್ರೇಮ ಪ್ರಕರಣಳಲ್ಲಿ ತೊಡಗಿಸಿಕೊಳ್ಳಬಹುದು. ಮನೆಯವರು ಅದಕ್ಕೆ ಒಪ್ಪದ ಕಾರಣದಿಂದಲೋ ಅಥವಾ ಹುಡುಗ ಹುಡುಗಿಯರ ವೈಯಕ್ತಿಕ ಭಿನ್ನಾಭಿಪ್ರಾಯದಿಂದಲೋ ಪ್ರೇಮ ಪ್ರಕರಣವು ವಿಫಲವಾದರೆ, ಅದರಿಂದ ಖಿನ್ನತೆ ಉಂಟಾಗಿ ಇಬ್ಬರಲ್ಲಿ ಒಬ್ಬರು ಅಥವಾ ಇಬ್ಬರೂ ಆತ್ಮಹತ್ಯೆ ಮಾಡಿಕೊಳ್ಳಬಹುದು.

ಕೆಟ್ಟ ಗೆಳೆಯರ ಸಹವಾಸದಿಂದ, ಮದ್ಯ ಮಾದಕ ವಸ್ತುಗಳ ಚಟಕ್ಕೀಡಾಗಿ ಅದು ತಪ್ಪೆಂದು ಅರಿವಾದಾಗ ಪಾಪಪ್ರಜ್ಞೆಯಿಂದ ಆತ್ಮಹತ್ಯೆಗೆ ಪ್ರಯತ್ನಿಸಬಹುದು ಅಥವಾ ಆತ್ಮಹತ್ಯೆ ಮಾಡಿಕೊಳ್ಳಬಹುದು. ಹರೆಯದವರು ಭಾವನೆಗಳಿಂದ ಪ್ರೇರೇಪಿತರಾಗಿರುತ್ತಾರೆ. ತಾವು ಮಾಡುವ ಕೆಲಸವನ್ನು ಯಾರಾದರೂ ಹೊಗಳಿದರೆ ಆರಕ್ಕೇರುತ್ತಾರೆ, ವಿಫಲರಾದರೆ ಅಥವಾ ಬೇರೆಯವರು ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದಾಗ ಒಮ್ಮೆಲೇ ಪಾತಾಳಕ್ಕಿಳಿದು, ಮನಸ್ಸು ಘಾಸಿಗೊಂಡು ಖಿನ್ನತೆಗೊಳಗಾಗುತ್ತಾರೆ. ಹರೆಯದವರ ಆತ್ಮಹತ್ಯೆಗೆ ಇದೂ ಒಂದು ಕಾರಣ.

ಸಾಮಾಜಿಕ ಜಾಲತಾಣಗಳಾದ ಯೂಟ್ಯೂಬ್, ಫೇಸ್‌ಬುಕ್, ಇನ್ಸ್ಟಾಗ್ರಾಂ, ವಾಟ್ಸ್‌ಆ್ಯಪ್, ಟ್ವಿಟರ್ ಮತ್ತು ಎಸ್.ಎಂ.ಎಸ್. ಇವುಗಳನ್ನು ಹರೆಯದರು ಹೆಚ್ಚು ಹೆಚ್ಚು ಉಪಯೋಗಿಸುತ್ತಾರೆ. ಕೆಲವು ಗೆಳೆಯರು ಅವರ ಎದುರಿಗೆ ಬೈಯ್ಯಲಾಗದೇ ಜಾಲತಾಣಗಳ ಮೂಲಕ ಬೈಯ್ಯುವುದು (Cyber bullying) ಟೀಕೆ ಮಾಡುವುದು, ಬೆದರಿಕೆ ಹಾಕುವುದು, ಕೆಟ್ಟ ಶಬ್ದಗಳಿಂದ ಅವಮಾನಿಸುವುದು ಹೀಗೆ ಹಲವು ವಿಧದಲ್ಲಿ ಮಾನಸಿಕವಾಗಿ ಹಿಂಸಿಸುತ್ತಾರೆ. ಇದು ಹರೆಯದವರಲ್ಲಿ ಖಿನ್ನತೆಯನ್ನುಂಟು ಮಾಡಿ ಆತ್ಮಹತ್ಯೆಗೆ ಪ್ರಯತ್ನಿಸಬಹುದು.

ಕೆಲವು ಅಂಶಗಳು ಹರೆಯದವರ ಆತ್ಮಹತ್ಯೆಯನ್ನು ತಡೆಗಟ್ಟುವಲ್ಲಿ ಸಹಾಯಕವಾಗುತ್ತವೆ. ಹರೆಯದವರ ಸಹಜ ನಡವಳಿಕೆಯಲ್ಲಿ ವ್ಯತ್ಯಾಸವೇನಾದರೂ ಕಂಡುಬಂದಲ್ಲಿ, ಪೋಷಕರು ಅದನ್ನು ಗಮನಿಸಿ ಮಕ್ಕಳನ್ನು ಆತ್ಮೀಯತೆಯಿಂದ ಕಾರಣ ಏನೆಂಬುದನ್ನು ವಿಚಾರಿಸಬೇಕು. ಅವಶ್ಯವಿದ್ದಲ್ಲಿ ಸಕಾರಾತ್ಮಕ ಮಾರ್ಗದರ್ಶನ ಮಾಡಬೇಕು. ಮಾನಸಿಕ ಸಮಸ್ಯೆ ಇದ್ದರೆ, ಅದರ ಕುರಿತು ಇರುವ ಅಜ್ಞಾನ, ಕಳಂಕ ಅಥವಾ ಅದು ಒಂದು ಅವಮಾನ ಎಂದು ಎಣಿಸದೇ ಕೂಡಲೇ ಮನೋವೈದ್ಯರಲ್ಲಿ ಸಲಹೆ ಪಡೆಯಬೇಕು. ಮಕ್ಕಳಿಗೆ ಜೀವನ ಕೌಶಲಗಳನ್ನು ರೂಢಿಗೊಳಿಸಬೇಕು. ಹೀಗೆ ಕೆಲವು ಅಂಶಗಳನ್ನು ಗಮನದಲ್ಲಿಟ್ಟು ಮಕ್ಕಳನ್ನು ಮತ್ತು ಹರೆಯದವರನ್ನು ಪೋಷಿಸಿದಾಗ, ಆತ್ಮಹತ್ಯೆ, ಆತ್ಮಹತ್ಯೆಗೆ ಪ್ರಯತ್ನ ಮತ್ತು ಆತ್ಮಹತ್ಯೆ ಆಲೋಚನೆಗಳನ್ನು ತಡೆದು, ಹರೆಯದವರ ಬಾಳು ಹಸನಾಗುವಂತೆ ಮಾಡಬಹುದು.

ಕೊಹಿನೂರ್ ಭಾರತಕ್ಕೇ ಸೇರಿದ್ದು!

ಅರವಿಂದ



ಕೆಲವು ದಿನಗಳ ಹಿಂದೆ ಬ್ರಿಟನ್‌ನ ದೊರೆ ಚಾರ್ಲ್ಸ್-3 ನ್ಯೂಯಾರ್ಕ್ ನಗರಕ್ಕೆ ಭೇಟಿ ನೀಡಿದಾಗ ಅಲ್ಲಿನ ಮೇಯರ್ ಜೊಹ್ರಾನ್ ಮಾಮ್ದಾನಿ ತಾನು ಕೊಹಿನೂರ್ ವಜ್ರವನ್ನು ಭಾರತಕ್ಕೆ ಮರಳಿಸುವಂತೆ ಚಾರ್ಲ್ಸ್ ರಲ್ಲಿ ಕೋರಿಕೊಳ್ಳುವುದಾಗಿ ನುಡಿದರು. ಅವರು ಹೇಳಿದ್ದೇನೋ ನಿಜ. ಅವರ ಮಾತಿಗೆ ಚಾರ್ಲ್ಸ್ ಅಥವಾ ಇಂಗ್ಲೆಂಡ್ ಬೆಲೆ ನೀಡುವುದೆಂದು ಹೇಳಲಾಗದು. ಆದರೆ ಅವರ ಹೇಳಿಕೆಯು ಕೊಹಿನೂರ್ ವಜ್ರದ ಮರಳಿಕೆಯ ವಿಷಯವನ್ನು ಮತ್ತೊಮ್ಮೆ ಮುನ್ನೆಲೆಗೆ ತಂದಿರುವುದು ನಿಜ.

ಇಂಗ್ಲೆಂಡ್ ಕೊಹಿನೂರ್‌ನ್ನು ತನಗೆ ಮರಳಿಸಬೇಕೆಂದು ಭಾರತವು ಕಳೆದ ಕೆಲವು ದಶಕಗಳಿಂದಲೇ ಬೇಡಿಕೆ ಸಲ್ಲಿಸುತ್ತಿದೆ. ಈಗಂತೂ ಇಂತಹ ಬೇಡಿಕೆಗೆ ಹೆಚ್ಚು ಬಲ ಬಂದಿದೆ. ವಸಾಹತುಶಾಹಿ ಆಡಳಿತಗಳು ವಿವಿಧ ದೇಶಗಳಿಂದ ಕೊಳ್ಳೆ ಹೊಡೆದ ಸಂಪತ್ತುಗಳನ್ನು ಯುರೋಪಿನ ಹಲವಾರು ಮ್ಯೂಸಿಯಂಗಳಲ್ಲಿ ಪ್ರದರ್ಶನಕ್ಕಿಟ್ಟಿದ್ದು, ಅವುಗಳನ್ನು ಆಯಾ ದೇಶಗಳಿಗೆ ಮರಳಿಸಬೇಕು ಎಂಬ ಹಕ್ಕೊತ್ತಾಯ ಇತ್ತೀಚಿನ ವರ್ಷಗಳಲ್ಲಿ ಜೋರಾಗೇ ಕೇಳಿಬರುತ್ತಿದೆ.

ಅದೇರೀತಿ, ಕೊಹಿನೂರ್‌ನ್ನು ತನಗೆ ಮರಳಿಸಬೇಕೆಂಬುದು ಭಾರತದ ಹಕ್ಕೊತ್ತಾಯ. ಸಾವಿರಾರು ವರ್ಷಗಳ ಹಿಂದೆ ಭಾರತದ ಗಣಿಯಿಂದ ಹೊರತೆಗೆದ 105.6 ಕ್ಯಾರೆಟ್ ತೂಕದ ಈ ವಜ್ರವು 1800ರಿಂದ ಬ್ರಿಟಿಷ್ ಸಾಮ್ರಾಜ್ಯದ ವಶದಲ್ಲಿದೆ. ಹಾಗೆಂದು ಇದನ್ನು ಬ್ರಿಟಿಷರಿಗೆ ಕೊಡುಗೆಯಾಗಿ ನೀಡಿದ್ದೇನೋ ಅಲ್ಲ. ಬ್ರಿಟನ್ ಅದನ್ನು ಲೂಟಿ ಮಾಡಿ ಕೊಂಡೊಯ್ದದ್ದು. ಕೊಹಿನೂರ್ ಬ್ರಿಟನ್‌ನಲ್ಲಿರುವುದು ಅದರ ವಸಾಹತುಶಾಹಿಯ ಸಂಕೇತವಾಗಿದ್ದು, ಆ ಕಾಲದಲ್ಲಿ ನಡೆಸಿದ ಸಂಪತ್ತಿನ ಲೂಟಿಯನ್ನೂ ನೆನಪಿಸುತ್ತದೆ. ಆದ್ದರಿಂದ ಅದನ್ನು ನ್ಯಾಯಬದ್ಧವಾಗಿ ಭಾರತಕ್ಕೆ ನೀಡಬೇಕು ಎಂದು ಹಲವಾರು ಬಾರಿ ಮನವಿ ಸಲ್ಲಿಸಲಾಗಿದೆ.

ಇದು ಕೇವಲ ಕೊಹಿನೂರ್‌ನ ಕಥೆಯಲ್ಲ. ಯುರೋಪಿನ ಹಲವಾರು ಮ್ಯೂಸಿಯಂಗಳಲ್ಲಿ ವಿವಿಧ ರಾಷ್ಟ್ರಗಳ ರಾಷ್ಟ್ರೀಯ ಸಂಪತ್ತುಗಳನ್ನು ಪ್ರದರ್ಶನಕ್ಕಿಡಲಾಗಿದೆ. ಇವೆಲ್ಲವೂ ಆ ದೇಶಗಳಿಂದ ಲೂಟಿ ಮಾಡಿ ತಂದಂತಹ ವಸ್ತುಗಳೇ ಆಗಿವೆ. ಇತ್ತೀಚಿನ ವರ್ಷಗಳಲ್ಲಿ ಕೆಲವು ಮ್ಯೂಸಿಯಂಗಳು ಅಂತಹ ಕೆಲವು ಪುರಾತನ ವಸ್ತುಗಳನ್ನು ಆಯಾ ದೇಶಗಳಿಗೆ ಮರಳಿಸುವ ಕಾರ್ಯವನ್ನು ಮಾಡಿವೆ. ಉದಾಹರಣೆಗೆ ಬೆನಿನ್ ಕಂಚಿನ ಕಲಾಕೃತಿಗಳನ್ನೇ ತೆಗೆದುಕೊಳ್ಳಿ. 13-16ನೇ ಶತಮಾನದ ಕಾಲಘಟ್ಟದಲ್ಲಿ ತಯಾರಿಸಲಾದ ಸುಮಾರು 5000ಕ್ಕೂ ಅಧಿಕ ಕಂಚಿನ ಕಲಾಕೃತಿಗಳನ್ನು 1897ರಲ್ಲಿ ಬ್ರಿಟಿಷ್ ಸೇನೆಯು ನೈಜೀರಿಯಾದ ಬೆನಿನ್ ನಗರದ ಮೇಲೆ ದಾಳಿ ಮಾಡಿದಾಗ ವಶಪಡಿಸಿಕೊಂಡಿತ್ತು. ಅದನ್ನು ತನಗೆ ಮರಳಿಸಬೇಕೆಂದು ನೈಜೀರಿಯಾ ಕಳೆದೊಂದು ಶತಮಾನದಿಂದ ಒತ್ತಾಯಿಸುತ್ತಾ ಬಂದಿತ್ತು. ಆದರೆ ನೈಜೀರಿಯಾಕ್ಕೆ ಅದನ್ನು ಸರಿಯಾಗಿ ಕಾಯ್ದಿಡಲು ಗೊತ್ತಿಲ್ಲ ಎಂಬ ನೆಪ ಹೇಳಿ ಬ್ರಿಟನ್ ಅದನ್ನು ನಿರಾಕರಿಸಿತ್ತು. ಜತೆಗೇ 'ವೈಶ್ವಿಕ ಮ್ಯೂಸಿಯಂ' ಪರಿಕಲ್ಪನೆ ಮುಂದಿಟ್ಟಿತ್ತು. ಈ ಪರಿಕಲ್ಪನೆಯ ಮೂಲಕ ಬೇರೆ ದೇಶಗಳಿಂದ ಲೂಟಿ ಹೊಡೆದ ಸಂಪತ್ತುಗಳನ್ನು ತಾವು ಹೊಂದುವುದು ನ್ಯಾಯಬದ್ಧ ಎಂಬುದಾಗಿ ಈ ಐರೋಪ್ಯ ಮ್ಯೂಸಿಯಮಂಗಳು ವಾದಿಸುತ್ತವೆ. ಈಗೀಗ ಇಂತಹ ವಾದದ ನೈತಿಕ ದಿವಾಳಿತನವು ಬಯಲಿಗೆ ಬರತೊಡಗಿದೆ. ಹಾಗಾಗಿ ನೆದರ್‌ಲೆಂಡ್, ಜರ್ಮನಿ ಮತ್ತು ಅಮೆರಿಕದ ಮೆಟ್ರೋಪಾಲಿಟನ್ ಮ್ಯೂಸಿಯಂಗಳು ಇಂತಹ ಕಲಾಕೃತಿಗಳನ್ನು ನೈಜೀರಿಯಾಕ್ಕೆ ಮರಳಿಸಿವೆ. ಅದರ ಬೆನ್ನಿಗೇ 2025ರಲ್ಲಿ ಡಚ್ ಮ್ಯೂಸಿಯಂ ಕೂಡಾ 119 ಬೆನಿನ್ ಕಂಚಿನ ಕಲಾಕೃತಿಗಳನ್ನು ನೈಜೀರಿಯಾಕ್ಕೆ ಮರಳಿಸುವುದಾಗಿ ಘೋಷಿಸಿತು.

ಗ್ರೀಸ್ ಕೂಡಾ ತನ್ನ ಪಾರ್ಥೆನನ್ ವಿಗ್ರಹಗಳನ್ನು ಪಡೆಯಲು ದಶಕಗಳ ಕಾಲದಿಂದ ಹೋರಾಟ ಮಾಡುತ್ತಾ ಬಂದಿದೆ. ಅಥೆನ್ಸ್‌ನ ಪಾರ್ಥೆನನ್‌ನ ಮೂಲ ಭಾಗವಾಗಿರುವ ಈ ವಿಗ್ರಹಗಳನ್ನು 19ನೇ ಶತಮಾನದಲ್ಲಿ ಲಾರ್ಡ್ ಎಲ್ಜಿನ್ ಅಲ್ಲಿಂದ ಕಿತ್ತು ಬ್ರಿಟನ್‌ಗೆ ಕೊಂಡೊಯ್ದಿದ್ದ. ಬಳಿಕ ಅದನ್ನು ಬ್ರಿಟಿಷ್ ಸರಕಾರಕ್ಕೆ ಮಾರಿದ್ದ. ಅಲ್ಲಿಂದ ಬಳಿಕ ಅವು ಬ್ರಿಟನ್‌ನಲ್ಲೇ ಇವೆ. 1816ರಲ್ಲಿ ಅವನ್ನು ಬ್ರಿಟಿಷ್ ಮ್ಯೂಸಿಯಂ ಖರೀದಿಸಿತ್ತು.

ಗ್ರೀಸಿನ ವಾದವೇನೆಂದರೆ ''ಈ ವಿಗ್ರಹಗಳು ರೋಮ್ ಅಧಿಪತ್ಯಕ್ಕೆ ಸೇರಿದ್ದು, ಒಟ್ಟೋಮನ್ ಸಾಮ್ರಾಜ್ಯವು ಗ್ರೀಸಿನ ಮೇಲೆ ಅಧಿಪತ್ಯ ಸ್ಥಾಪಿಸಿದ್ದ ಸಂದರ್ಭದಲ್ಲಿ ಲಾರ್ಡ್ ಎಲ್ಜಿನ್ ಅವನ್ನು ಅಲ್ಲಿಂದ ಕಿತ್ತುಕೊಂಡು ಹೋಗಿದ್ದಾನೆ. ಅನ್ಯ ರಾಷ್ಟ್ರದ ಅತಿಕ್ರಮಣದ ಸಂದರ್ಭದಲ್ಲಿ ಈ ಕೃತ್ಯ ನಡೆದಿದ್ದು, ಒಟ್ಟೋಮನ್ ಸಾಮ್ರಾಜ್ಯಕ್ಕೆ ಇವನ್ನು ಮಾರಾಟ ಮಾಡುವ ಅಧಿಕಾರವಿಲ್ಲ. ಅದು ಗ್ರೀಸ್‌ಗೆ ಸೇರಿದ ಸೊತ್ತು'' ಆದರೆ ತಾನು ಖರೀದಿ ಒಪ್ಪಂದ ಮಾಡಿಕೊಂಡೇ ಅವನ್ನು ಖರೀದಿ ಮಾಡಿರುವುದರಿಂದ ಅದನ್ನು ಮರಳಿಸುವಂತಿಲ್ಲ ಎಂದು ಬ್ರಿಟಿಷ್ ಮ್ಯೂಸಿಯಂ ವಾದಿಸುತ್ತಿದೆ. ವಿಪರ್ಯಾಸವೆಂದರೆ ಇದೇ ಮ್ಯೂಸಿಯಂನಿಂದ ಸಾವಿರಾರು ಅಮೂಲ್ಯ ವಸ್ತುಗಳು ಕಾಣೆಯಾಗಿರುವ ದೊಡ್ಡ ಹಗರಣದಲ್ಲೂ ಈ ಮ್ಯೂಸಿಯಂ ಸಿಕ್ಕಿಬಿದ್ದಿದೆ. ಈವರೆಗೆ ಅವನ್ನು ಗ್ರೀಸ್‌ಗೆ ಮರಳಿಸಲು ಮ್ಯೂಸಿಯಂ ನಿರಾಕರಿಸಿದೆಯಾದರೂ ಅದರ ಮೇಲಿನ ಒತ್ತಡ ಹೆಚ್ಚುತ್ತಿದೆ. ಇಡೀ ಜಗತ್ತು ಈ ಬೆಳವಣಿಗೆಯನ್ನು ವೀಕ್ಷಿಸುತ್ತಿದೆ.

ಜಗತ್ತಿನಾದ್ಯಂತ ಈಗ ವಿವಿಧ ದೇಶಗಳು ತಮ್ಮಿಂದ ಲೂಟಿ ಹೊಡೆದ ವಸ್ತುಗಳನ್ನು ಮರಳಿಸಬೇಕೆಂದು ಮ್ಯೂಸಿಯಂಗಳನ್ನು ಒತ್ತಾಯಿಸಲಾರಂಭಿಸಿವೆ. ಕೆಲವು ಮ್ಯೂಸಿಯಂಗಳು ಇಂತಹ ಬೇಡಿಕೆಯನ್ನು ಮನ್ನಿಸಿವೆ ಕೂಡಾ. 2204ರಲ್ಲಿ ಮೆಟ್ರೋಪಾಲಿಟನ್ ಮ್ಯೂಸಿಯಂ ಕಾಂಬೋಡಿಯಾ ಮತ್ತು ಥೈಲೆಂಡಿನ ಹಲವಾರು ಪುರಾತನ ವಸ್ತುಗಳನ್ನು ಹಿಂತಿರುಗಿಸಿತು. ಅಮೆರಿಕವು ತನ್ನ ಮೂಲ ನಿವಾಸಿಗಳ ಸೊತ್ತುಗಳನ್ನು ಅವರಿಗೇ ಮರಳಿಸುವಂತಹ ಕಾಯ್ದೆಯೊಂದನ್ನು ಜಾರಿಗೊಳಿಸಿದೆ. ಬ್ರೆಜಿಲಿನ 400 ವರ್ಷ ಹಳೆಯದಾದ ಕುಪನಾಂಬಾ ವ್ಯೆಗವಚವನ್ನು ಡ್ಯಾನಿಶ್ ಮ್ಯೂಸಿಯಂ 2024ರಲ್ಲಿ ಹಿಂತಿರುಗಿಸಿತು. ಬ್ರೆಜಿಲ್ ಈ ಸಂಬಂಧವಾಗಿ ಡೆನ್ಮಾರ್ಕ್ ಸರಕಾರದೊಂದಿಗೆ ತೀವ್ರ ಸಂಧಾನ ನಡೆಸಿತ್ತು. ಕುಪನಾಂಬಾ ಆದಿವಾಸಿ ಜನಾಂಗದವರು ಕೂಡಾ ಭಾರೀ ದೊಡ್ಡ ಪ್ರತಿಭಟನೆಯನ್ನೂ ನಡೆಸಿದ್ದರು.

ಇವೆಲ್ಲವೂ ಸಾರುವ ಸಂದೇಶ ಒಂದೇ- ಬಲಾತ್ಕಾರವಾಗಿ ಕೊಂಡೊಯ್ದ ಒಂದು ದೇಶದ ಅಮೂಲ್ಯ ವಸ್ತುಗಳನ್ನು ಅದೇ ದೇಶಕ್ಕೆ ಮರಳಿಸಬೇಕು!

ಇನ್ನು ಕೆಲವರು ಈ ರೀತಿ ಪುರಾತನ ವಸ್ತುಗಳನ್ನು ಮರಳಿಸುವುದನ್ನು ವಿರೋಧಿಸುವುದಿದೆ. ಹಾಗೆ ಎಲ್ಲವನ್ನೂ ಮರಳಿಸುವುದರಿಂದ ಮ್ಯೂಸಿಯಂಗಳು ಖಾಲಿ ಬೀಳುತ್ತವೇ ಎಂಬ ವಿತಂಡವಾದವನ್ನೂ ಮಂಡಿಸುವುದಿದೆ. ಆದರೆ ಇಂತಹ ಹೇಳಿಕೆಯ ಹಿಂದೆಯೇ, ಈ ಮ್ಯೂಸಿಯಂಗಳೆಲ್ಲ ಬೇರೆ ದೇಶಗಳಿಂದ ಕದ್ದು ತಂದ ಅಥವಾ ಬಲವಂತದಿಂದ ಎತ್ತಿಕೊಂಡು ಬಂದ ವಸ್ತುಗಳಿಂದಲೇ ತುಂಬಿಕೊಂಡಿವೆ ಎಂಬ ತಪ್ಪೊಪ್ಪಿಕೆಯೂ ಸೇರಿಕೊಂಡಿದೆ. ಆದರೆ ಕೆಲವು ದೇಶಗಳ ಸಾಂಸ್ಕೃತಿಕ ಮಹತ್ವದ ವಸ್ತುಗಳನ್ನು ಕೇವಲ 'ಮ್ಯೂಸಿಯಂ ವಸ್ತು'ಗಳೆಂಬಂತೆ ಪರಿಗಣಿಸುವುದು ತಪ್ಪು. ಆಯಾ ದೇಶಕ್ಕೆ ಅದು ಸಾಂಸ್ಕೃತಿಕ ವೈಭವದ ಕುರುಹು. ಅವುಗಳನ್ನು ಆಯಾ ದೇಶಕ್ಕೆ ಮರಳಿಸುವುದು ಅವುಗಳ ಸಾಂಸ್ಕೃತಿಕ ಪರಂಪರೆಯನ್ನು ಗೌರವಿಸಿದಂತೆ.

ಕೊಹಿನೂರ್ ವಜ್ರವನ್ನು ಕೂಡಾ ಬ್ರಿಟನ್ ಭಾರತಕ್ಕೆ ಮರಳಿಸಬೇಕಾದುದೇ ಸೂಕ್ತವಾಗಿದೆ. ಈ ವಿಚಾರದಲ್ಲಿ ಅದು ನೈತಿಕ ದಿವಾಳಿತನವನ್ನು ಪ್ರದರ್ಶಿಸಬಾರದು. ಬೆನಿನ್ ಕಂಚಿನ ವಸ್ತುಗಳನ್ನು ಮರಳಿಸಿದ, ಪಾರ್ಥೆನನ್ ಕೃತಿಗಳನ್ನು ಮರಳಿಸುವ ಕುರಿತಂತೆ ಸಂಧಾನದಲ್ಲಿ ತೊಡಗಿರುವ ಬ್ರಿಟನ್ ಕೊಹಿನೂರ್‌ನ್ನು ಮಾತ್ರ ರಾಜನ ಕಿರೀಟದಲ್ಲಿ ಈಗಲೂ ಪ್ರದರ್ಶಿಸುತ್ತಿರುವುದು ಹಾಗೂ ಆ ಮೂಲಕ ಅದು ಬ್ರಿಟನ್‌ಗೇ ಸೇರಿದ ವಸ್ತು ಎಂಬಂತೆ ಬಿಂಬಿಸುತ್ತಿರುವುದು ಸರಿಯಲ್ಲ. ಕೊಹಿನೂರ್‌ನ ಕುರಿತಂತೆ ಬ್ರಿಟನ್ ಸ್ಪಷ್ಟನೆ ನೀಡುವ ಅಗತ್ಯವಿದೆ. ಸಾಂಸ್ಕೃತಿಕ ವಸ್ತುಗಳನ್ನು ಲೂಟಿ ಮಾಡುವುದೆಂದರೆ ಆ ದೇಶದ ಜನರ ಸಾಮೂಹಿಕ ಸ್ಮರಣೆಯನ್ನೇ ನಾಶಪಡಿಸಿದಂತೆ ಹಾಗೂ ಅಸ್ಮಿತೆಯನ್ನೇ ಕಸಿದುಕೊಂಡಂತೆ ಎಂಬುದಾಗಿ ಯುನೆಸ್ಕೋದ ಮಹ್ತಾರ್ ಎಂ. ಬೊವ್ ಎಂಬವರು ಕೆಲ ದಶಕಗಳ ಹಿಂದೆ ಹೇಳಿದ್ದರು. ಬ್ರಿಟನ್ ಅದಕ್ಕೆ ಕಿವಿಗೊಡಬೇಕಾಗಿದೆ. ಕೊಹಿನೂರ್ ಭಾರತಕ್ಕೆ ಸೇರಿದ್ದು. ಜಗತ್ತೀಗ ತಾನು ಲೂಟಿ ಮಾಡಿದ ಸ್ವತ್ತುಗಳನ್ನು ಅದರ ಮಾಲಿಕರಿಗೆ ಮರಳಿಸುತ್ತಿದೆ. ಬ್ರಿಟನ್ ಕೂಡಾ ಅದೇ ದಾರಿ ತುಳಿಯಬೇಕಾಗಿದೆ. ಕೊಹಿನೂರ್ ಇಂದಲ್ಲ ನಾಳೆ ಭಾರತಕ್ಕೆ ಮರಳಬೇಕಾಗಿರುವುದು ಅನಿವಾರ್ಯವಾಗಿದೆ.

ಈ 'ತಾಪ'ವ ನಾ ತಾಳೆನು!

ವಾರದ ವರಸೆ

• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಮನೆ-ಮನಸ್ಸು ಎಂದ ಮೇಲೆ ಕೋಪ-ತಾಪದ ಪ್ರಭಾವ ಇದ್ದೇ ಇರುತ್ತದೆ. ಕೋಪದಿಂದ ಪರಿಸ್ಥಿತಿ ವಿಕೋಪಕ್ಕೆ ತಿರುಗುವುದು, ಪರಿಣಾಮವೆಂಬಂತೆ ಒಟ್ಟಾರೆ ವಾತಾವರಣವು ಬಿಸಿಯೇರುವುದು ಸಾಮಾನ್ಯ. ಮಾತು, ಚರ್ಚೆ, ವಾಗ್ವಾದ, ಜಗಳ ಇತ್ಯಾದಿಗಳ ಸಂದರ್ಭದಲ್ಲಿ 'ಕಾವೇರಿದ', 'ಹೀಟೆಡ್' ಎಂಬೆಲ್ಲ ವಿಶೇಷಣಗಳನ್ನು ಬಳಸುವುದರಿಂದಲೂ ಆ ಸನ್ನಿವೇಶದ 'ಬಿಸಿ'ಯ ಅಸ್ತಿತ್ವದ ಬಗ್ಗೆ ಯಾವ ಅನುಮಾನವೂ ಇಲ್ಲ ಎಂದೆನ್ನಬಹುದು. ಅಂದರೆ ಕೋಪದಿಂದ ಉಂಟಾಗುವ ಆ ಬಿಸಿಯನ್ನೇ 'ಕೋಪ-ತಾಪ' ಎಂದು ಜೋಡುನುಡಿಯಂತೆ ಹೇಳುವುದಿರಬೇಕು. ಅಲ್ಲಿ ಕೋಪವೇ ತಾಪಕ್ಕೆ ಕಾರಣವೆನ್ನುವುದು ಸ್ಪಷ್ಟ. ಅಂತೆಯೇ ಈಗಲೂ ಕೋಪ-ತಾಪಗಳೆರಡೂ ಭಾರೀ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿವೆ. ಆದರೆ ಯಾವುದರಿಂದ ಯಾವುದು ಎನ್ನುವುದನ್ನು ಕೊಂಚ ಅವಲೋಕಿಸಬೇಕಷ್ಟೇ. ಹೌದು, ಈಗ ತಾಪದಿಂದಲೇ ಕೋಪ ಹುಟ್ಟುತ್ತಿದೆ ಎನ್ನುವುದೇ ಸರಿಯಾದ ಅಭಿಪ್ರಾಯ. ಬೇಸಿಗೆಯ ಬೇಗೆಯ ಬಿಸಿಗೆ, ತಾಪಮಾನ ಒಂದೇ ಪ್ರಮಾಣದಲ್ಲಿ ಏರಿ, ಆ ಬಿಸಿಯನ್ನು ಸಹಿಸಿಕೊಳ್ಳಲು ಸಾಧ್ಯವಾಗದೇ ಇರುವ ಕಾರಣಕ್ಕೆ ಕೋಪ ಉಂಟಾದರೆ ಅಚ್ಚರಿಯಿಲ್ಲ. ಆ ಕಾರಣಕ್ಕೆ ಜನರು ಪರಿ ಪರಿಯಾಗಿ ಪರಿತಪಿಸುವಂತಾಗಿದೆ. ಬೇಸಿಗೆಯ ಈ ದಿನಗಳಲ್ಲಿ ಭಾರೀ ಪ್ರಮಾಣದಲ್ಲಿ ಏರಿಕೆಯಾಗುವ ತಾಪಮಾನದಿಂದ ಉಂಟಾಗುವ ತಾಪತ್ರಯಗಳು ಒಂದೆರಡಲ್ಲ.

ಕೋಪೋದ್ರಿಕ್ತಗೊಂಡಿದೆಯೋ ಎಂಬಂತೆ ಗೋಚರಿಸುವ ತಾಪದ ಪ್ರತಾಪಕ್ಕೆ ಸಿಕ್ಕು ಜನರಂತೂ ಈ ಕಾಲದಲ್ಲಿ ಅಕ್ಷರಶಃ ಬಳಲಿ ಬೆಂಡಾಗಿದ್ದಾರೆ ಹಾಗೂ ಬೆವರಿ ಒದ್ದೆ ಮುದ್ದೆಯಾಗಿದ್ದಾರೆ. ಎಲ್ಲೇ ಯಾರ ಬಾಯಲ್ಲೇ ಕೇಳಿದರೂ ಒಂದೇ ಮಾತು, ''ಅಯ್ಯಯ್ಯೋ ಇದೆಂಥಾ ಸೆಕೆಯಪ್ಪ?!'' ಇದನ್ನೇ ಸಮಯ-ಸಂದರ್ಭ-ಸನ್ನಿವೇಶಗಳಿಗೆ ತಕ್ಕಂತೆ ಬೇರೆ ಬೇರೆ ರೀತಿಯಲ್ಲಿ ಹೇಳುತ್ತಲೇ ಇರುತ್ತಾರೆ. ಈ 'ಕಾಲ'ದ ಎಲ್ಲರ ಬಾಯಲ್ಲೂ, ಬರಹದಲ್ಲೂ ಈ ಕುರಿತ ವಿಚಾರಗಳು ನುಸುಳುವ ಸಾಧ್ಯತೆ ದಟ್ಟವಾಗಿರುತ್ತದೆ. ಇದನ್ನು ಪದೇ ಪದೇ ಹೇಳುವುದರಿಂದ ಈ ಸಂಬಂಧದ ಮಾತುಕತೆಗಳನ್ನು 'ಸೆಕೆ'-ಗೀತ ಎಂದು ಕರೆಯಬಹುದು. ಅತ್ತ 'ಸಖಿ'-ಗೀತ ಮರ ಸುತ್ತುವ ಪ್ರಕ್ರಿಯೆಯ ಭಾಗವಾಗಿ ಕಾಣಿಸಿಕೊಂಡರೆ, ಇತ್ತ ಈ 'ಸೆಕೆ'-ಗೀತ ಸಮ್ಮರ್ (summer)ನ ಸುಸ್ತಾಗುವುದರ ಜೊತೆಗೆ ಕಾಣಿಸಿಕೊಳ್ಳುವಂಥದ್ದು. ಅಂದರೆ ಸಖಿ-ಗಾಲ ಅದ್ಯಾರಿಗೆಲ್ಲ ಸಿಗುವುದೋ ಬಿಡುವುದೋ ಆದರೆ 'ಸೆಕೆ'-ಗಾಲವಂತೂ ಎಲ್ಲರಿಗೂ ಸಿಕ್ಕೇ ಸಿಗುತ್ತದೆ ಎನ್ನುವುದಕ್ಕೆ ದಿನದಿಂದ ದಿನಕ್ಕೆ ಏರುವ ಬಿಸಿಲೇ ಸಾಕ್ಷಿ. ಈ ಏರುವ ಬಿಸಿಲಿನ ತೀವ್ರತೆ ಅದ್ಯಾವ ಮಟ್ಟಿಗೆ ಇದೆಯೆಂದರೆ, ಯಾರಾದರೂ 'ನಿಮ್ಮೂರು ಯಾವೂರು..?' ಎಂದು ಥಟ್ಟನೇ ಪ್ರಶ್ನಿಸಿದರೆ, ಅತ್ತಲಿಂದ ನಾವು, 'ನಮ್ಮೂರು... ಬಿಸಿಲೂರು...!' ಎಂದುತ್ತರಿಸಿದರೂ ಆಶ್ಚರ್ಯವೇನಿಲ್ಲ. ಬೇಸಿಗೆಯ ಹಿನ್ನೆಲೆಯಲ್ಲಿ ನೋಡಿದರೆ ಆ ಉತ್ತರ ತಪ್ಪು ಅಂತಲೂ ಅನಿಸಲಿಕ್ಕಿಲ್ಲ.



ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗುವ ಸೂರ್ಯ ಹೊಳೆಯುತ್ತಾನೆ, ಮಿನುಗುತ್ತಾನೆ ಹಾಗೂ ಬೆಳಗುತ್ತಾನೆ ಎಂದೆಲ್ಲ ನಾವು ಕೇಳಿಕೊಂಡೇ ಬಂದವರು. ಆದರೆ ಆತ ಅದನ್ನಷ್ಟೇ ಮಾಡುವುದಿಲ್ಲ. ಆಗಾಗ ನಮ್ಮನ್ನು ಬೆದರಿಸುತ್ತಾನೆ, ಹೆದರಿಸುತ್ತಾನೆ, ಬೆವರಿಳಿಸಿ ಬೆಂಡಾಗುವಂತೆ ಮಾಡುವ ಮೂಲಕ ನಮಗೆ ಅಕ್ಷರಶಃ ಸವಾಲನ್ನೇ ಹಾಕುತ್ತಾನೆ ಎನ್ನುವುದು ಪ್ರತೀ ಬೇಸಿಗೆಯ ಸಂದರ್ಭದಲ್ಲೂ ಸಾಬೀತಾಗುತ್ತದೆ. ಆ ಕಾಲದಲ್ಲೇ ತಾನೇ ಅವನು ನಮ್ಮಲ್ಲಿ ಒಂದು ಬಗೆಯ ಭಯವನ್ನೇ ಹುಟ್ಟು ಹಾಕುವುದು! ಈತನ ಈ ಉರಿಮುಖ, ಕೆಕ್ಕರಿಸಿ ನೋಡುವ ಕೆಂಡದಂಥ ಕಣ್ಣೋಟದ ಪ್ರಭಾವದಿಂದಾಗಿ, ಯಾರಾದರೂ ಮನೆಯ ಹೊರಗಡೆ ಕಾಲಿರಿಸುವುದು ಎಂದರೆ ಅದೊಂಥರ ಪರೀಕ್ಷೆಯನ್ನು ಎದುರಿಸಿದಂತೆಯೇ ಸರಿ. ಯಾವ ಪರೀಕ್ಷೆ ಎಂದಿರಾ? ಅದೇ, 'ನೋಡೋಣ ಅದೆಷ್ಟು ಹೊತ್ತು ಈ ಬಿಸಿಲನ್ನು ತಡೆದುಕೊಳ್ಳಬಲ್ಲಿರಿ? ಹೊರಗೆ ಧೈರ್ಯವಾಗಿ ಸುತ್ತಾಡುವಿರಿ?' ಎಂಬಿತ್ಯಾದಿ ಟೆಸ್ಟ್‌ನ್ನು ಎದುರಿಸಿದಂತೆಯೇ ಸರಿ. ಯಾವ್ಯಾವುದೋ ಡೇರ್ ಚಾಲೆಂಜ್ ಗೊತ್ತಿರುವ ನಮಗೆ, ಬೇಸಿಗೆಯಲ್ಲಿ ಬಿಸಿಲಿಗೆ ಹೊರಗಡೆ ಕಾಲಿಡುವುದೇ 'the toughest dare challenge' ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

'ಬಿಸಿಲಲ್ಲಿ ಒಣಗಿಸು, ನೆರಳಲ್ಲಿ ಮಲಗಿಸು ರಾಘವೇಂದ್ರ; ಬಿಸಿಲಲ್ಲಿ ಕೆಂಪಾಗಿ, ನೆರಳಲ್ಲಿ ತಂಪಾಗಿ ನಗುನಗುತಾ ಇರುವೆ ರಾಘವೇಂದ್ರ' ಎಂಬ ಭಕ್ತಿಗೀತೆಯಲ್ಲಿ ಬರುವಂತೆ, ವರ್ಷದ ಬೇರೆ ಯಾವುದೇ ಕಾಲದಲ್ಲಿ ಕೇಳಿಕೊಳ್ಳುವಂತೆ ಬಹುಶಃ ಈಗ ಯಾರೂ ಕೋರಿಕೊಳ್ಳರೇನೋ ಎನಿಸುತ್ತದೆ. ಬಿಸಿಲಿನ ತೀವ್ರತೆ ಅದ್ಯಾವ ಮಟ್ಟಿಗೆ ಇದೆಯೆಂದರೆ, 'ಅದೇನೇ ಇರಲಿ, ಹೇಗಾದರೂ ಆಗಲಿ ನೆರಳಲ್ಲೇ ಮಲಗಿಸು ದೇವಾ' ಎಂಬ ಕೋರಿಕೆಯನ್ನು ಮುಂದೊಡ್ಡುವವರ ಸಂಖ್ಯೆಯೇ ಹೆಚ್ಚಿರುತ್ತದೆ. ಅದಾಗ್ಯೂ ಬಿಸಿಲಲ್ಲಿ ಒಣಗಿಸಿದರೆ, ಹಾಡಲ್ಲಿ ಬರುವಂತೆ ಜಸ್ಟ್ ಕೆಂಪಾಗದೆ ಕಣ್ಣು ಕೆಂಪಾಗಿಸಿಕೊಂಡು, ಕೋಪದಲ್ಲಿ ಕೆಕ್ಕರಿಸಿಕೊಂಡು ನೋಡುತ್ತಾರಷ್ಟೇ! ಹಾಗೆಯೇ ಬಿಸಿಲಿಗೇ ಬಾಸ್ ಆಗಿರುವ ಆ ಭಾಸ್ಕರನಲ್ಲಿ ಏರುತ್ತಿರುವ ಬಿಸಿಲ ಬಗ್ಗೆ 'ಬಸ್ ಕರೋ ಯಾರ್' ಎಂದು ಭಿನ್ನವಿಸಿಕೊಳ್ಳುವವರ ಸಂಖ್ಯೆಯೂ ಭಾರೀ ಪ್ರಮಾಣದಲ್ಲಿದೆ.

ಬೇಸಿಗೆಯ ಈ ಕಾಲದಲ್ಲಿ ಹೀಗೆ ಎಲ್ಲೆಲ್ಲೂ ಏರುತ್ತಿರುವ ಬಿಸಿಯ ಪರಿಣಾಮವನ್ನು ಗಮನಿಸುತ್ತಿದ್ದರೆ, ಈ ಭೂಮಿಯ ಮೇಲೆ ವಾಸಿಸುತ್ತಿರುವ ನಮ್ಮೆಲ್ಲರ ಬದುಕು 'ಬಾಣಲೆಯಿಂದ ಬೆಂಕಿಗೋ...? ಅಥವಾ ಬೆಂಕಿಯಿಂದ ಬಾಣಲೆಗೋ..?' ಎಂಬ ಅನುಮಾನವೊಂದು ಮೂಡದೇ ಇರಲಾರದು. ಇನ್ನು ಆಗಾಗ ಉಲ್ಲೇಖಿಸಲ್ಪಡುವ ನರಕದ ಕುದಿಯುವ ಎಣ್ಣೆ ಬಾಣಲೆಯ ಶಿಕ್ಷೆಯೂ ಈ ಸಂದರ್ಭದಲ್ಲಿ ನೆನಪಿಗೆ ಬರದೇ ಇರಲಾರದು. ಅಲ್ಲ ನಮ್ಮನ್ನೆಲ್ಲಾ ಸೃಷ್ಟಿಸಿ ಈ ಭೂಮಿಯ ಮೇಲೆ ಬಿಟ್ಟ ಆ ದೇವರೇನಾದರೂ, ಆ ನರಕದ ಶಿಕ್ಷೆಯ ಅನುಭವ ಸ್ವಲ್ಪ ಸ್ವಲ್ಪ ಈ ಭೂಮಿಯ ಮೇಲೆಯೇ ಆಗಲಿ ಎಂದೇನಾದರೂ, ಸೂರ್ಯನಿಗೇ ಸುಪಾರಿ ಕೊಟ್ಟು ಈ ಪರಿ ಬಿಸಿಯೇರುವಂತೆ ಮಾಡಿದ್ದಾನೆಯೋ ಎಂಬ ಶಂಕೆಯೊಂದು ಮೂಡುವುದರಲ್ಲಿ ಎರಡು ಮಾತಿಲ್ಲ. ಅಷ್ಟೇ ಅಲ್ಲದೇ ನಾವೂ ಬೇಸಿಗೆ, ಮಳೆಗಾಲ ಹಾಗೂ ಚಳಿಗಾಲಗಳೆಂಬ ವ್ಯತ್ಯಾಸವೇ ಇಲ್ಲದೆ ಪ್ರತಿನಿತ್ಯವೂ ಅದೆಷ್ಟೋ ಆಹಾರ ಪದಾರ್ಥಗಳಿಗೆ ಕೆಂಡ, ಕಾವಲಿ, ಓವೆನ್, ಕಾದ ಎಣ್ಣೆ ಬಾಣಲಿಯ ಮೂಲಕ ಭಾರೀ ಬಿಸಿ ಮುಟ್ಟಿಸುತ್ತಲೇ ಇರುತ್ತೇವಲ್ಲ, ಅದು ಹೇಗಿರುತ್ತದೆ ಎನ್ನುವುದರ ಒಂದಂಶವಾದರೂ ನಾವೆಲ್ಲರೂ ಅನುಭವಿಸಲೇಬೇಕು ಎಂಬುವುದು ಆ ಆಹಾರ ಪದಾರ್ಥಗಳ ಮನದ ಕೋರಿಕೆಯೇ ಇರಬೇಕು. ಅದನ್ನು ಈಡೇರಿಸಲೆಂದೇ ದೇವರು ಬೇಸಿಗೆಯನ್ನು ಈ ಮಟ್ಟಿಗೆ ಬಿಸಿಯಾಗಿಸಿದ್ದಾನೆ ಎಂದರೆ ಅಲ್ಲ ಎನ್ನಲಾಗದು!

ಇಂತಿಪ್ಪ ಬೇಸಿಗೆಯ ಬಗ್ಗೆ ಉರಿ ಉರಿದು ಬೀಳಲು, ಅದರ ವಿರುದ್ಧ ಮುರಿದುಕೊಂಡು ಬಿದ್ದು ಮಾತನಾಡಲು ನಾ ಮುಂದು, ತಾ ಮುಂದು ಎಂದು ಬರುವವರ ಸಂಖ್ಯೆ ಇರುವಂತೆಯೇ 'ಬಿಸಿಲೇ ಬಾ ಇನ್ನೂ ಬಾ.. ನೀ ಬಂದು ನಿನ್ನ ಉರಿ ಮುಖ ಇನ್ನೂ ತೋರು ಬಾ, ನಿಗಿ ನಿಗಿ ಕೆಂಡದ ಕಾವಾಗಿ ಬಾ.. ಸುಡು ಸುಡು ಅಗ್ನಿ ಜ್ವಾಲೆಯಾಗಿ ಬಾ' ಎಂದು ಗಾನಪೂರ್ಣವಾಗಿ ಹಾಡುವ ಮೂಲಕ ಕರೆದು ತಮ್ಮ ಬಿಸಿಯ ಅಗತ್ಯವನ್ನು ನೀಗಿಸುವಂತೆ ಪರಿ ಪರಿಯಾಗಿ ಭಿನ್ನವಿಸಿಕೊಳ್ಳುವವರೂ ಇದ್ದಾರೆ. ಅದ್ಯಾರಪ್ಪಾ ಆ ಅಸಾಮಿಗಳು ಎಂದು ನೀವು ಮುಖ ಸಿಂಡರಿಸದಿರಿ. ಅವರೇ ಹಪ್ಪಳ, ಸಂಡಿಗೆ ಇತ್ಯಾದಿಗಳನ್ನು ದಂಡಿಯಾಗಿ ತಯಾರಿಸಿ ಈ ಬಿಸಿಲಲ್ಲಿ ಒಣಗಿಸಿ, ಮಳೆ-ಚಳಿಗಾಲಕ್ಕೆ ಬಳಸಲು ಆಯಿತೆಂದು, ಈ ಬಿಸಿ ಬಿಸಿ ಬಿಸಿಲಲ್ಲೂ ನೆಮ್ಮದಿಯ ನಿಟ್ಟುಸಿರು ಹೊರಚೆಲ್ಲುವವರು. ಬಿಸಿಲನ್ನು ಬರಸೆಳೆದು ಆಲಂಗಿಸಿ, ಆಹ್ವಾನಿಸಿಕೊಳ್ಳುವವರು.

ಈ ಎಲ್ಲಾ ದೂರು-ದುಮ್ಮಾನಗಳ ಹೊರತಾಗಿಯೂ ಈ ಬೇಸಿಗೆ, ಈ ಬಿಸಿಲಿಗೆ ಅದರದೇ ಆದ ಹೊಳಪಿದೆ. ಅದು ಈ ಮೂಲಕ ನಮಗೆ ಕಲಿಸುವ ಪಾಠ ಸಣ್ಣದೇನಲ್ಲ. ಅದು ನಮ್ಮ ಕಾರ್ಯವೈಖರಿಯನ್ನು ನಿಯಂತ್ರಿಸುತ್ತದೆ, ನಮ್ಮನ್ನು ಕೊಂಚ ನಿಧಾನಗೊಳಿಸುತ್ತದೆ. ಅದೇ ಹೊತ್ತಲ್ಲಿ ಸಣ್ಣ ಸಣ್ಣ ಖುಷಿ, ಅನುಕೂಲಗಳು ಹಾಗೂ ಆರಾಮದಾಯಕ ಕ್ಷಣಗಳನ್ನು ಪ್ರಶಂಸಿಸುವುದನ್ನೂ ಅದು ಕಲಿಸುತ್ತದೆ. ಮರ, ನೆರಳು, ನೀರು, ತಂಪು ಅಷ್ಟೇ ಏಕೆ ಅದೆಷ್ಟೋ ದಿನಗಳಿಂದ ಛಾವಣಿಯಲ್ಲಿ ನೇತಾಡಿಕೊಂಡು ಅದರಷ್ಟಕ್ಕೆ ಅದು ತಿರುಗುತ್ತಾ ಕೆಲವೊಮ್ಮೆ ಸುಮ್ಮನೇ ಸ್ತಬ್ಧವಾಗಿ ಇರುತ್ತಿದ್ದ ಫ್ಯಾನ್‌ನ ನಿಜವಾದ ಬೆಲೆ ಅರ್ಥವಾಗಲೂ ಈ ಬೇಸಿಗೆಯೇ ಬರಬೇಕಲ್ಲವೇ? 'ಅಯ್ಯೋ ಇದೆಲ್ಲ ಇದ್ದಿದ್ದೇ, ಎಲ್ಲವೂ ನಮ್ಮ ನಿಯಂತ್ರಣದಲ್ಲೇ ಇದೆ' ಎಂಬ ಮನುಷ್ಯನ ಅಹಂ ಕೇಂದ್ರಿತ ಮನೋಧೋರಣೆಯಿಂದ ಬೇಸತ್ತು ಹೋಗಿರುವ ಈ ಸೃಷ್ಟಿಯೇ ಬೇಸಿಗೆಯ ರೂಪದಲ್ಲಿ ಬಿಸಿ ಮುಟ್ಟಿಸಲು ಪ್ರಯತ್ನಿಸುವ ಮೂಲಕ ಬೇರೆಯದೇ ಸಂದೇಶವನ್ನು ರವಾನಿಸುತ್ತಿದೆ. ಅದನ್ನು ಸಮರ್ಪಕವಾಗಿ ಅರ್ಥೈಸಿಕೊಂಡರೆ ನಮಗೂ ಒಳ್ಳೆಯದು, ನಿಮಗೂ ಒಳ್ಳೆಯದು ಎಂದು ಅದು ಸಾರಿ ಸಾರಿ ಹೇಳುತ್ತಿದೆ, ನಾವು ಕೇಳಿಸಿಕೊಳ್ಳಬೇಕಷ್ಟೇ!

ಓವರ್‌ಡೋಸ್: ಕೌನ್ ಬನೇಗಾ ಕರೋಡ್‌ಪತಿಯಲ್ಲಿ ಭಾಗವಹಿಸದೆಯೂ ನಾವು ಕುಳಿತುಕೊಳ್ಳುವ ಕುರ್ಚಿ 'ಹಾಟ್ ಸೀಟ್' ಆಗುತ್ತದೆ ಎಂದರೆ ಭಾರೀ ಬೇಸಿಗೆ ಕಾಲಿಟ್ಟಿದೆ ಎಂದೇ ಅರ್ಥ!

ಅಮೆರಿಕಕ್ಕೆ ಇರಾನ್‌ನ 14 ಅಂಶಗಳ ಹೊಸ ಪ್ರಸ್ತಾವ

ನಷ್ಟದ ಒಪ್ಪಂದ ಅಥವಾ ಕದನ: ಆಯ್ಕೆ ನಿಮ್ಮದು!

ಟೆಹ್ರಾನ್: ಒಂದು ನಷ್ಟದ ಒಪ್ಪಂದ ಮಾಡಿಕೊಳ್ಳುತ್ತೀರೋ ಅಥವಾ ಯುದ್ಧ ಎದುರಿಸುತ್ತೀರೋ, ಆಯ್ಕೆ ನಿಮ್ಮದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಇರಾನ್ ಸೇನೆ ಖಡಕ್ ಎಚ್ಚರಿಕೆ ನೀಡಿದೆ. ಯುದ್ಧ ಕೊನೆಗೊಳಿಸಲು 30 ದಿನಗಳ ಗಡುವಿನ ಸಹಿತ 14 ಅಂಶಗಳನ್ನು ಒಳಗೊಂಡ ಪ್ರಸ್ತಾವವನ್ನು ಇರಾನ್, ಟ್ರಂಪ್ ಮುಂದಿಟ್ಟಿದೆ.

ಹಾರ್ಮುಜ್ ಜಲಸಂಧಿ ಮತ್ತು ಇರಾನ್ ಬಂದರುಗಳ ಮೇಲಿನ ಅಮೆರಿಕ ಸೇನೆಯ ಜಲದಿಗ್ಬಂಧನ ಮತ್ತು ಜಾಗತಿಕ ತೈಲ ಮತ್ತು ಅನಿಲ ಸರಬರಾಜು ವ್ಯತ್ಯಯದಿಂದ ಮಧ್ಯಪ್ರಾಚ್ಯದಲ್ಲಿ ಪರಿಸ್ಥಿತಿ ಉದ್ವಿಗ್ನತೆ ಹೆಚ್ಚಾಗುತ್ತಿದೆ. ಈ ವೇಳೆ ಇರಾನ್ ಜತೆಗಿನ ಬಿಕ್ಕಟ್ಟು ಶಮನಗೊಳಿಸಲು ಟ್ರಂಪ್‌ಗೆ ಹೆಚ್ಚು ಆಯ್ಕೆಗಳಿಲ್ಲ, ಇದನ್ನು ಚೆನ್ನಾಗಿ ಅರಿತ ಇರಾನ್ ಸವಾಲೊಡ್ಡಿದೆ. ಅಮೆರಿಕದ ಪ್ರಸ್ತಾವವನ್ನು ಒಪ್ಪಿಕೊಳ್ಳದ ಇರಾನ್ ತನ್ನ ಹೊಸ ಷರತ್ತುಗಳನ್ನು ಮುಂದಿಟ್ಟಿದೆ.

ಇರಾನ್‌ನೊಂದಿಗೆ ಒಂದು ನಷ್ಟದಾಯಕ ಒಪ್ಪಂದವನ್ನು ಅಧ್ಯಕ್ಷ ಟ್ರಂಪ್ ಮಾಡಿಕೊಳ್ಳಲಿ ಅಥವಾ ಅಸಾಧ್ಯವಾದ ಸೇನಾ ಕಾರ್ಯಚರಣೆಯನ್ನು ಎದುರಿಸಲು ಸಿದ್ಧರಾಗಲಿ. ಅಮೆರಿಕಕ್ಕೆ ನಿರ್ಧಾರ ತೆಗೆದುಕೊಳ್ಳಲು ಅವಕಾಶ ಕಡಿಮೆಯಾಗಿದೆ. ಅಮೆರಿಕ ವಿಧಿಸಿದ ಜಲ ದಿಗ್ಬಂಧನ ತೆರವುಗೊಳಿಸಲು ಇರಾನ್ ಅಂತಿಮ ಗಡುವು(ದಿನಾಂಕ ಉಲ್ಲೇಖಿಸಿಲ್ಲ) ನೀಡಿದೆ. ಮಧ್ಯಪ್ರಾಚ್ಯ ಬಿಕ್ಕಟ್ಟಿನ ಬಗ್ಗೆ ಚೀನಾ, ರಷ್ಯಾ ಮತ್ತು ಯುರೋಪ್ ರಾಷ್ಟ್ರಗಳು ನಿಲುವು ಬದಲಾಗುತ್ತಿವೆ ಎಂದ ಇರಾನ್ ಸೇನೆ (ಐಆರ್‌ಜಿಸಿ), ಅಮೆರಿಕದ ಮೇಲೆ ಭಾರೀ ಅಂತಾರಾಷ್ಟ್ರೀಯ ಒತ್ತಡ ಇರುವುದನ್ನು ಸ್ಪಷ್ಟಪಡಿಸಿದೆ.

ಇರಾನ್‌ಗೆ ಟೋಲ್ ಪಾವತಿಸಿದರೆ ನಿರ್ಬಂಧ: ಹಾರ್ಮುಜ್‌ನಲ್ಲಿ ಸುರಕ್ಷಿತವಾಗಿ ಜಲಸಂಧಿ ದಾಟಲು ಇರಾನ್‌ಗೆ ಟೋಲ್ ಹಣ ಪಾವತಿಸುವ ಹಡಗುಗಳ ಮೇಲೆ ನಿರ್ಬಂಧ ಹೇರುವುದಾಗಿ ಅಮೆರಿಕ ಎಚ್ಚರಿಕೆ ನೀಡಿದೆ. ಕೆಲವು ಹಡಗುಗಳಿಂದ ಹಣ ವಸೂಲಿ ಮಾಡಿ ಸಂಚರಿಸಲು ಇರಾನ್ ಅನುಮತಿ ನೀಡಿತ್ತು.

ಇಬ್ಬರು ಇಸ್ರೇಲಿ ಗೂಢಚಾರಿಗಳಿಗೆ ಗಲ್ಲು: ಇಸ್ರೇಲ್ ಪರ ಗೂಢಚಾರ ನಡೆಸುತ್ತಿದ್ದ ಇಬ್ಬರು ಪುರುಷರನ್ನು ಇರಾನ್ ಶನಿವಾರ ಗಲ್ಲಿಗೇರಿಸಿದೆ. ರಹಸ್ಯ ಮಾಹಿತಿಗಳನ್ನು ಮೊಸಾದ್‌ಗೆ ಕಳುಹಿಸುತ್ತಿದ್ದರೆಂದು ಒಪ್ಪಿಕೊಂಡಿದ್ದಾರೆ.

ಅಣ್ವಸ್ತ್ರ ಯೋಜನೆ ಕೈಬಿಡಲು ಇರಾನ್‌ಗೆ ಜರ್ಮನಿ ಸಲಹೆ: ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರೊಂದಿಗೆ ದೂರವಾಣಿ ಕರೆ ಮೂಲಕ ಸಂಭಾಷಣೆ ನಡೆಸಿದ ಜರ್ಮನಿ ವಿದೇಶಾಂಗ ಸಚಿವ ಜೊಹಾನ್ ವೇಡ್‌ಪಾಲ್, ಹಾರ್ಮುಜ್ ಜಲಸಂಧಿಯನ್ನು ತೆರೆಯಲು ಹಾಗೂ ಅಣ್ವಸ್ತ್ರ ಯೋಜನೆ ಕೈಬಿಡಲು ಸಲಹೆ ನೀಡಿದ್ದಾರೆ. ಪಾಲುದಾರ ಅಮೆರಿಕ ಪರವಾಗಿ ಜರ್ಮನಿ ಮಾತುಕತೆ ನಡೆಸಿದೆ.

ಹಾನಿಯಾದ ವಿಶ್ವವಿದ್ಯಾಲಯ ಇನ್ನು ಮ್ಯೂಸಿಯಂ: ಅಮೆರಿಕ-ಇಸ್ರೇಲ್ ದಾಳಿಗೆ ಹಾನಿಗೊಳಗಾದ ಇಸ್ಫಹಾನ್ ತಾಂತ್ರಿಕ ವಿಶ್ವವಿದ್ಯಾಲಯವನ್ನು ಯುದ್ಧ ಮ್ಯೂಸಿಯಂ ಆಗಿ ಪರಿವರ್ತಿಸಲು ಇರಾನ್ ನಿರ್ಧರಿಸಿದೆ.



ಪ್ರಸ್ತಾವ ಪರಾಮರ್ಶೆ ಮಾಡುವೆ: ಟ್ರಂಪ್

ಯುದ್ಧ ಕೊನೆಗೊಳಿಸಲು ಇರಾನ್ ಮುಂದಿಟ್ಟಿರುವ ಹೊಸ ಪ್ರಸ್ತಾವವನ್ನು ತಕ್ಷಣಕ್ಕೆ ಒಪ್ಪದಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪರಿಶೀಲನೆ ನಡೆಸುವುದಾಗಿ ಹೇಳಿದ್ದು, ಕದನ ವಿರಾಮ ಒಪ್ಪಂದ ಆಗುವ ಕುರಿತು ಸಂಶಯ ವ್ಯಕ್ತಪಡಿಸಿದ್ದಾರೆ. ಫ್ಲೋರಿಡಾದಲ್ಲಿ ತಮ್ಮ ವಿಮಾನ ಏರುವ ಮುನ್ನ ಪತ್ರಕರ್ತರ ಜತೆ ಟ್ರಂಪ್ ಮಾತನಾಡಿದ್ದರು. ಇರಾನ್ ಹೊಸ ಪ್ರಸ್ತಾವದ ಕುರಿತು ಆದಷ್ಟು ಬೇಗನೆ ಪರಾಮರ್ಶೆ ನಡೆಸುತ್ತೇನೆ. ಕಳೆದ 47 ವರ್ಷಗಳಿಂದ ಇರಾನ್ ಮಾನವೀಯತೆಯ ಮೇಲೆ ನಡೆಸಿದ ಅಪರಾಧಗಳಿಗೆ ಇನ್ನೂ ದೊಡ್ಡ ಬೆಲೆ ಕಟ್ಟಿಲ್ಲ. ಹೀಗಾಗಿ ಇರಾನ್ ಪ್ರಸ್ತಾವ ಸ್ವೀಕರಿಸುವುದನ್ನು ಊಹಿಸಲೂ ಸಾಧ್ಯವಿಲ್ಲ ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ. ಪಾಕಿಸ್ತಾನ ಮುಖೇನ ಅಮೆರಿಕ ಕಳುಹಿಸಿದ 9 ಅಂಶಗಳನ್ನು ಒಳಗೊಂಡ ಕದನ ವಿರಾಮ ಒಪ್ಪಂದ ಪ್ರಸ್ತಾವಕ್ಕೆ ಉತ್ತರವಾಗಿ ಇರಾನ್ 14 ಷರತ್ತುಗಳ ಪ್ರಸ್ತಾವವನ್ನು ಕಳುಹಿಸಿದೆ. ಇದೇ ವಾರ, ಯುದ್ಧ ಅಂತ್ಯಗೊಳಿಸಲು ಇರಾನ್ ಕಳುಹಿಸಿದ್ದ ಪ್ರಸ್ತಾವವನ್ನು ಅಮೆರಿಕ ಅಧ್ಯಕ್ಷರು ತಿರಸ್ಕರಿಸಿದ್ದರು. ಹಾರ್ಮುಜ್ ತೆರೆಯಲು ಟ್ರಂಪ್ ಹೊಸ ಯೋಜನೆ ಹಾಕಿಕೊಂಡಿದ್ದಾರೆ.

ರನ್‌ವೇಗೆ ಜಿಗಿದ ಅಸ್ವಸ್ಥ ಪ್ರಯಾಣಿಕ

ಚೆನ್ನೈ: ಏರ್ ಅರೇಬಿಯಾ ವಿಮಾನ ಸಂಚರಿಸುತ್ತಿದ್ದ ವೇಳೆ ತುರ್ತು ನಿರ್ಗಮನ ದ್ವಾರದಿಂದ (ಎಮರ್ಜೆನ್ಸಿ ಎಕ್ಸಿಟ್) ಅಸ್ವಸ್ಥ ಪ್ರಯಾಣಿಕನೋರ್ವ ರನ್‌ವೇಗೆ ಜಿಗಿದ ಘಟನೆ ಚೆನ್ನೈ ವಿಮಾನ ನಿಲ್ದಾಣದಲ್ಲಿ ಭಾನುವಾರ ನಡೆದಿದೆ. ಶಾರ್ಜಾದಿಂದ ಚೆನ್ನೈಗೆ ಬಂದಿಳಿದ ವೇಳೆ ಅಸ್ವಸ್ಥನಾಗಿದ್ದ 34 ವರ್ಷದ ಶರೀಫ್ ಮೊಹಮ್ಮದ್ ನಜ್ಮುದ್ದೀನ್ ವಿಮಾನದ ತುರ್ತು ನಿರ್ಗಮನ ದ್ವಾರದಿಂದ ರನ್‌ವೇಗೆ ಜಿಗಿದಿದ್ದು, ತಕ್ಷಣವೇ ಪೈಲಟ್ ಮುನ್ನೆಚ್ಚರಿಕಾ ಕ್ರಮವಾಗಿ ವಿಮಾನವನ್ನು ನಿಲುಗಡೆಗೊಳಿಸಿದ್ದಾರೆ. ಅಲ್ಲದೆ, ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ತುರ್ತು ಅಪಾಯದ ಮಾಹಿತಿ ನೀಡಿದ್ದರು. ಪುದುಕ್ಕೋಟ್ಟೈ ನಿವಾಸಿ ಶರೀಫ್ ಮೊಹಮ್ಮದ್ ಪ್ರಯಾಣ ಸಂದರ್ಭದಲ್ಲಿ ಎರಡು ಬಾರಿ ವಿಮಾನದೊಳಗೆ ವಾಂತಿ ಮಾಡಿದ್ದ. ಅಸ್ವಸ್ಥನಾಗಿದ್ದರಿಂದ ರನ್‌ವೇಗೆ ಜಿಗಿದಿದ್ದಾನೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ ಈ ಘಟನೆಯಿಂದಾಗಿ ಹಲವು ವಿಮಾನಗಳ ಸಂಚಾರವು ತಡವಾಗಿದ್ದವು.

ಪಶ್ಚಿಮ ಬಂಗಾಳದ ಫಲಿತಾಂಶದ ದಿನ: ಬಿಜೆಪಿ ಐತಿಹಾಸಿಕ ಜಯ ಸಾಧಿಸಲಿದೆಯೇ?

ಮಮತಾಗೆ ಅಗ್ನಿಪರೀಕ್ಷೆ

ಪಶ್ಚಿಮ ಬಂಗಾಳದ 2026ರ ವಿಧಾನಸಭಾ ಚುನಾವಣೆಯ ಫಲಿತಾಂಶ ಸೋಮವಾರ ಪ್ರಕಟವಾಗಲಿದ್ದು, ಇಡೀ ರಾಜ್ಯ ಕಾತರದಿಂದ ಕಾಯುತ್ತಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮತ್ತೊಮ್ಮೆ ಅಧಿಕಾರ ಹಿಡಿಯುತ್ತಾರೆಯೇ? ಅಥವಾ ಬಿಜೆಪಿ ಐತಿಹಾಸಿಕ ಜಯ ಸಾಧಿಸಲಿದೆಯೇ? ಎಂಬುದು ಕೆಲವೇ ಗಂಟೆಗಳಲ್ಲಿ ನಿರ್ಧಾರವಾಗಲಿದೆ. ಎರಡು ಹಂತಗಳ ಮತದಾನ ಪ್ರಮಾಣ ಮತದಾರರ ಅಸಾಧಾರಣ ಆಸಕ್ತಿಯನ್ನು ಸೂಚಿಸುತ್ತದೆ. ಮೊದಲ ಹಂತದಲ್ಲಿ ಶೇ. 93 ರಷ್ಟು ಮತದಾನ ದಾಖಲಾಗಿದ್ದರೆ, ಎರಡನೇ ಹಂತದಲ್ಲಿ ಈ ಪ್ರಮಾಣ ಶೇ.90ರಷ್ಟಿದೆ. ಈ ಚುನಾವಣೆ, ಮಮತಾ ಬ್ಯಾನರ್ಜಿ ಅವರ ಇತ್ತೀಚಿನ ರಾಜಕೀಯ ಜೀವನದಲ್ಲಿ ಇದೊಂದು ಅತ್ಯಂತ ಕಠಿಣ ಹೋರಾಟ ಎಂದು ವಿಶ್ಲೇಷಿಸಲಾಗುತ್ತಿದೆ. ಬಂಗಾಳದ ಮತದಾರರು ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಮುಂದುವರಿಕೆಯನ್ನು ಬಯಸಿದ್ದಾರೋ ಇಲ್ಲವೋ ಎಂಬ ಕುತೂಹಲಕ್ಕೆ ತೆರೆ ಬೀಳಲಿದೆ.

ಬಿಜೆಪಿಯ ಐತಿಹಾಸಿಕ ಹಾದಿ

ಬಿಜೆಪಿ ಈ ಬಾರಿ ಬಂಗಾಳದಲ್ಲಿ ಸರ್ಕಾರ ರಚಿಸುವ ದೃಢ ವಿಶ್ವಾಸದೊಂದಿಗೆ ಅಖಾಡಕ್ಕಿಳಿದಿದೆ. ಉತ್ತರ ಬಂಗಾಳ ಮತ್ತು ಗಡಿ ಜಿಲ್ಲೆಗಳ ಹೊರತಾಗಿ, ಟಿಎಂಸಿ ಭದ್ರಕೋಟೆಯಾಗಿರುವ ದಕ್ಷಿಣ ಬಂಗಾಳ ಮತ್ತು ನಗರ ಪ್ರದೇಶಗಳಲ್ಲಿ ಬಿಜೆಪಿ ತನ್ನ ಪ್ರಭಾವ ವಿಸ್ತರಿಸಲು ಪ್ರಯತ್ನಿಸಿದೆ. ಭ್ರಷ್ಟಾಚಾರ, ಕಾನೂನು ಸುವ್ಯವಸ್ಥೆ ಮತ್ತು ಆಡಳಿತಾತ್ಮಕ ಬದಲಾವಣೆಯ ಭರವಸೆಗಳನ್ನು ನೀಡಿ ಬಿಜೆಪಿ ಮತದಾರರನ್ನು ಸೆಳೆಯಲು ಮುಂದಾಗಿದೆ.

ಮತದಾರರ ಪಟ್ಟಿ ಪರಿಷ್ಕರಣೆ

ಸುಮಾರು 90 ಲಕ್ಷ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಿರುವ 'ವಿಶೇಷ ತೀವ್ರ ಪರಿಷ್ಕರಣೆ' (ಎಸ್‌ಐಆರ್) ಈ ಚುನಾವಣೆಯ ಪ್ರಮುಖ ಕೇಂದ್ರವಾಗಿತ್ತು. ಮತದಾನ ಪ್ರಮಾಣ ದಾಖಲೆಯ ಹೆಚ್ಚಳಕ್ಕೆ ಎಸ್‌ಐಆರ್ ಕೂಡ ಕಾರಣ ಎನ್ನಲಾಗುತ್ತಿದೆ. ಆದರೆ, ಮೃತಪಟ್ಟ ಮತ್ತು ನಕಲಿ ಮತದಾರರನ್ನು ತೆಗೆಯಲಾಗಿದೆ ಎಂದು ಚುನಾವಣಾ ಆಯೋಗ ಹೇಳಿದ್ದರೆ, ಇದು ಒಂದು ವರ್ಗದ ಮತದಾರರನ್ನು ಗುರಿಯಾಗಿಸಿಕೊಂಡು ಮಾಡಿದ ತಂತ್ರ ಎಂದು ಟಿಎಂಸಿ ಆರೋಪಿಸಿದೆ. ಈ ವಿಷಯ ಚುನಾವಣಾ ಪ್ರಚಾರದಲ್ಲಿ ದೊಡ್ಡ ಮಟ್ಟದ ಚರ್ಚೆಗೆ ನಾಂದಿ ಹಾಡಿತ್ತು.

ಭವಾನಿಪುರದ ಪ್ರತಿಷ್ಠೆಯ ಹೋರಾಟ

ಇಡೀ ಚುನಾವಣೆಯ ಸಂಘರ್ಷಕ್ಕೆ ಭವಾನಿಪುರ ಕ್ಷೇತ್ರ ಕನ್ನಡಿಯಂತಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಸುವೇಂದು ಅಧಿಕಾರಿ ನಡುವಿನ ಈ ಹೈ-ಪ್ರೊಫೈಲ್ ಪೈಪೋಟಿ, ಕೇವಲ ಒಂದು ಸ್ಥಳೀಯ ಸ್ಪರ್ಧೆಯಲ್ಲ; ಇದು ರಾಜ್ಯದ ಒಟ್ಟಾರೆ ಜನಮತವನ್ನು ಅಳೆಯುವ ಮಾನದಂಡದಂತಿದೆ. ಇಲ್ಲಿ ಟಿಎಂಸಿ ಜಯಗಳಿಸಿದರೆ ಅದು ಮಮತಾ ಅವರ ನಾಯಕತ್ವಕ್ಕೆ ಸಿಕ್ಕ ದೊಡ್ಡ ಮನ್ನಣೆಯಾಗಲಿದೆ. ಒಂದು ವೇಳೆ ಸೋತರೆ, ಅದು ಬಂಗಾಳದ ರಾಜಕೀಯ ಇತಿಹಾಸದಲ್ಲೇ ಮಹತ್ವದ ಬದಲಾವಣೆಯ ಸಂಕೇತವಾಗಲಿದೆ. ಮೇ 4ರ ಫಲಿತಾಂಶಕ್ಕಾಗಿ ಇಡೀ ರಾಜ್ಯ ಕಾಯುತ್ತಿದ್ದು, ಸ್ಟ್ರಾಂಗ್ ರೂಮ್‌ಗಳ ಹೊರಗೆ ಬೀಡುಬಿಟ್ಟಿರುವ ಪಕ್ಷದ ಕಾರ್ಯಕರ್ತರ ಉಪಸ್ಥಿತಿ, ಈ ಖೇಲಾ(ಆಟ) ಎಷ್ಟು ಗಂಭೀರವಾಗಿದೆ ಎಂಬುದನ್ನು ತೋರಿಸುತ್ತಿದೆ.

ಇಂದು ಸಂಪೂರ್ಣ ಚಿತ್ರಣವಿಲ್ಲ

ಪಶ್ಚಿಮ ಬಂಗಾಳದ ಫಾಲ್ಟಾ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ಅಕ್ರಮಗಳು ಮತ್ತು ಇವಿಎಂ ಯಂತ್ರಗಳ ಮೇಲೆ ಕಪ್ಪು ಪಟ್ಟಿ ಹಚ್ಚಿದ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ಇಡೀ ಕ್ಷೇತ್ರದಲ್ಲಿ ಮರುಮತದಾನಕ್ಕೆ ಚುನಾವಣಾ ಆಯೋಗ ದಿನಾಂಕ ನಿಗದಿ ಮಾಡಿದೆ. ಹೀಗಾಗಿ ಮೇ 4 ರಂದು ಕೇವಲ 293 ಕ್ಷೇತ್ರಗಳ ಫಲಿತಾಂಶ ಬರಲಿದ್ದು, ಫಾಲ್ಟಾ ಕ್ಷೇತ್ರಕ್ಕೆ ಮೇ 21ರಂದು ಮರುಮತದಾನ ನಡೆದು, ಮೇ 24ರಂದು ಫಲಿತಾಂಶ ಪ್ರಕಟವಾಗಲಿದೆ.



ಅಧಿಕಾರಕ್ಕಾಗಿ ಹೈ-ವೋಲ್ಟೇಜ್ ಕದನ

ಈ ಬಾರಿಯ ಚುನಾವಣೆ ಆಡಳಿತಾರೂಢ ಟಿಎಂಸಿ ಮತ್ತು ಬಿಜೆಪಿ ನಡುವಿನ ನೇರ ಸಂಘರ್ಷವಾಗಿ ಮಾರ್ಪಟ್ಟಿದೆ. ಕಳೆದ ಒಂದು ದಶಕದಲ್ಲಿ ಬಂಗಾಳದ ರಾಜಕೀಯ ಚಿತ್ರಣ ಸಂಪೂರ್ಣ ಬದಲಾಗಿದೆ. ಒಂದು ಕಾಲದಲ್ಲಿ ರಾಜ್ಯದಲ್ಲಿ ಅಷ್ಟೇನೂ ಪ್ರಭಾವ ಹೊಂದಿರದ ಬಿಜೆಪಿ, ಈಗ ಎಡರಂಗ ಮತ್ತು ಕಾಂಗ್ರೆಸ್ ಅನ್ನು ಹಿಂದಿಕ್ಕಿ ಪ್ರಮುಖ ವಿರೋಧ ಪಕ್ಷವಾಗಿ ಹೊರಹೊಮ್ಮಿದೆ. ಈ ಚುನಾವಣೆಯ ಫಲಿತಾಂಶ ಕೇವಲ ರಾಜ್ಯಕ್ಕೆ ಮಾತ್ರವಲ್ಲದೆ, ರಾಷ್ಟ್ರ ರಾಜಕೀಯದ ಮೇಲೂ ದೊಡ್ಡ ಪ್ರಭಾವ ಬೀರಲಿದೆ.

ಮಮತಾಗೆ ಒತ್ತಡ

ಮಮತಾ ಬ್ಯಾನರ್ಜಿ ಅವರ 15 ವರ್ಷಗಳ ಆಡಳಿತದ ಮೇಲಿನ ಜನಾಭಿಪ್ರಾಯವಾಗಿ ಈ ಫಲಿತಾಂಶವನ್ನು ನೋಡಲಾಗುತ್ತಿದೆ. ಜನಸಾಮಾನ್ಯರೊಂದಿಗೆ ಅವರು ಹೊಂದಿರುವ ನಿಕಟ ಸಂಬಂಧ ಅವರ ಬಲವಾಗಿದ್ದರೆ, ಆಡಳಿತ ವಿರೋಧಿ ಅಲೆ ಮತ್ತು ಭ್ರಷ್ಟಾಚಾರದ ಆರೋಪಗಳು ಸವಾಲಾಗಿವೆ. ಇಲ್ಲಿನ ಗೆಲುವು ಮಮತಾ ಅವರಿಗೆ ದೇಶದ ಪ್ರಭಾವಿ ಪ್ರಾದೇಶಿಕ ನಾಯಕಿಯಾಗಿ ಸ್ಥಾನ ನೀಡಬಹುದು, ಆದರೆ ಹಿನ್ನಡೆಯಾದರೆ ಅವರ ರಾಷ್ಟ್ರೀಯ ವರ್ಚಸ್ಸಿಗೆ ಹೊಡೆತ ಬೀಳಲಿದೆ.

ಮೂರನೇ ಶಕ್ತಿಯ ಕುಸಿತ

ಒಂದು ಕಾಲದಲ್ಲಿ ಬಂಗಾಳವನ್ನು ಆಳಿದ್ದ ಎಡರಂಗ ಮತ್ತು ಕಾಂಗ್ರೆಸ್ ಈ ಬಾರಿ ಸಂಪೂರ್ಣವಾಗಿ ಅಂಚಿಗೆ ತಳ್ಳಲ್ಪಟ್ಟಿವೆ. ಇದು ಟಿಎಂಸಿ ವಿರೋಧಿ ಮತಗಳು ಬಿಜೆಪಿಯತ್ತ ಕ್ರೋಢೀಕರಣಗೊಳ್ಳಲು ಕಾರಣವಾಗಿದೆ. ಈ ಬದಲಾವಣೆ, ರಾಜ್ಯದ ಚುನಾವಣಾ ಲೆಕ್ಕಾಚಾರಗಳನ್ನು ಸಂಪೂರ್ಣವಾಗಿ ಬದಲಿಸಿದೆ.

ದೀದಿಗೆ ಮುಖಭಂಗ

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಮತ ಎಣಿಕೆಗೆ ಕೇಂದ್ರ ಸರ್ಕಾರ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳ(ಪಿಎಸ್‌ಯು) ಸಿಬ್ಬಂದಿ ನಿಯೋಜಿಸುವ ಚುನಾವಣಾ ಆಯೋಗದ ನಿರ್ಧಾರಕ್ಕೆ ಸುಪ್ರೀಂ ಕೋರ್ಟ್ ಹಸ್ತಕ್ಷೇಪ ಮಾಡಲು ನಿರಾಕರಿಸಿದ್ದರಿಂದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮುಖಭಂಗ ಅನುಭವಿಸಿದ್ದರು.

ಕಲ್ಯಾಣ ಯೋಜನೆಗಳು, ಆಡಳಿತ ವಿರೋಧಿ ಅಲೆ

ತೃಣಮೂಲ ಕಾಂಗ್ರೆಸ್‌ನ(ಟಿಎಂಸಿ) ರಕ್ಷಣಾತ್ಮಕ ಹೋರಾಟದ ಕೇಂದ್ರಬಿಂದುವಾಗಿರುವುದು ಅಲ್ಲಿನ ಬಲಿಷ್ಠ ಕಲ್ಯಾಣ ಯೋಜನೆಗಳು. ಮಹಿಳೆಯರಿಗೆ ನೇರ ನಗದು ವರ್ಗಾವಣೆ ಮಾಡುವ 'ಲಕ್ಷ್ಮೀರ್ ಭಂಡಾರ್'ನಂತಹ ಕಾರ್ಯಕ್ರಮಗಳು ಮಮತಾ ಬ್ಯಾನರ್ಜಿ ಅವರಿಗೆ ಬೆಂಬಲ ಒದಗಿಸಿವೆ. ರಾಜ್ಯದಲ್ಲಿ ಮಹಿಳಾ ಮತದಾರರ ಸಂಖ್ಯೆ 3.44 ಕೋಟಿಗೆ ತಲುಪಿದ್ದು, ಫಲಿತಾಂಶ ನಿರ್ಧರಿಸುವಲ್ಲಿ ಅವರ ಪಾತ್ರವೇ ಅತ್ಯಂತ ಪ್ರಮುಖವಾಗಿದೆ. ಇನ್ನೊಂದೆಡೆ, ಬಿಜೆಪಿ ಉತ್ತರ ಬಂಗಾಳದಲ್ಲಿ ತನ್ನ ಹಿಡಿತವನ್ನು ಬಲಪಡಿಸಿಕೊಳ್ಳುವ ಜತೆಗೆ ದಕ್ಷಿಣದ ಟಿಎಂಸಿ ಭದ್ರಕೋಟೆಯಾದ ಪ್ರೆಸಿಡೆನ್ಸಿ ವಿಭಾಗವನ್ನು ಭೇದಿಸುವುದು ಕೇಸರಿ ಪಡೆಯ ತಂತ್ರವಾಗಿತ್ತು.

ಕಿರುಸುದ್ದಿ

ಖಲಿಸ್ತಾನಿ ಧ್ವಜ ಪ್ರದರ್ಶನ: ಗಾಯನ ನಿಲ್ಲಿಸಿದ ದಿಲ್ಜೀತ್

ಕ್ಯಾಲ್ಗರಿ: ಪ್ರಸಿದ್ಧ ಪಂಜಾಬಿ ಗಾಯಕ ದಿಲ್ಜೀತ್ ದೋಸಾಂಜ್ ಅವರ ಔರಾ ಟೂರ್ ಅಂಗವಾಗಿ ಕೆನಡಾದ ಕ್ಯಾಲ್ಗರಿಯಲ್ಲಿ ಸಂಗೀತ ಕಾರ್ಯಕ್ರಮ ನಡೆಯುತ್ತಿದ್ದ ವೇಳೆ ಕೆಲವು ಪ್ರೇಕ್ಷಕರು ಖಲಿಸ್ತಾನಿ ಧ್ವಜ ತೋರಿಸಿ ವಿರೋಧಿಸಿದ್ದು, ದಿಲ್ಜೀತ್ ತಕ್ಷಣವೇ ತಮ್ಮ ಕಾರ್ಯಕ್ರಮವನ್ನು ಸ್ಥಗಿತಗೊಳಿಸಿದ್ದಾರೆ. ಸಿಖ್ ಸಮುದಾಯದ ಟೀಕೆಗೆ ಪ್ರತಿಕ್ರಿಯಿಸಿದ ದಿಲ್ಜೀತ್, ಎಲ್ಲೇ ಹೋದರೂ ಯಾವುದೇ ವೇದಿಕೆ ಸಿಕ್ಕರೂ ಪಂಜಾಬ್ ಬಗ್ಗೆ ಮಾತನಾಡುತ್ತೇನೆ. ಇನ್ನು ಎಷ್ಟು (ಖಲಿಸ್ತಾನಿ) ಧ್ವಜ ಪ್ರದರ್ಶಿಸುವಿರೋ ಪ್ರದರ್ಶಿಸಿ ಎಂದು ಹೇಳಿದ್ದಾರೆ.

551 ನಗರಗಳು, 14 ವಿದೇಶಿ ಕೇಂದ್ರಗಳಲ್ಲಿ ನೀಟ್ ಪರೀಕ್ಷೆ

ಹೊಸದಿಲ್ಲಿ: ದೇಶದಾದ್ಯಂತ 551 ನಗರಗಳಲ್ಲಿ ಹಾಗೂ 14 ವಿದೇಶಿ ನಗರಗಳಲ್ಲಿ ಭಾನುವಾರ ನೀಟ್-ಯುಜಿ 2026 ಪರೀಕ್ಷೆ ಸುಸೂತ್ರವಾಗಿ ನಡೆಯಿತು. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಪರೀಕ್ಷೆಯ ಸಿದ್ಧತೆಗಳನ್ನು ಪರಿಶೀಲಿಸಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮುಖ್ಯ ಕಚೇರಿಗೆ ಭೇಟಿ ನೀಡಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಸ್ರೇಲ್‌ನಿಂದ ಅಮೆರಿಕದ ಫೈಟರ್ ಜೆಟ್‌ಗಳ ಖರೀದಿ

ಜೆರುಸಲೇಂ: ಇಸ್ರೇಲ್ ರಕ್ಷಣಾ ಸಚಿವಾಲಯ ತನ್ನ ವಾಯುಪಡೆಯನ್ನು ಬಲಪಡಿಸಲು ಅಮೆರಿಕದ ಲಾಕ್ಹೀಡ್ ಮಾರ್ಟಿನ್ ಮತ್ತು ಬೋಯಿಂಗ್ ಕಂಪನಿಗಳಿಂದ ಸುಧಾರಿತ ಎಫ್-35 ಮತ್ತು ಎಫ್-15ಐಎ ಯುದ್ಧ ವಿಮಾನಗಳನ್ನು ಖರೀದಿಸುವ ಒಪ್ಪಂದವನ್ನು ಅಂತಿಮಗೊಳಿಸಿದೆ. ಈ ಒಪ್ಪಂದದ ಪ್ರಕಾರ, ಲಾಕ್ಹೀಡ್ ಮಾರ್ಟಿನ್‌ನಿಂದ 3 ಬಿಲಿಯನ್ ಡಾಲರ್ ಮೌಲ್ಯದ 25 ಎಫ್-35 ಸ್ಟೆಲ್ತ್ ಫೈಟರ್‌ಗಳನ್ನು ಖರೀದಿಸಲಾಗುತ್ತದೆ. ಇದರ ಜೊತೆಗೆ, 25 ಎಫ್-15ಐಎ ವಿಮಾನಗಳಿಗಾಗಿ ಬೋಯಿಂಗ್ ಸಂಸ್ಥೆಯೊಂದಿಗೆ 5.2 ಬಿಲಿಯನ್ ಡಾಲರ್ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಭವಿಷ್ಯದಲ್ಲಿ ಇನ್ನೂ 25 ಎಫ್-15 ವಿಮಾನಗಳನ್ನು ಖರೀದಿಸುವ ಅವಕಾಶವೂ ಇರಲಿದೆ. ಅಮೆರಿಕ ಇಸ್ರೇಲ್‌ಗೆ ನೀಡುವ ಮಿಲಿಟರಿ ನೆರವಿನ ಹಣವನ್ನು ಇದಕ್ಕಾಗಿ ಬಳಸಲಾಗುತ್ತಿದೆ. ಎಫ್-15ಐಎ ವಿಮಾನಗಳ ವಿತರಣೆ 2031ರಿಂದ ಪ್ರಾರಂಭವಾಗಲಿದ್ದು, ಪ್ರತಿ ವರ್ಷ ನಾಲ್ಕರಿಂದ ಆರು ವಿಮಾನಗಳು ಬರಲಿವೆ. ಎಫ್-35 ವಿಮಾನಗಳ ವಿತರಣೆ 2028ರಿಂದ ಆರಂಭವಾಗಲಿದ್ದು, ವರ್ಷಕ್ಕೆ ಮೂರರಿಂದ ಐದು ವಿಮಾನಗಳು ಪೂರೈಕೆಯಾಗಲಿವೆ. ಈ ವಿಮಾನಗಳಲ್ಲಿ ಇಸ್ರೇಲ್ ಅಭಿವೃದ್ಧಿಪಡಿಸಿದ ಶಸ್ತ್ರಾಸ್ತ್ರ ವ್ಯವಸ್ಥೆಗಳನ್ನು ಅಳವಡಿಸಲಾಗುತ್ತದೆ. ರಕ್ಷಣಾ ಸಚಿವಾಲಯದ ಮಹಾನಿರ್ದೇಶಕ ಇಯಾಲ್ ಜಮೀರ್ ಈ ಖರೀದಿ ದೀರ್ಘಕಾಲದ ದೃಷ್ಟಿಕೋನವನ್ನು ಒಳಗೊಂಡಿದೆ. ಪ್ರಾದೇಶಿಕ ಉದ್ವಿಗ್ನತೆ ಮತ್ತು ನಡೆಯುತ್ತಿರುವ ಮಿಲಿಟರಿ ಕಾರ್ಯಾಚರಣೆಗಳ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಹಳೆಯ ವಿಮಾನಗಳನ್ನು ಹಂತಹಂತವಾಗಿ ಬದಲಿಸಿ ವಾಯುಪಡೆಯನ್ನು ಆಧುನೀಕರಿಸುವುದು ಇದರ ಮುಖ್ಯ ಉದ್ದೇಶ ಎಂದಿದ್ದಾರೆ.

ದಿಲ್ಲಿ ವಸತಿ ಕಟ್ಟಡದಲ್ಲಿ ಬೆಂಕಿ: 9 ಜನರ ಸಾವು

ಹೊಸದಿಲ್ಲಿ: ಪೂರ್ವ ದಿಲ್ಲಿಯ ವಿವೇಕ್ ವಿಹಾರ್ ಪ್ರದೇಶದ ನಾಲ್ಕು ಅಂತಸ್ತಿನ ವಸತಿ ಸಮುಚ್ಚಯವೊಂದರಲ್ಲಿ ಭಾನುವಾರ ಮುಂಜಾನೆ ಸಂಭವಿಸಿದ ಅಗ್ನಿ ಅವಘಡದಲ್ಲಿ ಒಂದೂವರೆ ವರ್ಷದ ಮಗು ಸೇರಿದಂತೆ ಒಂಬತ್ತು ಜನರು ಮೃತಪಟ್ಟಿದ್ದಾರೆ. ಇತರೆ ಇಬ್ಬರು ಗಾಯಗೊಂಡಿದ್ದಾರೆ.

ಮುಂಜಾನೆ ಸುಮಾರು 4 ಗಂಟೆಗೆ ಕಟ್ಟಡದ ಎರಡನೇ ಅಂತಸ್ತಿನಲ್ಲಿ ಕಾಣಿಸಿಕೊಂಡ ಬೆಂಕಿ ನಂತರ ಮೂರು ಮತ್ತು ನಾಲ್ಕನೇ ಅಂತಸ್ತಿಗೆ ವ್ಯಾಪಿಸಿತು. 14 ಅಗ್ನಿಶಾಮಕ ವಾಹನಗಳು ಸತತ ಎರಡು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಳಗ್ಗೆ 6 ಗಂಟೆಗೆ ಬೆಂಕಿಯನ್ನು ಹತೋಟಿಗೆ ತಂದವು. ರಕ್ಷಣಾ ತಂಡ, ಕಟ್ಟಡದಲ್ಲಿದ್ದ ಹನ್ನೆರಡಕ್ಕೂ ಹೆಚ್ಚು ಜನರನ್ನು ರಕ್ಷಿಸಿದ್ದು, ಗಾಯಾಳುಗಳನ್ನು ಗುರು ತೇಗ್ ಬಹದ್ದೂರ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತರನ್ನು ಅರವಿಂದ್ ಜೈನ್ ಕುಟುಂಬದ ಐವರು, ನಿತಿನ್ ಜೈನ್ ಕುಟುಂಬದ ಮೂವರು ಮತ್ತು ಶಿಖಾ ಜೈನ್ ಎಂದು ಗುರುತಿಸಲಾಗಿದೆ. ಬೆಂಕಿ ನಂದಿಸಿದ ನಂತರ ಶೋಧ ಕಾರ್ಯ ನಡೆಸಲಾಯಿತೆಂದು ಡಿಸಿಪಿ ರಾಜೇಂದ್ರ ಪ್ರಸಾದ್ ಮೀನಾ ತಿಳಿಸಿದ್ದಾರೆ. ಬೆಂಕಿ ಅವಘಡಕ್ಕೆ ನಿಖರ ಕಾರಣ ತಿಳಿದುಬಂದಿಲ್ಲವಾದರೂ, ಎಸಿ ಸ್ಫೋಟದಿಂದಾಗಿ ಈ ಘಟನೆ ಸಂಭವಿಸಿರಬಹುದು ಎಂದು ಪ್ರತ್ಯಕ್ಷದರ್ಶಿಗಳು ಶಂಕಿಸಿದ್ದಾರೆ. ದಿಲ್ಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಈ ಘಟನೆಗೆ ತೀವ್ರ ಸಂತಾಪ ಸೂಚಿಸಿದ್ದು, ಸಂತ್ರಸ್ತ ಕುಟುಂಬಗಳಿಗೆ ಅಗತ್ಯ ನೆರವು ನೀಡಲು ಸೂಚಿಸಿದ್ದಾರೆ.

ಹಾರ್ಮುಜ್ ದಾಟಿದ ಭಾರತದ ಅನಿಲ ನೌಕೆ

ಹೊಸದಿಲ್ಲಿ: ಭಾರತಕ್ಕೆ ಎಲ್‌ಪಿಜಿ ಸಾಗಿಸುತ್ತಿದ್ದ ಟ್ಯಾಂಕರ್ ಹಾರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿದ್ದು, ಈಗ ದೇಶದತ್ತ ಪ್ರಯಾಣ ಮುಂದುವರಿಸಿದೆ. ಮಾರ್ಷಲ್ ದ್ವೀಪಗಳ ಧ್ವಜ ಹೊತ್ತಿರುವ ಎಂಟಿ ಸರ್ವಶಕ್ತಿ ಹೆಸರಿನ ಈ ಗ್ಯಾಸ್ ಟ್ಯಾಂಕರ್‌ನಲ್ಲಿ 46,313 ಟನ್ ಎಲ್‌ಪಿಜಿ ಭರ್ತಿಯಾಗಿದ್ದು, 20 ಸಿಬ್ಬಂದಿ ಇದ್ದಾರೆ. ಇವರಲ್ಲಿ 18 ಮಂದಿ ಭಾರತೀಯರು ಸೇರಿದ್ದಾರೆ. ಮೇ 2ರಂದು ಪ್ರಮುಖ ಸಾಗರ ದ್ವಾರವಾದ ಹೋರ್ಮುಜ್ ಜಲಸಂಧಿ ದಾಟಿದ ಈ ಹಡಗು ಮೇ 13ರೊಳಗೆ ವಿಶಾಖಪಟ್ಟಣಂ ಬಂದರಿಗೆ ತಲುಪುವ ನಿರೀಕ್ಷೆಯಿದೆ. ಈ ಸರಕು ದೇಶದ ಅರ್ಧ ದಿನದ ಅವಶ್ಯಕತೆಯನ್ನು ಪೂರೈಸುವಷ್ಟು ಇದ್ದು, ಎರಡು ತಿಂಗಳಿಂದ ಮುಂದುವರಿದಿರುವ ಪಶ್ಚಿಮ ಏಷ್ಯಾ ಸಂಘರ್ಷದ ಪರಿಣಾಮ ಉಂಟಾದ ಸರಬರಾಜು ಅಡಚಣೆಗಳನ್ನು ಭಾಗಶಃ ನಿವಾರಿಸಲು ಸಹಕಾರಿಯಾಗಲಿದೆ. ಹಡಗು ಟ್ರ್ಯಾಕಿಂಗ್ ಮಾಹಿತಿ ಪ್ರಕಾರ, ಭಾನುವಾರ ಸಂಜೆ ಈ ಟ್ಯಾಂಕರ್ ಒಮಾನ್ ಕೊಲ್ಲಿಯಲ್ಲಿ ಸಂಚರಿಸುತ್ತಿತ್ತು. ಪರ್ಷಿಯನ್ ಗಲ್ಫ್ ಮತ್ತು ಭಾರತೀಯ ಬಂದರುಗಳ ನಡುವೆ ಹಿಂದಿನಿಂದಲೂ ಸಂಚಾರ ನಡೆಸುತ್ತಿರುವ ಈ ಭಾರೀ ಗ್ಯಾಸ್ ಟ್ಯಾಂಕರ್ ಅನ್ನು ಸರ್ಕಾರಿ ಸಂಸ್ಥೆ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಚಾರ್ಟರ್ ಮಾಡಿಕೊಂಡಿದೆ. ಇರಾನ್‌ಗೆ ಸಂಬಂಧಿಸಿದ ಹಡಗುಗಳ ಮೇಲೆ ಅಮೆರಿಕದ ನಿರ್ಬಂಧ ಆರಂಭವಾದ ನಂತರ ಯುದ್ಧ ವಲಯವನ್ನು ದಾಟಿದ ಭಾರತಕ್ಕೆ ಸಂಬಂಧಿಸಿದ ಮೊದಲ ಟ್ಯಾಂಕರ್ ಇದಾಗಿದೆ. ಈ ನಡುವೆ ಹೋರ್ಮುಜ್ ಜಲಸಂಧಿಯ ಪಶ್ಚಿಮ ಭಾಗದಲ್ಲಿ ಇನ್ನೂ 14 ಭಾರತೀಯ ಹಡಗುಗಳು ಸಿಲುಕಿಕೊಂಡಿವೆ.

ಪಾಕ್‌ನ ಫೆಡರಲ್ ಸಿವಿಲ್ ಸರ್ವಿಸ್‌ಗೆ ಹಿಂದುಗಳ ಆಯ್ಕೆ

ಇಸ್ಲಾಮಾಬಾದ್: ತೀರಾ ಅಚ್ಚರಿಯ ಬೆಳವಣಿಗೆಯಲ್ಲಿ, ಪಾಕಿಸ್ತಾನದ ಅಲ್ಪಸಂಖ್ಯಾತ ಹಿಂದು ಸಮುದಾಯದ ಇಬ್ಬರು ಯುವಕರು, ಪಾಕಿಸ್ತಾನದ ಫೆಡರಲ್ ಸಿವಿಲ್ ಸರ್ವಿಸ್‌ಗೆ ಆಯ್ಕೆಯಾಗಿದ್ದಾರೆ. ಪಾಕ್‌ನ ಫೆಡರಲ್ ಪಬ್ಲಿಕ್ ಸರ್ವಿಸ್ ಕಮಿಷನ್(ಎಫ್‌ಪಿಎಸ್‌ಸಿ) ಪ್ರಕಟಿಸಿರುವ ಫಲಿತಾಂಶ ಪಟ್ಟಿಯಲ್ಲಿ ಸಿಂಧ್ ಪ್ರಾಂತ್ಯದ ಜೀವನ್ ರೆಬರಿ ಮತ್ತು ಖೇಮ್‌ಚಂದ್ ಜಂದೋರಾ ಹೆಸರಿವೆ. ಸೆಂಟ್ರಲ್ ಸುಪೀರಿಯರ್ ಸರ್ವಿಸಸ್‌ಗೆ(ಸಿಎಸ್‌ಎಸ್) ಸೇರ್ಪಡೆಯಾಗಲಿರುವ 170 ಅಭ್ಯರ್ಥಿಗಳ ಪೈಕಿ ಈ ಹಿಂದು ಯುವಕರು ಒಳಗೊಂಡಿದ್ದಾರೆ. ಈ ಸುದ್ದಿ ವಿಶೇಷತೆ ಪಡೆದಿರುವುದು ಯಾಕೆಂದರೆ, ಪಾಕ್‌ನ ಸರ್ಕಾರಿ ಹುದ್ದೆಗಳಿಗೆ ಹಿಂದುಗಳ ನೇಮಕ ಐತಿಹಾಸಿಕವಾಗಿ ತೀರಾ ಕಡಿಮೆ. ಪಾಕ್‌ನಲ್ಲಿನ ಹಿಂದುಗಳ ಒಟ್ಟು ಜನಸಂಖ್ಯೆ 3.8 ಮಿಲಿಯನ್. ಪಾಕ್‌ನ ಬೃಹತ್ ಅಲ್ಪಸಂಖ್ಯಾತ ಸಮುದಾಯವಾಗಿದ್ದಾರೆ ಹಿಂದುಗಳು. ಬಹುತೇಕ ಹಿಂದುಗಳು ವಾಸವಿರೋದು ಸಿಂಧ್ ಪ್ರಾಂತ್ಯದಲ್ಲಿ ಎಂದು 2023ರ ಜನಸಂಖ್ಯಾ ಗಣತಿ ತಿಳಿಸಿದೆ. ಪಾಕ್‌ನ ಫೆಡರಲ್ ಸರ್ವಿಸ್ ಕಮಿಷನ್ ಲಿಖಿತ ಪರೀಕ್ಷೆಗೆ ದೇಶಾದ್ಯಂತದ 12,792 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು.

ನೀತಿ ಆಯೋಗದ ಪೂರ್ಣಾವಧಿ ಸದಸ್ಯರನ್ನಾಗಿ ನೇಮಿಸಿದ ಪ್ರಧಾನಿ

ರಾಜ್ಯದ ಬಾಲಸುಬ್ರಹ್ಮಣ್ಯಂಗೆ ಉನ್ನತ ಹುದ್ದೆ

ಹೊಸದಿಲ್ಲಿ: ಕರ್ನಾಟಕದ ಡಾ.ಆರ್.ಬಾಲಸುಬ್ರಹ್ಮಣ್ಯಂ ಮತ್ತು ಡಾ. ಜೋರಂ ಅನಿಯಾ ಅವರನ್ನು ನೀತಿ ಆಯೋಗದ ಪೂರ್ಣಾವಧಿ ಸದಸ್ಯರನ್ನಾಗಿ ನೇಮಕ ಮಾಡಲು ಪ್ರಧಾನಿ ನರೇಂದ್ರ ಮೋದಿ ಅನುಮೋದನೆ ನೀಡಿದ್ದಾರೆ.

ಈ ಹೊಸ ನೇಮಕಾತಿಗಳೊಂದಿಗೆ ಸರ್ಕಾರದ ಥಿಂಕ್ ಟ್ಯಾಂಕ್ ನೀತಿ ಆಯೋಗದ ಪೂರ್ಣಾವಧಿ ಸದಸ್ಯರ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ. ಏಪ್ರಿಲ್ 24, 2026ರಂದು ಹೊರಡಿಸಲಾದ ಸಂಪುಟ ಸಚಿವಾಲಯದ ಅಧಿಸೂಚನೆಯ ಮುಂದುವರಿದ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಅಶೋಕ್ ಕುಮಾರ್ ಲಹಿರಿ ಆಯೋಗದ ಉಪಾಧ್ಯಕ್ಷರಾಗಿದ್ದು, ಕೆ.ವಿ. ರಾಜು, ಎಂ.ಶ್ರೀನಿವಾಸ್, ಅಭಯ್ ಕರಂದಿಕರ್, ಗೋವರ್ಧನ್ ದಾಸ್ ಮತ್ತು ರಾಜೀವ್ ಗೌಬಾ ಇತರ ಪೂರ್ಣಾವಧಿ ಸದಸ್ಯರಾಗಿದ್ದಾರೆ.



ಶಿಕ್ಷಣ ತಜ್ಞೆ ಡಾ.ಜೋರಂ ಅನಿಯಾ: ಅರುಣಾಚಲ ಪ್ರದೇಶದ ಡಾ. ಅನಿಯಾ, ಸಂಶೋಧನೆ ಮತ್ತು ಸಾರ್ವಜನಿಕ ನೀತಿ ನಿರೂಪಣೆಯಲ್ಲಿ 18 ವರ್ಷಗಳ ಅನುಭವ ಹೊಂದಿದ್ದಾರೆ. ಇವರು ಅರುಣಾಚಲ ಪ್ರದೇಶದ ಖಾಸಗಿ ಶಿಕ್ಷಣ ನಿಯಂತ್ರಣ ಆಯೋಗದ ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ನ್ಯಿಶಿ ಸಮುದಾಯದಿಂದ ಪಿಎಚ್‌ಡಿ ಪದವಿ ಪಡೆದ ಮೊದಲ ಮಹಿಳೆ ಎಂಬ ಹೆಗ್ಗಳಿಕೆ ಇವರದ್ದಾಗಿದ್ದು, ದೇಶೀಯ ಜ್ಞಾನ ಪದ್ಧತಿಗಳ ಕುರಿತು ಹಲವು ಪುಸ್ತಕಗಳನ್ನು ಬರೆದಿದ್ದಾರೆ.

ವಿದ್ವಾಂಸ, ಲೇಖಕ, ವೈದ್ಯ ಆರ್. ಬಾಲಸುಬ್ರಹ್ಮಣ್ಯಂ

ಡಾ.ಬಾಲಸುಬ್ರಹ್ಮಣ್ಯಂ, ವೈದ್ಯರು, ಲೇಖಕರು ಮತ್ತು ಅಭಿವೃದ್ಧಿ ಕಾರ್ಯಕರ್ತರು. ಇವರು ಮೈಸೂರನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಹಲವು ಸಾಮಾಜಿಕ ಚಟುವಟಿಕೆ ನಡೆಸುತ್ತಿದ್ದಾರೆ. ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ (ಎಸ್‌ವಿವೈಎಂ) ಮತ್ತು ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್‌ಮೆಂಟ್ (ಜಿಆರ್‌ಎಎಂ) ಸಂಸ್ಥೆಗಳ ಸಂಸ್ಥಾಪಕರು. ಹಾರ್ವರ್ಡ್ ವಿಶ್ವವಿದ್ಯಾಲಯದ ಹಾರ್ವರ್ಡ್ ಕೆನಡಿ ಸ್ಕೂಲ್‌ನಿಂದ ಸಾರ್ವಜನಿಕ ಆಡಳಿತದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರು, ಸಾರ್ವಜನಿಕ ನೀತಿ ವಿಶ್ಲೇಷಣೆಯಲ್ಲಿ ಪರಿಣತರು.



ಹಿಂಸಾಚಾರಕ್ಕೆ ಹಣ ಸಂಗ್ರಹ ಹಿನ್ನೆಲೆ ಕೆನಡಾದಿಂದ ಮಹತ್ವದ ನಿರ್ಧಾರ

ಖಲಿಸ್ತಾನಿ ಉಗ್ರರಿಗೆ ಭದ್ರತಾ ಅಪಾಯ ಮುದ್ರೆ

ಒಟ್ಟಾವಾ: ಕೆನಡಾದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಲಿಸ್ತಾನಿ ಉಗ್ರ ಗುಂಪುಗಳು ದೇಶದ ರಾಷ್ಟ್ರೀಯ ಭದ್ರತೆಗೆ ಗಂಭೀರ ಅಪಾಯವಾಗಿವೆ ಎಂದು ಕೆನಡಾದ ಗುಪ್ತಚರ ಸಂಸ್ಥೆ ಎಚ್ಚರಿಕೆ ನೀಡಿದೆ. ತಮ್ಮ ಹಿಂಸಾತ್ಮಕ ಅಜೆಂಡಾವನ್ನು ಮುಂದುವರಿಸಲು ಕೆಲವು ಉಗ್ರರು ಕೆನಡಾದ ಸಂಸ್ಥೆಗಳನ್ನೇ ದುರುಪಯೋಗ ಪಡಿಸಿಕೊಳ್ಳುತ್ತಿರುವುದಾಗಿ ವರದಿ ಎಚ್ಚರಿಸಿದೆ.

ಕೆನಡಾದ ಭದ್ರತಾ ಗುಪ್ತಚರ ಸಂಸ್ಥೆಯ 2025ರ ಸಾರ್ವಜನಿಕ ವರದಿಯಲ್ಲಿ, ಕೆನಡಾ ಆಧಾರಿತ ಖಲಿಸ್ತಾನಿ ಉಗ್ರರ ಸಿಬಿಕೆಇ ಹಿಂಸಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ಇನ್ನೂ ಮುಂದುವರಿದಿದ್ದು, ಇದು ದೇಶದ ಭದ್ರತೆಗೆ ಮತ್ತು ಕೆನಡಾದ ಹಿತಾಸಕ್ತಿಗಳಿಗೆ ಧಕ್ಕೆಯಾಗಿದೆ ಎಂದು ಉಲ್ಲೇಖಿಸಲಾಗಿದೆ.

ಕೆಲವು ಉಗ್ರರು ಕೆನಡಾದ ನಾಗರಿಕರೊಂದಿಗೆ ಸಂಪರ್ಕ ಹೊಂದಿದ್ದು, ಸಂಸ್ಥೆಗಳ ಮೂಲಕ ತಮ್ಮ ಪ್ರಚಾರ ನಡೆಸುವುದಲ್ಲದೆ, ಹಿಂಸೆಯ ಅರಿವಿಲ್ಲದ ಸಮುದಾಯದ ಸದಸ್ಯರಿಂದ ಹಣ ಸಂಗ್ರಹಿಸಿ ಅದನ್ನು ಹಿಂಸಾತ್ಮಕ ಚಟುವಟಿಕೆಗಳಿಗೆ ಬಳಸುತ್ತಿರುವುದಾಗಿ ವರದಿ ತಿಳಿಸಿದೆ.


ಖಲಿಸ್ತಾನಿ ಉಗ್ರ ಸಂಘಟನೆಗಳು ಭಾರತದಲ್ಲೇ ಪ್ರತ್ಯೇಕ ರಾಷ್ಟ್ರ ಸ್ಥಾಪನೆಗೆ ಒತ್ತಾಯಿಸುತ್ತಿದ್ದು, ವಿಭಜನೆ ಚಟುವಟಿಕೆಗಳ ಹಿನ್ನೆಲೆ ಅವುಗಳನ್ನು ಭಾರತ ಸರ್ಕಾರ ಭಯೋತ್ಪಾದಕ ಸಂಘಟನೆಗಳೆಂದು ಘೋಷಿಸಿದೆ.

ಈ ವರದಿ, 1985ರಲ್ಲಿ ನಡೆದ ಏರ್ ಇಂಡಿಯಾ ವಿಮಾನ 182 ಸ್ಫೋಟದ 40ನೇ ವಾರ್ಷಿಕೋತ್ಸವದ ಒಂದು ವರ್ಷದ ನಂತರ ಹೊರಬಂದಿದೆ. ಈ ದಾಳಿಯಲ್ಲಿ 329 ಮಂದಿ ಮೃತಪಟ್ಟಿದ್ದು, ಇದು ಕೆನಡಾ ಇತಿಹಾಸದ ಅತಿ ಭೀಕರ ಉಗ್ರ ದಾಳಿ ಎಂದು ವರದಿ ಉಲ್ಲೇಖಿಸಿದೆ.



'ಹಿಂಸಾಚಾರವನ್ನು ಉತ್ತೇಜಿಸುವುದು, ಹಣ ಸಂಗ್ರಹಿಸುವುದು ಅಥವಾ ಭಾರತದಲ್ಲಿ ದಾಳಿಗಳನ್ನು ಯೋಜಿಸುವ ಉದ್ದೇಶದಿಂದ ಕೆನಡಾವನ್ನು ಆಧಾರವಾಗಿ ಬಳಸುವ ಕೆಲವೇ ವ್ಯಕ್ತಿಗಳನ್ನಷ್ಟೇ ಖಲಿಸ್ತಾನಿ ಅತಿರೇಕಿಗಳೆಂದು ಪರಿಗಣಿಸಲಾಗಿದೆ,' ಎಂದು ವರದಿ ತಿಳಿಸಿದೆ.

ಪ್ರಸ್ತುತ ಪ್ರಧಾನಿ ಮಾರ್ಕ್ ಕಾರ್ನಿ ಅವರ ನೇತೃತ್ವದಲ್ಲಿ, ಭಾರತ ಮತ್ತು ಕೆನಡಾ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಪುನರ್‌ನಿರ್ಮಿಸಲು ಎರಡೂ ದೇಶಗಳು ಪ್ರಯತ್ನಿಸುತ್ತಿವೆ. ಇದರ ಬೆನ್ನಲ್ಲೇ ಖಲಿಸ್ತಾನಿ ಉಗ್ರರ ವಿರುದ್ಧ ಇಂಥ ವರದಿ ಬಂದಿದೆ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	8	6	1	1	13	+1.043
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	10	6	4	0	12	+0.644
ರಾಜಸ್ಥಾನ	10	6	4	0	12	+0.510
ಗುಜರಾತ್	9	5	4	0	10	-0.192
ಚೆನ್ನೈ	9	4	5	0	8	+0.005
ದಿಲ್ಲಿ	9	4	5	0	8	-0.895
ಕೆಕೆಆರ್	9	3	5	1	7	-0.539
ಮುಂಬೈ	9	2	7	0	4	-0.803
ಲಖನೌ	8	2	6	0	4	-1.106

ಕಮ್ಮಿನ್ಸ್ ಪಡೆ ಗೆಲುವಿನೋಟಕ್ಕೆ ಬ್ರೇಕ್ | ಕೆಕೆಆರ್‌ಗೆ ಹ್ಯಾಟ್ರಿಕ್ ಗೆಲುವು | ಹೆಡ್ ಹೋರಾಟ ವ್ಯರ್ಥ

ವರುಣ್ ಸ್ಪಿನ್‌ಗೆ ಉರುಳಿದ ಹೈದರಾಬಾದ್

ಹೈದರಾಬಾದ್: ಸನ್‌ರೈಸರ್ಸ್ ಹೈದರಾಬಾದ್ ತಂಡದ ಐದು ಪಂದ್ಯ ಗೆಲುವಿನ ಓಟಕ್ಕೆ ಕೋಲ್ಕತ್ತಾ ನೈಟ್ ರೈಡರ್ಸ್ ತಡೆಯೊಡ್ಡಿತು. ಇದರೊಂದಿಗೆ ಮೊದಲಾರ್ಧದ ಬಹುತೇಕ ಎಲ್ಲಾ ಪಂದ್ಯಗಳಲ್ಲಿ ಸೋತಿದ್ದ ಕೆಕೆಆರ್ ಸತತ ಮೂರನೇ ಗೆಲುವು ಸಾಧಿಸಿದೆ.

ಭಾನುವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ರಹಾನೆ ಬಳಗ 7 ವಿಕೆಟ್ ಗೆಲುವು ದಾಖಲಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ 19 ಓವರ್‌ಗಳಲ್ಲಿ 165 ರನ್ ಗಳಿಸಿ ಆಲೌಟ್ ಆಯಿತು. ಟ್ರಾವಿಸ್ ಹೆಡ್(61; 28ಎ, 9 ಬೌಂಡರಿ, 3ಸಿ), ಇಶಾನ್ ಕಿಶನ್(42; 29ಎ, 4 ಬೌ, 2ಸಿ) ಗಳಿಸಿದರು. ಕೆಕೆಆರ್ ಪರ ವರುಣ್ ಚಕ್ರವರ್ತಿ(4-0-36-3), ಕಾರ್ತಿಕ್ ತ್ಯಾಗಿ(4-0-30-2) ಮಿಂಚಿದರು. ಗುರಿ ಬೆನ್ನತ್ತಿದ ನೈಟ್ ರೈಡರ್ಸ್ 18.2 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 169 ರನ್ ಗಳಿಸಿತು. ಅಂಗ್ರಿಶ್ ರಘುವಂಶಿ(59; 47ಎ, 5ಬೌ, 2ಸಿ), ಅಜಿಂಕ್ಯಾ ರಹಾನೆ(43; 36ಎ, 4 ಬೌ, 1ಸಿ) ಗಳಿಸಿದರು. ಹೈದರಾಬಾದ್ ಪರ ಸಾಕೀಬ್ (3-0-17-1) ಹೋರಾಡಿದರು.

ತಮ್ಮ ನಾಲ್ಕು ಓವರ್ ಕೋಟಾದ ಮೊದಲನೇ 1.5 ಓವರ್‌ಗಳಲ್ಲಿ 29 ರನ್ ದಂಡಿಸಿಕೊಂಡಿದ್ದ ಸ್ಪಿನ್ನರ್ ವರುಣ್ ಚಕ್ರವರ್ತಿ ಮುಂದಿನ 2.1 ಓವರ್ ಗಳಲ್ಲಿ ಅಚ್ಚರಿಯ ಕಂಬ್ಯಾಕ್ ಮಾಡಿದರು. ಅಲ್ಲಿ 7 ರನ್ ಮಾತ್ರ ನೀಡಿದ ಅವರು, ಹೆಡ್, ರವಿಚಂದ್ರನ್ ಮತ್ತು ಅನಿಕೇತ್ ವಿಕೆಟ್ ಕಿತ್ತರು. ಅವರ ಶ್ರೇಯಕ್ಕೆ ಪಂದ್ಯಶ್ರೇಷ್ಠ ಪ್ರಶಸ್ತಿ ಒಲಿಯಿತು. ಬ್ಯಾಟಿಂಗ್ ಮಾಡುವ ವೇಳೆ ಕೆಕೆಆರ್‌ಗೆ ರಹಾನೆ, ಅಂಗ್ರಿಶ್ ಆಸರೆ ಸಿಕ್ಕಿತು. ಹೆಡ್ 61 ರನ್ ಗಳಿಸಿ ಪಂದ್ಯದ ಬೆಸ್ಟ್ ಬ್ಯಾಟರ್ ಅನಿಸಿಕೊಂಡರು.

ಪವರ್‌ಪ್ಲೇ: ಬ್ಯಾಟಿಂಗ್‌ಗಿಳಿದ ಹೈದರಾಬಾದ್‌ಗೆ ಅಬ್ಬರದ ಆರಂಭ ಸಿಕ್ಕಿತು. ಟ್ರಾವಿಸ್ ಹೆಡ್ ತಮ್ಮ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದರೆ, ಅಭಿಷೇಕ್ ಆತುರದಲ್ಲಿ ಔಟಾದರು. 9 ಸ್ಫೋಟಕ ಬೌಂಡರಿಗಳನ್ನು ಬಾರಿಸಿದ ಹೆಡ್ 3 ಬಾನೆತ್ತರದ ಸಿಕ್ಸರ್ ಕೂಡ ಚಚ್ಚಿದ್ದರು. ಪವರ್‌ಪ್ಲೇ ಅಂತ್ಯಕ್ಕೆ ಹೈದರಾಬಾದ್ 71 ರನ್ ಗಳಿಸಿತು.

ರಹಾನೆ ಮತ್ತು ಫಿನ್ ಅಲೆನ್ ಕೆಕೆಆರ್‌ಗೂ ಸ್ಫೋಟಕ ಅಡಿಪಾಯ ಹಾಕಿಕೊಟ್ಟರು. ರಹಾನೆ ಅಂಟಿಕೊಂಡು ನಿಂತರೆ, ಫಿನ್ ಬೌಂಡರಿ ಸಿಕ್ಸರ್‌ನೊಂದಿಗೆ ಡೀಲ್ ಮಾಡುತ್ತಾ ಸಾಗಿದರು. 29 ರನ್ ಗಳಿಸಿದ್ದ ಅಲೆನ್ ವಿಕೆಟ್ ಬಿತ್ತು. ಪಂದ್ಯ ನಿಧಾನಗತಿ ಪಡೆದುಕೊಂಡಿತು. ಪವರ್‌ಪ್ಲೇನಲ್ಲಿ ಒಂದೆರಡು ಆಕ್ರಮಣಕಾರಿ ಬೌಂಡರಿ ಬಾರಿಸಿದ ರಹಾನೆ ಸ್ಕೋರ್ ಅನ್ನು 71ಕ್ಕೆ ಕೊಂಡೊಯ್ದರು. ಕೆಕೆಆರ್ ಪರ ಅಂಗ್ರಿಶ್ ಮತ್ತು ರಹಾನೆ ನಿಧಾನವಾಗಿ ಇನ್ನಿಂಗ್ಸ್ ಕಟ್ಟಿದರು. ಆತುರಕ್ಕೆ ಬೀಳದ ಕೆಕೆಆರ್ ನಿಧಾನವಾಗಿ ಗೆಲುವಿನತ್ತ ಸಾಗಿತು. 43ಕ್ಕೆ ರಹಾನೆ ವಿಕೆಟ್ ಬಿದ್ದಿತು. ರಿಂಕು ಸಿಂಗ್ ನಿಲ್ಲುತ್ತಿದ್ದಂತೆ ಅಂಗ್ರಿಶ್ ಬೌಂಡರಿ ಸಿಕ್ಸರ್‌ಗಳೊಂದಿಗೆ ಅರ್ಧಶತಕ ಬಾರಿಸಿಬಿಟ್ಟರು. ಅಲ್ಲಿಂದ ಯಾವುದೇ ಲೋಪ ಇಲ್ಲದೆ ಕೆಕೆಆರ್ ಪಂದ್ಯ ಗೆದ್ದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ 72 ರನ್ ಗಳಿಸಿ ಕೇವಲ 1 ವಿಕೆಟ್ ಮಾತ್ರ ಕಳೆದುಕೊಂಡಿತು.



ಡೆತ್ ಓವರ್

ಹೈದರಾಬಾದ್‌ಗೆ ಡೆತ್ ಓವರ್‌ನಲ್ಲೂ ಯಾರೊಬ್ಬರ ಆಸರೆ ಸಿಗಲೇ ಇಲ್ಲ. ಪ್ಯಾಟ್ 10, ಶಿವಾಂಗ್ 1, ಹರ್ಷಲ್ 6 ರನ್‌ಗೆ ವಿಕೆಟ್ ಒಪ್ಪಿಸಿದರು. 17 ರನ್ ಗಳಿಸುವಷ್ಟರಲ್ಲಿ ಹೈದರಾಬಾದ್ ಉಳಿದ 3 ವಿಕೆಟ್ ಕಳೆದುಕೊಂಡಿತು. ಇತ್ತ ಕೆಕೆಆರ್ ಹೆಚ್ಚಿನದ್ದೇನು ಮಾಡಬೇಕಿರಲಿಲ್ಲ. 26 ರನ್‌ಗಳಿಸಿದರೆ ಗೆಲುವಿನ ರೇಖೆ ಮೀರಿಸುತ್ತಿತ್ತು. ರಘುವಂಶಿ ವಿಕೆಟ್ ಒಪ್ಪಿಸಿದರೂ, ರಿಂಕು 22 ರನ್ ಗಳಿಸಿ ಪಂದ್ಯ ಗೆಲ್ಲಿಸಿದರು.

ಸಂಕ್ಷಿಪ್ತ ಸ್ಕೋರ್

ಹೈದರಾಬಾದ್ 19 ಓವರ್‌ಗಳಲ್ಲಿ 165: ಹೆಡ್ 61, ಕಿಶನ್ 42; ವರುಣ್ 36/3
ಕೆಕೆಆರ್ 8.1 ಓವರ್‌ಗಳಲ್ಲಿ 169: ರಘುವಂಶಿ 59, ರಹಾನೆ 43; ಸಾಕೀಬ್ 17/1

ಮಧ್ಯಮ ಆಟ: ಮಧ್ಯಮ ಓವರ್‌ಗಳಲ್ಲಿ ಹೈದರಾಬಾದ್‌ಗೆ ಇಶಾನ್ ಕಿಶಾನ್ ಆಸರೆ ಸಿಕ್ಕಿತು. ಹೆಡ್ 61 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಕ್ಲಾಸೆನ್ 11, ಸ್ಮರಣ್ 4, ಅನಿಕೇತ್ 6 ಮತ್ತು ಸಲೀಲ್ ಆರೋರಾ 1 ರನ್‌ಗೆ ಔಟಾದರು. ಇದೇ ವೇಳೆ ಅಬ್ಬರದ ಬೌಲಿಂಗ್ ದಾಳಿ ಸಂಘಟಿಸಿದ ವರುಣ್, ತ್ಯಾಗಿ ಮಿಂಚಿದರು. ಆದಾಗ್ಯೂ ಒಂದು ಬದಿಯಲ್ಲಿ ವಿಕೆಟ್ ಉಳಿಸಿಕೊಂಡು ನಿಂತಿದ್ದ ಕಿಶನ್ 42 ರನ್‌ಗೆ ಔಟಾದರು. ಹೈದರಾಬಾದ್ ರನ್ ರೇಟ್ ಬಿದ್ದಿತು. ಬ್ಯಾಟಿಂಗ್ ಪಡೆಯೇ ಪತನಗೊಂಡಿತು. ಮಧ್ಯಮ ಓವರ್ ಗಳಲ್ಲಿ ತಂಡ 77 ರನ್ ಗಳಿಸುವಷ್ಟರಲ್ಲಿ 6 ಪ್ರಮುಖ ವಿಕೆಟ್ ಕಳೆದುಕೊಂಡಿತು.

ಕಿರುಸುದ್ದಿ

ಮ್ಯಾಡ್ರಿಡ್ ಓಪನ್: ಮಾರ್ತಾ, ಸಿನ್ನರ್ ಚಾಂಪಿಯನ್

ಮ್ಯಾಡ್ರಿಡ್: ಉಕ್ರೇನ್‌ನ ಮಾರ್ತಾ ಕೋಸ್ಟ್ಯುಕ್ ಅವರು ರಷ್ಯಾದ ಮಿರ್ರಾ ಆಂಡ್ರೀವಾ ಅವರೊಂದಿಗೆ 6-3, 7-5 ಅಂತರದಲ್ಲಿ ಗೆದ್ದು ಮ್ಯಾಡ್ರಿಡ್ ಓಪನ್ ಕಿರೀಟವನ್ನು ಮೊದಲ ಬಾರಿಗೆ ತಮ್ಮದಾಗಿಸಿಕೊಂಡಿದ್ದಾರೆ. ವಿಶ್ವ ಕ್ರಮಾಂಕ 23ರ ಮಾರ್ತಾ ಅವರಿಗೆ ಇದು ವುಮೆನ್ಸ್ ಟೆನಿಸ್ ಅಸೋಸಿಯೇಶನ್ ಸಾವಿರ ಮಟ್ಟದ ಮೊದಲ ಪ್ರಶಸ್ತಿಯಾಗಿದ್ದು, ಈ ಸೀಸನ್‌ನ ಎರಡನೇ ಕಿರೀಟವೂ ಆಗಿದೆ. ಅಗ್ರ 20ರ ಹೊರಗಿನ ಆಟಗಾರ್ತಿ ಈ ಟೂರ್ನಿಯನ್ನು ಗೆದ್ದಿರುವ ಎರಡನೇ ಆಟಗಾರ್ತಿಯಾಗಿ ಅವರು ಹೊರಹೊಮ್ಮಿದ್ದಾರೆ. ಪುರುಷರ ವಿಭಾಗದಲ್ಲಿ ಜ್ವೆರೆವ್ ಅವರನ್ನು ಸೋಲಿಸಿದ ಯಾನಿಕ್ ಸಿನ್ನರ್ 6-1, 6-1ರಿಂದ ಗೆದ್ದರು.

ಪೋಲ್ ವಾಲ್ಟ್: ದಾಖಲೆ ಬರೆದ ಬರನಿಕಾ ಎಳಂಗೋವನ್

ಭುವನೇಶ್ವರ: ತಮಿಳುನಾಡಿನ ಬರನಿಕಾ ಎಳಂಗೋವನ್ ಭಾನುವಾರ ಭುವನೇಶ್ವರದಲ್ಲಿ ನಡೆದ ಇಂಡಿಯನ್ ಇಂಡೋರ್ ಓಪನ್ ಕಂಬೈಂಡ್ ಇವೆಂಟ್ಸ್ ಮತ್ತು ಪೋಲ್ ವಾಲ್ಟ್ ಸ್ಪರ್ಧೆಯಲ್ಲಿ 4.23 ಮೀಟರ್ ದೂರ ಗುರಿಯನ್ನು ಸಾಧಿಸುವ ಮೂಲಕ ತಮ್ಮದೇ ಆದ ಮಹಿಳಾ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡರು. ಏಪ್ರಿಲ್‌ನಲ್ಲಿ ನಡೆದ ಒಳಾಂಗಣ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಹಿಂದಿನ 4.22 ಮೀಟರ್ ರಾಷ್ಟ್ರೀಯ ದಾಖಲೆಯನ್ನು ಸ್ಥಾಪಿಸಿದ್ದ ಬರನಿಕಾ, 3.90 ಮೀಟರ್ ಮತ್ತು 3.95 ಮೀಟರ್ ಸಾಧಾರಣ ಅಂತರದೊಂದಿಗೆ ಪ್ರಾರಂಭಿಸಿ ನಂತರ ಬಾರ್ ಅನ್ನು ಸ್ಥಿರವಾಗಿ ಹೆಚ್ಚಿಸಿಕೊಂಡರು. ನಂತರ ಅವರು ತಮ್ಮ ಮೊದಲ ಪ್ರಯತ್ನದಲ್ಲಿ 4.00 ಮೀಟರ್ ಮತ್ತು 4.10 ಮೀಟರ್ ಎತ್ತರಕ್ಕೆ ಗುರಿಯಿಟ್ಟು ತಮ್ಮ ಮೂರನೇ ಮತ್ತು ಅಂತಿಮ ಪ್ರಯತ್ನದಲ್ಲಿ 4.23 ಮೀಟರ್ ಎತ್ತರಕ್ಕೆ ಹೋಗಿ ತಮ್ಮ ರಾಷ್ಟ್ರೀಯ ದಾಖಲೆಯನ್ನು ಸುಧಾರಿಸಿಕೊಂಡರು. ಈ ವರ್ಷದ ಆರಂಭದಲ್ಲಿ, ಬರಾನಿಕಾ ಇಂಡಿಯನ್ ಓಪನ್ ಜಂಪ್ಸ್‌ನಲ್ಲಿ 4.10 ಮೀ ತಡೆಗೋಡೆ ದಾಟಿದ್ದರು, ಏಷ್ಯನ್ ಗೇಮ್ಸ್‌ಗಾಗಿ ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾದ ಅರ್ಹತಾ ಅಂಕವನ್ನು ಮುರಿದರು. ಈ ವಾಲ್ಟರ್ ಪ್ರಸ್ತುತ ಕಾಮನ್‌ವೆಲ್ತ್ ಗೇಮ್ಸ್‌ಗಾಗಿ 4.45 ಮೀ ಅರ್ಹತಾ ಅಂಕವನ್ನು ಬೆನ್ನಟ್ಟುತ್ತಿದ್ದಾರೆ.

ರಿಲೇ: ಭಾರತ ದಾಖಲೆ

ಹೊಸದಿಲ್ಲಿ: ಭಾನುವಾರ ನಡೆದ ವಿಶ್ವ ಅಥ್ಲೆಟಿಕ್ಸ್ ರಿಲೇಸ್ 2026ರ ಹೀಟ್ಸ್‌ನಲ್ಲಿ ಭಾರತ ತಂಡವು 4X100 ಮೀಟರ್ ಮಿಶ್ರ ರಿಲೇ ರಾಷ್ಟ್ರೀಯ ದಾಖಲೆಯನ್ನು ಮುರಿದಿದೆ. ರಘುಲ್ ಕುಮಾರ್, ನಿತ್ಯಾ ಗಂಧೆ, ಅನಿಮೇಶ್ ಕುಜುರ್ ಮತ್ತು ಸ್ನೇಹಾ ಎಸ್‌ಎಸ್ ಅವರನ್ನೊಳಗೊಂಡ ತಂಡವು 41.35 ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ಮಾರ್ಚ್‌ನಲ್ಲಿ ಚಂಡೀಗಢದಲ್ಲಿ ನಡೆದ ಓಪನ್ ರಿಲೇ ಪಂದ್ಯಾವಳಿಯಲ್ಲಿ ಲಾಲು ಪ್ರಸಾದ್, ಉನ್ನತಿ ಅಯ್ಯಪ್ಪ, ಹರಿತಾ ಭದ್ರ, ಮತ್ತು ಜಯರಾಮ್ ಡಿ ಅವರು ಸ್ಥಾಪಿಸಿದ್ದ 42.30 ಸೆಕೆಂಡುಗಳ ಹಿಂದಿನ ದಾಖಲೆಯನ್ನು ಉತ್ತಮಗೊಳಿಸಿತು. ರಾಷ್ಟ್ರೀಯ ದಾಖಲೆಯನ್ನು ಪುನಃ ಬರೆಯಲಾಗಿದ್ದರೂ, ಭಾರತೀಯರು ತಮ್ಮ ಹೀಟ್ಸ್‌ನಲ್ಲಿ ಆರನೇ ಸ್ಥಾನ ಮತ್ತು ಒಟ್ಟಾರೆಯಾಗಿ 10ನೇ ಸ್ಥಾನ ಪಡೆದ ಕಾರಣ ಫೈನಲ್‌ನಲ್ಲಿ ಸ್ಥಾನ ಪಡೆಯಲು ಸಮಯ ಸಾಕಾಗಲಿಲ್ಲ.

ಐಪಿಎಲ್‌ನಿಂದ ರಾಮಕೃಷ್ಣ ಹೊರಕ್ಕೆ

ಮುಂಬೈ: ಚೆನ್ನೈ ತಂಡದ ಪರ ಏಕಮಾತ್ರ ಪಂದ್ಯವಾಡಿರುವ ಆಲ್‌ರೌಂಡರ್ ರಾಮಕೃಷ್ಣ ಘೋಷ್ ಬಲಗಾಲಿಗೆ ಗಾಯ ಮಾಡಿಕೊಂಡಿದ್ದು ಪಂದ್ಯಾವಳಿಯಿಂದ ಹೊರಬಿದ್ದಿದ್ದಾರೆ. ಮುಂಬೈ ಇಂಡಿಯನ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ನಡುವೆ ನಡೆದ ಪಂದ್ಯದಲ್ಲಿ ಚೆನ್ನೈ ತಂಡದ ಭಾಗವಾಗಿದ್ದ ಅವರು, ಆಕರ್ಷಕ ಕ್ಯಾಚ್‌ನೊಂದಿಗೆ ಮಿಂಚಿದ್ದರು. ನಂತರ ಬೌಲಿಂಗ್‌ನಲ್ಲೂ ರಯಾನ್ ವಿಕೆಟ್ ಪಡೆದಿದ್ದರು. ಬೌಲಿಂಗ್ ಮಾಡುವ ವೇಳೆ ಗಾಯ ಮಾಡಿಕೊಂಡಿದ್ದ ಅವರು ಕಾಲು ಮುರಿತಕ್ಕೊಳಗಾಗಿದ್ದಾರೆ. ಈ ನಿಟ್ಟಿನಲ್ಲಿ ಉಳಿದ ಪಂದ್ಯಾವಳಿಗೆ ಅವರು ಲಭ್ಯರಿಲ್ಲ ಎಂದು ಚೆನ್ನೈ ತಿಳಿಸಿದೆ.

ಜೂ. ಶೂಟಿಂಗ್: ಐಶ್ವರ್ಯ ಬಾಲೆಹೊಸೂರ್ ಆಯ್ಕೆ

ಹುಬ್ಬಳ್ಳಿ: ಉತ್ತರ ಕರ್ನಾಟಕ ಭಾಗದ ಹೆಮ್ಮೆಯ ಯುವ ಶೂಟರ್ ಐಶ್ವರ್ಯ ಬಾಲೆಹೊಸೂರ್ 50ಮೀಟರ್ ಫ್ರೀ ಪಿಸ್ತೂಲ್ ವಿಭಾಗದಲ್ಲಿ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಶಿಪ್‌ಗೆ ಭಾರತ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಹುಬ್ಬಳ್ಳಿಯ ಐಶ್ವರ್ಯ, 50ಮೀಟರ್ ಫ್ರೀ ಪಿಸ್ತೂಲ್ ವಿಭಾಗದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಸತತವಾಗಿ ಉತ್ತಮ ಪ್ರದರ್ಶನ ನೀಡಿ ಆಯ್ಕೆ ಸಮಿತಿಯ ಗಮನ ಸೆಳೆದಿದ್ದಾರೆ. ಕಠಿಣ ಪರಿಶ್ರಮ ಮತ್ತು ಶಿಸ್ತಿನ ಮೂಲಕ ಈ ಮೈಲಿಗಲ್ಲು ತಲುಪಿದ್ದಾರೆ.

ಭಾರತವನ್ನು ವಿಶ್ವ ವೇದಿಕೆಯಲ್ಲಿ ಪ್ರತಿನಿಧಿಸಲು ಸಿಕ್ಕ ಈ ಅವಕಾಶಕ್ಕೆ ಸಂತಸ ವ್ಯಕ್ತ ಪಡಿಸಿದ ತರಬೇತುದಾರಾದ ರವಿಚಂದ್ರ ಬಾಲೇಹೊಸೂರ್, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಾಧನೆ ತೋರಿ ಭಾರತಕ್ಕೆ ಕೀರ್ತಿ ತರಲಿ ಎಂದು ಹಾರೈಸಿದ್ದಾರೆ. ಚಾಂಪಿಯನ್‌ಶಿಪ್ ಈ ವರ್ಷದ ಜುಲೈನಲ್ಲಿ ಜರ್ಮನಿಯ ಸೂಲ್‌ನಲ್ಲಿ ನಡೆಯಲಿದೆ. ಹುಬ್ಬಳ್ಳಿ ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿ ಐಶ್ವರ್ಯ ಅವರಿಗೆ ಅಭಿನಂದನೆ ಸಲ್ಲಿಸಿದ್ದು, ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಉಜ್ವಲ ಸಾಧನೆ ಮಾಡಲಿ ಎಂದು ಅಕಾಡೆಮಿ ಸಂಸ್ಥಾಪಕರಾದ ಶಿವಾನಂದ ಬಾಳೆ ಹೊಸೂರ್ ಹಾರೈಸಿದ್ದಾರೆ.

> ನನ್ನ ಪಾಲಿಗೆ ಕನಸು ನನಸಾದಂತೆ. ನನ್ನ ತಂದೆ-ತಾಯಿ, ಕೋಚ್, ಕರ್ನಾಟಕ ಸ್ಟೇಟ್ ರೈಫಲ್ ಅಸೋಸಿಯೇಷನ್ ಬೆಂಬಲವಿಲ್ಲದೆ ಇದು ಸಾಧ್ಯವಾಗುತ್ತಿರಲಿಲ್ಲ. ದೇಶಕ್ಕಾಗಿ ಪದಕ ಗೆಲ್ಲುವುದು ನನ್ನ ಮುಂದಿನ ಗುರಿ.
> ■ ಐಶ್ವರ್ಯ ಬಾಲೆಹೊಸೂರ್, ಶೂಟರ್



ಗುಜರಾತ್ ಟೈಟಾನ್ಸ್‌ಗೆ ಸ್ಪರ್ಧಾತ್ಮಕ ಗುರಿ

ಅಹದಾಬಾದ್: ಜೇಸನ್ ಹೋಲ್ಡರ್ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದ ಪಂಜಾಬ್ ಸೂರ್ಯಾಂಶ್ ಶೇಗ್ಡೆ ಅವರ ಆಸರೆ ಪಡೆದ ನಂತರ ಸ್ಪರ್ಧಾತ್ಮಕ ಗುರಿ ನಿರ್ಮಿಸಿತು.

ಅಗ್ರಸ್ಥಾನಿ ಪಂಜಾಬ್‌ನೊಂದಿಗಿನ ಪಂದ್ಯಕ್ಕೆ ತಮ್ಮ ಪ್ರಾಬಲ್ಯ ವಿಸ್ತರಿಸಿದ ಗುಜರಾತ್ ಟೈಟಾನ್ಸ್, ಆರಂಭದಲ್ಲಿ ಹಿಡಿತ ಸಾಧಿಸಿತ್ತು. ಆದರೆ ಯುವ ಆಟಗಾರ ಸೂರ್ಯಾಂಶ್(57; 29ಎ, 3 ಬೌ, 5ಸಿ) ಹಾಗೂ ಮಾರ್ಕಸ್ ಸ್ಟೋಯಿನಿಸ್(40; 31ಎ, 5ಬೌ, 1ಸಿ) ಆಸರೆಯಾದರು. ಅಂತಿಮದಲ್ಲಿ ಯಾನ್ಸನ್ ಸ್ಕೋರ್ ಹಿಗ್ಗಿಸಿದ ನಂತರ 20 ಓವರ್‌ಗಳಲ್ಲಿ ಪಂಜಾಬ್ 9 ವಿಕೆಟ್ ನಷ್ಟಕ್ಕೆ 163 ರನ್ ಗಳಿಸಿದೆ. ಗುಜರಾತ್ ಪರ ಹೋಲ್ಡರ್ 4 ಓವರ್‌ಗಳಲ್ಲಿ 24 ರನ್ ಮಾತ್ರ ನೀಡಿ 4 ವಿಕೆಟ್ ಕಿತ್ತರು.

ಆರಂಭಿಕ ಕುಸಿತ: ಟಾಸ್ ಗೆದ್ದು ಬ್ಯಾಟಿಂಗ್‌ಗಿಳಿದ ಪಂಜಾಬ್ ಆರಂಭಿಕ ಆಘಾತ ಎದುರಿಸಿತು. ಸ್ಫೋಟಕ ಬ್ಯಾಟರ್ ಪ್ರಿಯಾಂಶ್ ಆರ್ಯ 2 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಕೂಪರ್ ಕೊನೊಲಿ ಶೂನ್ಯ ಸುತ್ತಿದರು. ಮೊದಲನೇ ಓವರ್‌ನಲ್ಲೇ ಎರಡು ವಿಕೆಟ್ ಪಡೆದಿದ್ದ ಗುಜರಾತ್ ಒತ್ತಡ ಹೇರಲೆತ್ನಿಸಿತು. ಶ್ರೇಯಸ್ ಅಯ್ಯರ್ ಕೊಂಚ ಹೊತ್ತು ನಿಂತರು. ನಿಹಾಲ್ ವಧೇರಾ ಮತ್ತೊಮ್ಮೆ ಶೂನ್ಯಕ್ಕೆ ಔಟಾದರು. ಪವರ್‌ಪ್ಲೇನಲ್ಲಿ ಗುಜರಾತ್ ಪಂಜಾಬ್ ಮೇಲೆ ಪ್ರಾಬಲ್ಯ ಸಾಧಿಸಿತು.

ಸೂರ್ಯಾಂಶ್ ಅರ್ಧಶತಕ: 35 ರನ್‌ಗೆ 3 ವಿಕೆಟ್ ಕಳೆದುಕೊಂಡಿದ್ದ ಪಂಜಾಬ್ ಮಧ್ಯಮ ಓವರ್‌ಗಳಲ್ಲಿ ಚೇತರಿಸಿಕೊಂಡಿತು. ಆದಾಗ್ಯೂ ಶ್ರೇಯಸ್ 19 ರನ್‌ಗೆ ಔಟಾದರು. ಕುಸಿದ ಪಂಜಾಬ್‌ಗೆ ಯುವ ಬ್ಯಾಟರ್ ಸೂರ್ಯಾಂಶ್ ಆಸರೆ ಸಿಕ್ಕಿತು. ನಿಧಾನವಾಗಿ ಶುರು ಮಾಡಿದ ಅವರು, ಸ್ಟೋಯಿನಿಸ್‌ನೊಂದಿಗೆ ಇನ್ನಿಂಗ್ಸ್ ಕಟ್ಟಿದರು. ಮಧ್ಯಮ ಓವರ್‌ಗಳ ಅಂತ್ಯದಲ್ಲಿ ಸೂರ್ಯಾಂಶ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಮಾನವ್ ಸುಥರ್ ಮಾಡಿದ ಓವರ್‌ನಲ್ಲಿ 28 ರನ್ ಬಾರಿಸಿದರು. ಅರ್ಧಶತಕ ಬಾರಿಸುತ್ತಿದ್ದಂತೆ 57 ರನ್‌ಗೆ ಔಟಾದರು. ಮಧ್ಯಮ ಓವರ್ ಗಳಲ್ಲಿ ಪಂಜಾಬ್ 91 ರನ್ ಗಳಿಸಿತು.



ಡೆತ್ ಓವರ್: ಡೆತ್ ಓವರ್‌ನಲ್ಲಿ ಹೋಲ್ಡರ್ ಪ್ರಖರ ದಾಳಿ ಸಂಘಟಿಸಿದರು. ಈ ಮೊದಲೇ ಶ್ರೇಯಸ್ ಹಾಗೂ ವಧೇರಾ ವಿಕೆಟ್ ಪಡೆದಿದ್ದ ಅವರು ಸ್ಟೋಯಿನಿಸ್ ಹಾಗೂ ಬಾರ್ಟಲೆಟ್‌ಗೂ ಪೆವಿಲಿಯನ್ ದಾರಿ ತೋರಿಸಿದರು. ಯಾನ್ಸನ್ ಸ್ಫೋಟಕ ಬ್ಯಾಟಿಂಗ್ ಮಾಡಿರು.

ಚೆನ್ನೈ ಸೂಪರ್ ಕಿಂಗ್ಸ್‌ಗೆ ಗೆಲುವು



ಸಂಕ್ಷಿಪ್ತ ಸ್ಕೋರ್

ಮುಂಬೈ 20 ಓವರ್: 159/7: ನಮನ್ 57, ರಯಾನ್ 37; ಅನ್ಶುಲ್ 32/3
ಚೆನ್ನೈ 18.1 ಓವರ್: 160/2: ರುತುರಾಜ್ 67★, ಕಾರ್ತಿಕ್ 54; ಬೂಮ್ರಾ 20/1

» ಗಾಯಕ್ವಾಡ್, ಕಾರ್ತಿಕ್ ಅಬ್ಬರ
» ಪ್ಲೇಆಫ್ ಆಸೆ ಇನ್ನೂ ಜೀವಂತ

ಚೆನ್ನೈ: ನಾಯಕ ರುತುರಾಜ್ ಗಾಯಕ್ವಾಡ್ ಮತ್ತು ಯುವ ಬ್ಯಾಟರ್ ಕಾರ್ತಿಕ್ ಶರ್ಮ ಅವರ ಸಮಯೋಚಿತ ಬ್ಯಾಟಿಂಗ್ ಬಲದೊಂದಿಗೆ ಚೆನ್ನೈ ಸೂಪರ್ ಕಿಂಗ್ಸ್ ತಂಡ ಮುಂಬೈ ಇಂಡಿಯನ್ಸ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿದೆ.

ಅಳಿವು-ಉಳಿವು ಪಂದ್ಯದಲ್ಲಿ ಮುಂಬೈ ಮೇಲೆ ಮತ್ತೊಮ್ಮೆ ಪ್ರಾಬಲ್ಯ ಸಾಧಿಸಿರುವ ಚೆನ್ನೈ ಈ ಆವೃತ್ತಿಯಲ್ಲಿ ಹಾರ್ದಿಕ್ ಪಡೆಗೆ ಎರಡನೇ ಸೋಲಿನಾಘಾತ ನೀಡಿತು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 159 ರನ್ ಗಳಿಸಿತು. ನಮನ್ (57; 37ಎ, 4ಬೌ, 3ಸಿ), ರಯಾನ್(37; 24ಎ, 5ಸಿ) ಮಿಂಚಿದರು. ಚೆನ್ನೈ ಪರ ಅನ್ಶುಲ್ 3 ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಚೆನ್ನೈ 18.1 ಓವರ್‌ಗಳಲ್ಲಿ 2ವಿಕೆಟ್ ನಷ್ಟಕ್ಕೆ 160 ರನ್ ಗಳಿಸಿತು. ರುತುರಾಜ್ (67★; 48ಎ, 5 ಬೌ, 2ಸಿ), ಕಾರ್ತಿಕ್ ಶರ್ಮ (54★, 40ಎ, 4 ಬೌ, 3ಸಿ) ಗಳಿಸಿದರು. ಮುಂಬೈ ಪರ ಬೂಮ್ರಾ 1 ವಿಕೆಟ್ ಪಡೆದರು.

ಗುರಿ ಬೆನ್ನತ್ತಿದ ಚೆನ್ನೈಗೆ ಸ್ಫೋಟಕ ಆರಂಭ ಸಿಕ್ಕಿತು. ಸಯು ಸ್ಯಾಮ್ಸನ್ ಬೇಗನೇ ವಿಕೆಟ್ ಕಳೆದುಕೊಂಡರೂ ಮೂರನೇ ಕ್ರಮಾಂಕದಲ್ಲಿ ಬಂದ ಉರ್ವಿಲ್ ಪಟೇಲ್ ಬಿರುಸಿನ ಬ್ಯಾಟಿಂಗ್ ಶುರು ಮಾಡಿದರು. ರುತುರಾಜ್ ಕೂಡ ಸಮಯೋಚಿತ ಬ್ಯಾಟಿಂಗ್ ಮಾಡಿದರು. ಪವರ್‌ಪ್ಲೇ ಉದ್ದಕ್ಕೂ ಇಬ್ಬರೂ ಮುಂಬೈ ಪಡೆಯನ್ನು ದಂಡಿಸಿದರು. ಗಾಯಕ್ವಾಡ್ ಅಸಲು ಲಯಕ್ಕೆ ಮರಳುತ್ತಿದ್ದಂತೆ ಪವರ್ ಪ್ಲೇನ ಕೊನೆಯ ಓವರ್‌ನಲ್ಲಿ ಉರ್ವಿಲ್(24; 12ಎ, 2ಬೌ, 2ಸಿ) ಔಟಾದರು. ಕಾರ್ತಿಕ್ ಶರ್ಮ ಇಂಪ್ಯಾಕ್ಟ್ ಆಟಗಾರರಾಗಿ ಬಂದರು. ಪವರ್‌ಪ್ಲೇ ಮುಕ್ತಾಯಕ್ಕೆ ಚೆನ್ನೈ 62 ರನ್ ಗಳಿಸಿತು. ಅಂತೆಯೇ 2 ಪ್ರಮುಖ ವಿಕೆಟ್‌ಗಳನ್ನೂ ಕಳೆದುಕೊಂಡಿತ್ತು. ಮುನ್ನಡೆಯಲ್ಲಿದ್ದ ಚೆನ್ನೈ ಮಧ್ಯಮ ಓವರ್‌ನಲ್ಲೂ ಆಕ್ರಮಣಕಾರಿ ಬ್ಯಾಟಿಂಗ್ ನಿಲ್ಲಿಸಲಿಲ್ಲ. ಓವರಿಗೆ 8 ರನ್ ಮಾಡುತ್ತಾ ಗುರಿ ಕ್ರಮಿಸಿತು. ಗಾಯಕ್ವಾಡ್ ತಮ್ಮ ಅಸಲು ಲಯಕ್ಕೆ ಬಂದರು. ಅರ್ಧ ಶತಕ ಬಾರಿಸಿದರು ಮಧ್ಯಮ ಓವರ್ ಮುಕ್ತಾಯದವರೆಗೂ ಈ ಜೋಡಿ ಉತ್ತಮ ಬ್ಯಾಟಿಂಗ್ ಮಾಡಿತು. ವಿಕೆಟ್ ನೀಡದೆ ಸಮಯೋಚಿತ ಬ್ಯಾಟಿಂಗ್ ಮಾಡಿದ ನಂತರ ಮಧ್ಯಮ ಓವರ್‌ಗಳಲ್ಲಿ ಚೆನ್ನೈ 76 ರನ್ ಗಳಿಸಿತು. ಡೆತ್ ಓವರ್‌ನಲ್ಲಿ ಈ ಜೋಡಿ ಸ್ಫೋಟಕ ಬ್ಯಾಟಿಂಗ್ ಮಾಡಿತು ಕಾರ್ತಿಕ್ ಶರ್ಮ, 39 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಗಾಯಕ್ವಾಡ್ 67 ರನ್ ಗಳಿಸಿದರು. ಚೆನ್ನೈ 18.1 ಓವರ್‌ಗಳಲ್ಲಿ ಗುರಿ ಮುಟ್ಟಿತು.

ಇಂದು ಲಖನೌ-ಮುಂಬೈ ಪಂದ್ಯ

ಮುಂಬೈ: ಚೆನ್ನೈ ವಿರುದ್ಧದ ಪಂದ್ಯದಲ್ಲಿ ಸೋತ ನಂತರ ಪಂದ್ಯಾವಳಿಯಿಂದ ಬಹುತೇಕ ಹೊರಬಿದ್ದಿರುವ ಮುಂಬೈ ಇಂಡಿಯನ್ಸ್ ಮತ್ತು ಕೊನೆ ಸ್ಥಾನದಲ್ಲಿರುವ ಲಖನೌ ಸೂಪರ್ ಜೇಂಟ್ಸ್ ತಂಡಗಳು ಸೋಮವಾರದ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಸೋಲುಗಳಲ್ಲೇ ಮುಳುಗಿರುವ ಲಖನೌ ತಂಡಕ್ಕೂ ಇದು ಕೊನೆ ಅವಕಾಶ. ಅಂಕಪಟ್ಟಿಯ 3 ಮತ್ತು 4ನೇ ಸ್ಥಾನಕ್ಕಾಗಿ ಗುಜರಾತ್, ಹೈದರಾಬಾದ್, ಚೆನ್ನೈ ಮತ್ತು ದಿಲ್ಲಿ ಸ್ಪರ್ಧೆ ಮಾಡುತ್ತಿವೆ.

ಕೆಕೆಆರ್ ವಿರುದ್ಧದ ಪಂದ್ಯದಲ್ಲಿ ಲಖನೌ ಕೊನೆ ಕ್ಷಣದಲ್ಲಿ ಸೋತಿತ್ತು. ಇತ್ತ ಮುಂಬೈ ಚೆನ್ನೈ ವಿರುದ್ಧದ ಪಂದ್ಯದಲ್ಲಿ ಹೀನಾಯ ಸೋಲು ಕಂಡಿತ್ತು. ಮುಂಬೈ ಉಳಿದ ಪಂದ್ಯಗಳಲ್ಲಿ ಆಡುವ ಔಪಚಾರಿಕತೆಗಾಗಿ ಫೈಟ್ ಕೊಡಲಿದೆ. 7 ಪಂದ್ಯಗಳನ್ನು ಗೆದ್ದು ಪ್ಲೇಆಫ್‌ಗೆ ಹೋಗಬಲ್ಲ ಶೇ.1ರಷ್ಟು ಅವಕಾಶವನ್ನು ಹೊಂದಿದೆ. ಇತ್ತ ಲಖನೌ ಕೂಡ ಅದೇ ಸ್ಥಿತಿಯಲ್ಲಿದೆ. ಮುಂಬೈ ವಿರುದ್ಧ ಗೆದ್ದರೆ ಕೊನೆಯ ಸ್ಥಾನದಿಂದ ಮೇಲೇರಬಹುದು.

ಮುಂಬೈಗೆ ಪುಟಿದೇಳುವ ಸವಾಲು: ಚೆನ್ನೈ ವಿರುದ್ಧದ ಪಂದ್ಯದಲ್ಲಿ ಮತ್ತೊಮ್ಮೆ ಬ್ಯಾಟಿಂಗ್ ವೈಫಲ್ಯ ಕಂಡಿದೆ. ರಯಾನ್, ನಮನ್ ಉತ್ತಮ ಬ್ಯಾಟಿಂಗ್ ಮಾಡಿದ್ದರೂ ಇನ್ನುಳಿದವರು ಕೈಕೊಟ್ಟರು. ಮುಖ್ಯವಾಗಿ ಮಧ್ಯಮ ಕ್ರಮಾಂಕಿತ ಬ್ಯಾಟಿಗರಾದ ಸೂರ್ಯಕುಮಾರ್, ತಿಲಕ್ ಮತ್ತು ಹಾರ್ದಿಕ್ ಭಾರೀ ಹಿನ್ನಡೆ ಅನುಭವಿಸಿದ್ದಾರೆ. ಬೌಲಿಂಗ್ ವಿಚಾರಕ್ಕೆ ಬಂದರೆ ಬೂಮ್ರಾ, ಬೋಲ್ಟ್ ಮೊದಲಾದವರು ದುಬಾರಿಯಾಗಿದ್ದಾರೆ. ಕೃಷ್ಣ ಭಗತ್ ಕೂಡ ಹಿನ್ನಡೆ ಅನುಭವಿಸಿದ್ದಾರೆ. ಸ್ಯಾಂಟ್ನರ್‌ಗೆ ಗಾಯವಾಗಿರುವುದು ಹಿನ್ನಡೆ ತಂದಿದೆ. ರಘು ಶರ್ಮ ತಮ್ಮ ಮೊದಲ ಪಂದ್ಯದಲ್ಲಿ ಕಡಿಮೆ ರನ್ ಕೊಟ್ಟಿದ್ದಾರೆ.

ಸೋಲದಿರಲು ಲಖನೌ ಪಣ: ಇತ್ತ ಲಖನೌ ಸೂಪರ್ ಜೇಂಟ್ಸ್ ಎಲ್ಲಾ ಪಂದ್ಯಗಳಲ್ಲಿ ಕೊನೆ ಕ್ಷಣದ ತಪ್ಪುಗಳಿಂದಲೇ ಸೋತಿದೆ. ಸೂಪರ್ ಓವರ್ ನಡೆದ ಕೆಕೆಆರ್ ಪಂದ್ಯದಲ್ಲಿ ಬ್ಯಾಟಿಂಗ್ ವೈಫಲ್ಯದಿಂದ ಸೋತಿತ್ತು. ಮಾರ್ಷ್ ಹಿಡಿದು ಪಂತ್, ಪೂರಣ್, ಆಯುಷ್ ಲಯದಲ್ಲಿಲ್ಲ. ಯುವಕರಾದ ಮುಕುಲ್ ಮತ್ತು ಹಿಮ್ಮತ್ ಮೇಲೆ ಹೆಚ್ಚಿನ ಒತ್ತಡವಿದೆ. ಬೌಲಿಂಗ್ ವಿಭಾಗ ಉತ್ತಮ ಪ್ರದರ್ಶನವನ್ನೇ ನೀಡುತ್ತಿದೆ. ಶಮಿ, ಮೋಹ್ಸಿನ್ ಮತ್ತು ಪ್ರಿನ್ಸ್ ಉತ್ತಮ ಲಯದಲ್ಲಿದ್ದಾರೆ.

ಪಿಚ್: ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್ ಮತ್ತು ಬೌಲರ್‌ಗಳು ಸಮಾನ ಪ್ರದರ್ಶನ ನೀಡಿದ್ದಾರೆ. ಹೆಚ್ಚಿನ ಬೌನ್ಸ್ ಬ್ಯಾಟರ್‌ಗಳಿಗೆ ಕಾಟ ಕೊಟ್ಟರೆ, ಇಬ್ಬನಿ ಬೌಲರ್‌ಗಳಿಗೆ ಚಿಂತೆಯಾಗಿದೆ. ಮಳೆ ಸಾಧ್ಯತೆ ಕಮ್ಮಿ. ಮೊದಲು ಬೌಲಿಂಗ್ ಮಾಡಿದ ತಂಡಕ್ಕೆ ಲಾಭ ಸಿಗಬಹುದು.



ಪಂದ್ಯದ ವಿವರ

ಯಾವಾಗ: ಸೋಮವಾರ, ಎಲ್ಲಿ: ಮುಂಬೈ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಥಾಮಸ್ ಕಪ್: ಭಾರತಕ್ಕೆ ಕಂಚಿನ ಪದಕ

ಹೊಸದಿಲ್ಲಿ: ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ನಡೆದ ಥಾಮಸ್ ಕಪ್‌ನಲ್ಲಿ ಭಾರತದ ಅಭಿಯಾನ ಕಂಚಿನ ಪದಕದೊಂದಿಗೆ ಅಂತ್ಯಗೊಂಡಿದ್ದು, ಫ್ರಾನ್ಸ್ ವಿರುದ್ಧ ಸೆಮಿಫೈನಲ್‌ನಲ್ಲಿ 0-3 ಅಂತರದ ಸೋಲು ಕಂಡಿದೆ.

ಲಕ್ಷ್ಯ ಸೇನ್ ಮೊಣಕೈ ಗಾಯದ ಕಾರಣ ಪಂದ್ಯದಿಂದ ಹೊರಗುಳಿದ ಹಿನ್ನೆಲೆಯಲ್ಲಿ ಆಯುಷ್ ಶೆಟ್ಟಿ ಮೊದಲ ಸಿಂಗಲ್ಸ್ ಆಡಿದರು. ಆದರೆ ವಿಶ್ವ ಕ್ರಮಾಂಕ ನಾಲ್ಕನೇ ಆಟಗಾರ ಕ್ರಿಸ್ಟೊ ಪೊಪೋವ್ ವಿರುದ್ಧ 11-21, 9-21 ಅಂತರದಲ್ಲಿ 39 ನಿಮಿಷಗಳಲ್ಲಿ ಸೋಲು ಕಂಡರು.


ಅನುಭವಿಯ ಕಿದಾಂಬಿ ಶ್ರೀಕಾಂತ್ ತಂಡಕ್ಕೆ ಸಮಬಲ ತರಲು ಪ್ರಯತ್ನಿಸಿದರೂ, ವಿಶ್ವ ಕ್ರಮಾಂಕ ಹತ್ತನೇ ಆಟಗಾರ ಅಲೆಕ್ಸ್ ಲಾನಿಯರ್ ವಿರುದ್ಧ 16-21, 18-21 ಅಂತರದಲ್ಲಿ ಸೋತರು. ನಿರ್ಣಾಯಕ ಮೂರನೇ ಸಿಂಗಲ್ಸ್‌ನಲ್ಲಿ ಎಚ್. ಎಸ್. ಪ್ರಣಯ್ ಉತ್ತಮ ಆರಂಭ ಮಾಡಿದರು. ಮೊದಲ ಗೇಮ್‌ನಲ್ಲಿ ಬಹುತೇಕ ಮುನ್ನಡೆ ಸಾಧಿಸಿದ್ದರೂ, ಕೊನೆಯಲ್ಲಿ ಟೋಮಾ ಜೂನಿಯರ್ ಪೊಪೋವ್ 21-18 ಅಂತರದಲ್ಲಿ ಗೆದ್ದು ಮುನ್ನಡೆ ಪಡೆದರು. ನಂತರ ಎರಡನೇ ಗೇಮ್‌ನಲ್ಲಿ 21-16 ಅಂತರದಲ್ಲಿ ಜಯ ಸಾಧಿಸಿ ಫ್ರಾನ್ಸ್ ತಂಡವನ್ನು ಇತಿಹಾಸದಲ್ಲೇ ಮೊದಲ ಬಾರಿಗೆ ಫೈನಲ್‌ಗೆ ಕೊಂಡೊಯ್ದರು.

ಈ ಸೋಲಿನೊಂದಿಗೆ ಭಾರತ ತನ್ನ ಐದನೇ ಪದಕವನ್ನು ಗೆದ್ದಿದೆ. ಇದಕ್ಕೂ ಮೊದಲು 1952, 1955 ಮತ್ತು 1979ರಲ್ಲಿ ಕಂಚಿನ ಪದಕಗಳನ್ನು ಜಯಿಸಿತ್ತು. ಇನ್ನೊಂದು ಸೆಮಿಫೈನಲ್‌ನಲ್ಲಿ ಚೀನಾ ತಂಡ ಡೆನ್ಮಾರ್ಕ್ ವಿರುದ್ಧ 3-0 ಅಂತರದಲ್ಲಿ ಗೆದ್ದು ಫೈನಲ್ ಪ್ರವೇಶಿಸಿತು. ಶಿ ಯುಕೀ, ಲಿಯಾಂಗ್ ವೇಯ್ ಕೆಂಗ್ ವಾಂಗ್ ಚಾಂಗ್ ಜೋಡಿ ಮತ್ತು ಲಿ ಶಿ ಫೆಂಗ್ ತಮ್ಮ ತಮ್ಮ ಪಂದ್ಯಗಳಲ್ಲಿ ಗೆಲುವು ಸಾಧಿಸಿದರು.



ಪದಬಂಧ

» ರಾಜಾ ಸಂಗಮೇಶ ಹಿರೇಮಠ



5973

5972 ಉತ್ತರ

ಎಡದಿಂದ ಬಲಕ್ಕೆ:
1.ನದಿಸಾಗರ
3.ಮದನ 4.ಜಲಧಿ
6.ನರಭಕ್ಷಕ 7.ಗತಕಾಲ
10.ಸುಸಜ್ಜಿತ 12.ವಜನು
13.ಮರುಕ 15.ಪತನ
16.ನಯನಕರ್ಣ
ಮೇಲಿನಿಂದ ಕೆಳಕ್ಕೆ :
1.ನಮನ 2.ರಜಕ
3.ನವರಂಗ 5.ಧಿಕ್ಕರಿಸು
8.ತಳವೂರು 9.ಲವ
10.ತನು 11.ಸಹಮತ
14.ಮನ 15.ಪರ್ಣ

ಎಡದಿಂದ ಬಲಕ್ಕೆ
2.ಆಕಾರವೂ ಕಾಣದಷ್ಟು ಕತ್ತಲೆ (5)
5.ವಿರಕ್ತಿಯಿಲ್ಲ ತಿರುಗಿ ಮೂಡಿದೆ (3)
6.ಕೂಲಂಕಷವಾಗಿ ವಿಶ್ಲೇಷಣೆ ಮಾಡುವುದು (3)
7.ಮನದಲ್ಲಿ ಅತಿ ಉತ್ಸಾಹದ ಭಾವವಿರುವುದು (5)
8.ಬಳ್ಳಿಗಳಿಂದ ರಚಿತವಾದ ಮಂಟಪ (4)
11.ಜ್ಞಾನ-ಕಲೆಯ ದೇವತೆ-ಶಾರದೆ (4)
13.ಕೆಂಪುಬಣ್ಣದ ನೆತ್ತರು (3)
14.ನಮಗಾರಿಗೂ ಸಿಗದ ಸಿಹಿತಿನಿಸು (3)
16.ಸಾಗರ ಮಂಥನಕ್ಕೆ ಬಳಸಿದ ಸರ್ಪ (3)
17.ಮನುಷ್ಯನಾಕಾರದ ಕಪಿ (5)
ಮೇಲಿನಿಂದ ಕೆಳಕ್ಕೆ
1.ಗಿರೀಶ್ ಕಾರ್ನಾಡರ ಈ ಕೃತಿ ಚಲನಚಿತ್ರವಾಗಿದೆ (5)
2.ಹಳ್ಳಿಯವನು-ಗ್ರಾಮವಾಸಿ (3)
3.ಈ ಕುಪ್ಪಸದ ಮೊದಲು ಸೂರ್ಯನಿದ್ದಾನೆ (3)
4.ಯಮಪುರಿಯೆಡೆಗೆ ಹೋಗುವುದು (5)
9.ಹಿಂದೆ ಬರವಣಿಗೆಗೆ ಬಳಸುತ್ತಿದ್ದ ಎಲೆ (4)
10.ಹುಲ್ಲು-ಎಲೆ ಸಸ್ಯಗಳ ಬಣ್ಣ (3)
11.ಸಲಿಗೆ-ಮುಕ್ತತೆಯಿದು (3)
12.ಕಷ್ಟವಾದುದನ್ನು ಸುಲಭವಾಗುವಂತೆ ಮಾಡು (4)
15.ಬೀರುತ್ತಿರುವ ಹಾಸ ತಲೆಕೆಳಗಾಗಿದೆ (2)
16.ಏಳು ದಿನಗಳ ಕಾಲ (2)

ಕಿರುಸುದ್ದಿ

ಸಂಘದ ನೂತನ ಕಾರ್ಯಾಲಯ ಉದ್ಘಾಟನೆ ಇಂದು

ಧಾರವಾಡ: ರಾಷ್ಟ್ರೀಯ ಸ್ವಯಂಸೇವಕ ಸಂಘ ಪ್ರೇರಿತ ಶಿವಕೃಪ ಟ್ರಸ್ಟ್ ರಾಮನಗರ ಧಾರವಾಡದ ವತಿಯಿಂದ ನೂತನ ಕಾರ್ಯಾಲಯ ಶಿವಕೃಪಾ ಲೋಕಾರ್ಪಣೆ ಸಮಾರಂಭ ಮೇ 4ರಂದು ಸಂಜೆ 6ಕ್ಕೆ ಸ್ಥಳೀಯ ರಾಮನಗರದ ಆದರ್ಶ ಬಾಲಿಕ ಶಾಲೆಯ ಆವರಣದಲ್ಲಿ ನಡೆಯಲಿದೆ.

ಸಮಾರಂಭದಲ್ಲಿ ಅಮ್ಮಿನಭಾವಿ ಪಂಚಗ್ರಹ ಹಿರೇಮಠದ ಅಭಿನವ ಶಾಂತಲಿಂಗ ಶಿವಾಚಾರ್ಯರು ಸಾನ್ನಿಧ್ಯ ವಹಿಸಲಿದ್ದು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ಮುಖ್ಯ ಅಥಿತಿಗಳಾಗಿ ಅವರು ಭಾಗವಹಿಸಲಿದ್ದಾರೆ. ಹಿತೈಷಿಗಳು, ಸಾರ್ವಜನಿಕರು ಕಾರ್ಯಾಲಯ ಲೋಕಾರ್ಪಣೆ ಸಮಾರಂಭಕ್ಕೆ ಆಗಮಿಸಲು ಟ್ರಸ್ಟ್ ಅಧ್ಯಕ್ಷ ಅಮರ ಟಿಕಾರೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿಕೆಶಿ ಪಾಲ್ಗೊಂಡಿದ್ದ ಕಾರ್ಯಕ್ರಮದಲ್ಲಿ ಅಗ್ನಿ ಅವಘಡ

ಸಿಂಧನೂರು: ನಗರದಲ್ಲಿ ಇಂದು ಆಯೋಜಿಸಲಾಗಿದ್ದ ಬೃಹತ್ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಸಂಭವಿಸಬಹುದಾಗಿದ್ದ ದೊಡ್ಡ ಮಟ್ಟದ ಅನಾಹುತವೊಂದು ತಪ್ಪಿದೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭಾಗವಹಿಸಿದ್ದ ಕಾರ್ಯಕ್ರಮದ ವೇದಿಕೆ ಬಳಿ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ದಿಢೀರ್ ಬೆಂಕಿ ಕಾಣಿಸಿಕೊಂಡಿದ್ದು, ಗಣ್ಯರು ಹಾಗೂ ಸಾರ್ವಜನಿಕರಲ್ಲಿ ಕೆಲಕಾಲ ಆತಂಕ ಸೃಷ್ಟಿಸಿತು. ಅದೃಷ್ಟವಶಾತ್ ಈ ಘಟನೆಯಲ್ಲಿ ಯಾವುದೇ ಪ್ರಾಣಾಪಾಯ ಅಥವಾ ದೊಡ್ಡ ಅನಾಹುತಗಳು ಸಂಭವಿಸಿಲ್ಲ. ಸಿಂಧನೂರು ಪಟ್ಟಣದಲ್ಲಿ 151 ಜೋಡಿಗಳ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಅದ್ದೂರಿಯಾಗಿ ಇಂದು ಹಮ್ಮಿಕೊಳ್ಳಲಾಗಿತ್ತು. ಈ ಸಂಭ್ರಮದ ಕ್ಷಣಕ್ಕೆ ಸಾಕ್ಷಿಯಾಗಲು ಡಿಕೆ ಶಿವಕುಮಾರ್, ಸಚಿವ ಈಶ್ವರ ಖಂಡ್ರೆ ಸೇರಿದಂತೆ ಜಿಲ್ಲೆಯ ಹಲವು ಪ್ರಮುಖ ಗಣ್ಯರು ಭಾಗವಹಿಸಿದ್ದರು. ಕಾರ್ಯಕ್ರಮ ಮುಗಿಸಿ ನವಜೋಡಿಗಳಿಗೆ ಹರಸಿ ಶುಭಕೋರಿದ ಬಳಿಕ, ಗಣ್ಯರು ವೇದಿಕೆಯಿಂದ ಇಳಿಯುತ್ತಿದ್ದ ಸಂದರ್ಭದಲ್ಲಿ ಈ ಅವಘಡ ನಡೆದಿದೆ. ವೇದಿಕೆ ಮೆಟ್ಟಿಲುಗಳ ಬಳಿಯ ವಿದ್ಯುತ್ ಸಂಪರ್ಕದಲ್ಲಿ ತಾಂತ್ರಿಕ ದೋಷಕಾಣಿಸಿಕೊಂಡು ಶಾರ್ಟ್ ಸರ್ಕ್ಯೂಟ್ ಉಂಟಾಗಿದ್ದು, ಕ್ಷಣಮಾತ್ರದಲ್ಲಿ ಬೆಂಕಿ ಹೊತ್ತಿಕೊಂಡಿದೆ.

ಪೊಲೀಸರ ಸಮಯಪ್ರಜ್ಞೆ: ಬೆಂಕಿ ಕಾಣಿಸಿಕೊಳ್ಳುತ್ತಿದ್ದಂತೆ ತಕ್ಷಣ ಎಚ್ಚೆತ್ತ ಭದ್ರತಾ ಸಿಬ್ಬಂದಿ ಹಾಗೂ ಪೊಲೀಸರು ಸಮಯಪ್ರಜ್ಞೆ ಮೆರೆದಿದ್ದಾರೆ. ಕೂಡಲೇ ಡಿಸಿಎಂ ಡಿ.ಕೆ. ಶಿವಕುಮಾರ್ ಮತ್ತು ಸಚಿವ ಈಶ್ವರ ಖಂಡ್ರೆ ಅವರನ್ನು ಸುರಕ್ಷಿತವಾಗಿ ಬೇರೆಡೆಗೆ ಸ್ಥಳಾಂತರಿಸುವಲ್ಲಿ ಯಶಸ್ವಿಯಾದರು. ಸ್ಥಳದಲ್ಲಿದ್ದವರು ತಕ್ಷಣವೇ ಬೆಂಕಿ ನಂದಿಸಿದ್ದರಿಂದ ಹೆಚ್ಚಿನ ಹಾನಿ ತಪ್ಪಿದಂತಾಗಿದೆ. ತಾಂತ್ರಿಕ ದೋಷದಿಂದಾಗಿ ಈ ಅಗ್ನಿ ಅವಘಡ ಸಂಭವಿಸಿದೆ ಎಂದು ಪ್ರಾಥಮಿಕವಾಗಿ ತಿಳಿದುಬಂದಿದ್ದು, ದೊಡ್ಡ ಅನಾಹುತವೊಂದು ತಪ್ಪಿದ್ದರಿಂದ ಎಲ್ಲರೂ ನಿಟ್ಟುಸಿರು ಬಿಡುವಂತಾಗಿದೆ.

ಡಿಜಿಟಲ್ ಅರೆಸ್ಟ್: ವಂಚಕರಿಬ್ಬರ ಬಂಧನ

ಕಾರವಾರ: ಡಿಜಿಟಲ್ ಅರೆಸ್ಟ್ ಮಾಡುವುದಾಗಿ ಮುಂಬೈ ಪೊಲೀಸರ ಹೆಸರಿನಲ್ಲಿ ಯಲ್ಲಾಪುರದ ವ್ಯಕ್ತಿಯೋರ್ವರನ್ನು ವಂಚಿಸಿದ ಇಬ್ಬರು ವಂಚಕರನ್ನು ಉತ್ತರಕನ್ನಡ ಜಿಲ್ಲಾ ಸೈಬರ್ ಅಪರಾಧ ವಿಭಾಗದ ಪೊಲೀಸರು ವಿಜಯಪುರದಲ್ಲಿ ಬಂಧಿಸಿದ್ದಾರೆ. ಬಂಧಿತ ಆರೋಪಿಗಳು ದೇಶಾದ್ಯಂತ ಸೈಬರ್ ವಂಚನೆ, ಡಿಜಿಟಲ್ ಬಂಧನ, ಹೂಡಿಕೆ ವಂಚನೆಗಳಿಗೆ ಸಂಬಂಧಿಸಿದ ಹಲವು ಪ್ರಕರಣಗಳಲ್ಲಿ ಭಾಗಿಯಾಗಿರುವುದಾಗಿ ತಿಳಿದು ಬಂದಿದೆ. ವಿಜಯಪುರ ನಿವಾಸಿ ಕಿರಣ್(23) ಮತ್ತು ವಿಜಯನಗರ ನಿವಾಸಿ ಸಂದೀಪ ಸಂಗಮೇಶ ಬಂಧಿತ ಆರೋಪಿಗಳಾಗಿದ್ದು, ಆರೋಪಿತರು ಹಣ ವರ್ಗಾವಣೆ ಮಾಡಿಕೊಂಡ ಬ್ಯಾಂಕ್ ಖಾತೆಗಳನ್ನು ಪ್ರೀಜ್ ಮಾಡಲಾಗಿದೆ. ಯಲ್ಲಾಪುರ ಉಮ್ಮಚಗಿಯ ಜೀವ ವಿಮಾ ಏಜೆಂಟ್ ಶಿವಾನಂದ ಹೆಗಡೆ ಎನ್ನುವವರಿಗೆ ವಿಡಿಯೋ ಕರೆ ಮಾಡಿದ್ದ ಆರೋಪಿತರು ತಾವು ಮುಂಬೈ ಪೊಲೀಸರು ಎಂದು ತಿಳಿಸಿ ಶಿವಾನಂದ ಅವರ ಆಧಾರ್ ಕಾರ್ಡ್ ಬಳಸಿ ಉಗ್ರರು ಕೋಟ್ಯಂತರ ರೂಪಾಯಿಗಳ ಅವ್ಯವಹಾರ ನಡೆಸಿರುವ ಕುರಿತಂತೆ ಮುಂಬೈ ಕ್ರೈಂ ಬ್ರಾಂಚ್‌ನಲ್ಲಿ ದೂರು ದಾಖಲಾಗಿದ್ದು ಅವರನ್ನು ಡಿಜಿಟಲ್ ಬಂಧನ ಮಾಡುವುದಾಗಿ ಹೆದರಿಸಿದ್ದರು. ಇದರಿಂದ ಭಯಗೊಂಡ ಶಿವಾನಂದ ಹೆಗಡೆ ಅವರು ಏಪ್ರಿಲ್ 21ರಿಂದ 24ರ ನಡುವಿನ ಅವಧಿಯಲ್ಲಿ ವಂಚಕರ ಬ್ಯಾಂಕ್ ಖಾತೆಗಳಿಗೆ 17450000 ರೂಪಾಯಿ ವರ್ಗಾಯಿಸಿದ್ದರು. ನಂತರ ತಾವು ಮೋಸ ಹೋಗಿರುವುದಾಗಿ ತಿಳಿದ ವ್ಯಕ್ತಿ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಉತ್ತರ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠ ದೀಪನ್.ಎನ್.ಎಂ ಅವರು ಸೈಬರ್ ಅಪರಾಧ ವಿಭಾಗದ ಡಿ.ವೈ.ಎಸ್.ಪಿ ಅಶ್ವಿನಿ ಅವರ ನೇತೃತ್ವದಲ್ಲಿ ವಿಶೇಷ ತಂಡ ರಚಿಸಿದ್ದರು. ಆರೋಪಿಗಳ ಬ್ಯಾಂಕ್ ಖಾತೆಗಳಿಗೆ ಕೋಟ್ಯಂತರ ರೂಪಾಯಿ ಹಣ ಬೇರೆ ಬೇರೆ ಕಡೆಗಳಿಂದ ಜಮಾ ಆಗಿರುವುದು ತನಿಖೆಯಿಂದ ತಿಳಿದು ಬಂದಿದ್ದು, ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ತನಿಖೆಗೆ ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠ ದೀಪನ್. ಎನ್.ಎಂ.ತಿಳಿಸಿದ್ದಾರೆ.

ಉಪಚುನಾವಣೆ ಫಲಿತಾಂಶ | ಮತ ಎಣಿಕೆಗೆ 14 ಟೇಬಲ್ | 23 ಸುತ್ತು ಕೌಂಟಿಂಗ್

ಅಭ್ಯರ್ಥಿಗಳ ಹಣೆಬರಹ ಇಂದು ನಿರ್ಧಾರ

▸ ಗದೀಶ ಎಂ.ಗಾಣಿಗೇರ

ಬಾಗಲಕೋಟೆ: ತೀವ್ರ ಕುತೂಹಲ ಕೆರಳಿಸಿರುವ ಕಾಂಗ್ರೆಸ್ ಪಕ್ಷದ ಸರ್ಕಾರಕ್ಕೆ ಪ್ರತಿಷ್ಠೆಯಾಗಿರುವ ಬಾಗಲಕೋಟೆಯ ಉಪಚುನಾವಣೆಯ ಫಲಿತಾಂಶ ಸೋಮವಾರ ಪ್ರಕಟವಾಗಲಿದ್ದು, ತೀವ್ರ ಸ್ಪರ್ಧೆಯಲ್ಲಿರುವ ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳಲ್ಲಿ ಯಾರು ಜಯ ಗಳಿಸಲಿದ್ದಾರೆ ಎಂಬ ಹಣೆಬರಹ ನಿರ್ಧಾರವಾಗಲಿದೆ.

ಬಿಜೆಪಿಯಿಂದ ವೀರಣ್ಣ ಚರಂತಿಮಠ, ಕಾಂಗ್ರೆಸ್‌ದಿಂದ ಉಮೇಶ ಮೇಟಿಯವರ ನಡುವೆ ನೇರ ಹಣಾಹಣಿ ಇದ್ದು, ಕ್ಷೇತ್ರದ ಮತದಾರರು ನೀಡಿರುವ ಪ್ರತಿ ಮತ ಮತಪೆಟ್ಟಿಗೆಯಲ್ಲಿ ಭದ್ರವಾಗಿದೆ. ಸೋಮವಾರ ಮತಪೆಟ್ಟಿಗೆ ಓಪನ್ ಆಗುತ್ತಿದ್ದಂತೆ ಗೆಲುವಿನ ಹೂಮಾಲೆ ಯಾರ ಕೊರಳಿಗೆ ಬೀಳಲಿದೆ ಎಂಬುದು ಮಾತ್ರ ಭಾರೀ ಕುತೂಹಲ ಕೆರಳಿಸಿದೆ.

ಈಗಾಗಲೇ ಎರಡೂ ಪಕ್ಷದ ಕಾರ್ಯಕರ್ತರು ಸಾಮಾಜಿಕ ಜಾಲತಾಣದಲ್ಲಿ ನಮ್ಮ ಪಕ್ಷದ ಅಭ್ಯರ್ಥಿ ಗೆಲ್ಲುತ್ತಾರೆ ಪೋಸ್ಟ್ ಪ್ರಕಟವಾಗುತ್ತಿರುವುದು ಒಂದು ಕಡೆಯಾದರೆ ಹಿಂದೆ ಗೆಲುವು ಸಾಽಸಿದ ಸಂದರ್ಭದಲ್ಲಿ ಆಚರಿಸಿದ ವಿಜಯೋತ್ಸವ ವಿಡಿಯೋ ತುಣಕುಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಆದರೆ, ಸೋಮವಾರ ಮಾತ್ರ ಮಧ್ಯಾಹ್ನ ಯಾವ ಪಕ್ಷದ ಅಭ್ಯರ್ಥಿ ಗೆಲ್ಲುತ್ತಾರೆ ಪಕ್ಷದ ಕಾರ್ಯಕರ್ತರು ವಿಜಯೋತ್ಸವ ಆಚರಿಸಲು ತುದಿಗಾಲು ಮೇಲೆ ನಿಂತಿದ್ದಾರೆ.

ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ಕೊಠಡಿಗಳಲ್ಲಿ ನಡೆಯುವ ಮತದಾನ ಸೋಮವಾರ ಬೆಳಗ್ಗೆ 7 ಗಂಟೆಗೆ ಭದ್ರವಾಗಿರುವ ಮತಪೆಟ್ಟಿಗೆ ಕೊಠಡಿಗಳನ್ನು ತೆರೆಯಲಾಗುತ್ತದೆ. ನಂತರ 8ರಿಂದ ಮತ ಎಣಿಕೆ ಶುರುವಾಗಲಿದೆ. ಮೊದಲಿಗೆ ಅಂಚೆ ಮೂಲಕ ಹಾಕಿರುವ ಮತಗಳ ಎಣಿಕೆ ನಡೆಯಲಿದೆ. ತೋಟಗಾರಿಕೆ ವಿವಿಯ ರೂ.4ರಲ್ಲಿಯ 14 ಟೇಬಲ್‌ಗಳಲ್ಲಿ ಮತ ಎಣಿಕೆ ಆರಂಭವಾಗಲಿದೆ.

14 ಟೇಬಲ್‌ಗಳಲ್ಲಿ ನಡೆಯುವ ಮತದಾನ ಎಣಿಕೆಗೆ ಯಾವುದೇತೊಂದರೆಯಾಗದಂತೆ ಜಿಲ್ಲಾ ಚುನಾವಣಾಽಕಾರಿಗಳು 63 ಸಿಬ್ಬಂದಿ ನಿಯೋಜಿಸಿದ್ದಾರೆ. ಪ್ರತಿ ಸುತ್ತಿನಲ್ಲಿ ಬರುವ ಅಭ್ಯರ್ಥಿಗಳ ಮತಗಳಿಕೆಯ ಫಲಿತಾಂಶವನ್ನು ತೋಟಗಾರಿಕೆ ವಿವಿ ಆವರಣದ ಹೊರಗಡೆ ಇರುವ ಸಾರ್ವಜನಿಕರಿಗೆ ಆಗಾಗ ಮೈಕ್ ಮೂಲಕ ಘೋಷಣೆ ಮಾಡಲಾಗುತ್ತದೆ.

ಉಪಚುನಾವಣೆಯ ಕದನದ ಫಲಿತಾಂಶ ಹೊರ ಬೀಳುತ್ತಿರುವ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಶಾಂತಿಯುತ ವಾತಾವರಣ ಇರಬೇಕು ಎಂಬ ಹಿನ್ನೆಲೆಯಲ್ಲಿ ಮೇ 4ರಂದು ಬೆಳಗ್ಗೆ 6 ಗಂಟೆಯಿಂದ ಮೇ 6ರವರೆಗೆ ನಿಷೇಧಾಜ್ಞೆಯನ್ನು ಜಿಲ್ಲಾ ಚುನಾವಣಾಽಕಾರಿಗಳು ಜಾರಿ ಮಾಡಿದ್ದಾರೆ.

ಬಾಗಲಕೋಟೆಯ ವಿಧಾನಸಭೆ ಮತಕ್ಷೇತ್ರದ 10 ಕಿ.ಮೀ.ವ್ಯಾಪ್ತಿಯಲ್ಲಿ ಇರುವ ಮದ್ಯದ ಅಂಗಡಿ, ರೆಸ್ಟೋರೆಂಟ್‌ಗಳಲ್ಲಿ ಮಾರಾಟ, ಸರಬರಾಜು ಬಂದ್ ಮಾಡಲು ಆದೇಶ ಹೊರಡಿಸಲಾಗಿದೆ.



ದಿಗಂತ ವಿಶೇಷ

ಪೊಲೀಸ್ ಭದ್ರತೆ

ಉಪಚುನಾವಣೆಯ ಫಲಿತಾಂಶ ಹೊರ ಬೀಳುತ್ತಿರುವ ಕಾರಣ ತೋಟಗಾರಿಕೆ ವಿವಿ ಮುಂಭಾಗ, ಹೊರಗಡೆ, ಒಳಗಡೆ ಭಾರೀ ಪೊಲೀಸ್ ಭದ್ರತೆ ನಿಯೋಜಿಸಲಾಗಿದೆ. ಭದ್ರತೆ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ನೇತೃತ್ವ ವಹಿಸಿದ್ದಾರೆ. ಪ್ರತಿಯೊಂದು ಸಿಬ್ಬಂದಿ, ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದು, ಭದ್ರತೆಯಲ್ಲಿ ಲೋಪವಾಗದಂತೆ ಕ್ರಮ ವಹಿಸಬೇಕು ಎಂದು ತಿಳಿಸಿದ್ದಾರೆ.

ಮತ ಎಣಿಕೆಗೆ ಪೂರ್ವಸಿದ್ಧತೆ ಮಾಡಿಕೊಂಡಿದೆ. ಮತ ಎಣಿಕೆಗೆ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ. 14 ಟೇಬಲ್‌ಗಳಲ್ಲಿ 23 ಸುತ್ತು ಮತ ಎಣಿಕೆ ನಡೆಯಲಿದೆ.

■ ಸಂಗಪ್ಪ, ಜಿಲ್ಲಾ ಚುನಾವಣಾಧಿಕಾರಿ

ನವಲಿ ಸಮಾನಾಂತರ ಜಲಾಶಯ

ಆಂಧ್ರ ಸಿಎಂ ಭೇಟಿಗೆ ಸಮಯ ಸಿಗುತ್ತಿಲ್ಲ: ಡಿಕೆಶಿ

ವಿಜಯನಗರ: ಕೊಪ್ಪಳ ಜಿಲ್ಲೆಯ ನವಲಿ ತುಂಗಭದ್ರ ಸಮಾನಾಂತರ ಜಲಾಶಯ ನಿರ್ಮಾಣಕ್ಕೆ ರಾಜ್ಯ ಸರ್ಕಾರ ಬದ್ಧವಾಗಿದೆ. ಆದರೆ, ಈ ಕುರಿತು ಚರ್ಚೆಗೆ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ಭೇಟಿಗೆ ಸಮಯ ಸಿಗುತ್ತಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಹೇಳಿದರು.

ತುಂಗಭದ್ರ ಜಲಾಶಯದಲ್ಲಿ ಕ್ರಸ್ಟ್ ಗೇಟ್‌ಗಳ ದುರಸ್ತಿ ಕಾರ್ಯ ವೀಕ್ಷಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತುಂಗಭದ್ರಾ ಅಣೆಕಟ್ಟು ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತೆಲಂಗಾಣ ಮೂರೂ ರಾಜ್ಯಗಳಿಗೆ ಸಂಬಂಧಿಸಿದ್ದರಿಂದ ಏನೇ ಕೆಲಸ ಆಗಬೇಕಿದ್ದರೂ ಜಂಟಿಯಾಗಿ ನಿರ್ಣಯ ಕೈಗೊಳ್ಳಬೇಕಿದೆ. ನವಲಿ ಸಮಾನಾಂತರ ಜಲಾಶಯ ನಿರ್ಮಾಣಕ್ಕೆ ಕರ್ನಾಟಕ ಸರ್ಕಾರ ಸಿದ್ಧವಿದೆ. ಅದಕ್ಕೆ ಇತರೆ ರಾಜ್ಯಗಳ ಅನುಮೋದನೆಗಾಗಿ ಕಾಯುತ್ತಿದ್ದೇವೆ ಎಂದು ತಿಳಿಸಿದರು.

ಜಲಾಶಯದಲ್ಲಿ ಹೂಳು ತುಂಬಿರುವ ಕಾರಣಕ್ಕೆ 105 ಟಿಎಂಸಿ ನೀರಿನ ಸಂಗ್ರಹ ಸಾಮರ್ಥ್ಯವನ್ನು 100 ಟಿಎಂಸಿಗೆ ಇಳಿಸಲಾಗಿದೆ ಎಂಬ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಹೂಳು ತೆಗೆಯುವಿಕೆ ನವಲಿ ಜಲಾಶಯದ ಯೋಜನೆಗೆ ಸಂಬಂಧಿಸಿದಂತೆ ಆಂಧ್ರಪ್ರದೇಶದ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲು ಸರ್ಕಾರ ಸಿದ್ಧವಿದೆ. ಹೂಳು ತೆಗೆಯಲು ಚೀನಾ ತಂತ್ರಜ್ಞಾನ ಬಳಕೆಯ ಬಗ್ಗೆ ಚರ್ಚೆಗಳು ನಡೆಯುತ್ತಿದ್ದು, ಈ ಕುರಿತು ಗ್ಲೋಬಲ್ ಟೆಂಡರ್ ಕರೆಯುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ.

ತುಂಗಭದ್ರಾ ಅಣೆಕಟ್ಟಿನ ಸುತ್ತಮುತ್ತಲ ಕೈಗಾರಿಕೆಗಳಿಂದ ರಾಸಾಯನಿಕಯುಕ್ತ ನೀರು ಅಣೆಕಟ್ಟನ್ನು ಸೇರುತ್ತಿರುವ ಬಗ್ಗೆ ವರದಿಗಳು ಬಂದಿದ್ದು, ಈ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ ಅವರು, ಅಭಿವೃದ್ಧಿ ಮುಖ್ಯವಾದರೂ ಜನರ ಆರೋಗ್ಯ ಮತ್ತು ಬೆಳೆಗಳ ರಕ್ಷಣೆ ಸರ್ಕಾರದ ಆದ್ಯತೆಯಾಗಿದೆ ಎಂದರು.



ಶ್ರಮಿಕರೇ ದೇಶದ ನಿಜವಾದ ವಿಶ್ವಕರ್ಮರು

ಬಳ್ಳಾರಿ: ದೇಶದ ಶ್ರಮಿಕ ವರ್ಗವು ರಾಷ್ಟ್ರ ನಿರ್ಮಾಣದ ನಿಜವಾದ ಶಿಲ್ಪಿಗಳು ಮತ್ತು ನಮ್ಮ ಪಾಲಿನ ವಿಶ್ವಕರ್ಮರು. ಅವರ ಕಲ್ಯಾಣ ಮತ್ತು ಸಾಮಾಜಿಕ ಭದ್ರತೆಯನ್ನು ಖಚಿತಪಡಿಸುವುದು ಸರ್ಕಾರದ ಆದ್ಯತೆಯಾಗಿದೆ ಎಂದು ಕೇಂದ್ರ ಕಾರ್ಮಿಕ, ಉದ್ಯೋಗ ಹಾಗೂ ಯುವಜನ ವ್ಯವಹಾರಗಳ ಸಚಿವ ಡಾ.ಮನ್ಸುಖ್ ಮಾಂಡವೀಯ ಅವರು ಹೇಳಿದರು.

ಭಾನುವಾರ, ದೊಡ್ಡಬಳ್ಳಾಪುರದಲ್ಲಿ ನೂತನವಾಗಿ ನಿರ್ಮಿಸಲಾದ 100 ಹಾಸಿಗೆಗಳ ಇಎಸ್‌ಐಸಿ ಆಸ್ಪತ್ರೆಯ ಉದ್ಘಾಟನೆ ಹಾಗೂ ಇದೇ ಸಂದರ್ಭದಲ್ಲಿ ಬಳ್ಳಾರಿಯಲ್ಲಿ ನಿರ್ಮಾಣವಾಗಲಿರುವ 100 ಹಾಸಿಗೆಗಳ ಇಎಸ್‌ಐಸಿ ಆಸ್ಪತ್ರೆಗೆ ವರ್ಚುವಲ್ ಮೂಲಕ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಬಳ್ಳಾರಿ ವಿಭಾಗದ ಸುಮಾರು 64,000 ಕಾರ್ಮಿಕರು ಮತ್ತು ಅವರ ಕುಟುಂಬದವರು ಸೇರಿ 2 ಲಕ್ಷಕ್ಕೂ ಹೆಚ್ಚು ಜನರಿಗೆ ಉತ್ತಮ ವೈದ್ಯಕೀಯ ಸೇವೆ ಒದಗಿಸಲಿದೆ ಎಂದು ತಿಳಿಸಿದರು.

ಕೇಂದ್ರ ಕಾರ್ಮಿಕ ಮತ್ತು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಆಸ್ಪತ್ರೆಯ ನಿರ್ಮಾಣದಲ್ಲಿ ಶ್ರಮಿಸಿದ ಕಾರ್ಮಿಕರನ್ನು ಸಚಿವರು ಇದೇ ಸಂದರ್ಭದಲ್ಲಿ ಗೌರವಿಸಿದರು ಮತ್ತು ಫಲಾನುಭವಿಗಳಿಗೆ ಇಎಸ್‌ಐ ಸೌಲಭ್ಯಗಳ ಚೆಕ್ ವಿತರಿಸಿದರು. ಸಂಸದ ಡಾ.ಕೆ. ಸುಧಾಕರ್, ದೊಡ್ಡಬಳ್ಳಾಪುರ ಶಾಸಕ ಧೀರಜ್ ಮುನಿರಾಜು ಉಪಸ್ಥಿತರಿದ್ದರು.



ಬ್ಯಾಲೆಟ್ ಪೇಪರ್‌ನಲ್ಲೂ ಮೋಸ

ಕಾಂಗ್ರೆಸ್‌ಗೆ ಮುಖಭಂಗ: ಬೊಮ್ಮಾಯಿ

ಕೊಪ್ಪಳ: ರಾಜ್ಯದ ನಡೆದ ಎರಡು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲುತ್ತಾರೆ. ಪಶ್ಚಿಮ ಬಂಗಾಳ ಹಾಗೂ ಅಸ್ಸಾಂನಲ್ಲಿಯೂ ಬಿಜೆಪಿ ಬಹುಮತ ಪಡೆಯಲಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

ಕೊಪ್ಪಳದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾಳೆ ಬರುವ ಉಪ ಚುನಾವಣೆ ಫಲಿತಾಂಶದಲ್ಲಿ ಎರಡು ಕ್ಷೇತ್ರದಲ್ಲಿ ಬಿಜೆಪಿ ಗೆಲ್ಲುತ್ತದೆ. ನಾವು ಮಾಡಿರುವ ಸಾಧನೆಗಳು ಮತ್ತು ಚುನಾವಣೆಯಲ್ಲಿ ಸಂಘಟಿತವಾದ ಪ್ರಚಾರದ ಪರಿಣಾಮ ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿ ಜಯಭೇರಿ ಗಳಿಸುವ ವಿಶ್ವಾಸ ಇದೆ. ಅಲ್ಲದೇ ಪಶ್ಚಿಮ ಬಂಗಾಳ ಹಾಗೂ ಅಸ್ಸಾಂ ನಲ್ಲಿ ಕೂಡಾ ಬಿಜೆಪಿ ಗೆಲ್ಲುತ್ತದೆ ಅಂತ ಎಲ್ಲ ಸಮೀಕ್ಷೆ ಹೇಳಿದೆ. ಈ ಭಾರಿ ಪಶ್ಚಿಮ ಬಂಗಾಲದಲ್ಲಿ ದೊಡ್ಡ ಪರಿವರ್ತನೆಯಾಗುತ್ತದೆ. ಭಾರತದ ರಾಜಕಿಯ ದಿಕ್ಸೂಚಿ ಬದಲಾವಣೆಯಾಗುವ ಪಲಿತಾಂಶ ಬರತ್ತದೆ ಎಂದು ಹೇಳಿದರು.

ಕಾಂಗ್ರೆಸ್‌ಗೆ ಮುಖಭಂಗ: ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಮರು ಮತ ಎಣಿಕೆ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸೋಲಿನ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ರಾಜ್ಯವನ್ನು ಅಧೋಗತಿಗೆ ತೆಗೆದುಕೊಂಡು ಹೋಗಿ ಪ್ರಾಚೀನ ಕಾಲಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ಚುನಾವಣೆಯನ್ನೂ ಪ್ರಾಚೀನ ಕಾಲಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ತಂತ್ರಜ್ಞಾನ ಬಹಳಷ್ಟು ಮುಂದೆ ಹೋಗಿದೆ.

ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಕೂಡಾ ಹಲವು ಚುನಾವಣೆಗಳಾಗಿವೆ. ಕಾಂಗ್ರೆಸ್ ಪಕ್ಷ ಸೋಲುತ್ತಿರುವುದರಿಂದ ಬ್ಯಾಲೇಟ್ ಪೇಪರ್ ಕಡೆಗೆ ಹೋಗುತ್ತಿದೆ. ಆದರೆ, ಬ್ಯಾಲೇಟ್ ಪೇಪರ್‌ನಲ್ಲಿ ಮೋಸ ಮಾಡಿ ಗೆದ್ದು ಈಗ ಸೋತಿರುವುದು ಕಾಂಗ್ರೆಸ್‌ಗೆ ಮುಖಭಂಗ ಆಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಆಡಳಿತ ಹಳಿ ತಪ್ಪಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸತ್ತೋಗಿದೆ. ರಾಜ್ಯದಲ್ಲಿ ಆಡಳಿತ ಸ್ಥಗಿತವಾಗಿದೆ ಎಂದು ಹೇಳಿದರು.

ನಟ ಸುದೀಪ್-ಡಿಕೆಶಿ ಚಾಪರ್‌ಗಳ ನಡುವೆ ಗೊಂದಲ

ಸಿಂಧನೂರು: ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಆಗಾಗ್ಗೆ ವಿಚಿತ್ರ ಮತ್ತು ಅನಿರೀಕ್ಷಿತ ಘಟನೆಗಳು ನಡೆಯುತ್ತಿರುತ್ತವೆ. ಅಂಥದ್ದೇ ಮತ್ತೊಂದು ಘಟನೆ ಸಿಂಧನೂರು ನಗರದಲ್ಲಿ ನಡೆದಿದ್ದು ಹೆಲಿಪ್ಯಾಡ್ ಒಂದರಲ್ಲಿ ಚಿತ್ರರಂಗದ ನಟ ಕಿಚ್ಚ ಸುದೀಪ್ ಅವರು ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಇಳಿಯಬೇಕಾಗಿದ್ದ ನಿಗದಿತ ಜಾಗದಲ್ಲಿ ಭೂಸ್ಪರ್ಶ ಮಾಡಿತು. ಇದು ಕೆಲಕಾಲ ಅಧಿಕಾರಿಗಳಲ್ಲಿ ಮತ್ತು ಅಲ್ಲಿ ನೆರೆದಿದ್ದವರಲ್ಲಿ ಗೊಂದಲಕ್ಕೆ ಕಾರಣವಾಯಿತು.

ಡಿಸಿಎಂ ಡಿ.ಕೆ.ಶಿವಕುಮಾರ ಅವರ ಆಗಮನಕ್ಕಾಗಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ಭದ್ರತಾ ಸಿಬ್ಬಂದಿ ಮತ್ತು ಪಕ್ಷದ ಕಾರ್ಯಕರ್ತರು ಅವರ ಸ್ವಾಗತಕ್ಕೆ ಕಾಯುತ್ತಿದ್ದರು. ಆದರೆ, ಅದೇ ಸಮಯದಲ್ಲಿ ಸುದೀಪ್ ಅವರು ಕೂಡ ಪ್ರಚಾರ ಕಾರ್ಯಕ್ಕಾಗಿ ಅದೇ ಭಾಗಕ್ಕೆ ಆಗಮಿಸುತ್ತಿದ್ದರು. ತಾಂತ್ರಿಕ ಕಾರಣಗಳಿಂದ ಅಥವಾ ಸಂವಹನದ ಕೊರತೆಯಿಂದಾಗಿ, ಡಿಕೆಶಿ ಅವರಿಗೆ ಮೀಸಲಾಗಿದ್ದ ಜಾಗದಲ್ಲೇ ಸುದೀಪ್ ಅವರ ಹೆಲಿಕಾಪ್ಟರ್ ಮೊದಲು ಬಂದು ಇಳಿಯಿತು.

ಇದರಿಂದಾಗಿ ಡಿ.ಕೆ.ಶಿವಕುಮಾರ ಅವರ ಹೆಲಿಕಾಪ್ಟರ್ ಇಳಿಯಲು ಸ್ಥಳಾವಕಾಶದ ಕೊರತೆ ಉಂಟಾಯಿತು. ತಕ್ಷಣ ಕಾರ್ಯಪ್ರವೃತ್ತರಾದ ಅಧಿಕಾರಿಗಳು ಪರ್ಯಾಯ ವ್ಯವಸ್ಥೆ ಮಾಡಬೇಕಾಯಿತು.

18 ಮಂದಿಗೆ ಗಾಯ: ನಾಲ್ವರ ಸ್ಥಿತಿ ಗಂಭೀರ

ಗದಗ: ಇಲ್ಲಿನ ತೋಂಟದಾರ್ಯ ಮಠದ ಆವರಣದಲ್ಲಿ ನಡೆದಿರುವ ಜಾತ್ರೆಯಲ್ಲಿ ಭಾನುವಾರ ಸಂಭವಿಸಿದ ಅವಘಡದಲ್ಲಿ 18 ಮಂದಿ ಗಾಯಗೊಂಡಿದ್ದು, ನಾಲ್ವರ ಸ್ಥಿತಿ ಗಂಭೀರವಾಗಿದೆ.

ಭಾನುವಾರ ರಾತ್ರಿ 9ರ ಸುಮಾರಿಗೆ ಜಾತ್ರೆಗೆ ಬಂದಿದ್ದ ಜನರು 'ಡಾನ್ಸಿಂಗ್ ಪ್ಲೇ' ಹೆಸರಿನ ಆಟ ಆಡುವಾಗ ಎರಡು ಬೋಗಿಗಳು ಮೇಲೆದ್ದು ಬಂದು ಈ ದುರ್ಘಟನೆ ನಡೆದಿದೆ. ಗಾಯಾಳುಗಳನ್ನು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿಯ ಕಿಮ್ಸ್‌ಗೆ ದಾಖಲಿಸಲಾಗಿದೆ. ಗಾಯಗೊಂಡವರ ಪೈಕಿ ಇಬ್ಬರು ಕೊಪ್ಪಳ ಜಿಲ್ಲೆ, ಒಬ್ಬರು ತುಮಕೂರು ಜಿಲ್ಲೆ, ಉಳಿದವರು ಗದಗ ಜಿಲ್ಲೆಯವರು ಎಂದು ಗೊತ್ತಾಗಿದೆ. ಗಾಯಾಳುಗಳ ವೈಯಕ್ತಿಕ ವಿವರವನ್ನು ಪೊಲೀಸರು ಸಂಗ್ರಹಿಸುತ್ತಿದ್ದಾರೆ.

ಘಟನೆಯಲ್ಲಿ 18 ಮಂದಿ ಮಂದಿ ಗಾಯಗೊಂಡಿದ್ದು, ನಾಲ್ವರಿಗೆ ಗಂಭೀರ ಗಾಯಗಳಾಗಿವೆ. ತಲೆಗೆ ಗಂಭೀರ ಹೊಡೆತ ಬಿದ್ದಿರುವ ನಾಲ್ಕು ಮಂದಿಯನ್ನು ಹುಬ್ಬಳ್ಳಿಯ ಕಿಮ್ಸ್‌ಗೆ ಕಳುಹಿಸಿಕೊಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಿಂದೂ ವೀರಶೈವ ಲಿಂಗಾಯತ ಯುವ ವೇದಿಕೆಯಿಂದ ಪ್ರತಿಭಟನೆ ಅವಘಡ ನಡೆದಿರುವ ವಿಷಯ ತಿಳಿದು ಸ್ಥಳಕ್ಕೆ ಬಂದ ಹಿಂದೂ ವೀರಶೈವ ಲಿಂಗಾಯತ ಯುವ ವೇದಿಕೆ ಕಾರ್ಯಕರ್ತರು ತೋಂಟದಾರ್ಯ ಜಾತ್ರಾ ಮಹೋತ್ಸವ ಕಮಿಟಿ ವಿರುದ್ಧ ಘೋಷಣೆ ಕೂಗಿದರು. ಈ ಘಟನೆಗೆ ಸಂಬಂಧಿಸಿದಂತೆ ತೋಂಟದಾರ್ಯ ಮಠದ ಜಾತ್ರೆಯಲ್ಲಿ ಮನರಂಜನಾ ಆಟಗಳನ್ನು ಆಡಿಸಲು ಟೆಂಡರ್ ಪಡೆದಿರುವ ಗುತ್ತಿಗೆದಾರ ಹಾಗೂ ಜಾತ್ರಾ ಕಮಿಟಿಯ ಪದಾಧಿಕಾರಿಗಳನ್ನು ಹೊಣೆಗಾರರನ್ನಾಗಿಸಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ವೇದಿಕೆಯ ರಾಜ್ಯ ಸಂಚಾಲಕ ರಾಜು ಖಾನಪ್ಪನವರ ಮಾತನಾಡಿ, ಅಮಾಯಕ ಜನರ ಜತೆಗೆ ಚೆಲ್ಲಾಟವಾಡುತ್ತಿರುವ ಜಾತ್ರಾ ಕಮಿಟಿ, ನಗರಸಭೆ ಅಧಿಕಾರಿಗಳ ವಿರುದ್ಧ ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ, ಗದಗ ಬಂದ್‌ಗೆ ಕರೆ ನೀಡಲಾಗುವುದು ಎಂದು ಎಚ್ಚರಿಸಿದರು.

ಈಜಲು ತೆರಳಿದ್ದ ಬಾಲಕರಿಬ್ಬರ ಸಾವು

ಬೆಳಗಾವಿ: ಇಲ್ಲಿನ ಪ್ರಸಿದ್ಧ ಕಪಿಲೇಶ್ವರ ದೇವಸ್ಥಾನದ ಹಿಂಭಾಗದಲ್ಲಿರುವ ಹೊಂಡದಲ್ಲಿ ಈಜಲು ಹೋದ ಇಬ್ಬರು ಅಪ್ರಾಪ್ತ ಬಾಲಕರು ನೀರಿನ ಆಳ ತಿಳಿಯದೆ ಮುಳುಗಿ ಮೃತಪಟ್ಟಿರುವ ಘಟನೆ ನಡೆದಿದೆ. ಬೇಸಿಗೆಯ ಬಿಸಿಲಿನ ಬೇಗೆಯಿಂದ ಪಾರಾಗಲು ಈ ಬಾಲಕರು ಗುಂಪಾಗಿ ಈಜಲು ಬಂದಿದ್ದರು ಎನ್ನಲಾಗಿದೆ. ಹೊಂಡಕ್ಕೆ ಇಳಿದ ಬಾಲಕರು ಆಳದ ಅಂದಾಜಿಲ್ಲದೆ ನೀರಿನಲ್ಲಿ ಸಿಲುಕಿಕೊಂಡಿದ್ದಾರೆ. ಸ್ಥಳೀಯರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬಾಲಕರನ್ನು ಹೊರ ತೆಗೆದರಾದರೂ, ಅಷ್ಟರಲ್ಲಾಗಲೇ ಅವರು ಮೃತಪಟ್ಟಿದ್ದರು. ಮೃತ ಯುವಕರು ಶಿವಾಜಿ ನಗರ ಪ್ರದೇಶದ ನಿವಾಸಿಗಳು ಎಂದು ತಿಳಿದುಬಂದಿದೆ.

ಜಮೀರ್ ಅಹ್ಮದ್ ದರ್ಗಾವಾಲೆ ಕೊಲೆ ಪ್ರಕರಣ: ಬಂಧಿತರ ಸಂಖ್ಯೆ ಏಳಕ್ಕೆ ಏರಿಕೆ

ಮುಂಡಗೋಡ: ಜಮೀರ್ ಅಹ್ಮದ್ ದರ್ಗಾವಾಲೆ ಕೊಲೆ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯನ್ನು ಪೊಲೀಸರು ಬಂಧಿಸಿದ್ದು, ಇದೀಗ ಬಂಧಿತರ ಸಂಖ್ಯೆ ಏಳಕ್ಕೆ ಏರಿದೆ.

ಪಟ್ಟಣದ ಇಂದಿರಾ ನಗರದ ತನ್ವೀರ್ ಅಹ್ಮದ್ ಅಕ್ಕಿಆಲೂರ ಏಳನೇ ಆರೋಪಿಯಾಗಿದ್ದಾನೆ.

ಏ.24ರಂದು ರಾತ್ರಿ ಪಟ್ಟಣದ ರೌಡಿಶೀಟರ ಜಮೀರ್ ದರ್ಗಾವಾಲೆ ಎಂಬಾತನ ಮೇಲೆ ಮತ್ತೊಬ್ಬ ರೌಡಿಶೀಟರ್ ಮಂಜುನಾಥ ಕಾಜಗಾರ ಸುಪಾರಿ ಪಡೆದ ನಾಲ್ಕು ಜನ ಯುವಕರು ದಾಳಿ ನಡೆಸಿ ಮಾರಕಾಸ್ತ್ರದಿಂದ ಭೀಕರವಾಗಿ ಜಮೀರ್ ಹತ್ಯೆ ಮಾಡಿ ಪರಾರಿಯಾಗಿದ್ದರು.

ನಂತರ 24 ಗಂಟೆಯಲ್ಲಿಯೇ ಐದು ಆರೋಪಿಗಳನ್ನು ಬಂಧಿಸಲಾಗಿತ್ತು. ಕೊಲೆ ಆರೋಪಿಗಳಿಗೆ ಕಂಟ್ರಿ ಪಿಸ್ತೂಲ್ ನೀಡಿದ ಆರೋಪದ ಮೇಲೆ ಇತ್ತಿಚೆಗೆ ಆರನೇ ಆರೋಪಿಯನ್ನು ಬಂಧಿಸಲಾಗಿತ್ತು.

ಇದೀಗ ಮತ್ತೊಬ್ಬ ಆರೋಪಿ ತನ್ವೀರನ ಬಂಧನವಾಗಿದೆ. ಜಮೀರನ ಕೊಲೆ ಪ್ರಕರಣದಲ್ಲಿ ಒಟ್ಟು ಈವರೆಗೂ ಏಳು ಆರೋಪಿಗಳನ್ನು ಪೊಲೀಸರು ಬಂಧಿಸಿದಂತಾಗಿದೆ.

ಡಿಸೆಂಬರ್‌ನಲ್ಲಿಯೇ ಹತ್ಯೆಗೆ ಸ್ಕೇಚ್: ಕೊಲೆ ಆರೋಪಿಯಾಗಿರುವ ದಿಲ್ ರಾಜ ದ್ಯಾನಿನು ಈ ಹಿಂದೆ ಸಿದ್ದಾಪುರದ ಕಾನಸೂರಿನಲ್ಲಿ ಕೊಲೆ ಪ್ರಕರಣದಲ್ಲಿ ಭಾಗಿಯಾಗಿ ಜೈಲು ಸೇರಿದ್ದ. ಅದೇ ವೇಳೆಯಲ್ಲಿ ಮಂಜುನಾಥ ಕಾಜಗಾರನು ಹರ್ಷಾ ಕೊಲೆ ಮಾಡಿ ಶಿರಸಿ ಜೈಲ್ ಸೇರಿದ್ದನು. ನಂತರ ದಿಲ್ ರಾಜ ಮತ್ತು ಕಾಜಗಾರ ನಡುವೆ ಸ್ನೇಹ ಬೆಳದಿತ್ತು. ಆರೋಪಿ ದಿಲ್ ರಾಜನು ದೆಹಲಿ ರಾಜ್ಯದವನಾಗಿದ್ದರಿಂದ ಜಾಮೀನು ಪಡೆಯಲು ಹರಸಾಹಸ ಪಡುತ್ತಿದ್ದ. ಮಂಜು ಕಾಜಗಾರನೇ ಈತನಿಗೆ ಜಾಮೀನು ಪಡೆಯಲು ಸಹಕಾರ ಮಾಡಿದ್ದನು. ಹೀಗೆಯೇ ಸ್ನೇಹ ಮುಂದುವರಿದ ಡಿಸೆಂಬರ್ ತಿಂಗಳಿನಲ್ಲಿ ಜಮೀರನನ್ನು ಕೊಲೆ ಮಾಡಲು ಸೂಚಿಸಿದ್ದ ತದನಂತರ ದಿಲ್ ರಾಜನು ಮುಂಡಗೋಡದಲ್ಲಿ ಎರಡ್ಮೂರು ದಿನ ಉಳಿದು ಕೊಲೆ ಮಾಡಲು ಸಾಧ್ಯವಾಗದೆ ದೆಹಲಿಗೆ ತೆರಳಿದ್ದನು ಎಂಬ ಮಾಹಿತಿ ಆರೋಪಿ ಪೊಲೀಸರ ತನಿಖೆ ವೇಳೆಯಲ್ಲಿ ಬಾಯಿ ಬಿಟ್ಟಿದ್ದಾನೆ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.



ಆರೋಪಿಗಳಿಗೆ ಸಹಕರಿಸಿದ ತನ್ವೀರ್: ಜಮೀರನನ್ನು ಕೊಲೆ ಮಾಡಲು ಆರೋಪಿಗಳಿಗೆ ಬೈಕ್ ನೀಡಲು ಸಹಕರಿಸಿದ್ದನು ಅಲ್ಲದೆ, ಕೊಲೆಯಾದ ಕೆಲವೇ ಗಂಟೆಯಲ್ಲಿ ಆರೋಪಿ ತನ್ವೀರ ಫೋನ್ ಸ್ವಿಚ್ ಆಪ್ ಮಾಡಿದ್ದನು. ಇದರಿಂದ ಸಂಶಯಗೊಂಡ ಪೊಲೀಸರು ತನ್ವೀರನನ್ನು ವಿಚಾರಣೆ ನಡೆಸಿ ಬಿಟ್ಟಿದ್ದರು. ತದನಂತರ ಪೊಲೀಸರ ತನಿಖೆಯಲ್ಲಿ ಕೊಲೆಯಾದ ಆರೋಪಿಗಳಿಗೆ ಬೈಕ್ ನೀಡಲು ಸಹಕರಿಸಿದ್ದರ ಬಗ್ಗೆ ಖಚಿತ ಪಡಿಸಿಕೊಂಡ ಪೊಲೀಸರು ಮತ್ತೆ ತನ್ವೀರನನ್ನು ವಿಚಾರಣೆ ಒಳಪಡಿಸಿದಾಗ ಸತ್ಯ ಒಪ್ಪಿಕೊಂಡಿದ್ದಾನೆ ಎನ್ನಲಾಗಿದೆ.

ಈಗ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಇದರಿಂದ ಜಮೀರ ಕೊಲೆ ಪ್ರಕರಣದಲ್ಲಿ ಭಾಗಿಯಾಗಿರುವ ಸಂಖ್ಯೆ ಏಳಕ್ಕೆ ಏರಿದೆ. ಈ ಏಳನೇ ಆರೋಪಿ ತನ್ವೀರನು ರೌಡಿಶೀಟರ್ ಮಂಜುನಾಥ ಕಾಜಗಾರನ ಬಲಗೈ ಬಂಟನಾಗಿದ್ದನು ಎನ್ನಲಾಗಿದೆ. ಈ ಹಿಂದೆ ಬಡ್ಡಿ ವ್ಯವಹಾರದ ದಂಧೆಯಲ್ಲಿ ಭಾಗಿಯಾಗಿದ್ದನು. ಈ ಬಗ್ಗೆ ಈತನ ಮೇಲೆ ಸಹ ಪ್ರಕರಣ ದಾಖಲಾಗಿತ್ತು.

ಕ್ರಿಮಿನಲ್ ಮಿಸ್ ನಂ. 525/2026
ಮಾನ್ಯ ರಾಣೇಬೆನ್ನೂರ ಪ್ರಿನ್ಸಿಪಲ್ ಸೀನಿಯರ್ ಸಿವಿಲ್ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ. ಇವರ ನ್ಯಾಯಾಲಯದಲ್ಲಿ
ಅರ್ಜಿದಾರಳು : ಗಂಗಮ್ಮ ಕೋಂ ಹನುಮಪ್ಪ ನಗಾರಿ, ವಯಾ; 43 ವರ್ಷ, ಸಾ: ಮೇಡ್ಲೇರಿ, ತಾ: ರಾಣೇಬೆನ್ನೂರು, ಜಿ: ಹಾವೇರಿ
ವಿರುದ್ಧ
ಎದುರುದಾರರು : ತಹಶೀಲ್ದಾರರು ರಾಣೇಬೆನ್ನೂರು ಹಾಗೂ ಇತರರು
ಇಸ್ತಿಯಾರ ನಾಮಾ
ಇದರಲ್ಲಿ 1ನೇ ಅರ್ಜಿದಾರರ ಗಂಡ ಹಾಗೂ 2 ಮತ್ತು 3ನೇ ಅರ್ಜಿದಾರರ ತಂದೆಯಾದ ಶ್ರೀ ಹನುಮಪ್ಪ ತಂದೆ ಮಾರುತೆಪ್ಪ ನಗಾರಿ ಇವರು, ದಿನಾಂಕ; 15/09/2002 ರಂದು ರಾಣೇಬೆನ್ನೂರು ತಾಲ್ಲೂಕು ಮೇಡ್ಲೇರಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ ಸದರಿಯವರ ಮರಣ ದಿನಾಂಕವನ್ನು ಎದುರುಗಾರರ ಕಛೇರಿಯ ಜನನ ಮರಣ ನೋಂದಣಿ ದಾಖಲೆಯಲ್ಲಿ ನೋಂದಣಿ ಮಾಡಿಸಿಕೊಳ್ಳುವುದು ಅತೀ ಅವಶ್ಯ ಇದ್ದು, ಇದರ ಬಗ್ಗೆ ಸಾರ್ವಜನಿಕರ ಯಾವುದೇ ತಂಟೆ ತಕರಾರು ಇದ್ದಲ್ಲಿ ದಿನಾಂಕ: 6/6/2026 ರಂದು ಬೆಳಗ್ಗೆ 11 ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಮಾನ್ಯ ನ್ಯಾಯಾಲಯದವರು ಮುಂದಿನ ಆದೇಶ ಮಾಡುತ್ತಾರೆ ಅಂತಾ ಸಾರ್ವಜನಿಕ ತಿಳುವಳಿಕೆ ನೋಟೀಸ್.
ಮಾನ್ಯ ನ್ಯಾಯಾಲಯದ ಮೊಹರಿನೊಂದಿಗೆ ಇಂದು ದಿನಾಂಕ: 25/4/2026 ರಂದು ನೀಡಿದೆ.
ಸ್ಥಳ; ರಾಣೇಬೆನ್ನೂರು
ದಿನಾಂಕ: 25/4/2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೆದಾರರು
ಪ್ರಿನ್ಸಿಪಲ್ ಸೀನಿಯರ್ ಸಿವಿಲ್ ನ್ಯಾಯಾಧೀಶರು ವ ಜೆ.ಎಮ್.ಎಫ್.ಸಿ. ರಾಣೇಬೆನ್ನೂರು
ಸಹಿ/- ಶ್ರೀ ಹೆಚ್. ಎಸ್. ಬಣಕಾರ್
ಅರ್ಜಿದಾರರ ಪರ ವಕೀಲರು, ರಾಣೇಬೆನ್ನೂರು

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.
ಜಾಹೀರಾತು ವ್ಯವಸ್ಥಾಪಕರು

PUBLIC NOTICE
This is to notify the general public regarding loss of original gift deed dated 22-09-1969 in respect of Agricultural property bearing RS no 13/1+2 measuring 19A 15G assessed at Rs 27.66/- situated at Ilkal town and the said gift deed was duly registered before sub register office at Hungund on 27-09-1969 in book no 1 with volume no 706 pages 222 to 224 with document no 976 which was executed by Basappa Siddappa Gongandashetti in fevour of Shivarudrappa Mahantappa Gongadashetti ie me and it was lost by me while transit at Ilkal town on 25-04-2026. All the efforts to trace the said document has proved abortive.
Also the property converted under the above said registered gift deed has not been mortgaged in fevour of any financial institution.
If the said document is found kindly contact the nearest police station as I have registered a petition in this regard before Ilkal Town police station on 1-05-2026 with petition no PO1242260600065 and to that effect 76A form has been issued by the SHO Ilkal Town police station.
Now I want to avail loan from State Bank Of India Branch Ilkal with Branch code SBIN0040312. If any body has claim towards the above said property can approach the said branch and file objections within 7 days from the date of this publication.
Sd/- Shivarudrappa Mahantappa Gongadashetti
Ward No. 1, Ilkal. Mobile: 9448137918

CHANGE OF NAME
I, AZAD SAYYAD (Old Name) Resident of 8/81 A, Pangire Galli, Pattankudi, Belagavi, Karnataka, Pin Code: 591238, have changed my name as AZAD ISAK SAYYAD (New Name) henceforth I will be called and recognized by new name for all future purposes, dated: 03/05/2026.

ಜಾಹೀರಾತಿಗಾಗಿ ಸಂಪರ್ಕಿಸಿ
8892497927

CHANGE OF NAME
I, SANA ANJUM HAVERI (Old Name) Resident of # 2726/11, Azad Colony, Gouli Galli, Keshwapur, Hubli, Dharwad, Karnataka, Pin Code: 580023, have changed my name as SANA SHAIKH (New Name) henceforth I will be called and recognized by new name for all future purposes, dated: 03/05/2026.

ಸಾರ್ವಜನಿಕ ಪ್ರಕಟಣೆ
ನಾನು ಶ್ರೀ ಕೆ.ಪಿ ಹರವಿ, ವಕೀಲರು, ಬನ್ನಿ ಕಾಂಪ್ಲೇಕ್ಸ್, ಪಿ.ಬಿ ರಸ್ತೆ, ಹಾವೇರಿ ಪೋನ್ ನಂ. 7795330206 ಆದ ನಾನು ಸಾರ್ವಜನಿಕರಿಗೆ ತಿಳಿಸುವುದೇನೆಂದರೆ,
ನಮ್ಮ ಪಕ್ಷಗಾರರಾದ ಶ್ರೀ ಚಂದ್ರಪ್ಪ ತಂದೆ ಮಲ್ಲಪ್ಪ ಹೂಗಾರ ಸಾ॥ ಕುಳೇನೂರ, ತಾ॥ ಹಾವೇರಿ ಇವರು ಕೊಟ್ಟ ಮಾಹಿತಿ ಏನೆಂದರೆ, ಸದರಿಯವರು ಹಾವೇರಿ ಶಹರದ ಭಾರತಿ ನಗರದಲ್ಲಿರುವ ಬಿ.ಶೀ. ಸ.ನಂ. 147ಅ, ಪ್ಲಾಟ ನಂ. 212, ಕ್ಷೇತ್ರ 1 ಗುಂಟೆ 13.5 ಆಣೆ ಆಸ್ತಿಯನ್ನು ಶ್ರೀ ಮಹೇಂದ್ರ ತಂದೆ ಮಧುಕರ ಗಡಕರ ಇವರಿಂದ ನೋಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಹಿಡಿದಿರುತ್ತಾರೆ. ಸದರಿ ಆಸ್ತಿಯನ್ನು ಶ್ರೀ ಮಹೇಂದ್ರ ತಂದೆ ಮಧುಕರ ಗಡಕರ ಇವರು 1) ಶಿವಶಂಕರ, 2) ಗಂಗಾಧರ, 2) ಜಗದೀಶ ತಂದೆ ಸಿದಪ್ಪ ಚೂರಿ ಇವರಿಂದ ನೋಂದಾಯಿತ ಖರೀದಿ ಪತ್ರದ ಮೂಲಕ ದಿನಾಂಕ: 26-11-2002 ರಂದು ಖರೀದಿ ಹಿಡಿದಿರುತ್ತಾರೆ. ಸದರ ಖರೀದಿ ಪತ್ರವು ಹಾವೇರಿ ಉಪ-ನೋಂದಣಿ ಅಧಿಕಾರಿಗಳು ಇವರಲ್ಲಿ 2280/2002-03 ರಲ್ಲಿ ನೋಂದಾವಣೆ ಆಗಿರುತ್ತದೆ. ದಿನಾಂಕ 26-11-2002 ರಂದು ನೋಂದಾದ ಮೂಲ ಖರೀದಿ ಪತ್ರವು ಹಾವೇರಿ ಬಸ ನಿಲ್ದಾಣ ಹತ್ತಿರ ಝರಾಕ್ಸ್ ಮಾಡಿಕೊಂಡು ಬರುವಾಗ ದಿನಾಂಕ: 02-05-2026 ರಂದು ಕಳೆದು ಹೋಗಿರುತ್ತದೆ. ನಂತರ ನಮ್ಮ ಪಕ್ಷಗಾರರು ಹುಡುಕಿದರು ಸಿಕ್ಕಿರುವುದಿಲ್ಲ, ಆದ್ದರಿಂದ ನಮ್ಮ ಪಕ್ಷಗಾರರು ದಿನಾಂಕ: 03-05-2026 ರಂದು ಫಿರ್ಯಾದಿ ನೀಡಿರುತ್ತಾರೆ.
ಕಾರಣ, ಈ ಸಾರ್ವಜನಿಕ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ದಿನಾಂಕ: 26-11-2002 ರಂದು ನೋಂದಾದ ಮೂಲ ಖರೀದಿ ಪತ್ರ ಯಾರಗಾದರೂ ಸಿಕ್ಕರೆ 7 ದಿನದೊಳಗಾಗಿ ನನ್ನ ಕಛೇರಿಗೆ ಅಥವಾ ನಮ್ಮ ಪಕ್ಷಗಾರರಿಗೆ ತಲುಪಿಸಿರಿ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.
ಸ್ಥಳ: ಹಾವೇರಿ
ದಿನಾಂಕ: 03-05-2026
ಸಹಿ/- ಕೆ.ಪಿ. ಹರವಿ, ವಕೀಲರು, ಬನ್ನಿ ಕಾಂಪ್ಲೇಕ್ಸ್, ಪಿ.ಬಿ ರಸ್ತೆ ಹಾವೇರಿ

CHANGE OF NAME
I, MANOJ T NALAVADI (Old Name) Resident of #37, Basava Nagar Haliyal Road, Dharwad, Karnataka, Pin Code: 580003, have changed my name as MANOJ NALAVADI (New Name) henceforth I will be called and recognized by new name for all future purposes, dated: 03/05/2026.

CHANGE OF NAME
I, SHAHINA BEGUM PATHAN (Old Name) Resident of Shri Ram Nagar Dharwad 580001 (Address), have changed my name as SHAHEEN AKHTAR JANWAD (New Name) henceforth I will be called and recognized by new name for all future purposes, dated: 03/05/2026.

ಕಳೆದಿವೆ
ಸಹಿ ಮಾಡಿದ ಖಾಲಿ ಚೆಕ್ಕುಗಳು ಕಳೆದಿವೆ
ನಾನು ಭೀಮರಾವ ತಂದೆ ಸಾವಂತ ನಾಯಿಕ, ಸಾ: ಮರಾಕುಡಿ, ತಾ: ರಾಯಬಾಗ ಅಂತಾ ಇದ್ದು ನಾನು ಸಾರ್ವ ಜನಿಕರಿಗೆ ಈ ನೋಟಿಸ ಮುಖಾಂತರ ತಿಳಿಸುವುದೆನೆಂದರೆ.
ನಾನು ದಿ: 05/01/2026 ರಂದು ರಾಯಬಾಗ ಮಾರ್ಕೆಟ್ ರೋಡಿನಲ್ಲಿ ನನ್ನ ಕಾಗದ ಪತ್ರಗಳನ್ನು ಝುರಾಕ್ಸ್ ಮಾಡಿಸುತ್ತಿದ್ದಾಗ, ಗಡಿಬಿಡಿಯಲ್ಲಿ ನನ್ನ ಬ್ಯಾಗನ್ನು ಅಲ್ಲಿಯೇ ಎಲ್ಲಿಯೋ ಬಿಟ್ಟು ಕಳೆದುಕೊಂಡಿದ್ದು ಇರುತ್ತದೆ. ನನ್ನ ಬ್ಯಾಗನ್ನು ಯಾರು ಒಯ್ದರು ಗೋತ್ತಿಲ್ಲ. ಸದರಿ ಬ್ಯಾಗಿನಲ್ಲಿ ನನ್ನ ಹೆಸರಿನಲ್ಲಿರುವ ಎಚ್.ಡಿ.ಎಫ್.ಸಿ. ಬ್ಯಾಂಕ್ ಖಾತೆ ಸಂಖ್ಯೆ: 99901426501169 ಶಾಖೆ: ಮೂಡಲಗಿ ಇದರ ಕೆಲವೊಂದು ಸಹಿ ಮಾಡಿದ ಖಾಲಿ ಚೆಕ್ಕುಗಳು ಇದ್ದವು. ಸದರಿ ಚೆಕ್ಕುಗಳನ್ನು ನನ್ನ ಸಹೋದರನಿಗೆ ಕೊಡುವ ಸಲುವಾಗಿ ಇಟ್ಟಿದ್ದೇನು. ಸದರಿ ಚೆಕ್ಕುಗಳ ನಂಬರಗಳನ್ನು ಪರಿಶಿಲಿಸಲಾಗಿ, ಚೆಕ್ಕ ನಂ. 000001 ರಿಂದ 000068 ಹಾಗೂ 000070 ರಿಂದ 000080 ಮತ್ತು 000106 ರಿಂದ 000125 ರವರೆಗಿನ ಚೆಕ್ಕುಗಳು ಇದ್ದವು ಈ ಎಲ್ಲಾ ಚೆಕ್ಕುಗಳು ಖಾಲಿ ಇದ್ದು ಅವುಗಳಲ್ಲಿ ಕೆಲವೊಂದನ್ನು ನನ್ನ ಸಹಿ ಮಾಡಿದ್ದು ಇರುತ್ತದೆ. ಅವುಗಳಲ್ಲಿ ಹಣ ಮತ್ತು ದಿನಾಂಕ ನಮೂದಿಸಿರುವುದಿಲ್ಲ. ನಾನು ನನ್ನ ಕಾಗದ ಪತ್ರಗಳನ್ನು ಹಾಗೂ ಚೆಕ್ಕುಗಳನ್ನು ಇಟ್ಟಿರುವ ಬ್ಯಾಗವನ್ನು ಎಷ್ಟು ಹುಡುಕಾಡಿದರು ಇವತ್ತಿನವರೆಗೂ ಸಿಕ್ಕಿರುವುದಿಲ್ಲ. ಈ ವಿಷಯದ ಕುರಿತು ನಾನು ದಿ: 06/01/2026 ರಂದು ರಾಯಬಾಗ ಪೊಲೀಸ ಠಾಣೆಯಲ್ಲಿ ಫಿರ್ಯಾದಿ ಕೊಟ್ಟಿದ್ದು ಅದರ ನಂ. ಜೆ.ಎಸ್.ಸಿ ನಂ. ಪಿ.ಓ. 202626060000002 ಅಂತಾ ಇರುತ್ತದೆ. ಈ ನನ್ನ ಬ್ಯಾಗು ಮತ್ತು ಚೆಕ್ಕುಗಳು ಯಾರಿಗಾದರೂ ಸಿಕ್ಕಿದ್ದಲ್ಲಿ ದಯಮಾಡಿ ನನ್ನ ಮೊಬೈಲ್ ನಂ. 9663733926ಗೆ ಸಂಪರ್ಕಿಸಿರಿ ಅಂತಾ ಈ ಮೂಲಕ ಪ್ರಕಟಣೆ ನೀಡಲಾಗಿದೆ.
ಸ್ಥಳ : ರಾಯಬಾಗ
ದಿ: 29/04/2026
ಸಹಿ/- ಭೀಮರಾವ ಸಾವಂತ ನಾಯಿಕ
ಸಾ: ಮರಾಕುಡಿ, ತಾ: ರಾಯಬಾಗ ಜಿ: ಬೆಳಗಾವಿ

ಬಳ್ಳಾರಿಗೆ ಬಿಎಸ್‌ವೈ ಕೊಡುಗೆ ಅಪಾರ: ಸೋಮಶೇಖರ್ ರೆಡ್ಡಿ



ಬಳ್ಳಾರಿ: ಮಾಜಿಸಿಎಂಬಿ.ಎಸ್.ಯಡಿಯೂರಪ್ಪ ಅವರು ನಗರ ಸೇರಿದಂತೆ ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ವಿಶೇಷವಾಗಿ ನಗರಕ್ಕೆ ಅವರ ಅಮೂಲ್ಯವಾದ ಕೊಡುಗೆ ಸಾಕಷ್ಟಿವೆ. ಚಿತ್ರದುರ್ಗದಲ್ಲಿ ಮೇ 9ರಂದು ಹಮ್ಮಿಕೊಂಡಿರುವ ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷಗಳ ಸಾರ್ಥಕ ರಾಜಕೀಯ ಪಯಣ, ಅವರ ಸಾಧನೆ ಹಿನ್ನೆಲೆಯಲ್ಲಿ ಆಯೋಜಿಸಿರುವ ಅಭಿಮಾನೋತ್ಸವದಲ್ಲಿ ಪ್ರತಿಯೊಬ್ಬರೂ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಕೆಎಂಎಫ್ ಮಾಜಿ ಅಧ್ಯಕ್ಷ, ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಮನವಿ ಮಾಡಿದರು.

ನಗರದ ವೀರಶೈವ ವಿದ್ಯಾವರ್ಧಕ ಸಂಘದ ಕಚೇರಿ ಸಭಾಂಗಣದಲ್ಲಿ ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿರುವ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷಗಳ ಸಾಧನೆ, ಅಭಿಮಾನೋತ್ಸವ ನಿಮಿತ್ತ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ನಾನು ಸಭೆಗೆ ರಾಜಕೀಯ ಮುಖಂಡನಾಗಿ ಬಂದಿಲ್ಲ, ನಾನು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನಿಯಾಗಿ ಬಂದಿರುವೆ. ನಮ್ಮ ಬಳ್ಳಾರಿ ನಗರದ ರಸ್ತೆಗಳ ಅಭಿವೃದ್ಧಿಗೆ ಪ್ರತಿವರ್ಷ 100 ಕೋಟಿ ರೂ. ಅನುದಾನ ಕೊಟ್ಟ ಧೀರ ನಮ್ಮ ಹೆಮ್ಮೆಯ ನಾಯಕ ಯಡಿಯೂರಪ್ಪ ಅವರು. ಅವರ ಅವಧಿಯಲ್ಲಿ ಸರ್ಕಾರದ ಖಜಾನೆ ಖಾಲಿಯಾಗಿರಲಿಲ್ಲ, ಅಭಿವೃದ್ಧಿ ಕೆಲಸಗಳು ನಿರಂತರವಾಗಿ ನಡೆದವು. ಅವರ ಅವಧಿಯಲ್ಲಿ ಮಾದರಿ ಕೆಲಸಗಳನ್ನು ಮಾಡುವ ಮೂಲಕ ದೇಶಕ್ಕೆ ಮಾದರಿಯಾಗಿದ್ದಾರೆ ಎಂದು ಬಣ್ಣಿಸಿದರು.

> ಮೇ 9ರಂದು ನಡೆಯಲಿರುವ ಅಭಿಮಾನೋತ್ಸವ ಸಮಾರಂಭಕ್ಕೆ ನಾಡಿನ ಅನೇಕ ಜನ ಸ್ವಾಮೀಜಿಗಳು, ಪ್ರಮುಖ ಮಠಾಧೀಶರು, ಅನೇಕ ಗಣ್ಯರು, ಲಕ್ಷಾಂತರ ಕಾರ್ಯಕರ್ತರು ಭಾಗವಹಿಸಲಿದ್ದು, ಪ್ರತಿಯೊಬ್ಬರೂ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು.
> ■ ನಿಲ್‌ಕುಮಾರ್ ಮೊಕ, ಬಿಜೆಪಿ ಜಿಲ್ಲಾಧ್ಯಕ್ಷ

ಈ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಹಾಗೂ ಮಾಜಿ ಸಚಿವ, ಗಂಗಾವತಿ ಶಾಸಕ ಗಾಲಿ ಜನರ್ದನ ರೆಡ್ಡಿ ಅವರ ಅನುಪಸ್ಥಿತಿ ಹಿನ್ನೆಲೆಯಲ್ಲಿ ದೂರವಾಣಿ ಮೂಲಕ ಸಭೆಯಲ್ಲಿ ಮಾತನಾಡಿ, ಮೇ 9ರ ಸಭೆಯಲ್ಲಿ ಪ್ರತಿಯೊಬ್ಬರೂ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್‌ಕುಮಾರ್ ಮೊಕ ಮಾತನಾಡಿ, ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯ ವೇತನ ಹೆಚ್ಚಳ, ಪ್ರತ್ಯೇಕ ಕೃಷಿ ಬಜೆಟ್ ಮಂಡನೆ ಸೇರಿದಂತೆ ಅನೇಕ ಸಾಧನೆಗಳನ್ನು ಮಾಡಿದ ಯಡಿಯೂರಪ್ಪ ಅವರಂತಹ ಗಣ್ಯರ ಅಭಿಮಾನೋತ್ಸವಕ್ಕೆ ಪ್ರತಿಯೊಬ್ಬರೂ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಮಾಜಿ ಸಂಸದ ಸಣ್ಣ ಫಕೀರಪ್ಪ, ಗಡಿ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಗುತ್ತಿಗನೂರು ವಿರೂಪಾಕ್ಷ ಗೌಡ, ಬಸವರಾಜೇಶ್ವರಿ ಶಿಕ್ಷಣ ಸಮೂಹ ಸಂಸ್ಥೆಗಳ ಅಧ್ಯಕ್ಷ ಡಾ.ಮಹಿಪಾಲ, ಬಿಜೆಪಿ ನಗರ ಅಧ್ಯಕ್ಷ ಜಿ.ವೆಂಕಟರಮಣ, ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಜಾನೆಕುಂಟೆ ಬಸವರಾಜ, ಬಿಜೆಪಿ ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಎಸ್. ಗುರುಲಿಂಗನ ಗೌಡ, ಡಾ.ಅರವಿಂದ ಪಟೇಲ್, ಕೋಳೂರು ಚಂದ್ರಶೇಖರ್ ಗೌಡ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಬಿಚ್ಚಗಲ್ ಪಂಚಾಕ್ಷರಪ್ಪಾ ಸೇರಿದಂತೆ ಅನೇಕ ಗಣ್ಯರು ಮಾತನಾಡಿದರು. ಅನೇಕ ಗಣ್ಯರು, ಯಡಿಯೂರಪ್ಪ ಅಭಿಮಾನಿಗಳು, ಬಿಜೆಪಿ ಸಾವಿರಾರು ಕಾರ್ಯಕರ್ತರು ಇದ್ದರು.

ಬಿಎಸ್‌ವೈ ಅಭಿಮಾನೋತ್ಸವದ ಪೋಸ್ಟರ್ ಬಿಡುಗಡೆ



ಚಿಕ್ಕೋಡಿ: ಪಟ್ಟಣದ ಜಿಲ್ಲಾ ಬಿಜೆಪಿ ಕಚೇರಿಯ ಸಭಾಭವನದಲ್ಲಿ ರಾಜ್ಯ ಕಂಡ ಸೀಮಂತ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ 50ನೇ ವರ್ಷದ ಸಾರ್ಥಕ ಜನಸೇವೆ ಅಭಿಮಾನೋತ್ಸವ ಕಾರ್ಯಕ್ರಮದ ಪೋಸ್ಟರ್‌ಗಳನ್ನು ಚಿಕ್ಕೋಡಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ ಅಪ್ಪಾಜಿಗೋಳ, ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಶನಿವಾರ ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ವಿವೇಕರಾವ್ ಪಾಟೀಲ, ಜಿಲ್ಲಾ ಸಹ ಪ್ರಭಾರಿ ಬಸವರಾಜ ಯಕ್ಕಂಚಿ, ಅಪ್ಪಾಸಾಹೇಬ ಚೌಗುಲಾ, ಜಿಲ್ಲಾ ಪ್ರದಾನ ಕಾರ್ಯದರ್ಶಿ ಅಮೃತಕುಲಕರ್ಣಿ, ಸಂಜಯ ಪಾಟೀಲ, ಅಭಯ ಮಾನವಿ, ದುಂಡಪ್ಪ ಬೆಂಡವಾಡೆ ಮುಂತಾದವರು ಇದ್ದರು.







ಕಿರುಸುದ್ದಿ

ಬಸವ ಜಯಂತಿ ಇಂದು



ಮುಂಡರಗಿ: ಇಲ್ಲಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದಲ್ಲಿ ಮೇ 4 ರಂದು ಬೆಳಗ್ಗೆ 11ಕ್ಕೆ ಶ್ರೀಮಠದ ಶಿಲಾ ಮಂಟಪದಲ್ಲಿ 893ನೇ ಬಸವ ಜಯಂತಿ, ಜಗದ್ಗುರು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳ 86ನೇ ಜನ್ಮದಿನೋತ್ಸವದ ಸಂಭ್ರಮಾಚರಣೆ ಹಾಗೂ 1946ನೇ ಶಿವಾನುಭವ ಮತ್ತು ಪ್ರತಿಭಾ ಪುರಸ್ಕಾರವನ್ನು ಹಮ್ಮಿಕೊಳ್ಳಲಾಗಿದೆ. ಈ ಸಮಾರಂಭದಲ್ಲಿ ಪೂಜ್ಯರ ಜೀವನ ಹಾಗೂ ಸಾಹಿತ್ಯ ಕುರಿತು ಉಪನ್ಯಾಸ ಹಾಗೂ ಪೂಜ್ಯರಿಗೆ ಗುರುವಂದನೆ ಜರಗುವವು.

ಸಾನಿಧ್ಯವನ್ನು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳು ವಹಿಸುವರು. ಅಧ್ಯಕ್ಷತೆಯನ್ನು ಲಿಂಗನಾಯಕನಹಳ್ಳಿ ಜಂಗಮಕ್ಷೇತ್ರ ದ ಚನ್ನವೀರ ಸ್ವಾಮೀಜಿ ವಹಿಸುವರು. ನೇತೃತ್ವವನ್ನು ಶ್ರೀಮಠದ ಉತ್ತರಾಧಿಕಾರಿ ಡಾ.ಮಲ್ಲಿಕಾರ್ಜುನ ಸ್ವಾಮೀಜಿ, ಡಾ.ಚನ್ನಮಲ್ಲ ಸ್ವಾಮೀಜಿ, ಇಮ್ಮಡಿ ನಿಜಗುಣ ಸ್ವಾಮೀಜಿ, ಅಭಿನವ ಚೆನ್ನಬಸವ ಸ್ವಾಮೀಜಿ, ಡಾ.ಮಹಾದೇವ ಸ್ವಾಮೀಜಿ, ಶಾಂತಲಿಂಗೇಶ್ವರ ಸ್ವಾಮೀಜಿ ವಹಿಸುವರು. ಪೂಜ್ಯರ ಜೀವನ ಮೌಲ್ಯಗಳ ಕುರಿತು ಅಂದಾನಪ್ಪ ವಿಭೂತಿ ಮಾತನಾಡುವರು. ಡಾ.ಬಿ.ಜಿ.ಜವಳಿ ಅವರು ಮಹಾಮಾನವತಾವಾದಿ ಬಸವೇಶ್ವರರ ಕುರಿತು ಮಾತನಾಡುವರು.

ಈ ವೇಳೆ ಬಿಇಒ ಗಂಗಾಧರ ಅಣ್ಣಿಗೇರಿ, ಮುಖ್ಯಮಂತ್ರಿ ಪದಕ ಪುರಸ್ಕೃತ ಜಾಫರ ಬಚ್ಚೇರಿ ಅವರಿಗೆ ಗುರುರಕ್ಷೆ ಜರಗುವುದು. ಭಕ್ತಿಸೇವೆಯನ್ನು ಗದಗಯ್ಯ ಗುರುಸ್ವಾಮಿಮಠ ವಹಿಸಿಕೊಂಡಿದ್ದಾರೆ. ಸಂಗೀತ ಸೇವೆಯನ್ನು ಬಸವರಾಜ ಸಿದ್ದಣ್ಣವರ ಮತ್ತು ಶ್ರೀ.ಜ.ಅ. ಅಕ್ಕನ ಬಳಗದವರಿಂದ ಜರಗುವುದು.

ಮಾಸಿಕ ಶಿವಾನುಭವ ಗೋಷ್ಠಿ



ನರಗುಂದ: ಆದಿ ಜಗದ್ಗುರು ಶಂಕರಾಚಾರ್ಯರು ಸನಾತನ ಧರ್ಮ ಪುನರುತ್ಥಾನಕರು. 8ನೇ ಶತಮಾನದಲ್ಲಿ ಏಕತೆಗಾಗಿ ಸರ್ವರೂ ಬ್ರಹ್ಮನ ಸ್ವರೂಪಿಗಳೇ ಎಂಬ ಅದ್ವೈತ ತತ್ವ ಸಿದ್ಧಾಂತವನ್ನು ಜಗತ್ತಿಗೆ ಸಾರಿದ ಮಹಾನ್ ಪುರುಷ. ಅವರ ಅಪಾರವಾದ ಕೊಡುಗೆಯಿಂದಲೇ ಇಂದಿಗೂ ಸನಾತನ ಧರ್ಮ ಉಳಿದಿದೆ ಎಂದು ಅಭಿನವ ಯಚ್ಚರ ಸ್ವಾಮೀಜಿ ಹೇಳಿದರು. ತಾಲೂಕಿನ ಶಿರೋಳದ ಜಗದ್ಗುರು ಶ್ರೀ ಯಚ್ಚರಸ್ವಾಮಿಗಳ ಗವಿಮಠದಲ್ಲಿ ನಡೆದ 31ನೇ ಮಾಸಿಕ ಶಿವಾನುಭವ ಗೋಷ್ಠಿ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು. ಯಾವಗಲ್ಲ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಪ್ರದೀಪ ಘಾಳಿ ಮಾತನಾಡಿದರು. ಸರ್. ಎಂ ವಿಶ್ವೇಶ್ವರಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡುವ ಮೂಲಕ ವಿಶ್ವ ಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಯಿತು. ಶಿರೋಳದ ಶ್ರೀ ವಿಶ್ವೇಶ್ವರಯ್ಯ ಕೂಲಿ ಮತ್ತು ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಬಸವರಾಜ ಹೂಗಾರ, ಬಸವರಾಜ ಕುಪ್ಪಸ್ತ, ಮಲ್ಲಪ್ಪ ಚಿಕ್ಕನರಗುಂದ, ಗುರುಪಾದಪ್ಪ ಭಜಂತ್ರಿ ಸಂಗೀತ ಸೇವೆ ಸಲ್ಲಿಸಿದರು. ಸುನೀಲ ಕಳಸದ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು.

ನಿಧನ ಸುದ್ದಿ


ವಿ.ಆರ್.ಗುಡಿಸಾಗರ



ರೋಣ: ಜಿಲ್ಲೆಯ ಹಿರಿಯ ಕಾಂಗ್ರೆಸ್ ಮುಖಂಡರಾಗಿದ್ದ ನ್ಯಾಯವಾದಿ ವಿ.ಆರ್.ಗುಡಿಸಾಗರ ಭಾನುವಾರ ನಿಧನರಾಗಿದ್ದು,ಅಪಾರ ಬಳಗವನ್ನು ಅಗಲಿದ್ದಾರೆ.

ಇವರಿಗೆ ಮಾಜಿ ಸಂಸದ ಆರ್. ಎಸ್.ಪಾಟೀಲ, ಶಾಸಕ ಜಿ.ಎಸ್.ಪಾಟೀಲ ಕೆಎಸ್‌ಡಿಎಲ್ ಅಧ್ಯಕ್ಷರನ್ನಾಗಿ ಸಗ ಮಾಡಿದ್ದರು. ಅಲ್ಲದೇ ಗದಗ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಹಾ ಪ್ರಧಾನ ಕಾರ್ಯದರ್ಶಿಗಳಾಗಿ, ರೋಣದ ರಾಜೀವ ಗಾಂಧಿ ಶಿಕ್ಷಣ ಸಂಸ್ಥೆಯ ಕೆಲ ಶಿಕ್ಷಣ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾಗಿ ಹಾಗೂ ನಿರ್ದೇಶಕರಾಗಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ರೋಣದಲ್ಲಿ ಕನಕ ಭವನ ನಿರ್ಮಾಣದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದ ಇವರು ಹಾಲು ಮತದದ ಹುಲಿ ಎಂದು ಬಿರುದು ಪಡೆದಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅತ್ಯಂತ ಆಪ್ತರಾಗಿದ್ದರು. ಮೃತರ ಅಂತ್ಯಕ್ರಿಯೆಯನ್ನು ರೋಣ ಪಟ್ಟಣದ ಹತ್ತಿರ ಇರುವ ಕೃಷ್ಣಾಪೂರ ಗ್ರಾಮದ ಸ್ವ ಜಮೀನಿನಲ್ಲಿ ಸೋಮವಾರ ಮಧ್ಯಾಹ್ನ 1 ಕ್ಕೆ ನೆರವೇರಿಸಲಾಗುವುದು ಎಂದು ಸಮಾಜದ ಮುಖಂಡರುಗಳು ತಿಳಿಸಿದ್ದಾರೆ. ಇವರ ನಿಧನಕ್ಕೆ ಶಾಸಕ ಜಿ.ಎಸ್.ಪಾಟೀಲ, ಕಾಗಿನಲೆ ಗುರುಪೀಠದ ಶ್ರೀಗಳು, ಧಾರವಾಡ ಮನ್ಸೂರ ಮಠದ ಶ್ರೀಗಳು, ಇಟಗಿ,ರೋಣ, ಹಾಲಕೇರಿ,ನರೇಗಲ್ಲ, ಕೊಪ್ಪ ಶ್ರೀಮಠಗಳ ಶ್ರೀಗಳು, ಸಚಿವ ಎಚ್. ಕೆ.ಪಾಟೀಲ, ಮಾಜಿ ಸಂಸದ ಆರ್.ಎಸ್.ಪಾಟೀಲ, ಬಿ.ಎಸ್ .ಪಾಟೀಲ, ಐ.ಎಸ್.ಪಾಟೀಲ,ಅಂದಪ್ಪ ಬಿಚ್ಚೂರ, ಎಚ್.ಎಸ್. ಸೋಂಪುರ ಸೇರಿದಂತೆ ಗದಗ ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಪದಾಧಿಕಾರಿಗಳು, ರೋಣ, ಗಜೇಂದ್ರಗಡ ತಾಲೂಕಿನ ಹಾಲುಮತ ಸಮಾಜದ ಮುಖಂಡರುಗಳು, ಕಾರ್ಯಕರ್ತರು, ಅಭಿಮಾನಿಗಳು ಸಂತಾಪ ಸೂಚಿಸಿದ್ದಾರೆ.

ಬಸಪ್ಪ ಮಜ್ಜಿಗುಡ್ಡ



ಲಕ್ಷ್ಮೇಶ್ವರ: ಪಟ್ಟಣದ ಹಳ್ಳದಕೇರಿ ನಿವಾಸಿ, ಗಾಣಿಗೇರ ಸಮಾಜದ ಹಿರಿಯ ಮುಖಂಡ ಬಸಪ್ಪ ಶಿವಪ್ಪ ಮಜ್ಜಿಗುಡ್ಡ (62) ಭಾನುವಾರ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಗದಗ: ಪೊಲೀಸ್ ಇಲಾಖೆಯ ಸೈಬರ್ ಕ್ರೈಂ ವಿಭಾಗದಲ್ಲಿ ಸೇವೆ ಸಲ್ಲಿಸಿದ ಚಂದ್ರಶೇಖರ ದೊಡ್ಡಮನಿ ಹೆಡ್ ಕಾನ್‌ಸ್ಟೇಬಲ್ ಆಗಿ ಪದೋನ್ನತಿ ಹೊಂದಿ ನರೇಗಲ್ಲ ಪೊಲೀಸ್ ಠಾಣೆಗೆ ವರ್ಗಾವಣೆಗೊಂಡ ಪ್ರಯುಕ್ತ ನಗರದ ಕ್ರೀಡಾ ಮಳಿಗೆಯಲ್ಲಿ ಜಿಲ್ಲಾ ಸೈಕ್ಲಿಂಗ್ ಅಸೋಸಿಯೇಷನ್ ವತಿಯಿಂದ ಸನ್ಮಾನಿಸಲಾಯಿತು. ಜಿ.ಎಂ. ನದಾಫ, ಮಲ್ಲಿಕಾರ್ಜುನ್ ಮೇಟಿ, ಅನಂತ ದೇಸಾಯಿ, ಶಿವಪುತ್ರಪ್ಪ ಕಣವಿ, ಸಿದ್ದು ಕಪ್ಪತ್ತನವರ, ರಿಯಾಜ್ ಅಹ್ಮದ್ ಗದಗ, ನಿಂಗಪ್ಪ ತೇರಿನಗಡ್ಡಿ, ಇಸ್ಮಾಯಿಲ್ ಕಾಗದ, ನಿಜಗುಣಿ ಕಂಬಳಿ, ನಜೀರ್ ಅಹ್ಮದ್ ಖುದಾವಂದ್ ಇತರರಿದ್ದರು.

ಕಾಲುವೆಗಳಲ್ಲಿ ಮುಳ್ಳು, ಹೂಳು: ಸ್ವಚ್ಛತೆಗೆ ಆಗ್ರಹ

ಮುಂಡರಗಿ: ಗ್ರಾಮದ ಚಿಕ್ಕ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಡಂಬಳ ಕೆರೆ ನೀರಾವರಿ ಕಾಲುವೆಗಳ ದಕ್ಷಿಣ ಹಾಗೂ ಪೂರ್ವ ಭಾಗಗಳು ಸಂಪೂರ್ಣವಾಗಿ ಹೂಳು ತುಂಬಿಕೊಂಡು ಮುಚ್ಚಿಕೊಂಡಿರುವುದರಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು ಕಾಲುವೆಗಳನ್ನು ಸ್ವಚ್ಛಗೊಳಿಸುವಂತೆ ತಾಲೂಕಿನ ಡಂಬಳ ಗ್ರಾಮದ ಉಪತಹಶೀಲ್ದಾರ್‌ಗೆ ಮನವಿ ಸಲ್ಲಿಸಿ ಆಗ್ರಹಿಸಿದರು.

ಮುಂಗಾರು ಹಂಗಾಮು ಪ್ರಾರಂಭವಾಗುತ್ತಿರುವ ಈ ಸಂದರ್ಭದಲ್ಲಿ ಕೆರೆಯಲ್ಲಿ ಅಪಾರ ಪ್ರಮಾಣದಲ್ಲಿ ನೀರಿನ ಲಭ್ಯತೆ ಇದ್ದರೂ ಕಾಲುವೆಗಳಲ್ಲಿ ಮುಳ್ಳು, ಕಂಟಿ ಹಾಗೂ ಹೂಳು ತುಂಬಿಕೊಂಡಿರುವ ಕಾರಣ ನೀರು ಮುಂದೆ ಸಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕಾಲುವೆಗಳ ಮೂಲಕ ಸುಮಾರು ಎರಡು ಸಾವಿರ ಎಕರೆ ಭೂಮಿಗೆ ನೀರಾವರಿ ಸಿಗುತ್ತಿದ್ದು, ಎಂಟು ದಿನಗಳೊಳಗೆ ಸ್ವಚ್ಛತಾ ಕಾರ್ಯ ಆರಂಭಿಸದಿದ್ದರೆ ಸಂಬಂಧಿಸಿದ ಇಲಾಖೆಯ ಕಚೇರಿ ಮುಂದೆ ಬೃಹತ್ ಪ್ರಮಾಣದಲ್ಲಿ ಉಪವಾಸ ಸತ್ಯಾಗ್ರಹ ಕೈಗೊಳ್ಳುವುದಾಗಿ ರೈತರು ಎಚ್ಚರಿಕೆ ನೀಡಿದರು.

ರೈತ ಬುಡ್ನೆಸಾಬ ಅತ್ತಾರ ಕಂದಾಯ ಇಲಾಖೆಯ ಅಧಿಕಾರಿ ಎಂ.ಎಂ. ವಿಭೂತೆ ಅವರಿಗೆ ಸಲ್ಲಿಸಿದರು. ಮನವಿ ಸ್ವೀಕರಿಸಿದ ಅಧಿಕಾರಿ, ಈ ಕುರಿತು ಹಿರಿಯ ಅಧಿಕಾರಿಗಳಿಗೆ ಇಮೇಲ್ ಮೂಲಕ ಮಾಹಿತಿ ನೀಡಿ ಶೀಘ್ರ ಕ್ರಮ ಕೈಗೊಳ್ಳುವಂತೆ ತಿಳಿಸಲಾಗುವುದು ಎಂದು ಭರವಸೆ ನೀಡಿದರು. ರಾಮಪ್ಪ ಯಂಡಿಗೇರಿ, ಮಲ್ಲಪ್ಪ ಗಡಗಿ, ಶಿವಪ್ಪ ಬಂಡಿ, ರಾಜಪ್ಪ ಪಟ್ಟಣಶೆಟ್ಟಿ, ರಾಜಶೇಖರ ಪಟ್ಟಣಶೆಟ್ಟಿ, ಎಸ್. ಆರ್. ಪಲ್ಲೇದ, ಹುಸೇನಸಾಬ ಕಾಸ್ತಾರ, ಮಂಜುನಾಥ ಕೆರಿ, ಜಾಕೀರ ಮೂಲಿಮನಿ, ಎಂ.ಎನ್. ಕೋರ್ಲಹಳ್ಳಿ, ಎಂ.ಎಸ್. ಪಲ್ಲೇದ, ವಿ.ವೈ. ರಾಘಣ್ಣವರ, ಎಚ್.ವೈ. ಗಡಗಿ, ಬಸವರಾಜ ಪಟ್ಟಣಶೆಟ್ಟಿ, ಅಶೋಕ ಚಿಕರಡ್ಡಿ, ಮಂಜುನಾಥ ಕರದಾನಿ, ಪರಮೇಶ ಓಲೇಕಾರ ಇತರರಿದ್ದರು.



ಮುಂಡರಗಿ: ಗ್ರಾಮದ ಚಿಕ್ಕ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಡಂಬಳ ಕೆರೆ ನೀರಾವರಿ ಕಾಲುವೆಗಳ ದಕ್ಷಿಣ ಹಾಗೂ ಪೂರ್ವ ಭಾಗಗಳು ಸಂಪೂರ್ಣವಾಗಿ ಹೂಳು ತುಂಬಿಕೊಂಡು ಮುಚ್ಚಿಕೊಂಡಿರುವುದರಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದು ಕಾಲುವೆಗಳನ್ನು ಸ್ವಚ್ಛಗೊಳಿಸುವಂತೆ ತಾಲೂಕಿನ ಡಂಬಳ ಗ್ರಾಮದ ಉಪತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಮಣ್ಣಿನ ಮಡಿಕೆಗೆ ಭಾರೀ ಬೇಡಿಕೆ

ಸೀತಲ ಓಲೇಕಾರ

ಗಜೇಂದ್ರಗಡ: ಉರಿ ಬಿಸಿಲಿಗೆ ಕೋಟೆನಾಡಿನ ಜನತೆ ಬೆಂದು ಹೋಗುತ್ತಿದ್ದು, ಜನರು ತಮ್ಮ ದೇಹ ತಂಪಾಗಿಟ್ಟುಕೊಳ್ಳಲು ಸಾಕಷ್ಟು ಹರಸಾಹಸ ಪಡುತ್ತಿದ್ದಾರೆ. ಈ ನಡುವೆ ಗಜೇಂದ್ರಗಡ ತಾಲೂಕಿನ ಜನರು ಬಡವರ ಫ್ರಿಡ್ಜ್ ಎಂದೇ ಫೇಮಸ್ ಆಗಿರುವ ಮಣ್ಣಿನ ಮಡಿಕೆಗಳಿಗೆ ಭಾರೀ ಡಿಮ್ಯಾಂಡ್ ಬಂದಿದೆ.

ಮಡಿಕೆ ನೀರು ಆರೋಗ್ಯಕ್ಕೂ ಒಳ್ಳೆಯದು, ದೇಹಕ್ಕೂ ತಂಪು ಎಂದು ಶ್ರೀಮಂತ ಜನರೂ ಖರೀದಿಗೆ ಮುಗಿಬಿದ್ದಿದ್ದಾರೆ. ಬಿಸಿಲ ಝಳಕ್ಕೆ ಭೂಮಿ ಕಾದು ಕೆಂಡವಾಗಿದೆ. ಭೂಮಿಯಿಂದ ಬಿಸಿಗಾಳಿ ಬೀಸುತ್ತಿದೆ. ಕೆಂಡದಂಥ ಬಿಸಿಲು ಬಿಸಿಗಾಳಿಗೆ ಗಜೇಂದ್ರಗಡ ಜನತೆ ಬೆವತು ಬೆಂಡಾಗಿ ಹೋಗಿದ್ದಾರೆ. ದೇಹ ಕೂಲ್ ಮಾಡಿಕೊಳ್ಳಲು ನಾನಾಕಸರತ್ತು ಮಾಡ್ತಾಯಿದ್ದಾರೆ. ಇನ್ನು ಇಷ್ಟು ದಿನ ಮೂಲೆ ಸೇರಿದ್ದ ಬಡವರ ಫ್ರಿಡ್ಜ್ ಗೆ ಈಗ ಭಾರೀ ಡಿಮ್ಯಾಂಡ್ ಬಂದಿದೆ. ಗಜೇಂದ್ರಗಡ ಅಷ್ಟೇ ಅಲ್ಲದೇ ಗ್ರಾಮೀಣ ಭಾಗ, ಹೋಬಳಿ ಮಟ್ಟದಲ್ಲಿಯೂ ಬಿಸಿಲಿಗೆ ಬೆಂಡಾದ ಜನತೆ ಉತ್ತಮ ಆರೋಗ್ಯಕ್ಕಾಗಿ ಬಡವರ ಫ್ರಿಡ್ಜ್ ಗೆ ಮೊರೆ ಹೋಗಿದ್ದಾರೆ. ಮಣ್ಣಿನ ಮಡಿಕೆಗೆ ಫುಲ್ ಡಿಮ್ಯಾಂಡ್ ಬಂದಿದ್ದು, ನಗರದಲ್ಲಿ ಮಡಿಕೆ ಖರೀದಿಗೆ ಜನ ಮುಗಿಬಿದ್ದಿದ್ದಾರೆ. ಬಡವರು ಮಾತ್ರವಲ್ಲ ಈ ಮಡಿಕೆ ಖರೀದಿಗೆ ಶ್ರೀಮಂತರೂ ಮುಗಿಬಿದ್ದಿದ್ದಾರೆ. ಮಡಿಕೆ ನೀರು ಕುಡಿದು ದೇಹ ತಂಪು ಮಾಡಿಕೊಳ್ಳಲು ಜನ ಮುಂದಾಗಿದ್ದಾರೆ. ಫ್ರಿಡ್ಜ್ ಗಿಂತಲೂ ಮಡಿಕೆಯಲ್ಲಿನ ನೀರು ಆರೋಗ್ಯಕ್ಕೆ ಒಳ್ಳೆಯದು ಎನ್ನುತ್ತಿದ್ದಾರೆ ಜನರು.



ದಿಗಂತ ವಿಶೇಷ

ದೇಹದಲ್ಲಿ ನೀರಿನ ಅಂಶ ಕೊರತೆ ಹೆಚ್ಚಳ

ವಿಪರೀತ ಬಿಸಿಲಿನ ಝಳಕ್ಕೆ ದೇಹದಲ್ಲಿ ನೀರಿನ ಅಂಶ ಕೊರತೆ ಹೆಚ್ಚಾಗುತ್ತಿದೆ. ಹೀಗಾಗಿ ಜನರು ಹೆಚ್ಚಿನ ಪ್ರಮಾಣದಲ್ಲಿ ನೀರು ಸೇವನೆ ಮಾಡುವಂತೆ ವೈದ್ಯರು ಎಚ್ಚರಿಸಿದ್ದಾರೆ. ಫ್ರಿಡ್ಜ್ ನಲ್ಲಿನ ಅತೀಯಾದ ತಂಪು ನೀರು ಕುಡಿಯದಂತೆ ವೈದ್ಯರು ಸಲಹೆ ನೀಡಿದ್ದಾರೆ. ಹೀಗಾಗಿ ಶ್ರೀಮಂತರು ಕೂಡ ಈಗ ಮಡಿಕೆಗೆ ಮೊರೆ ಹೋಗಿದ್ದಾರೆ. ಹೀಗಾಗಿ ಮಡಿಕೆ ವ್ಯಾಪಾರ ಬಲು ಜೋರಾಗುತ್ತಿದೆ. ಮಳೆಗಾಲದಲ್ಲಿ 200 ವ್ಯಾಪಾರ ಮಾಡುತ್ತಿದ್ದ ಮಡಿಕೆ ವ್ಯಾಪಾರಸ್ಥರು ಈಗ 2-3 ಸಾವಿರ ವ್ಯಾಪಾರ ನಡೆಸಿದ್ದಾರೆ. 200 ರಿಂದ 600 ಬೆಲೆಯ ಮಡಿಕೆಗಳು ಭರ್ಜರಿ ಮಾರಾಟ ಆಗುತ್ತಿವೆ.

ಉತ್ತಮ ಆರೋಗ್ಯ

ಮಳೆಗಾಲದಲ್ಲಿ ವ್ಯಾಪಾರ ಬಾಳ ಕಡಿಮೆ ಇತ್ತು ರೀ ಇವಾಗ ಬಿಸಲಿ ಬಾಳ ಐತಿ ಅಂತ ಹೇಳಿ ಜನ ಮಡಿಕೆ ಖರೀದಿ ಮಾಡಕ ಬರ್ತಾರ ರೀ. ಆವಾಗ ಎಲ್ಲಾ ದಿನಕ್ಕ 200 ದಿಂದ 300 ವ್ಯಾಪಾರ ಆಕ್ಕೈತಿ, ಬ್ಯಾಸಗ್ಯಾಗ ಒಂದು ದಿನ 1 ಸಾವಿರಯಿಂದ 2 ಸಾವಿರ ಆಗುತ ರೀ, ಒಂದು ದಿನ 500ಯಿಂದ 800 ಆಗುತ್ತ ರೀ. ನಾವು ಕುಂಬಾರಿಕೆ ಮಾಡ್ತಾ ಬಂದಿವಿ ಅದನ್ನು ಮುಂದುವರೆಸಿಕೊಂಡು ಹೋಗ್ತೀವಿ ರೀ. ಮಡಕಿ ಒಳಗ ನೀರು ಕುಡಿದ್ರ ಯಾವು ಜಡ್(ರೋಗ) ಬರಲ್ಲ ಅಂತ ನಮ್ಮ ಹಿರಿಯರು ಹೇಳ್ಯಾರಿ, ಅದು ಕರೆನೂ ಐತಿ ನೋಡರಿ ಎಂದು ಮಡಿಕೆ ವ್ಯಾಪಾರಿ ಶಾಂತಮ್ಮ ಕುಂಬಾರ ಹೇಳುತ್ತಾರೆ.

- ನಮ್ಮ ಮನೆಯಲ್ಲಿ ಫ್ರೀಡ್ಜ್ ಇದ್ದರೂ ಕೂಡಾ ವೈದ್ಯರ ಸಲಹೆ ಮೇರೆಗೆ ನಾವು ಮಡಿಕೆಯ ನೀರನ್ನು ಕುಡಿಯಲು ಆರಂಭ ಮಾಡಿದ್ದೇವೆ
- ದಣಿದು ಬಂದ ತಕ್ಷಣ ಮನೆಯಲ್ಲಿ, ಕಚೇರಿಯಲ್ಲಿ ಕಾರ್ಯ ಮುಗಿಸಿ ಬಂದಾಗ ನೈಸರ್ಗಿಕವಾಗಿ ಮಡಿಕೆಯ ನೀರು ಕುಡಿಯುವ ಮೂಲಕ ತಂಪಾಗಿಸಿಕೊಳ್ಳುತ್ತೇವೆ
- ದೇಹ ತಂಪಾಗಿಸಲು ಮಡಿಕೆಗ ಸಹಾಯಕಾರಿಯಾಗಿವೆ ಎನ್ನುತ್ತಾರೆ ಗಜೇಂದ್ರಗಡ ನಿವಾಸಿ ನಾಜೇಯಾ

ಬಿಸಿಲಿನ ತಾಪಮಾನ ಹೆಚ್ಚಾಗುತ್ತಿದ್ದು, ದೇಹದಲ್ಲಿ ಝಳಕ್ಕೆ ನೀರಿನ ಅಂಶ ಕಡಿಮೆ ಆಗುತ್ತಿದೆ. ದೇಹ ತಂಪಾಗಿಡಲು ಅತೀ ತಂಪಾದ ಫ್ರಿಡ್ಜ್ ನೀರು ಕುಡಿಯದಿರಿ. ಮಣ್ಣಿನ ಮಡಿಕೆ ನೀರನ್ನು ಸೇವಿಸಿ.

■ ಡಾ.ಅನಿಲಕುಮಾರ ತೋಟದ, ಆಡಳಿತ ವೈದ್ಯಾಧಿಕಾರಿ, ತಾಲೂಕು ಸಮುದಾಯ ಆರೋಗ್ಯ ಕೇಂದ್ರ

ರೈತರು ಆರ್ಥಿಕವಾಗಿ ಸಬಲರಾಗಲಿ: ಜಿಎಸ್‌ಪಾ



ಮುಂಡರಗಿ: ಹುಲಿಗುಡ್ಡ ಏತ ನೀರಾವರಿಯ ನೀರನ್ನು ಪೈಪ್‌ಲೈನ್ ಮೂಲಕ ಪೇಠಾ ಆಲೂರ ಕೆರೆಯನ್ನು ತುಂಬಿಸಲಾಯಿತು. 2 ಕೋಟಿ ಅನುದಾನದಡಿ ಕಾಲುವೆಗಳ ಕಾಮಗಾರಿ ಮುಗಿಯುವ ಹಂತದಲ್ಲಿದ್ದು ಇದರ ಸದುಪಯೋಗ ಪಡೆಸಿಕೊಂಡು ಉತ್ತಮ ಬೆಳೆ ಹೊಂದುವುದರ ಮೂಲಕ ಆರ್ಥಿಕವಾಗಿ ಸಬಲರಾಗಿ ಎಂದು ರೈತರಿಗೆ ಶಾಸಕ ಜಿ.ಎಸ್.ಪಾಟೀಲ ಹೇಳಿದರು.

ಅವರು ಡಂಬಳ ಹೋಬಳಿಯ ಪೇಠಾ ಆಲೂರ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ಪವರ್ ಗ್ರಿಡ್ ಕಾರ್ಪೋರೇಶನ್ ಆಫ್ ಇಂಡಿಯಾ ಲಿ.ಕಂಪನಿ ವತಿಯಿಂದ ಕೆಸಿ. ಎಸ್.ಆರ್ ವತಿಗೆ ಹಣದಲ್ಲಿ ಮಂಜೂರಾದ 9 ಕೋಟಿ ರೂ. ಅನುದಾನದಲ್ಲಿ ಮೇವುಂಡಿ-ಪೇಠಾಆಲೂರ-ಹಳ್ಳಿಗುಡಿ ರಸ್ತೆ ಕಾಮಗಾರಿ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಮೊದಲು ಮಹಾತ್ಮಾ ಗಾಂಧಿ ರೋಜಗಾರ್ ಯೋಜನೆಗಳ ಮೂಲಕ ಪಂಚಾಯತಿ ಸದಸ್ಯರು ಗ್ರಾಮದ ಹಿತಕ್ಕಾಗಿ, ಗ್ರಾಮದ ರೈತರು ತಮಗೆ ಯಾವ ಕೆಲಸಬೇಕು ಅದರಂತೆ ಕ್ರಿಯಾ ಯೋಜನೆಗಳನ್ನು ನೀವೇ ಮಾಡುಕೊಳ್ಳುತ್ತಿದ್ದೀರಿ. ಅದರ ಸದುಪಯೋಗವಾಗಿತ್ತು. ಆದರೆ ದೇಶಾದ್ಯಂತ ಮಹಾತ್ಮಗಾಂಧೀಜಿ ಹೆಸರು ತೆಗೆದು ವಿಬಿಜಿ ರಾಮ್ ಜಿ ಯೋಜನೆ ಪ್ರಾರಂಭಿಸಲು ಹೊರಟ ಸರ್ಕಾರದ ವಿರುದ್ಧ ಜನತೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ ಎಂದರು.

ಬ್ಲಾಕ್‌ಕಾಂಗ್ರೆಸ್‌ಅಧ್ಯಕ್ಷಡಿ.ಡಿ.ಮೋರನಾಳ ಹಾಗೂ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಯಲ್ಲಪ್ಪಗೌಡ ಕರಮಡಿ ಮಾತನಾಡಿದರು. ಮುಂಡರಗಿ ತಾಲೂಕು ಯುಥ್ ಕಾಂಗ್ರೆಸ್ ಅಧ್ಯಕ್ಷ ಶರಣು ಬಂಡಿಹಾಳ, ಗದಗ ಜಿಲ್ಲಾ ಕಾರ್ಯನಿರ್ವಾಕ ಅಭಿಯಂತರ ಉಮೇಶ ನಾಯಕ, ಎಸ್.ಎಂ.ನಾಯಕ, ಸಂತೋಷ ಹಿರೇಮಠ, ಎಂ.ಎನ್. ದಾಯಮ್ಮನವರ, ತಾಲೂಕು ಇಒ ವಿಶ್ವನಾಥ ಹೊಸಮನಿ, ತೋಟಗಾರಿಕಾ ಅಧಿಕಾರಿ ಮಹಮ್ಮದರಫೀಕ ತಾಂಬೋಟಿ, ಹಾಲಪ್ಪ ಕಬ್ಬೇರಳ್ಳಿ, ಶ್ರೀಶೈಲಪ್ಪ ನಾಗನೂರ, ಹನಮಪ್ಪ ಹ್ಯಾಟಿ, ವಿಶ್ವನಾಥ ಪಾಟೀಲ, ಮಹಾದೇವಪ್ಪ ಹೂಗಾರ, ರಾಮಣ್ಣ ಹನವಾಳ, ದೇವೇಂದ್ರಪ್ಪ ಹನವಾಳ, ಅಶೋಕ ಸಿಂದೋಗಿ , ಬಸವರಡ್ಡಿ ಬಂಡಿಹಾಳ, ಸೋಮು ಹೈತಾಪುರ, ಬಾಬುಸಾಬ ಮೂಲಿಮನಿ, ಜಿಲ್ಲಾ ಉಪಾಧ್ಯಕ್ಷ ಡಾ.ಬಿ.ಎಸ್.ಮೇಟಿ, ಅಶೋಕ ಕಬ್ಬೇರಳ್ಳಿ, ಪಿಡಿಒ ವಸಂತ ಗೋಕಾಕ, ಹಾರೋಗೇರಿ ಪಿಡಿಒ ಮಹೇಶ ಅಲ್ಲಿಪುರ, ಉಪತಹಶೀಲ್ದಾರ್ ಎಸ್.ಎಸ್.ಬಿಚ್ಚಾಲಿ, ಕಂದಾಯ ನಿರೀಕ್ಷಕ ಪ್ರಭು ಬಾಗಲಿ ಇತರರಿದ್ದರು.

ಬುದ್ಧ, ಬಸವ, ಅಂಬೇಡ್ಕರ್ ತತ್ವ ಅಳವಡಿಸಿಕೊಳ್ಳಿ

ಗದಗ: ಇಂದಿನ ಸಮಾಜದಲ್ಲಿ ಹಲವರು ಬುದ್ಧ, ಬಸವ ಹಾಗೂ ಅಂಬೇಡ್ಕರ್ ಅವರ ಹೆಸರುಗಳನ್ನು ಕೇವಲ ವೇದಿಕೆ ಭಾಷಣಗಳಿಗೆ ಮಾತ್ರ ಬಳಸುತ್ತಿರುವುದು ವಿಷಾದನೀಯ. ಅವರ ತತ್ವ-ಸಿದ್ಧಾಂತಗಳನ್ನು ಅನುಸರಿಸಿದಾಗ ಮಾತ್ರ ಸಮಾನತೆ, ನ್ಯಾಯ ಮತ್ತು ಸಹಬಾಳ್ವೆಯ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ತಾಲೂಕಿನ ಹರ್ತಿ ಗ್ರಾಮದಲ್ಲಿ ಭಾನುವಾರ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಲೋಕಾರ್ಪಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಧ್ವನಿ ಇಲ್ಲದವರಿಗೆ ಧ್ವನಿಯಾಗಿ ನಿಲ್ಲುವ ಶಕ್ತಿ ನಮ್ಮ ದೇಶಕ್ಕೆ ನೀಡಿದ್ದಾರೆ. ಬುದ್ಧರು ಸಮ ಬಾಳು - ಸಮಪಾಲು ಎಂಬ ತತ್ವವನ್ನು ಸಾರಿದರೆ, ಬಸವಣ್ಣನವರು ಇವ ನಮ್ಮವ ಎಂಬ ಸಮಾನತೆಯ ಸಂದೇಶವನ್ನು ಸಮಾಜಕ್ಕೆ ನೀಡಿದ್ದಾರೆ. ಈ ಮಹನೀಯರ ತತ್ವಗಳು ಕೇವಲ ಭಾಷಣಗಳಲ್ಲಿ ಮಾತ್ರ ಉಳಿಯದೆ, ಪ್ರತಿಯೊಬ್ಬರ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಜನರ ಆಡಳಿತಕ್ಕೆ ಆದ್ಯತೆ ನೀಡಿ, ಪ್ರತಿಯೊಬ್ಬ ನಾಗರಿಕನಿಗೂ ನ್ಯಾಯ ಒದಗಿಸುವ ದಿಕ್ಕಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಮಾನತೆಯ ಭಾವನೆ ಮೂಡಿಸುವ ನಿಟ್ಟಿನಲ್ಲಿ ಸರ್ಕಾರದ ವಿವಿಧ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗುತ್ತಿದೆ. ಈ ಕಾಮಗಾರಿಗಳು ಪೂರ್ಣಗೊಂಡ ನಂತರ ಗ್ರಾಮದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಬಲ ದೊರೆಯಲಿದೆ ಎಂದರು.

ಈ ಸಂದರ್ಭದಲ್ಲಿ ಹರ್ತಿ ಗ್ರಾಮದ ಬಸವೇಶ್ವರ ದೇವಸ್ಥಾನದ ಬಳಿಯಲ್ಲಿ ಸುಸಜ್ಜಿತ ಗೌರವ ಘಟಕ ಮತ್ತು ತಡೆಗೋಡೆ ನಿರ್ಮಾಣ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಲಾಯಿತು. ಶಿವ-ಪಾರ್ವತಿ ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿಗೂ ಚಾಲನೆ ನೀಡಲಾಯಿತು. ಗ್ರಾಮದಲ್ಲಿ ಸಾರ್ವಜನಿಕ ಸೌಲಭ್ಯಗಳನ್ನು ವೃದ್ಧಿಸುವ ನಿಟ್ಟಿನಲ್ಲಿ ಗ್ರಾಮ ಚವಡಿ ಕಟ್ಟಡ ನಿರ್ಮಾಣ, ಸಿ.ಸಿ. ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು. ಬುದ್ಧ, ಬಸವ ಮತ್ತು ಅಂಬೇಡ್ಕರ್ ಜಯಂತ್ಯುತ್ಸವ ಆಚರಣೆಗೆ ಸಚಿವರು ಚಾಲನೆ ನೀಡಿದರು. ತಾಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ, ಎಸ್.ಎಸ್. ಪಾಟೀಲ, ಅಪ್ಪಣ್ಣ ಇನಾಮತಿ, ಬಸವರಾಜ ಕಡೇಮನಿ, ಸಿಂಗಾಡಿ, ಶರೀಪನವರ್, ಎಸಿ ಗಂಗಪ್ಪ, ಡಾ. ಜಿನಗಾ, ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಗಂಗಾಧರ ಶಿರೋಳ ಸೇರಿದಂತೆ ಅನೇಕ ಗಣ್ಯರು ಹಾಗೂ ಗ್ರಾಮಸ್ಥರು ಇದ್ದರು.



ಎಲೈಟ್ ಇಲೆವೆನ್ ತಂಡಕ್ಕೆ ಚಾಪಿಯನ್ ಪಟ್ಟ



ಗದಗ: ನಗರದ ವಿದ್ಯಾದಾನ ಸಮಿತಿ ಮೈದಾನದಲ್ಲಿ ಕಳೆದ 20 ದಿನಗಳಿಂದ ನಡೆದ ಕೆ.ಎಚ್. ಪಾಟೀಲ ಕ್ರಿಕೆಟ್ ಲೀಗ್ ಸೀಜನ್-2ರ ಪಂದ್ಯಾವಳಿಯಲ್ಲಿ ಎಲೈಟ್ ಇಲೆವೆನ್ 7 ವಿಕೆಟ್ ಅಂತರದಲ್ಲಿ ಗೆಲುವು ದಾಖಲಿಸುವ ಮೂಲಕ ಚಾಂಪಿಯನ್ ತಂಡವಾಗಿ ಹೊರಹೊಮ್ಮಿತು. ಎದುರಾಳಿ ಸ್ಟ್ರೈಕರ್ಸ್ ತಂಡ ರನ್ನರ ಅಪ್‌ಗೆ ತೃಪ್ತಿಪಟ್ಟಿತು.

ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಸ್ಟ್ರೈಕರ್ಸ್ ತಂಡ ಮೊದಲ ವಿಕೆಟ್ ನಷ್ಟಕ್ಕೆ 6 ಓವರ್‌ಗಳಲ್ಲಿ 48 ರನ್ ಗಳಿಸಿದರೂ ನಿಗದಿತ 10 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 72 ರನ್ ಗಳಿಸಲಷ್ಟೇ ಶಕ್ತವಾಯಿತು. ಸ್ಟ್ರೈಕರ್ಸ್ ತಂಡದ ಪರವಾಗಿ ನಾಯಕ ಫಯಾಜ್ 18 ಎಸೆತಗಳಲ್ಲಿ 12 ರನ್, ತಯ್ಯಬ್ 21ಎಸೆತಗಳಲ್ಲಿ 36 ರನ್ ಗಳಿಸಿದರು. ನಂತರ ಬಂದ ಬ್ಯಾಟ್ಸ್‌ಮನ್‌ಗಳಾದ ಅಲ್ತಾಮಾಶ್ 2, ಜಗದೀಶ 1, ಚನ್ನಪ್ಪ 4, ರಿಯಾಜ್ 1 ಹಾಗೂ ಆರೀಫ್ 2 ರನ್ ಗಳಿಸಿದರು. ಎಲೈಟ್ ಇಲೆವೆನ್ ತಂಡದ ಪರವಾಗಿ ನಿಹಾಲ್ ಆಕಾಶ್ 2 ಓವರ್‌ಗಳಲ್ಲಿ 13 ರನ್ ನೀಡಿ 2 ವಿಕೆಟ್, ಶಿವು 2 ಓವರ್‌ಗಳಲ್ಲಿ ಮೇಡನ್ ಸಹಿತ 3 ರನ್ ನೀಡಿ 2 ವಿಕೆಟ್ ಪಡೆದು ಮಿಂಚಿದರು. ಇದಕ್ಕುತ್ತರವಾಗಿ ಬ್ಯಾಟಿಂಗ್ ನಡೆಸದ ಎಲೈಟ್ ಇಲೆವೆನ್ ಆರಂಭಿಕ ಬ್ಯಾಟ್ಸ್‌ಮನ್ ವಿಜಯ ಬಾರಕೇರ್ 21 ಎಸೆತಗಳಲ್ಲಿ 30 ರನ್ ನೀಡಿ ಅತ್ಯುತ್ತಮ ಆರಂಭ ಒದಗಿಸಿದರು. ಪ್ರೇಮ್ ಬಿ. ಶೂನ್ಯಕ್ಕೆ ಔಟಾದರೆ, ನಿಹಾಲ್ ಆಕಾಶ 18 ಎಸತಗಳಲ್ಲಿ 27 ರನ್ ಗಳಿಸಿದರು. ಸಂತೋಷ ನಾಯಕ 5 ಜಗದೀಶರಡ್ಡಿ 8 ರನ್ ಗಳಿಸಿ ಗೆಲುವಿನ ನಗೆ ಬೀರಿದರು. ಸ್ಟ್ರೈಕರ್ಸ್ ತಂಡದ ಪರವಾಗಿ ಆರೀಫ್ 2 ಓವರ್‌ಗಳಲ್ಲಿ 13 ರನ್ ನೀಡಿ 1 ವಿಕೆಟ್ ಪಡೆದರು. ಉಳಿದಂತೆ ಅಕ್ಷಯ ಲಮಾಣಿ ಹಾಗೂ ಅಲ್ತಾಮಾಶ ತಲಾ ಒಂದು ವಿಕೆಟ್ ಪಡೆದರು.


ಬ್ಯಾಟಿಂಗ್ ಹಾಗೂ ಬಾಲಿಂಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಆಲ್‌ರೌಂಡರ್ ನಿಹಾಲ್ ಆಕಾಶ ಪಂದ್ಯಶ್ರೇಷ್ಠಪ್ರಶಸ್ತಿಗೆ ಭಾಜನರಾದರು. ಸ್ಟ್ರೈಕರ್ಸ್ ತಂಡ ತಯ್ಯಬ್ ಉತ್ತಮ ಬ್ಯಾಟರ್ ಎನಿಸಿದರೆ, ಎಲೈಟ್ ಇಲೆವೆನ್ ತಂಡದ ಶಿವು ಉತ್ತಮ ಬಾಲರ್ ಎನಿಸಿದರು. ನಂತರ ಪಂದ್ಯಾವಳಿ ವೀಕ್ಷಣೆಗೆ ಆಗಮಿಸಿದ್ದ ಸಚಿವ ಎಚ್.ಕೆ. ಪಾಟೀಲ ಅವರು ವಿಜೇತ ಹಾಗೂ ರನ್ನರ್ ಅಪ್ ತಂಡಗಳಿಗೆ ಟ್ರೋಫಿ ವಿತರಿಸಿದರು.

ಈ ನೆಲದ ಸಂಸ್ಕೃತಿ ಪರಂಪರೆ ಉಳಿಸಿ

ನರಗುಂದ: ಕರುನಾಡು ವಿಶಿಷ್ಟ ಕಲೆ, ಸಂಸ್ಕೃತಿ, ಪರಂಪರೆಯ ತಾಣ. ಈ ನೆಲದ ಸಂಸ್ಕೃತಿ, ಕಲೆ, ಸಾಹಿತ್ಯ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಾಗಿದೆ ಎಂದುಶ್ರೀ ಶೈಲಂಬಿಕ್ಷಾವತಿಮಠದ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನಹದಲಿಗ್ರಾಮದಲ್ಲಿ ನಡೆದ ವೀರಭದ್ರೇಶ್ವರ ಜಾತ್ರಾ ಮಹೋತ್ಸವದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಕೊಣ್ಣೂರಿನ ಜೈ ಕಿಸಾನ ಜಾನಪದ ಕಲಾ ತಂಡದಿಂದ ಜರುಗಿದ ಜಾನಪದ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಜಾನಪದ ಸಂಭ್ರಮದಲ್ಲಿ ಯಲ್ಲಪ್ಪ ಡಕ್ಕನವರ ಅವರಿಂದ ಸುಡಗಾಡು ಸಿದ್ದರಾಟ, ದುಂಡಪ್ಪ ಪೂಜಾರ ಅವರಿಂದ ಜನಪದ ಸಂಗೀತ, ಕೊಣ್ಣೂರಿನ ಕರಿಸಿದ್ದೇಶ್ವರ ಡೊಳ್ಳಿನ ಗಾಯನ ಸಂಘ ಡೊಳ್ಳಿನ ಪದ, ಸಾವಿತ್ರಿ ಹುಜರತ್ತಿ ಹಾಗೂ ಸಂಗಡಿಗರಿಂದ ದೀಪ ನೃತ್ಯ, ಪ್ರಕಾಶ ಚಂದನ್ನವರ ಅವರಿಂದ ಜೋಗತಿ ನೃತ್ಯ, ಸಂಗೀತಾ ಸುಣಗಾರ ಹಾಗೂ ಸಂಗಡಿಗರಿಂದ ಲಂಬಾಣಿ ನೃತ್ಯ, ಸಂದೀಪ ಚಲವಾದಿ ಹಾಗೂ ಸಂಗಡಿಗರಿಂದ ಒನಕೆ ನೃತ್ಯ, ಇಮಾಮಹುಸೇನ ಬಾಳಪ್ಪನವರ ಅವರಿಂದ ತತ್ವಪದ, ಶೆಟ್ಟೆಪ್ಪ ಕುರುಗೋವಿನಕೊಪ್ಪ ಅವರು ವಚನ ಸಂಗೀತ ಜರುಗಿದವು. ಗುರಪ್ಪ ಕುಂಬಾರ ಗೀಗೀ ಪದ, ಬಾಬು ಬಾರಕೇರ ತಂಡದಿಂದ ಮೈಲಾರ ಕುಣಿತ, ಕಲಾವಿದ ದಿ. ನಾಗರಾಜ ಹೊಂಬಳ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ವಿಶ್ವನಾಥಯ್ಯ ಹಿರೇಮಠ, ಸುರೇಶಗೌಡ ತಮ್ಮನಗೌಡ್ರ, ಚನ್ನಪ್ಪಗೌಡ ಪರ್ವತಗೌಡ್ರ, ಗದಿಗೆಪ್ಪ ಮಂತ್ರಿ,

ಸಂಗನಗೌಡ ಮಂತ್ರಿ, ವೀರನಗೌಡ ಕುದರಿ, ಬಸವರಾಜ ಯಾವಗಲ್ಲ, ಅಜ್ಜಪ್ಪಗೌಡ ಅಲ್ಲಪ್ಪಗೌಡ, ಪ್ರಕಾಶ ಚಂದನ್ನವರ, ಯಲ್ಲಪ್ಪ ಡಕ್ಕನರ, ರಾಜೇಶ್ವರ ಹೊಂಬಳ ಸೇರಿದಂತೆ ಅನೇಕರಿದ್ದರು.



ಬಿಜೆಪಿಗೆ ಗೆಲುವು ಖಚಿತ: ಸಂತೋಷ



ಗದಗ: ಪ್ರಧಾನಿ ನರೇಂದ್ರ ಮೋದಿಯವರ ಅಭಿವೃದ್ಧಿಯ ಅಲೆಯ ಮುಂದೆ ದೇಶಾದ್ಯಂತ ಹಸ್ತದ ಗುರುತು ಧೂಳೀಪಟವಾಗುತ್ತಿದೆ ಎಂದು ಜಿಲ್ಲಾ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಂತೋಷ ಅಕ್ಕಿ ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ ಅವರು, ಪಶ್ಚಿಮ ಬಂಗಾಳದ ಫಲಿತಾಂಶಗಳ ಬಗ್ಗೆ ಹರ್ಷ ವ್ಯಕ್ತಪಡಿಸಿದ ಅವರು, ದಶಕಗಳ ಕಾಲದ ಭಯದ ಆಡಳಿತಕ್ಕೆ ಬಂಗಾಳದ ಜನತೆ ಅಂತ್ಯ ಹಾಡಿದ್ದಾರೆ. ಟುಡೇಸ್ ಚಾಣಕ್ಯ ಸಮೀಕ್ಷೆಯು ಬಿಜೆಪಿಗೆ 192 (+11) ಸ್ಥಾನಗಳ ಭರ್ಜರಿ ಬಹುಮತ ನೀಡಿದ್ದರೆ, ಮ್ಯಾಟ್ರಿಜ್ ಮತ್ತು ಪಿ-ಮಾರ್ಕ್ ಸಮೀಕ್ಷೆಗಳು ಕೂಡ ಕೇಸರಿ ಪತಾಕೆ ಹಾರುವುದು ಖಚಿತ ಎಂದು ಹೇಳಿವೆ. ದಾಖಲೆಯ ಶೇ. 92.49 ರಷ್ಟು ಮತದಾನವಾಗಿರುವುದು ಮಮತಾ ಬ್ಯಾನರ್ಜಿಯವರ ವಿರುದ್ಧದ ಜನಾಕ್ರೋಶಕ್ಕೆ ಸಾಕ್ಷಿಯಾಗಿದೆ. ಬಂಗಾಳದಲ್ಲಿ ಕಾಂಗ್ರೆಸ್ ಮತ್ತು ಎಡಪಕ್ಷಗಳ ಅಸ್ತಿತ್ವ ಈಗಾಗಲೇ ಮಣ್ಣುಪಾಲಾಗಿದ್ದು, ಮೇ 4ರಂದು ಕಮಲ ಅರಳುವುದು ಶತಸಿದ್ಧ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಈಶಾನ್ಯದ ಅಸ್ಸಾಂನಲ್ಲಿ ಎನ್‌ಡಿಎ ಮೈತ್ರಿಕೂಟ ಸತತ ಮೂರನೇ ಬಾರಿಗೆ ಅಧಿಕಾರ ಹಿಡಿಯುವುದು ಖಚಿತವಾಗಿದೆ. ಆಕ್ಸಿಸ್ ಮೈ ಇಂಡಿಯಾ ಮತ್ತು ಜೆವಿಸಿ ಸಮೀಕ್ಷೆಗಳು ಎನ್‌ಡಿಎಗೆ 88 ರಿಂದ 100ಕ್ಕೂ ಹೆಚ್ಚು ಸ್ಥಾನಗಳನ್ನು ನೀಡಿವೆ.

ಪುದುಚೇರಿಯಲ್ಲಿ ಮತ್ತೆ ಎನ್‌ಡಿಎ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ ಎಂದು ಸಮೀಕ್ಷೆಗಳು ಹೇಳುತ್ತಿವೆ. ತಮಿಳುನಾಡಿನಲ್ಲಿ ನಟ ವಿಜಯ್ ಅವರ ಟಿವಿಕೆ ಪಕ್ಷದ ಉದಯವು ಕಾಂಗ್ರೆಸ್ ಮತ್ತು ಡಿಎಂಕೆಯ ಸಾಂಪ್ರದಾಯಿಕ ಮತಬ್ಯಾಂಕ್‌ಗೆ ದೊಡ್ಡ ಪೆಟ್ಟು ನೀಡಿದೆ. ಕೇರಳದಲ್ಲಿ ಯುಡಿಎಫ್ ಮತ್ತು ಎಲ್‌ಡಿಎಫ್ ನಡುವಿನ ಹಣಾಹಣಿಯಲ್ಲಿ ಬಿಜೆಪಿ ತನ್ನ ಮತ ಪ್ರಮಾಣವನ್ನು ಶೇ.14ಕ್ಕೆ ಹೆಚ್ಚಿಸಿಕೊಂಡಿರುವುದು ದಕ್ಷಿಣದಲ್ಲಿಯೂ ಕೇಸರಿ ಸಿದ್ಧಾಂತ ನೆಲೆಯೂರುತ್ತಿರುವುದಕ್ಕೆ ಸಾಕ್ಷಿಯಾಗಿದೆ ಎಂದಿದ್ದಾರೆ.

ಆರೋಗ್ಯ ಸುಧಾರಣೆಗೆ ದಿಟ್ಟ ಹೆಜ್ಜೆ



ಗದಗ: ಕಾಂಗ್ರೆಸ್ ಸರ್ಕಾರ ಕಳೆದ 2.5 ವರ್ಷದಲ್ಲಿ ಕನ್ನಡಿಗರ ಆರೋಗ್ಯ ಸುಧಾರಣೆಗೆ ವಿವಿಧ ಕಾರ್ಯಕ್ರಮಗಳನ್ನು ಜಾರಿ ಮಾಡಿ ಉತ್ತಮ ಆರೋಗ್ಯ ಸೇವೆಯನ್ನು ಒದಗಿಸುತ್ತಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಹಾಗೂ ತಾಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, 2026-27ನೇ ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ 17.473 ಕೋಟಿ ರೂ. ಮೀಸಲಿಟ್ಟಿದ್ದು ಕನ್ನಡಿಗರ ಆರೋಗ್ಯ ಸುಧಾರಣೆ ಪಣತೊಟ್ಟಿರುವ ಕಾಂಗ್ರೆಸ್ ಸರ್ಕಾರದಿಂದ ಭಾರತದಲ್ಲಿ ತಲಾ ಆರೋಗ್ಯ ವೆಚ್ಚದ ಪ್ರಥಮ 5 ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದೆ. ಕಾಂಗ್ರೆಸ್ ಸರ್ಕಾರದ ದಿಟ್ಟ ಹೆಜ್ಜೆಯಿಂದ 2021ರಲ್ಲಿ ಶೇ. 17ರಷ್ಟಿದ್ದ ಶಿಶುಮರಣ ಪ್ರಮಾಣವು 2023ಕ್ಕೆ ಶೇ.14ಕ್ಕೆ ಕುಸಿದಿದ್ದು, ಇದರ ಜೊತೆಗೆ ತಾಯಿ ಮರಣ ಪ್ರಮಾಣ ತಡೆಗಟ್ಟಲು 320 ಕೋಟಿ ರೂ. ಅನುದಾನ ಮೀಸಲಿಟ್ಟಿದೆ.'ಲಕ್ಷ್ಯ' ಕಾರ್ಯಕ್ರಮದಿಂದ ಹೆರಿಗೆ ಕೊಠಡಿಗಳು, ಮಾತೃತ್ವ ಐಸಿಯುಗಳು ಮತ್ತು ಶಸ್ತ್ರಚಿಕಿತ್ಸಾ ಕೊಠಡಿಗಳ ಗುಣಮಟ್ಟವನ್ನು ಸುಧಾರಿಸಲಾಗಿದೆ. ನವಜಾತ ಶಿಶುಗಳ ಮರಣವನ್ನು ಕಡಿಮೆ ಮಾಡಲು 11 ತಾಯಿ ಎದೆ ಹಾಲಿನ ಸಮಗ್ರ ನಿರ್ವಹಣಾ ಕೇಂದ್ರ ಸ್ಥಾಪಿಸಲಾಗಿದ್ದು 2030ರ ವೇಳೆಗೆ ತಾಯಂದಿರು ಮತ್ತು ಶಿಶು ಮರಣ ಪ್ರಮಾಣವನ್ನು ಒಂದಂಕಿಗೆ ತರಲು ಪಣತೊಟ್ಟಿದೆ. ತಾಯಿ ಮತ್ತು ನವಜಾತ ಶಿಶುಗಳ ಸಾವಿನ ಪ್ರಮಾಣವನ್ನು ತಗ್ಗಿಸಲು ತಾಲೂಕು ಮಟ್ಟದ 148 ಆಸ್ಪತ್ರೆಗಳಲ್ಲಿ ದಿನದ 24 ಗಂಟೆಯೂ ಸ್ತ್ರೀರೋಗ, ಅರಿವಳಿಕೆ ಮತ್ತು ಮಕ್ಕಳ ತಜ್ಞರು ಲಭ್ಯ ಇರುವಂತೆ ಮಾಡಲಾಗಿದೆ. ಕನ್ನಡಿಗರ ತುರ್ತು ಆರೋಗ್ಯ ಸೇವೆಯಾದ 108 ಅಂಬುಲೆನ್ಸ್ ಸೇವೆ ಬಲಪಡಿಸಲು ಸರ್ಕಾರದ ಆರೋಗ್ಯ ಇಲಾಖೆಯಡಿ ನಿರ್ವಹಣೆ ಮಾಡುವಂತೆ ಮಾಡಲಾಗಿದೆ. ದೇಶದ ಜಿಡಿಪಿಗೆ ಶೇ. 9ರಷ್ಟು ಕೊಡುಗೆ ನೀಡುತ್ತಿರುವ ಕರ್ನಾಟಕಕ್ಕೆ ಬಲತುಂಬುವ 1.4 ಬೆಂಗಳೂರಿಗರಿಗೆ ಹೊಸ ಪ್ರತ್ಯೇಕ ಆರೋಗ್ಯ ನೀತಿ ತರಲು ಕಾಂಗ್ರೆಸ್ ಸರ್ಕಾರ ನಿರ್ಧರಿಸಿದೆ ಎಂದಿದ್ದಾರೆ.

ಅಭಿವೃದ್ಧಿ ಮರೆತ ಕಾಂಗ್ರೆಸ್: ಪಾಟೀಲ



ಗದಗ: ಸಿಎಂ, ಡಿಸಿಎಂ, ಸಚಿವ ಸ್ಥಾನ, ನಿಗಮ ಮಂಡಳಿ ಹೀಗೆ ಸರ್ಕಾರದ ಎಲ್ಲಾ ಸ್ಥರದ ಉನ್ನತ ಹುದ್ದೆಗಳಿಗಾಗಿ ರಾಜ್ಯ ಕಾಂಗ್ರೆಸ್‌ನಲ್ಲಿ ಪ್ರಬಲ ಹಗ್ಗ ಜಗ್ಗಾಟ ಮುಂದುವರೆದಿದ್ದು, ಈ ರಾಜಕೀಯ ಮೇಲಾಟದ ನಡುವೆ ರಾಜ್ಯದ ಜನರು ವಿವಿಧ ಸಮಸ್ಯೆಗಳಿಂದ ಪೀಕಲಾಟ ಅನುಭವಿಸುತ್ತಿದ್ದಾರೆ ಎಂದು ಬಿಜೆಪಿ ಮುಖಂಡ ಹಾಗೂ ಉಸಿರು ಫೌಂಡೇಶನ್ ಅಧ್ಯಕ್ಷ ಶರಣ್ ಪಾಟೀಲ ಆರೋಪಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಸಿಎಂ ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ ಅವರ ಅಧಿಕಾರದ ಜಿದ್ದು ಸತತವಾಗಿ ಮುಂದುವರೆದಿದ್ದು, ಸಚಿವಸ್ಥಾನಕ್ಕಾಗಿ ಹಾಗೂ ಸರ್ಕಾರದ ಇತರೆ ಉನ್ನತ ಸ್ಥಾನಗಳಿಗಾಗಿ ಕಾಂಗ್ರೆಸ್ ನಾಯಕರುಗಳು ಲಾಬಿ ನಡೆಸುತ್ತಿದ್ದಾರೆ. ಏತನ್ಮಧ್ಯೆ ಎಲ್ಲಾ ಇಲಾಖೆಗಳೂ ಅನುದಾನವಿಲ್ಲದೇ ಸೊರಗಿಹೋಗಿದ್ದು, ಗ್ಯಾರಂಟಿಗಳ ಅನುಷ್ಠಾನಕ್ಕಾಗಿ ಕಾಂಗ್ರೆಸ್ ಸರ್ಕಾರ ರಾಜ್ಯದ ಅಭಿವೃದ್ಧಿಯನ್ನು ಮರೆತು ತುಂಬಾ ದಿನಗಳಾಗಿವೆ. ಅತ್ತ ಸರ್ಕಾರಿ ಉದ್ಯೋಗ ನೀಡುತ್ತೇವೆ ಎಂದು ಉದ್ಯೋಗಾಕಾಂಕ್ಷಿಗಳಿಗೆ ನಂಬಿಸುತ್ತಾ ಅವರನ್ನು ಹತಾಶರನ್ನಾಗಿ ಮಾಡಿರುವ ಸರ್ಕಾರ ಜನರಿಗೆ ಸರಿಯಾದ ಮೂಲಭೂತ ಸೌಕರ್ಯಗಳನ್ನು ಕೂಡಾ ನೀಡುತ್ತಿಲ್ಲ. ಗದಗ ನಗರದ ವಿಷಯಕ್ಕೆ ಬಂದರೆ ಇಲ್ಲಿನ ಕುಡಿಯುವ ನೀರಿನ ಸಮಸ್ಯೆಯು ತಲೆತಲಾಂತರಗಳಿಂದ ಜನರನ್ನು ಬಾಧಿಸುತ್ತಿದ್ದು, ಕಾನೂನು ಸಚಿವರ ತವರಲ್ಲಿ ಜನರು ಕುಡಿಯುವ ನೀರಿಲ್ಲದೇ ಬಳಲುತ್ತಿರುವುದು ನಿಜಕ್ಕೂ ವಿಪರ್ಯಾಸವಾಗಿದೆ. ಇದಕ್ಕೆ ಸೂಕ್ತ ಪರಿಹಾರ ಕೈಗೊಳ್ಳಲು ಸಾಧ್ಯವಾಗದೇ ಇರುವುದು ನಿಜಕ್ಕೂ ಇಲ್ಲಿನ ಜನರ ದುರ್ದೈವವಾಗಿದೆ. ಒಟ್ಟಿನಲ್ಲಿ ಕಾಂಗ್ರೆಸ್ ದುರಾಡಳಿತದಿಂದ ಜನರು ಬೇಸತ್ತಿದ್ದು, ಕೆಲವೇ ದಿನಗಳಲ್ಲಿ ಸರ್ಕಾರ ಬಿದ್ದುಹೋದರೂ ಯಾವುದೇ ಆಶ್ಚರ್ಯ ಪಡಬೇಕಿಲ್ಲ ಎಂದು ದೂರಿದ್ದಾರೆ.

ಕಿರು ಸೇತುವೆ ನಿರ್ಮಾಣಕ್ಕೆ ಭೂಮಿಪೂಜೆ



ಲಕ್ಷ್ಮೇಶ್ವರ: ತಾಲೂಕಿನ ದೊಡ್ಡೂರ-ಶಿಗ್ಲಿ ರಸ್ತೆ ಮಧ್ಯೆ ಸುಮಾರು 25 ಲಕ್ಷ ರೂ.ಗಳ ಕಿರು ಸೇತುವೆ ನಿರ್ಮಾಣದ ಕಾಮಗಾರಿಯ ಭೂಮಿಪೂಜೆಯನ್ನು ಶಾಸಕ ಡಾ.ಚಂದ್ರು ಲಮಾಣಿ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಈ ಭಾಗದಲ್ಲಿ ಹಳ್ಳಕ್ಕೆ ಅಡ್ಡಲಾಗಿ ಕಿರು ಸೇತುವೆ ನಿರ್ಮಾಣ ಮಾಡಬೇಕೆನ್ನುವುದು ಜನರ ಬಹುದಿನಗಳ ಬೇಡಿಕೆಯಾಗಿತ್ತು. ಈ ನಿಟ್ಟಿನಲ್ಲಿ ಸರ್ಕಾರಕ್ಕೆ ಅನುದಾನಕ್ಕೆ ಮನವಿ ಮಾಡಲಾಗಿತ್ತು. ಇದೀಗ ಬಹುದಿನಗಳ ಜನರ ಬೇಡಿಕೆ ಈಡೇರುವ ನಿಟ್ಟಿನಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ನಿಗದಿತ ವೇಳೆಯಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಿದ ಅವರು ಶೀಘ್ರದಲ್ಲೇ ಸುಸಜ್ಜಿತ ಕಿರು ಸೇತುವೆ ನಿರ್ಮಾಣ ಮಾಡಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು.

ಚಂದ್ರಶೇಖರ ಇಳಿಗೇರ, ಮುಖಂಡರಾದ ಟೋಪಣ್ಣ ಲಮಾಣಿ, ಗುಡ್ಡಪ್ಪ ಹಡಪದ, ಗುಡ್ಡಪ್ಪ ಮತ್ತೂರ, ತುಕಪ್ಪ ಪೂಜಾರ, ಗುರುರಾಜ್ ಬಾಗಲದ, ಮಂಜು ಡೊಳ್ಳಿನ, ಗಂಗಾಧರ ಮೆಣಸಿನಕಾಯಿ ನಿಂಗಪ್ಪ ಬಂಕಾಪುರ, ರವಿ ಬಜಕ್ಕನವರ, ಯಲ್ಲಪ್ಪಗೌಡ ಪಾಟೀಲ, ನಿಂಗಪ್ಪ ಬಂಕಾಪುರ, ಸಂತೋಷ ಬಾಗಲದ, ಡಿ.ವೈ. ಹುನಗುಂದ, ಅಶೋಕ ಶಿರಹಟ್ಟಿ, ಸಂಜೀವ ದೇಸಾಯಿ, ರವಿಗೌಡ ಪಾಟೀಲ, ಮನೋಜ ರಗಟಿ ಹಾಗೂ ಅನೇಕ ಮುಖಂಡರು ಸೇರಿದಂತೆ ಇತರರಿದ್ದರು.

ಹಲವು ಹರಕೆ ತೀರಿಸುವ ಸಂಕಲ್ಪ | ಯಲ್ಲಮ್ಮನ ದೇವಸ್ಥಾನಕ್ಕೆ ವರ್ಷವಿಡಿ ಭಕ್ತಗಣ

ಇಷ್ಟಾರ್ಥ ಈಡೇರಿಸುವ ಯಲ್ಲಮ್ಮ ದೇವಿ

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಶ್ರೀ ಕ್ಷೇತ್ರ ಯಲ್ಲಮ್ಮನ ಗುಡ್ಡವು ದೇಶದ ಸುಪ್ರಸಿದ್ಧ ದೇವಸ್ಥಾನಗಳಲ್ಲಿ ಒಂದಾಗಿದ್ದು, ನಮ್ಮ ರಾಜ್ಯದಿಂದಷ್ಟೇ ಅಲ್ಲದೇ ನೆರೆಯ ಆಂಧ್ರಪದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರ ರಾಜ್ಯಗಳಿಂದಲೂ ವರ್ಷವಿಡೀ ತಂಡೋಪತಂಡವಾಗಿ ಲಕ್ಷೋಪ-ಲಕ್ಷ ಜನ ಭಕ್ತರು ದೇವಾಲಯಕ್ಕೆ ಆಗಮಿಸುತ್ತಾರೆ.

ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಈ ದೇವಾಲಯದಲ್ಲಿ ಭಕ್ತ ಜನರು ಆಚರಿಸಿಕೊಂಡು ಬಂದ ಆಚರಣೆಗಳು ಹಾಗೂ ದೇವಿಯ ಪೂಜೆಯ ಆಚರಣೆಗಳು ಅಂದರೆ ದಿನನಿತ್ಯದ ಪೂಜೆಯ ಜೊತೆಗೆ ನಡೆದುಕೊಂಡ ಬರುತ್ತಿರುವ ಆಚರಣೆಗಳು ಎಂದು ಇಲ್ಲಿನ ಆಚರಣೆಗಳನ್ನು ನಾವು ಕಾಣುತ್ತೇವೆ.

ದೇವಾಲಯದ ಆಚರಣೆಗಳೆಂದರೆ ಪ್ರತಿ ದಿವಸ ಮುಂಜಾನೆ ಅಭಿಷೇಕ ಪೂಜೆ ಇದು ಬೆಳಗ್ಗೆ 4ರಿಂದ 6ಗಂಟೆಯವರೆಗೆ ಮತ್ತು ಸಂಜೆ 4.30ರಿಂದ 6.30ರವರೆಗೆ ಜರುಗುತ್ತಿರುತ್ತದೆ. ಇನ್ನು ಭಕ್ತ ಜನರು ತಮ್ಮದೇ ಆದ ಹರಕೆಯನ್ನು ತೀರಿಸುವ ಸಂಕಲ್ಪದೊಂದಿಗೆ ವಿಶೇಷ ಪೂಜೆಗಳನ್ನು ಸಲ್ಲಿಸುವರು.



ದೀಪದ ಹರಕೆ: ದೀಪ ಹಚ್ಚುವ ಪರಂಪರೆ ಪುರಾತನವಾದುದು. ಸಾಮಾನ್ಯವಾಗಿ ಎಲ್ಲ ಭಕ್ತರು ತಾವು ಬೇಡಿಕೊಂಡ ಸಂಗತಿ ಈಡೇರಿದರೆ ದೇವಿಗೆ ದೀಪ ಹಚ್ಚುವುದಾಗಿ ಹರಕೆ ಸಲ್ಲಿಸುತ್ತಾರೆ. ಅದರಂತೆ ಇಚ್ಚಿತ ಸಂಗತಿ ಫಲಶ್ರುತಿಯಾದಾಗ ದೇವಾಲಯಕ್ಕೆ ಬಂದು ದೀಪ ಹಚ್ಚಿ ಹೋಗುವರು. ಈ ದೀಪ ಹಚ್ಚುವುದರಲ್ಲಿ ಎರಡು ವಿಧ ಒಂದು ಎಣ್ಣೆಯ ದೀಪ ಇನ್ನೊಂದು ತುಪ್ಪದ ದೀಪ. ಇನ್ನು ತಮ್ಮ ತಮ್ಮ ಮನೆಗಳಲ್ಲಿ ಆಕಳು ಮತ್ತು ಎಮ್ಮೆ ಕರು ಹಾಕಿದರೆ ಕೆಲವು ಜನ ಮೊದಲ ಐದು ದಿನ ಇನ್ನು ಕೆಲವರು ಮೊದಲ ಹನ್ನೊಂದು ದಿನಗಳಲ್ಲಿ ಗಿಣ್ಣದ ಹಾಲನ್ನು ತಗೆದಿರಿಸಿ ಅದರಿಂದ ಬೆಣ್ಣೆ ತಗೆದು ತುಪ್ಪ ಮಾಡಿಕೊಂಡು ಮೀಸಲು ತುಪ್ಪ ಎಂದು ಅದನ್ನು ಕರೆಯುವರು.



ಅಷ್ಟು ದಿನಗಳವರೆಗೆ ಆ ಹಸು ಅಥವ ಎಮ್ಮೆಯ ಹಾಲನ್ನು ಮನೆಯ ಹೊರಗೆ ಕೊಡುವುದಿಲ್ಲ. ಈ ರೀತಿ ತಯಾರಿಸಿದ ತುಪ್ಪವನ್ನು ತಂದು ದೇವಿಯ ಹೆಸರಿಗೆ ದೀಪ ಹಚ್ಚುವ ಮೂಲಕ ತಮ್ಮ ಮನೆಯ ಪರಂಪರಾನುಗತ ಬಂದ ಆಚರಣೆ ಪೂರ್ಣಗೊಳಿಸುವರು.

ಮುಡುಪಿನ ಹರಕೆ: ತಮ್ಮ ಕೋರಿಕೆಯನ್ನು ಈಡೇರಿಸು ತಾಯಿ ನಿನಗೆ ಮುಡಿಪು ಕಟ್ಟಿಡುವೆ ಅಂಥ ತಮ್ಮ ಬಳಿ ಇರುವ ಹಣವನ್ನು ಒಂದು ಬಿಳಿಯ ಬಟ್ಟೆಯಲ್ಲಿ ಕಟ್ಟಿಡುವರು. ಅದರು ಎಷ್ಟೇ ಇರಬಹುದು.ಅದಕ್ಕೆ ಮುಡಿಪು ಎನ್ನುವರು. ಈ ರೀತಿ ತಮ್ಮ ಬಳಿ ಹಣ ಇದ್ದಾಗ ಅಲ್ಪಸ್ವಲ್ಪ ಅದಕ್ಕೆ ಕೂಡಿಸುತ್ತ ಮುಡಿಪು ಬೆಳೆಸುತ್ತ ಹೋಗುವರು. ತಮ್ಮ ಬೇಡಿಕೆ ಪೂರೈಸಿದಾಗ ದೇವಿಯ ಹೆಸರಿಗೆ ಅಲ್ಲಿ ಕೂಡಿಟ್ಟ ಹಣದಿಂದ ಬೆಳ್ಳಿಯ ವಸ್ತು, ಸೀರೆ, ಬಂಗಾರ ಇತ್ಯಾದಿ ಒಡವೆ ಕೊಡುವ ಮೂಲಕ ಇಲ್ಲವೇ ಹಣವನ್ನು ನೀಡುವ ಮೂಲಕ ಮುಡಿಪಿನ ಹರಕೆ ತೀರಿಸುವರು.



ಹಲವು ರಾಜ್ಯಗಳಲ್ಲಿ ಭಕ್ತರು

ಕರ್ನಾಟಕ,ಆಂಧ್ರಪ್ರದೇಶ, ಮಹಾರಾಷ್ಟ್ರ,ಕೇರಳ ತಮಿಳುನಾಡಿನೆಲ್ಲೆಡೆ ಪೂಜಿಸುವ ಆರಾಧಿಸುವ ಭಕ್ತರಿದ್ದಾರೆ. ಹಿಮಾಚಲ ಪ್ರದೇಶದಲ್ಲಿ ರೇಣುಕ ಸಾಗರವಿದೆ. ಆಂಧ್ರಪದೇಶದಲ್ಲಿ ರೇಣುಗಂಬಳ ಅಮ್ಮನ ದೇವಾಲಯವಿದೆ ಉತ್ತರಾಂಚಲ ರಾಜ್ಯದ ಉತ್ತರಕಾಶಿಯ ಯಮುನಾ ನದಿ ದಡದಲ್ಲಿ ಜಮದಗ್ನಿ ಹೆಸರಿನ ದೇವಾಲಯವಿದೆ.

ಕಂಕಣ ಬಿಚ್ಚುವುದು: ಯಲ್ಲಮ್ಮ-ಸತ್ಯಕ್ಕ-ಮಾತಂಗಿಯಿಂದ ಹಿಡಿದು ಪರಶುರಾಮರವರೆಗೆ ತನ್ನ ಜೀವನ ಘಟ್ಟದಲ್ಲಿ ಪಾತಿವ್ರತ್ಯದ ಅರಿವನ್ನು ಮೂಡಿಸಿರುವಳು. ಇಂದಿಗೂ ಕೂಡ ಹೊಸದಾಗಿ ಮದುವೆಯಾದವರು ತಮ್ಮ ಬದುಕಿನಲ್ಲಿ ಕೌಟುಂಬಿಕ ವ್ಯಾಜ್ಯ ಕಷ್ಟಗಳು ಸಂಭವಿಸದಿರಲಿ ತಾಯಿ ನಿನ್ನ ಸ್ಥಳಕ್ಕೆ ಬಂದು ನಮ್ಮ ವಿವಾಹದ ಕಂಕಣ ಬಿಚ್ಚುತ್ತೇವೆ. ನಮ್ಮ ಬದುಕಿನಲ್ಲಿ ಸುಖ-ಶಾಂತಿ ಕರುಣಿಸು ಎಂಬ ಸಂಕಲ್ಪದೊಂದಿಗೆ ದೇವಾಲಯಕ್ಕೆ ಆಗಮಿಸಿ ಅಲ್ಲಿರುವ ಹೊಂಡಲದಲ್ಲಿ ನೀರಿನಿಂದ ಕೈಕಾಲು ಮುಖ ತೊಳೆದುಕೊಂಡು ಕಂಕಣ ಬಿಚ್ಚುವರು.

ಉಪವಾಸ ವ್ರತಾಚರಣೆ: ಎಲ್ಲಮ್ಮಾ ದೇವಿಯ ವಾರಗಳೆಂದು ಮಂಗಳವಾರ, ಶುಕ್ರವಾರ ಪ್ರಮುಖವಾದವುಗಳು. ಈ ದಿನಗಳೆಂದು ಉಪವಾಸ ವ್ರತ ಕೈಗೊಳ್ಳುವ ಭಕ್ತ ಸಮುದಾಯ ಅದನ್ನು ಯಾವುದೇ ಸಂಕಲ್ಪವೆಂದಾಗಲೀ ಹರಕೆ ಎಂದಾಗಲಿ ಪರಿಗಣಿಸದೇ ಉಪವಾಸ ವ್ರತ ಆಚರಿಸಿ ಪಡ್ಡಲಿಗೆ ತುಂಬುವುದು.

ಭಾರತ ಹುಣ್ಣಿಮೆ ,ದವನದ ಹುಣ್ಣಿಮೆಗಳ ಸಂದರ್ಭದಲ್ಲಿ ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳ ಭಕ್ತಾದಿಗಳು ಅಲಂಕೃತ ಎತ್ತಿನ ಗಾಡಿಗಳಲ್ಲಿ ದೇವಾಲಯಕ್ಕೆ ಆಗಮಿಸುವ ಮೂಲಕ ದಾರಿಯುದ್ದಕ್ಕೂ ಸಿಗುವ ಕೆರೆ, ಹಳ್ಳ, ನದಿಗಳನ್ನು ಪೂಜಿಸುತ್ತ ಯಲ್ಲಮ್ಮನ ಗುಡ್ಡ ತಲುಪುವರು. ದೇವಾಲಯದ ಆವರಣದಲ್ಲಿ ತಂಗುವ ಇವರು ಬೆಲಗಿನ ಹೊತ್ತು ಎಣ್ಣೆ ಹೊಂಡದಲ್ಲಿ ಸ್ನಾನ ಮಾಡಿ ಮಡಿಯಿಂದ ಮಹಿಳೆಯರು ಅಡುಗೆ ಮಾಡತೊಡಗುವರು.ಪುರುಷರು ಎತ್ತು (ರಾಸು)ಗಳ ಮೈ ತೊಳೆದು ಸಿಂಗರಿಸುವರು.ಐದು ಜನ ಜೋಗಮ್ಮ ಐದು ಜನ ಮುತ್ತೈದೆಯರು ಸೇರಿ ಹಡಲಿಗೆ ತುಂಬುವ ಕಾರ್ಯಕ್ಕೆ ಅಣಿಯಾಗುವರು. ಕಡಬು, ವಡೆ, ರೊಟ್ಟಿ, ಚಪಾತಿ, ಪಲ್ಯ ಇತ್ಯಾದಿಗಳನ್ನು ತಯಾರಿಸಿಕೊಂಡು ತಾವು ತಂದಿದ್ದ ದವಸ ಧಾನ್ಯಗಳನ್ನು ಪಡ್ಡಲಿಗೆಯಲ್ಲಿಟ್ಟು ಚೌರಿಕೆಗಳನ್ನು ಪಡ್ಡಲಿಗೆ ಪಕ್ಕದಲ್ಲಿಟ್ಟು ಪೂಜಿಸುವ ಮೂಲಕ ಆರತಿ ಕರ್ಪೂರವನ್ನು ಬೆಳಗುತ್ತ ಯಲ್ಲಮ್ಮ ನಿನ್ನ ಪಾದಕೆ ಉಧೋ ಉಧೋ, ಜಗದಂಭಾ ನಿನ್ನ ಪಾದಕೆ ಉಧೋ ಉಧೋ ಜೋಗುಳ ಭಾವಿ ಸತ್ಯವ್ವ ನಿನ್ನ ಪಾದಕೆ ಉಧೋ ಉಧೋ, ಪರಶು ರಾಮ ನಿನ್ನ ಪಾದಕೆ ಉಧೋ ಉಧೋ ಎನ್ನುತ್ತ ಸುತ್ತಲಿನ ಎಲ್ಲ ದೇವರ ಹೆಸರನ್ನು ಸ್ಮರಿಸಿ ಜೋಗತಿಯರಿಗೆ ಮತ್ತು ಮುತ್ತೈದೆಯರಿಗೆ ಉಣಬಡಿಸಿ ನಂತರ ಕುಟುಂಬದ ನೆರೆ ಹೊರೆಯ ಎಲ್ಲರೂ ಊಟ ಮಡುವ ಮೂಲಕ ಪಡ್ಡಲಿಗೆ ತುಂಬುವ ಆಚರಣೆ ಇಂದಿಗೂ ಇದೆ.



ಉಪ್ಪುಗಂಟಿನ ಹರಕೆ

ಮೈಮೇಲೆ ಹುರುಕು ಕಜ್ಜಿಯಂತಹ ಕಲೆಗಳಾದವರು ಹೊಸ ಬಟ್ಟೆಯಲ್ಲಿ ತಮ್ಮ ಬಿಚ್ಚು ಕೈ ಅಳತೆ ಉಪ್ಪನ್ನು ಕಟ್ಟಿ ದೇವಾಲಯಕ್ಕೆ ಆಗಮಿಸಿ ದೇವಾಲಯದ ಹೊರಗಿರುವ ಹುರುಕೆಲ್ಲಮ್ಮನ ಹೆಸರಿನ ಮೇಲೆ ಐದು ಸುತ್ತು ಪ್ರದಕ್ಷಿಣೆ ಹಾಕಿ ಉಪ್ಪು ಹಾಕುವರು. ಇದರಿಂದ ಆ ರೋಗ ವಾಸಿಯಾಗುವುದೆಂದು ನಂಬಿಕೆ.

ಅರಿಸಿನ ಕುಂಕುಮ ಹರಕೆ

ಬಳೆ, ಅರಿಸಿನ, ಕುಂಕುಮ ಧರಿಸುವ ಮೂಲಕ ವಿಧವೆಯಾಗಿದ್ದ ಯಲ್ಲಮ್ಮ ಮುತ್ತೈದೆಯಾದ ಸಂತಸದ ಕ್ಷಣವಿದು. ಇದರ ಸಂಕೇತವಾಗಿ ಭಕ್ತರು ಜೋಗತಿಯರಿಗೆ ಅರಿಸಿನ ಕುಂಕುಮ ಬಳೆಗಳನ್ನು ನೀಡುವ ಮೂಲಕ ತಮ್ಮ ಹರಕೆ ತೀರಿಸುವರು.



ಹೊಂಡದ ನೀರಿನ ವಿಶೇಷ

ಪರಶುರಾಮನಿಂದ ಶಿರಚ್ಛೇಧಗೊಳ್ಳುವ ಮೊದಲು ಜಮದಗ್ನಿಯ ಕೋಪದಿಂದ ಶರೀರವೆಲ್ಲ ಕಪ್ಪಾದ ಶಾಪದಿಂದ ದೇವಿಯು ಏಕನಾಥ-ಜೋಗಿನಾಥ ಸಿದ್ಧರ ಗುಹೆಯ ಬಳಿ ಬರುವಳು. ಅವರು ಅವಳ ಸ್ವಪ್ನದಲ್ಲಿ ಬಂದು ಅಲ್ಲಿರುವ ಸರೋವರದಲ್ಲಿ ಸ್ನಾನ ಮಾಡಿ ನಾರುಮಡಿಯನ್ನು ಉಟ್ಟುಕೊಳ್ಳು ಆಗ ನಿನಗಿರುವ ಕಳಂಕ ನೀಗುವುದು ಎಂಬಂತೆ ಭಾಸವಾಗುವುದು. ಅದರಂತೆ ದೇವಿ ಸ್ನಾನಮಾಡಿ ನಾರುಮಡಿಯನ್ನು ಉಟ್ಟುಕೊಳ್ಳುವಳು. ಇಂದಿಗೂ ಕೂಡ ತಮ್ಮಲ್ಲಿನ ಮಲಿನತೆ, ಕಶ್ಮಲತೆ, ಮಡಿಯಾಗಲಿ ಎಂಬಂತೆ ದೇವಾಲಯಕ್ಕೆ ಆಗಮಿಸುವ ಭಕ್ತರು ದೇವಾಲಯ ಎದುರಲ್ಲಿರುವ ಏಕನಾಥ-ಜೋಗಿನಾಥರ ದೇಗುಲಕ್ಕೆ ಹೋಗಿ ಅಲ್ಲಿನ ಹೊಂಡದ ನೀರನ್ನು ಮೈಮೇಲೆ ಚಿಮುಕಿಸಿಕೊಂಡು ಮತ್ತೆ ಯಲ್ಲಮ್ಮ ದೇವಾಲಯ ಪ್ರಾಂಗಣಕ್ಕೆ ಹಿಂತಿರುಗಿ ನೋಡದಂತೆ ಬರುವ ಸಂಪ್ರದಾಯವಿದೆ.

ಹಾರ್ದಿಕ ಸುಸ್ವಾಗತ



ಶ್ರೀ ಗ್ರಾಮದೇವಿ ಜಾತ್ರಾ ಮಹೋತ್ಸವ-2026



ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ ದಿ. 4-05-2026 ರಿಂದ 12-05-2026 ರವರೆಗೆ ಜರುಗಲಿರುವ ಸಂಭ್ರಮದ ಗ್ರಾಮದೇವಿ ಜಾತ್ರೆಗೆ ಆಗಮಿಸಲಿರುವ ಸರ್ವ ಭಕ್ತಾದಿಗಳಿಗೆ **ಹಾರ್ದಿಕ ಸುಸ್ವಾಗತ**

ಸ್ವಾಗತ ಕೋರುವವರು

ಶ್ರೀ ಆರ್ಥೋಪೆಡಿಕ್ ಹಾಸ್ಪಿಟಲ್, ಸವದತ್ತಿ

ನಮ್ಮ ಆಸ್ಪತ್ರೆ ಸೌಲಭ್ಯಗಳು ಹಾಗೂ ಯೋಜನೆಗಳು



- ಎಲುವು ಕೀಲು ಶಸ್ತ್ರಚಿಕಿತ್ಸೆ
- ಮೊಣಕಾಲು ಮತ್ತು ಸೊಂಟ ಶಸ್ತ್ರಚಿಕಿತ್ಸೆ
- ಡಿಜಿಟಲ್ ಎಕ್ಸ್-ರೇ
- ಸಿ-ಆರ್ಮ್
- ಫಿಜಿಯೋಥೆರಪಿ
- ಪ್ರಯೋಗಾಲಯ
- ಲ್ಯಾಮಿನಾರ್ ಆಪರೇಷನ್ ಥಿಯೇಟರ್
- ಅಪಘಾತ ಆರೈಕೆ ಸೌಲಭ್ಯಗಳು
- ಔಷಧ ಲಭ್ಯವಿರುತ್ತದೆ
- ಎಸ್.ಬಿ.ಐ ಜನರಲ್ ಇನ್ಸೂರೆನ್ಸ್, ಕ್ಯಾಶ್ ಲೆಸ್ ನೆಟವರ್ಕ್ ಹಾಸ್ಪಿಟಲ್.
- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ಬಿ.ಸಿ.(ರಿ) ಅವರು ಅನುಷ್ಠಾನ ಮಾಡಿದ ಸಂಪೂರ್ಣ ಸುರಕ್ಷಾ, ಆರೋಗ್ಯ ರಕ್ಷಾ ಯೋಜನೆ.
- ಕೆ.ಎಸ್.ಆರ್.ಟಿ.ಸಿ. ಎಂಪನಿಲ್ಮೆಂಟ್ ಹಾಸ್ಪಿಟಲ್.
- ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ದ ಆಯುಷ್ಮಾನ್ ಭಾರತ್, ಜ್ಯೋತಿ ಸಂಜೀವಿನಿ, ಕರ್ನಾಟಕ ಆರೋಗ್ಯ ಸಂಜೀವಿನಿ, ಯಶಸ್ವಿನಿ ಯೋಜನೆಗಳು ಆಸ್ಪತ್ರೆಯಲ್ಲಿ ಲಭ್ಯವಿದೆ.



ಡಾ|| ಹೇಮಂತ್ ಆರ್. ಭಸ್ಮೆ
MBBS, D'Ortho, MCH
ಎಲಬು ಕೀಲು ತಜ್ಞರು



ಶ್ರೀಮತಿ ಡಾ|| ನಯನಾ ಎಚ್. ಭಸ್ಮೆ
ಜಿಲ್ಲಾಧ್ಯಕ್ಷರು : ಬಿಜೆಪಿ ಮಹಿಳಾ ಮೋರ್ಚಾ, ಬೆಳಗಾವಿ (ಗ್ರಾ)
ನಿರ್ದೇಶಕರು : ಜೆಂಟ್ಸ್ ವೆಲ್ಫೇರ್ ಫೌಂಡೇಶನ್, ಯೂನಿಟ್-II.
ರಾಜ್ಯಾಧ್ಯಕ್ಷರು : ಮಹಿಳಾ ಘಟಕ, ಕೆ.ಎಸ್.ಎನ್.ಎಸ್.ಎಸ್.ಕರ್ನಾಟಕ

ಹಾರ್ದಿಕ ಸುಸ್ವಾಗತ





ಅಮ್ಮನ ಕೃಪೆಯಿಂದ ಬೆಳಗುವ ಸವದತ್ತಿ ಭಕ್ತಿಯ ಭವ್ಯ ಜಾತ್ರೆ!!!

ಸವದತ್ತಿ ಪಟ್ಟಣದ

ಶ್ರೀ ಗ್ರಾಮದೇವಿ ಜಾತ್ರಾ ಮಹೋತ್ಸವ-2026

ಬೆಳಗಾವಿ ಜಿಲ್ಲೆಯ ಸವದತ್ತಿ ಪಟ್ಟಣದಲ್ಲಿ ದಿನಾಂಕ 4-5-2026 ರಿಂದ 12-5-2026 ರವರೆಗೆ ಜರುಗಲಿರುವ ಸಂಭ್ರಮದ ಗ್ರಾಮದೇವಿ ಜಾತ್ರೆಗೆ ಆಗಮಿಸಲಿರುವ ಸರ್ವ ಭಕ್ತಾದಿಗಳಿಗೆ

ಹಾರ್ದಿಕ ಸುಸ್ವಾಗತ

ಸ್ವಾಗತ ಕೋರುವವರು

ಶ್ರೀ ಚಿದಂಬರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಬೆಂಗಳೂರು ಶಾಖೆ : ಸವದತ್ತಿ

ಕೇಂದ್ರ ಆಡಳಿತ ಮಂಡಳಿ

ಶ್ರೀ ಜಿ. ಕೆ. ಕುಲಕರ್ಣಿ, ಅಧ್ಯಕ್ಷರು, ಬೆಂಗಳೂರು
ಶ್ರೀ ಎ. ಕೆ. ಪೂಜಾರ, ಉಪಾಧ್ಯಕ್ಷರು, ಬೆಂಗಳೂರು
ಶ್ರೀ ಕೆ. ಆರ್. ಕುಲಕರ್ಣಿ, ಅಧ್ಯಕ್ಷರು, ಸ್ಥಳೀಯ ಸಲಹಾ ಸಮಿತಿ, ಸವದತ್ತಿ
ಹಾಗೂ ಆಡಳಿತ ಮಂಡಳಿಯ ಪದಾಧಿಕಾರಿಗಳು, ಸವದತ್ತಿ

ಹಾರ್ದಿಕ ಸುಸ್ವಾಗತ





ಅಸುಂಡಿಯ

ಶ್ರೀ ಗ್ರಾಮದೇವಿ ಜಾತ್ರಾ ಮಹೋತ್ಸವ-2026

ಬೆಳಗಾವಿ ಜಿಲ್ಲೆಯ ಅಸುಂಡಿಯಲ್ಲಿ ದಿನಾಂಕ 05-05-2026 ರಿಂದ 13-05-2026 ರವರೆಗೆ ಜರುಗಲಿರುವ ಸಂಭ್ರಮದ ಗ್ರಾಮದೇವಿ ಜಾತ್ರೆಗೆ ಆಗಮಿಸಲಿರುವ ಸರ್ವ ಭಕ್ತಾದಿಗಳಿಗೆ

ಹಾರ್ದಿಕ ಸುಸ್ವಾಗತ

ಸ್ವಾಗತ ಕೋರುವವರು

ಶ್ರೀ ಲಿಂಗರಾಜ ಮೈ. ಕಾಲವಾಡ



ಜೆಡಿಎಸ್ ತಾಲೂಕು ಉಪಾಧ್ಯಕ್ಷರು, ಬೈಲಹೊಂಗಲ ಹಾಗೂ ಬೆಳಗಾವಿ ಜಿಲ್ಲಾ ಘಟಕದ ಖಜಾಂಚಿಗಳು

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ಯಕ್ಷಗಾನ ಪ್ರದರ್ಶನ

ಸಿದ್ದಾಪುರ: ಮಕ್ಕಳ ಯಕ್ಷಗಾನ ತರಬೇತಿ ಕೇಂದ್ರ, ಶ್ರೀ ಆಂಜನೇಯ ದೇವಸ್ಥಾನ ಕೊಂಡ್ಲಿ ಇವರ ಆಶ್ರಯದಲ್ಲಿ ಮೇ 4ರಂದು ಸಂಜೆ 7.30 ಕ್ಕೆ ತಾಲೂಕಿನ ಕೊಂಡ್ಲಿಯ ಶ್ರೀ ಆಂಜನೇಯ ದೇವಸ್ಥಾನದಲ್ಲಿ 'ಕನಕಾಂಗಿ ಕಲ್ಯಾಣ' ಮಕ್ಕಳ ಯಕ್ಷಗಾನ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

ಸಭಾ ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಶಾಸಕ ಭೀಮಣ್ಣ ನಾಯ್ಕ ಪಾಲ್ಗೊಳ್ಳಲಿದ್ದಾರೆ. ಅಧ್ಯಕ್ಷತೆಯನ್ನು ದೇವಾಲಯ ಆಡಳಿತ ಮಂಡಳಿ ಅಧ್ಯಕ್ಷ ಮೋಹನ ನಾಯ್ಕ ಕೊಂಡ್ಲಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಯ್ಯಪ್ಪಸ್ವಾಮಿ ದೇವಾಲಯದ ಆಡಳಿತ ಮಂಡಳಿ ಅಧ್ಯಕ್ಷ ಡಾ.ಕೆ.ಶ್ರೀಧರ ವೈದ್ಯ, ಉದ್ಯಮಿ ಉಪೇಂದ್ರ ಪೈ, ಶಿರಸಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಸಂತ ನಾಯ್ಕ, ಬಿಜೆಪಿ ಮಂಡಲ ಅಧ್ಯಕ್ಷ ತಿಮ್ಮಪ್ಪ ಎಂ.ಕೆ., ಪ.ಪಂ.ಸದಸ್ಯ ಸುಧೀರ ನಾಯ್ಕ, ಮನುವಿಕಾಸ ಸಂಸ್ಥೆಯ ನಿರ್ದೇಶಕ ಗಣಪತಿ ಭಟ್ಟ, ಉದ್ಯಮಿಗಳಾದ ದಿವಾಕರ ನಾಯ್ಕ ಹೆಮ್ಮನಬೈಲ್, ಕೃಷ್ಣ ಎಸಳೆ, ಅನುಪ್ ಇಂಡಸ್ಟ್ರೀಯ ಸುರ್ವರ್ಣ ಎಳ್ಳೆ, ಅರ್ಚಕ ಅನಂತ ಭಟ್ಟ ಮತ್ತಿಗಾರು, ಉದ್ಯಮಿ ಜೀವಂತ ಶಾನಭಾಗ, ವೇಷಭೂಷಣ ವ್ಯವಸ್ಥಾಪಕ ಎಂ.ಆರ್.ನಾಯ್ಕ ಕರ್ಸೆಬೈಲು ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ಯಾವತ್ತೂ ಕಲಾಸಕ್ತರು ಪಾಲ್ಗೊಳ್ಳುವಂತೆ ಸಂಘಟನೆಯ ಅಧ್ಯಕ್ಷ ವಿಜಯ ನಾಯ್ಕ, ಕಾರ್ಯದರ್ಶಿ ವೀಣಾ ನಾಯ್ಕ, ಯಕ್ಷಗಾನ ಗುರುಗಳಾದ ಶಿವು ಶಿರಳಗಿ ಕೋರಿದ್ದಾರೆ.

ಜಿಂಕೆ ಕಳೇಬರ ಪತ್ತೆ

ಮುಂಡಗೋಡ: ತಾಲೂಕಿನ ಸನವಳ್ಳಿ ಜಲಾಶಯದಲ್ಲಿ ಜಿಂಕೆಯೊಂದು ಮುಳುಗಿ ಸಾವನ್ನಪ್ಪಿದ ಸ್ಥಿತಿಯಲ್ಲಿ ಶನಿವಾರ ಕಳೇಬರ ಪತ್ತೆಯಾಗಿದೆ. ಆಹಾರ ಅರಸಿ ನಾಡಿನತ್ತ ಬಂದಿದ್ದ ಜಿಂಕೆಯನ್ನು ಕಂಡು ನಾಯಿಗಳು ಬೆನ್ನಟ್ಟಿದ್ದ ಪ್ರಾಣ ರಕ್ಷಣೆಗೆ ಜಿಂಕೆಯೂ ಗ್ರಾಮದ ಹತ್ತಿರ ಆಗಮಿಸಿದೆ. ಜಿಂಕೆಯನ್ನು ಕಂಡ ನಾಯಿಗಳು ಜಿಂಕೆಯ ಮೇಲೆ ದಾಳಿ ನಡೆಸಲು ಮುಂದಾಗಿವೆ. ನಾಯಿ ದಾಳಿಯಿಂದ ಜೀವ ರಕ್ಷಣೆಗಾಗಿ ಜಿಂಕೆ ಜಲಾಶಯದಲ್ಲಿ ಹಾರಿ ಮೇಲೆ ಬಾರದೆ ಮುಳುಗಿ ಮೃತಪಟ್ಟಿರಬಹುದು ಎನ್ನಲಾಗಿದೆ.

ವಿಷಯ ತಿಳಿಯುತ್ತಿದ್ದಂತೆ ಅರಣ್ಯ ಸಿಬ್ಬಂದಿಗಳು ಸ್ಥಳಕ್ಕೆ ಬಂದು ಸಾವನ್ನಪ್ಪಿದ ಜಿಂಕೆಯನ್ನು ಮೇಲೆತ್ತಿ ಅಂತ್ಯಕ್ರಿಯೆ ನಡೆಸಿದರು.ಕಾಡು ಪ್ರಾಣಿಗಳ ರಕ್ಷಣೆಗೆ ಅಗ್ರಹ

ಈ ಭಾಗದಲ್ಲಿ ಜಿಂಕೆಗಳ ಸಂಖ್ಯೆ ಹೆಚ್ಚಿವೆ. ಗ್ರಾಮದ ಹತ್ತಿರ ಜಿಂಕೆಗಳು ಬರುತ್ತಿವೆ. ಈ ವೇಳೆ ನಾಯಿಗಳು ಜಿಂಕೆಯನ್ನು ನೋಡಿದರೆ ಸಾಕು ದಾಳಿ ಮಾಡಲು ಮುಂದಾಗುತ್ತವೆ. ಆರು ವರ್ಷಗಳಿಂದ ಇಲ್ಲಿಯವರೆಗೂ ಇಷ್ಟಕ್ಕೂ ಹೆಚ್ಚು ಜಿಂಕೆಗಳು ಸಾವನ್ನಪ್ಪಿವೆ. ಇವುಗಳ ರಕ್ಷಣೆ ಮಾಡುವ ಹೊಣೆ ಇಲಾಖೆಯ ಮೇಲಿದೆ. ಅದಷ್ಟು ಬೇಗ ಕಾಡು ಪ್ರಾಣಿಗಳು ನಾಡಿನತ್ತ ಬಾರದಂತೆ ಬೇಲಿ ಹಾಕಬೇಕು ಎಂದು ಸನವಳ್ಳಿ ಗ್ರಾಮಸ್ಥರು ಹಾಗೂ ಪ್ರಾಣಿ ಪ್ರಿಯರು ಆಗ್ರಹಿಸಿದ್ದಾರೆ.

ಅಂತರ್ ರಾಜ್ಯ ಕಳ್ಳರ ಬಂಧನ

ಗೋಕರ್ಣ: ಪೊಲೀಸ್ ಸಿಬ್ಬಂದಿಯೊರ್ವರ ಮನೆಯಲ್ಲಿ ಕಳ್ಳತನ ನಡೆಸಿದ್ದ ಕುಖ್ಯಾತ ಅಂತರ್ ರಾಜ್ಯ ಕಳ್ಳರನ್ನು ಗೋಕರ್ಣ ಪೊಲೀಸರು ಕೇರಳದಲ್ಲಿ ಬಂಧಿಸಿ ಕರೆತಂದಿದ್ದಾರೆ.ಕೇರಳ ತ್ರಿಶೂರಿನ ಸತೀಶ ಕೆ.ಪಿ(40) ಶ್ರೀಜು ಎಂ(47) ಬಂಧಿತ ಆರೋಪಿಗಳಾಗಿದ್ದು ಇವರಿಂದ ಕಳ್ಳತನ ಮಾಡಲಾಗಿದ್ದ 18 ಲಕ್ಷ ರೂಪಾಯಿ ಮೌಲ್ಯದ ಚಿನ್ನಾಭರಣ ಮತ್ತು ಕೃತ್ಯಕ್ಕೆ ಬಳಸಿದ ಕಾರನ್ನು ವಶಪಡಿಸಿಕೊಳ್ಳಲಾಗಿದೆ.

ಜನವರಿ ತಿಂಗಳಲ್ಲಿ ರಾಷ್ಟ್ರೀಯ ಹೆದ್ದಾರಿ 66 ಹೀರೆಗುತ್ತಿ ಬಳಿ ಪೊಲೀಸ್ ಸಿಬ್ಬಂದಿ ಚಂದ್ರಕಾಂತ ಮಸಾಕರ್ ಎನ್ನುವವರ ಮನೆಗೆ ಯಾರೂ ಇಲ್ಲದ ಸಮಯದಲ್ಲಿ ಬೀಗ ಮುರಿದು ಒಳ ನುಗ್ಗಿದ ಖದೀಮರು 66 ಗ್ರಾಂ ತೂಕದ ಚಿನ್ನಾಭರಣ ದೋಚಿ ಪರಾರಿಯಾಗಿದ್ದು ಜನವರಿ 10 ರಂದು ಈ ಕುರಿತು ಪ್ರಕರಣ ದಾಖಲಾಗಿತ್ತು. ತಾಂತ್ರಿಕ ತನಿಖೆಯಿಂದ ಕಳ್ಳರು ಕೇರಳದಲ್ಲಿ ಇರುವುದು ಖಚಿತವಾಗಿತ್ತು.ಕೇರಳಕ್ಕೆ ತೆರಳಿದ ಪೊಲೀಸರ ವಿಶೇಷ ತಂಡ ಆರೋಪಿತರನ್ನು ಬಂಧಿಸಿ 66 ಗ್ರಾಂ ಚಿನ್ನಾಭರಣ ಮತ್ತು ಕೃತ್ಯಕ್ಕೆ ಬಳಸಿದ ಸ್ವಿಪ್ಟ್ ಕಾರು ವಶಕ್ಕೆ ಪಡೆದುಕೊಂಡಿದ್ದು ಆರೋಪಿತರು ಕರ್ನಾಟಕ, ತಮಿಳುನಾಡು, ಕೇರಳ ಮತ್ತಿತರ ಕಡೆಗಳಲ್ಲಿ ಸುಮಾರು 40 ಕ್ಕೂ ಹೆಚ್ಚಿನ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವ ಕುಖ್ಯಾತ ಕಳ್ಳರಾಗಿದ್ದಾರೆ ಎಂದು ತಿಳಿದು ಬಂದಿದೆ.

ಗಾಂಜಾ ಪ್ರಕರಣ ಖುಲಾಸೆ

ಗೋಕರ್ಣ: ಗಾಂಜಾ ಸೇವನೆಯ ಕುರಿತು ಕಳೆದ ವರ್ಷ ದಾಖಲಾದ ಪ್ರಕರಣ ನ್ಯಾಯಾಲಯದಲ್ಲಿ ಖುಲಾಸೆಗೊಂಡಿದೆ. 2024 ರಲ್ಲಿ ಹೊರ ರಾಜ್ಯದ ನಾಲ್ಕು ಜನ ಪ್ರವಾಸಿಗರು ಮುಖ್ಯ ಕಡಲತೀರದ ರೆಸಾರ್ಟ್ ಒಂದರಲ್ಲಿ ವಾಸ್ತವ್ಯವಿದ್ದಾಗ ಪೊಲೀಸರು ದಾಳಿ ನಡೆಸಿ ವಶಕ್ಕೆ ಪಡೆದು ಮಾದಕ ವಸ್ತು ಸೇವನೆಯ ಬಗ್ಗೆ ಪರೀಕ್ಷೆ ಒಳಪಡಿಸಿ ದೂರ ದಾಖಲಿಸಿದ್ದರು. ಈ ಕುರಿತು ಕುಮಟಾ ಜೆ.ಎಮ್.ಎಫ್.ಸಿ. ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಮೇ 2ರಂದು ತೀರ್ಪು ಹೊರಬಂದಿದೆ.

ಆರೋಪಿತರಾಗಿದ್ದ ಸೌರಭಕುಮಾರ ಶರ್ಮಾ, ಪಲ್ಲಿವಿಕಾಸ,ರಾಮಕೃಷ್ಣಬಾಬು, ವಿನಯಾ ಶೇಖರ ಎಂಬುವವರು ನಿರ್ದೋಷಿಗಳು ಎಂದು ಆದೇಶಿಸಿದೆ. ಮಾದಕ ವಸ್ತು ಬಳಕೆ ಕಾಯ್ದೆಯಡಿ ದಾಖಲಾದ ಪ್ರಕರಣಗಳಲ್ಲಿ ಖುಲಾಸೆಗೊಂಡ ಮೊದಲ ಪ್ರಕರಣ ಇದು ಎನ್ನಲಾಗಿದೆ. ಆರೋಪಿತರ ಪರ ನ್ಯಾಯವಾದಿ ರಂಜನ ನಾಯಕ ನಾಡುಮಾಸ್ಕೇರಿ ವಾದ ಮಂಡಿಸಿದ್ದರು.



ಭಟ್ಕಳ: ಶ್ರೀ ಅಖಿಲ ಹವ್ಯಕ ಮಹಾಸಭಾದ ಬೆಳಕೆಯ ಶ್ರೀ ಕ್ಷೇತ್ರ ದುರ್ಗಾಪರಮೇಶ್ವರಿ ದೇವಸ್ಥಾನದ ನೂತನ ಹವ್ಯಕ ಸಭಾಭವನವನ್ನು ಶನಿವಾರ ಶ್ರೀ ಸಂಸ್ಥಾನ ಗೋಕರ್ಣ, ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿಯವರು ಉದ್ಘಾಟಿಸಿದರು.

ಮೂಡಭಟ್ಕಳ ಹೆದ್ದಾರಿ ಸಮಸ್ಯೆ ಪರಿಹರಿಸಲು ಆಗ್ರಹ

ಭಟ್ಕಳ: ಇಲ್ಲಿಯ ಮೂಡಭಟ್ಕಳ ಬೈಪಾಸ್‌ನಲ್ಲಿ ಸಮರ್ಪಕ ಗಟಾರ ಕಾಮಗಾರಿ ಮಾಡದೇ ಹೆದ್ದಾರಿ ಕಾಮಗಾರಿ ನಡೆಸಲಾಗುತ್ತಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಲ್ಲಿ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಶಿವಾನಿ ಶಾಂತಾರಾಮ ಭಟ್ಕಳ ಮತ್ತಿತರರು ದೂರಿ, ಮಳೆಗಾಲ ಆರಂಭ ಆಗುವುದರೊಳಗೆ ಗಟಾರ್ ಕಾಮಗಾರಿ ಆರಂಭಿಸುವಂತೆ ಒತ್ತಾಯಿಸಿದರು.

ಮಂಗಳೂರಿಗೆ ತೆರಳುತ್ತಿದ್ದ ಸಂಸದ ಕಾಗೇರಿ ಅವರಿಗೆ ಹೆದ್ದಾರಿ ಕಾಮಗಾರಿಯ ಸಮಸ್ಯೆ ಬಗ್ಗೆ ತಿಳಿಸಿದ ಅವರು ಇನ್ನು ಸ್ವಲ್ಪ ದಿನಗಳಲ್ಲೇ ಮಳೆಗಾಲ ಆರಂಭವಾಗುತ್ತದೆ. ಮೂಡಭಟ್ಕಳದಲ್ಲಿ ಇನ್ನೂ ಗಟಾರ ಕಾಮಗಾರಿ ಕೈಗೆತ್ತಿಕೊಂಡಿಲ್ಲ, ಗಟಾರ ಮಾಡದೇ ಹೆದ್ದಾರಿ ಕಾಮಗಾರಿ ಮಾಡಿದರೆ ಮಳೆಗಾಲದಲ್ಲಿ ಜನರು ತೊಂದರೆ ಅನುಭವಿಸಬೇಕಾಗುತ್ತದೆ. ಮಳೆ ನೀರು ಮನೆಗಳಿಗೆ ನುಗ್ಗಲಿದೆ. ಹಿಂದೊಮ್ಮೆ ಮಹಾಮಳೆಗೆ ಮಳೆ ನೀರು ಮನೆಗಳಿಗೆ ನುಗ್ಗಿ ಜನರು ತೊಂದರೆ ಅನುಭವಿಸಿದ್ದಾರೆ. ಹೀಗಾಗಿ ಆದಷ್ಟು ಬೇಗ ಗಟಾರ ಕಾಮಗಾರಿ ಮಾಡುವಂತೆ ಒತ್ತಾಯಿಸಿದರು. ಉಪಸ್ಥಿತರಿದ್ದ ಶಾಂತಾರಾಮ ಭಟ್ಕಳ ಅವರು ಹೆದ್ದಾರಿ ಸಮಸ್ಯೆ ಬಗ್ಗೆ ತಿಳಿಸಿದರು. ಸಂಸದ ಕಾಗೇರಿ ಅವರು ಈ ಬಗ್ಗೆ ಅಧಿಕಾರಿಗಳ ಜತೆ ಮಾತನಾಡುವುದಾಗಿ ಹೇಳಿದರು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ನಾಯ್ಕ, ಭಾಸ್ಕರ ದೈಮನೆ, ಸ್ಥಳೀಯರಾದ ರಮೇಶ ನಾಯ್ಕ, ರಾಮದಾಸ ನಾಯ್ಕ ಇದ್ದರು.



ಭಟ್ಕಳ: ಇಲ್ಲಿಯ ಮೂಡಭಟ್ಕಳ ಬೈಪಾಸ್‌ನಲ್ಲಿ ಸಮರ್ಪಕ ಗಟಾರ ಕಾಮಗಾರಿ ಮಾಡದೇ ಹೆದ್ದಾರಿ ಕಾಮಗಾರಿ ನಡೆಸಲಾಗುತ್ತಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಲ್ಲಿ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಶಿವಾನಿ ಶಾಂತಾರಾಮ ಭಟ್ಕಳ ಮತ್ತಿತರರು ದೂರಿ, ಮಳೆಗಾಲ ಆರಂಭ ಆಗುವುದರೊಳಗೆ ಗಟಾರ್ ಕಾಮಗಾರಿ ಆರಂಭಿಸುವಂತೆ ಒತ್ತಾಯಿಸಿದರು.

ಮಂಕಿ ಪಟ್ಟಣಕ್ಕೆ ನೀರು ಸರಬರಾಜು ಕಲ್ಪಿಸುವ ಯೋಜನೆಗೆ ಶಂಕುಸ್ಥಾಪನೆ

ಕ್ಷೇತ್ರದ ಅಭಿವೃದ್ಧಿಗೆ ಸಂಕಲ್ಪ: ಸಚಿವ ವೈದ್ಯ

ಹೊನ್ನಾವರ: ಅಮೃತ್ ನೀರಾವರಿ ಯೋಜನೆಯಿಂದ ಮಂಕಿ ಪಟ್ಟಣದಲ್ಲಿ ನೀರಿನ ಅಭಾವಕ್ಕೆ ಪರಿಹಾರವುಂಟಾಗಿದೆ. ವಿರೋಧ ಪಕ್ಷದವರು ಜನರ ದಿಕ್ಕು ತಪ್ಪಿಸಲು ಟೀಕೆ ಮಾಡುತ್ತಾರೆ. ನೀವು ಮಾಡುವ ಸುಳ್ಳು ಟೀಕೆಗಳು ಸಾಯುತ್ತವೆ, ಜನಪರವಾಗಿ ಮಾಡಿದ ಕೆಲಸಗಳು ಉಳಿಯುತ್ತವೆ ಎಂದು ಸಚಿವ ಮಂಕಾಳ ವೈದ್ಯ ಹೇಳಿದರು.

ತಾಲೂಕಿನ ಮಂಕಿಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಮಂಕಿ ಪಪಂ ಸಹಯೋಗದಲ್ಲಿ ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಡಿ ಶರಾವತಿ ಜಲಮೂಲದಿಂದ ಮಂಕಿ ಪಟ್ಟಣಕ್ಕೆ ನೀರು ಸರಬರಾಜು ಕಲ್ಪಿಸುವ ಯೋಜನೆಯ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಮಂಕಿ ಪಟ್ಟಣ ಪಂಚಾಯಿತಿಗೆ ಎಲ್ಲರಿಗೂ ನೀರು ದೊರಕಿಸಲು 106 ಕೋಟಿ ರೂ. ಅಂದಾಜು ವೆಚ್ಚದ ಕಾಮಗಾರಿಗೆ ಅನುದಾನ ತರಲಾಗಿದೆ. ದೊಡ್ಡಗುಂದ, ಗುಳದಕೇರಿ ಎಡಬಲ ಟ್ಯಾಂಕ್‌ಗೆ ನೀರು ಕಡಿಮೆಯಾಗುತ್ತದೆ ಎಂಬ ಭಾವನೆ ಇದೆ. 106 ಕೋಟಿ ರೂ. ಅನುದಾನ ತಂದಿದೇನೆ.ಅಸಮಾಧಾನ ಬೇಡಾ. ಮತ್ತೆ ಟ್ಯಾಂಕ್ ಬೇಕಾದರೆ ಕೊಡುವಾ ಮತ್ತೆ ಅನುದಾನ ತರುತ್ತೇನೆ. ಬಿಜೆಪಿಯವರಿಗೆ ಒಂದು ಇಂದಿರಾ ಕ್ಯಾಂಟೀನ್ ಮಾಡಲೂ ಯೋಗ್ಯತೆಯಿಲ್ಲವಾಗಿತ್ತು. ನಾವು ಮಾಡಿದ್ದೇವೆ. ಏನಾದರೂ ಹೇಳಿ ಜನರ ದಿಕ್ಕು ತಪ್ಪಿಸುವ ಕೆಲಸವನ್ನು ಮಾಡಬಾರದು. ಈ ಕಾಮಗಾರಿ ಕೇಂದ್ರ ಸರ್ಕಾರದ ಅನುದಾನ ಎಂದು ಹೇಳುತ್ತಾರೆ. ಆದರೆ, ಇದರಲ್ಲಿ ಶೇ. 50 ಮಾತ್ರ ಕೇಂದ್ರ ಸರ್ಕಾರದ ಅನುದಾನ, ಶೇ. 40 ರಾಜ್ಯ ಸರ್ಕಾರದ ಅನುದಾನ ಹಾಗೂ ಶೇ. 10 ಸ್ಥಳೀಯ ಸಂಸ್ಥೆಯ ಅನುದಾನದಿಂದ ಆಗಿದೆ. ನಾವು ಕೇಂದ್ರಕ್ಕೆ ಜಿಎಸ್ಟಿ ಕಟ್ಟುತ್ತಿದ್ದೇವೆ. ಅದೇ ದುಡ್ಡನ್ನು ನಮಗೆ ಕೊಟ್ಟಿದ್ದಾರೆ. ಬಾಯಿಗೆ ಬಂದಂತೆ ಮಾತನಾಡುವುದು,ಪತ್ರಿಕೆಗೆ ಹೇಳಿಕೆ ಕೊಡುವುದು ಶೋಭೆಯಲ್ಲ. ಈ ಭಾಗದ ಜನತೆ ಪಪಂ ಚುನಾವಣೆಯಲ್ಲಿ 61% ಮತ ನೀಡಿದ್ದಾರೆ. ಕ್ಷೇತ್ರದ ಜನತೆ ನನ್ನ ಜೊತೆ ಇದ್ದಾರೆ. ವೈದ್ಯರಿಗೆ ಜನ ಬುದ್ದಿ ಕಲಿಸಿದ್ದಾರೆ ಎನ್ನುವ ಸುನೀಲ್ ನಾಯ್ಕರು ನಿಮಗೆ ಜನ ಬುದ್ದಿ ಕಲಿಸಿದ್ದಾರಾ ತಿಳಿದು ಕೊಳ್ಳಿ. ಜನ ಮತ್ತೆ ನಿಮಗೆ ಕಲಿಸುತ್ತಾರೆ. ಜನತೆಯ ತೀರ್ಪಿಗೆ ಸಿದ್ದರಾಗಿರಬೇಕು. ನಿಮ್ಮ ಸಂಸದರಿದ್ದಾರೆ. ಕೇಂದ್ರ ಸರ್ಕಾರದಿಂದ ಅನುದಾನ ತಂದು ಜನಪರ ಕಾರ್ಯ ಮಾಡಿ. ಮಾರ್ಗದರ್ಶನ ಮಾಡಿ ನಾನು ಸ್ವಾಗತಿಸುತ್ತೇನೆ,ಅಭಿನಂದಿಸುತ್ತೇನೆ. ಐದು ವರ್ಷ ಅಧಿಕಾರದಲ್ಲಿದ್ದಾಗ ಯಾಕೆ ನೀವು ಯಾಕೆ ಕೆಲಸ ಮಾಡಲಿಲ್ಲಾ. 1800 ಕೋಟಿ ರೂ. ಅನುದಾನದ ಬೃಹತ್ ಯೋಜನೆಯ 200ಕೋಟಿ ಟೆಂಡರ್ ಗೆ ಹೋಗಿದೆ. ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಸಂಕಲ್ಪ ಮಾಡಿದ್ದೇನೆ. ಅಹೋರಾತ್ರಿ ಕೆಲಸ ಮಾಡುತ್ತಿದೇನೆ. ಜನತೆಯ ಋಣತೀರಿಸುವ ಕೆಲಸಮಾಡುತ್ತಿದೇನೆ ಎಂದರು.



» ಮಂಕಿ ಪಪಂಗೆ ಎಲ್ಲರಿಗೂ ನೀರು ದೊರಕಿಸಲು 106 ಕೋಟಿ ರೂ. ಅಂದಾಜು ವೆಚ್ಚದ ಕಾಮಗಾರಿಗೆ ಅನುದಾನ ತರಲಾಗಿದೆ.

ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಗೋವಿಂದ ನಾಯ್ಕ ಮಾತನಾಡಿ, ನಮ್ಮ ಕಾಂಗ್ರೆಸ್ ಪಕ್ಷ ಜನಪರವಾದ ಯೋಜನೆಗಳನ್ನು ನೀಡಿ ಬಡವರ ಪರ ನಿಂತಿದೆ. ಮಂಕಾಳ ವೈದ್ಯ ಅವರು ಮಂಕಿಯಲ್ಲಿ ನೀರಿನ ಅಗತ್ಯತೆಯನ್ನು ಮನಗಂಡು ಈ ಯೋಜನೆಯನ್ನು ತಂದಿದ್ದಾರೆ. ಈ ಭಾಗದ ಜನತೆಗೆ ನೀರಿನ ಸಮಸ್ಯೆ ಇರುವುದಿಲ್ಲ. ಮಂಕಿಯಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿ ನಿರ್ಮಿಸಲು 20 ಗುಂಟೆ ಜಾಗ ಮಂಜೂರಿ ಮಾಡಿದ್ದಾರೆ. ಕಾರ್ಯಕರ್ತರು ಬೆಂಬಲಿಸಬೇಕು ಎಂದರು.

ಪಂಚ ಗ್ಯಾರಂಟಿ ಯೋಜನೆ ತಾಲೂಕಾಧ್ಯಕ್ಷ ಅಣ್ಣಪ್ಪ ನಾಯ್ಕ ಮಾತನಾಡಿದರು. ಸಚಿವರಿಗೆ ವಿವಿಧ ಸಂಘ ಸಂಸ್ಥೆಯವರು, ದೇವಾಲಯದ ಆಡಳಿತ ಮಂಡಳಿ,ಹಿರಿಯನಾಗರಿಕರು ಸನ್ಮಾನಿಸಿದರು. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರವಾರ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಶಿವರಾಮ ನಾಯ್ಕ ಪ್ರಾಸ್ತಾವಿಕ ಮಾತನಾಡಿದರು. ಉಪ ವಿಭಾಗಾಧಿಕಾರಿ ಪ್ರವೀಣ ಕರಾಂಡೆ, ಪ.ಪಂ.ಸದಸ್ಯರಾದ ಸಂಜೀವ ನಾಯ್ಕ, ವಿನಾಯಕ ಮೊಗೇರ್ ಉಲ್ಲಾಸ ನಾಯ್ಕ, ಗಜಾನನ ನಾಯ್ಕ, ಸತೀಶ (ಗೋವಿಂದ) ನಾಯ್ಕ, ಉಷಾ ನಾಯ್ಕ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಶಿವರಾಮ ಸಂಗುಮನೆ, ವಾಮನ ನಾಯ್ಕ ಇತರರು ಇದ್ದರು.

ಸಂಭ್ರಮದ ಸಣ್ಣಮ್ಮದೇವಿ, ಬೊಮ್ಮಯ್ಯ ದೇವರ ಬಂಡಿಹಬ್ಬ

ಅಂಕೋಲಾ: ತಾಲೂಕಿನ ಅಲಗೇರಿಯ ಶ್ರೀ ಸಣ್ಣಮ್ಮದೇವಿ, ಶ್ರೀ ಬೊಮ್ಮಯ್ಯ ದೇವರ ಬಂಡಿಹಬ್ಬ ವಿಜೃಂಭಣೆಯಿಂದ ನಡೆಯಿತು.

ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಣ್ಣಮ್ಮದೇವಿ ಮತ್ತು ಬೊಮ್ಮಯ್ಯ ದೇವರ ಬೆಳ್ಳಿಯ ಮುಖ ಇರುವ ಪುಷ್ಪಾಲಂಕೃತ ಭವ್ಯ ಕಳಸವನ್ನು ಹೊತ್ತ ಗುನಗರು ದೇವಾಲಯದಿಂದ ಭಕ್ತರ ಪೂಜೆ ಸ್ವೀಕರಿಸುತ್ತ ಬಂದು ಉಲಿ ಬಂಡಿ ಏರಿದರು. ಗುನಗರು, ಬಿಡ ಗುನಗರು, ಕಟಗಿದಾರರು ದೇವಾಲಯದ ಪ್ರಮುಖರು ಇದ್ದರು.ಬಂಡಿಹಬ್ಬದ ಪ್ರಯುಕ್ತ ದೇವಾಲಯದಲ್ಲಿ ಹಲವು ಸೇವಾ ಕಾರ್ಯಕ್ರಮಗಳು ನಡೆದವು. ಅಲಗೇರಿ ಸುತ್ತ ಮುತ್ತಲಿನ ಗ್ರಾಮಗಳ ಭಕ್ತರು ದೇವಾಲಯಕ್ಕೆ ಆಗಮಿಸಿ ಹಣ್ಣು ಕಾಯಿ, ಉಡಿ ಸೇವೆ ಸಲ್ಲಿಸಿದರು.



ಪೌರ ಸೇವಾ ನೌಕರರ ಸಂಘದ ಅಧ್ಯಕ್ಷರಾಗಿ ಮೈಕಲ್ ಫರ್ನಾಂಡಿಸ್ ಪುನರಾಯ್ಕೆ

ದಾಂಡೇಲಿ: ಪೌರ ಸೇವಾ ನೌಕರರ ಸಂಘದ ಅಧ್ಯಕ್ಷರಾಗಿ ನಗರಸಭೆಯ ಅಧಿಕಾರಿ ಮೈಕಲ್ ಫರ್ನಾಂಡಿಸ್ ಪುನರಾಯ್ಕೆಯಾಗಿದ್ದಾರೆ.

ದಾಂಡೇಲಿ ನಗರಸಭೆಯ ಸಭಾಭವನದಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಮೈಕಲ್ ಅವರನ್ನು ಸಂಘದ ಅಧ್ಯಕ್ಷರನ್ನಾಗಿ ಅವಿರೋಧವಾಗಿ ಪುನರಾಯ್ಕೆ ಮಾಡಲಾಗಿದೆ. ಈ ಆಯ್ಕೆ ಪ್ರಕ್ರಿಯೆ ಸಂದರ್ಭದಲ್ಲಿ ಪೌರ ಸೇವಾ ನೌಕರರ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಪೌರ ಸೇವಾ ನೌಕರರ ಸಂಘದ ಅಧ್ಯಕ್ಷರಾಗಿ ಪುನರಾಯ್ಕೆಯಾದ ಮೈಕಲ್ ಫರ್ನಾಂಡಿಸ್ ಅವರನ್ನು ಸಂಘದ ಸದಸ್ಯರು ಅಭಿನಂದಿಸಿದ್ದಾರೆ.

ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ ಸಂಪನ್ನ

ಕುಮಟಾ: ಚೇತನಾ ಸೇವಾ ಸಂಸ್ಥೆ ದೀವಗಿ ಇವರ ಆಶ್ರಯದಲ್ಲಿ ದುಂಡಕುಳಿಯಲ್ಲಿ ಕಾರ್ಮಿಕ ದಿನಾಚರಣೆ, ಮಹಿಳಾ ಸುದಿನ ಹಾಗೂ ದಿ.ಕೃಷ್ಣಾ ಜೋಗಿ ಗೌಡರ ಸ್ಮರಣಾರ್ಥ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮಗಳು ವೈಭವದಿಂದ ಸಂಪನ್ನಗೊಂಡವು.

ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸುಷ್ಮಾ ರಾಜಗೋಪಾಲ ರೆಡ್ಡಿ ಉದ್ಘಾಟಿಸಿ ಮಾತನಾಡಿ, ಸಮಾಜದಲ್ಲಿ ಎದುರಾಗುವ ಯಾವುದೇ ಸಾಮಾಜಿಕ ಅಥವಾ ಶೈಕ್ಷಣಿಕ ಸಮಸ್ಯೆಗಳಿಗೆ ತಮ್ಮಿಂದ ಸಾಧ್ಯವಾದ ನೆರವು ನೀಡುವುದಾಗಿ ಭರವಸೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಉ.ಕ ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಶಿವಾನಂದ ಹೆಗಡೆ ಕಡತೋಕ ಮಾತನಾಡಿ, ಹಿರಿಯ ಕಾರ್ಮಿಕರನ್ನು ಗುರುತಿಸಿ ಗೌರವಿಸುವುದು ಅವರಲ್ಲಿ ಆತ್ಮವಿಶ್ವಾಸ ಹಾಗೂ ಸ್ಥೈರ್ಯವನ್ನು ಹೆಚ್ಚಿಸುವ ಕಾರ್ಯವಾಗಿದ್ದು, ಇಂತಹ ಸಂಸ್ಕಾರಗಳನ್ನು ಬೆಳೆಸಿಕೊಂಡಾಗ ಮಾತ್ರ ದೇಶವು ವಿಶ್ವಗುರುವಾಗಲು ಸಾಧ್ಯವೆಂದರು.

ಕರ್ನಾಟಕ ರಕ್ಷಣಾ ವೇದಿಕೆಯ ಉ.ಕ ಜಿಲ್ಲಾಧ್ಯಕ್ಷ ಹಾಗೂ ಕೆಪಿಸಿಸಿ ಮುಖಂಡ ಭಾಸ್ಕರ ಪಟಗಾರ ಮಾತನಾಡಿ, ಪ್ರತಿಯೊಂದು ಊರಲ್ಲೂ ಚೇತನಾ ಸೇವಾ ಸಂಸ್ಥೆಯಂತಹ ಸಂಘಟನೆಗಳು ಹುಟ್ಟಿಬಂದರೆ ಸಮಾಜ ನಿರ್ಮಾಣ ಇನ್ನಷ್ಟು ಸುಂದರವಾಗುತ್ತದೆ ಎಂದರು.

ತದಡಿ ಮೀನುಗಾರಿಕಾ ಸಹಕಾರಿ ಸಂಘದ ಅಧ್ಯಕ್ಷ ಮಹೇಶ, ಜ್ಞಾನ ದೀವಿಗೆ ದೀವಗಿ ಸಂಸ್ಥೆಯ ಸಂಚಾಲಕಿ ಎ.ಆರ್. ಭಾರತಿ ಮಾತನಾಡಿದರು. ಕಾರ್ಯಕ್ರಮದಲ್ಲಿ 65 ವರ್ಷ ಮೇಲ್ಪಟ್ಟ 21 ಹಿರಿಯ ಕಾರ್ಮಿಕರನ್ನು ಸನ್ಮಾನಿಸಲಾಯಿತು. ಮಹಿಳೆಯರಿಗೆ ಆಯೋಜಿಸಿದ್ದ ಸಂಗೀತ ಕುರ್ಚಿ ಸ್ಪರ್ಧೆಯಲ್ಲಿ ಸವಿತಾ ರಮೇಶ ಅಂಬಿಗ ಪ್ರಥಮ ಹಾಗೂ ಮಾದೇವಿ ಮಾದೇವ ಗೌಡ ದ್ವಿತೀಯ ಸ್ಥಾನ ಪಡೆದರು. ಬಳಿಕ ಮಹಿಳೆಯರು, ಯುವತಿಯರು ಮತ್ತು ಮಕ್ಕಳಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಚೈತನ್ಯ ನವದುರ್ಗೆಯರ ದರ್ಶನ ಎಲ್ಲರ ಮನಸೆಳೆಯಿತು. ತುಳಸಿ ಗೌಡ ಪ್ರಾರ್ಥಿಸಿದರು. ಚೈತನ್ಯಾ ರಾಮಚಂದ್ರ ಅಂಬಿಗ ಸ್ವಾಗತಿಸಿದರು. ನಿಹಾರಿಕಾ ಎಲ್. ಅಂಬಿಗ ಮತ್ತು ದಿಶಾ ಡಿ. ಅಂಬಿಗ ಸ್ವಾಗತ ನೃತ್ಯ ಪ್ರದರ್ಶಿಸಿದರು. ಚೇತನಾ ಸೇವಾ ಸಂಸ್ಥೆಯ ಅಧ್ಯಕ್ಷ ಆರ್. ಕೆ. ಅಂಬಿಗ ನಿರ್ವಹಿಸಿದರು. ವಂದನಾ ರಾಜು ಅಂಬಿಗ ವಂದಿಸಿದರು.



ಭಟ್ಕಳದಲ್ಲಿ ಸಚಿವರಿಂದ ಜನತಾ ದರ್ಶನ

ಭಟ್ಕಳ: ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್. ವೈದ್ಯ ಅವರು ಭಾನುವಾರ ಸಂಜೆ ಪಟ್ಟಣದ ತಮ್ಮ ಕಚೇರಿಯಲ್ಲಿ ಜನತಾ ದರ್ಶನ ನಡೆಸಿ ಜನರಿಂದ ಅಹವಾಲು ಸ್ವೀಕರಿಸಿದರು.

ತಾಲೂಕಿನ ಮೂಲೆ ಮೂಲೆಗಳಿಂದ ಜನರು ಆಗಮಿಸಿ ಸಚಿವರಿಗೆ ಮನವಿ ಸಲ್ಲಿಸಿದರು.

ಜನರು ಕುಡಿಯವ ನೀರು, ರಸ್ತೆ, ಸೇತುವೆ ಮುಂತಾದವುಗಳಿಗೆ ಮನವಿ ಸಲ್ಲಿಸಿದರು. ಕೆಲವರು ಶಿಕ್ಷಣ, ಅನಾರೋಗ್ಯಕ್ಕೆ ಸಹಾಯ, ಮದುವೆ ಮುಂತಾದ ಕಾರ್ಯಕ್ರಮಕ್ಕೆ ಸಚಿವರಿಂದ ಸಹಾಯ ಯಾಚಿಸಿದರು. ಸಚಿವರು ಕೆಲವು ಸಮಸ್ಯೆಗೆ ಸ್ಥಳದಲ್ಲೇ ಪರಿಹಾರ ದೊರಕಿಸಿಕೊಟ್ಟರು. ಇನ್ನು ಕೆಲವು ಸಮಸ್ಯೆಗಳಿಗೆ ತಮ್ಮ ಆಪ್ತ ಸಹಾಯಕರಾದ ನಾಗೇಂದ್ರ ಮೊಗೇರ ಮತ್ತು ನಾಗರಾಜ ನಾಯ್ಕ ಅವರ ಬಳಿ ಸಂಬಂಧಪಟ್ಟ ಅಧಿಕಾರಿಗಳ ಜತೆ ಮಾತನಾಡಿ ಸಮಸ್ಯೆ ಬಗೆಹರಿಸಿಕೊಡುವಂತೆ ಸೂಚಿಸಿದರು. ಮದುವೆ, ಶಿಕ್ಷಣ, ಅನಾರೋಗ್ಯಕ್ಕೆ ಸಂಬಂಧಿಸಿದಂತೆ ಸಚಿವರು ಧನಸಹಾಯ ಮಾಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೆಂಕಟೇಶ ನಾಯ್ಕ, ಪ್ರಧಾನ ಕಾರ್ಯದರ್ಶಿ ಸುರೇಶ ನಾಯ್ಕ ಮುಂತಾದವರಿದ್ದರು.



ಬೆಳಕೆ ದುರ್ಗಾಪರಮೇಶ್ವರಿ ಕ್ಷೇತ್ರದ ಅಭಿವೃದ್ಧಿಗೆ ಸಹಕಾರ ಅಗತ್ಯ

ಭಟ್ಕಳ: ಶ್ರೀ ಅಖಿಲ ಹವ್ಯಕ ಮಹಾಸಭಾದ ಬೆಳಕೆಯ ಶ್ರೀ ಕ್ಷೇತ್ರ ದುರ್ಗಾಪರಮೇಶ್ವರಿ ದೇವಸ್ಥಾನದ ನೂತನ ಹವ್ಯಕ ಸಭಾಭವನವನ್ನು ಶನಿವಾರ ಶ್ರೀ ಸಂಸ್ಥಾನ ಗೋಕರ್ಣ, ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮೀಜಿಯವರು ಉದ್ಘಾಟಿಸಿದರು.

ನಂತರ ನಡೆದ ಧರ್ಮ ಸಭೆಯಲ್ಲಿ ಆಶೀರ್ವಚನ ನೀಡಿದ ಸ್ವಾಮೀಜಿಯವರು, ಬೆಳಕೆ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಮತ್ತು ಜಾಗವನ್ನು ಹವ್ಯಕ ಮಹಾಸಭಾದವರು ಮಂಜುನಾಥ ಬಿಲ್ಲವರಿಂದ ದಾನವಾಗಿ ಪಡೆದ ನಂತರ ಕ್ಷೇತ್ರವನ್ನು ಉತ್ತಮವಾಗಿ ಅಭಿವೃದ್ಧಿ ಪಡಿಸಿದ್ದಾರೆ. ಜಾಗ ದಾನ ನೀಡಿದ ನಂತರ ಮುಂಜುನಾಥ ಬಿಲ್ಲವ ಅವರಿಗೂ ಒಳಿತಾಗಿದೆ. ಬೆಳಕೆ ಹೆಸರೇ ವಿಶೇಷವಾಗಿದೆ. ಇಲ್ಲಿ ಸದಾ ಬೆಳಕಾಗಿರಲಿ. ಕ್ಷೇತ್ರದಲ್ಲಿ ಊರಿನ ಜನರಿಗೆ ಅನುಕೂಲವಾಗಲುಸುಸಜ್ಜಿತಸಭಾಭವನವನ್ನೂ ಸಹ ನಿರ್ಮಿಸಿದ್ದಾರೆ. ಕಳೆದ ಮೂರ್ನಾಲ್ಕು ವರ್ಷದಲ್ಲಿ ಈ ಕ್ಷೇತ್ರ ಸಾಕಷ್ಟು ಅಭಿವೃದ್ಧಿ ಕಂಡಿದೆ. ಕ್ಷೇತ್ರ ಬೆಳೆಸಲು ಊರವರ ಸಹಕಾರ ಅಗತ್ಯವಾಗಿದೆ. ಊರಿನವರು ಸಭಾಭವನದ ಸದುಪಯೋಗ ಪಡೆಯಬೇಕು ಎಂದ ಅವರು ಕುಂಬಳೆ, ಕಾಸರಕೋಡು, ಮಂಗಳೂರು ಮುಂತಾದ ದೂರದ ಊರಿನ ಭಕ್ತರು ಗೋಕರ್ಣದ ಅಶೋಕೆಯ ನಮ್ಮ ಮಠಕ್ಕೆ ಬರುವಾಗ ಬೆಳಕೆಯಲ್ಲಿ ಸ್ವಲ್ಪ ಹೊತ್ತು ಇದ್ದು ವಿಶ್ರಾಂತಿ ಪಡೆದು ಬರಲು ಅನುಕೂಲವಾಗಿದೆ. ಹವ್ಯಕ ಮಹಾಸಭಾದವರು ಸಮಾಜದ ಅಭಿವೃದ್ಧಿಗೆ ಹಲವು ಕನಸುಗಳನ್ನು ಇಟ್ಟುಕೊಂಡಿದ್ದು, ಅದೆಲ್ಲವೂ ಯಶಸ್ವಿಯಾಗಲಿದೆ. ಕ್ಷೇತ್ರ ಮುಂದಿನ ದಿನಗಳಲ್ಲಿ ಎಲ್ಲರ ಸಹಕಾರದಿಂದ ಪ್ರಸಿದ್ಧಿ ಪಡೆಯಲಿ ಎಂದು ಹಾರೈಸಿದರು.

ಮುಖ್ಯ ಅತಿಥಿಯಾಗಿದ್ದ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಮಾತನಾಡಿ, ಬೆಳಕೆಯಲ್ಲಿ ಹವ್ಯಕ ಮಹಾಸಭಾದವರು ಸುಸಜ್ಜಿತ ಸಭಾಭವನ ನಿರ್ಮಿಸಿರುವುದು ಶ್ಲಾಘನೀಯ. ನನ್ನ ಕ್ಷೇತ್ರದಲ್ಲಿ ಮೂರು ಕಡೆ ಹವ್ಯಕ ಸಭಾಭವನ ಆದಂತಾಗಿದೆ. ರಾಘವೇಶ್ವರ ಭಾರತೀ ಮಹಾಸ್ವಾಮೀಜಿಯವರ ಮೇಲೆ ಅಪಾರ ಗೌರವ, ಭಕ್ತಿ ಇಟ್ಟುಕೊಂಡಿದ್ದೇನೆ. ಹವ್ಯಕ ಸಮಾಜದ ಮೇಲೂ ಅಪಾರ ಪ್ರೀತಿ, ವಿಶ್ವಾಸ ಇದೆ. ಬೆಳಕೆ ದುರ್ಗಾಪರಮೇಶ್ವರಿ ದೇವಸ್ಥಾನದ ಅಭಿವೃದ್ಧಿಗೆ ಎಲ್ಲಾ ರೀತಿಯ ಸಹಾಯ ಸಹಕಾರ ಮಾಡುತ್ತೇನೆಂದರು. ಸ್ವಾಗತಿಸಿ ಪ್ರಸ್ತಾವಿಕ ಮಾತನಾಡಿದ ಹವ್ಯಕ ಮಹಾಸಭಾದ ಅಧ್ಯಕ್ಷ ಡಾ. ಗಿರಿಧರ ಕಜೆ ಅವರು, ಬೆಳಕೆ ಸುತ್ತಮುತ್ತಲ ಜನರಿಗೆ ಅನುಕೂಲವಾಗಲು ಮತ್ತು ಕ್ಷೇತ್ರ ಬೆಳೆಯುವುದಕ್ಕೋಸ್ಕರ ಸುಸಜ್ಜಿತ ಸಭಾಭವನ ನಿರ್ಮಿಸಲಾಗಿದೆ. ಇದನ್ನು ಸ್ಥಳೀಯರು ಉಪಯೋಗಿಸಿಕೊಳ್ಳಬೇಕು ಎಂದರು.

ರಾಮಚಂದ್ರಾಪುರ ಮಠದ ಶಾಸನ ತಂತ್ರ ಪ್ರಮುಖ ಮೋಹನ ಹೆಗಡೆ, ಯಕ್ಷಗಾನ ಕಲಾವಿದ ಕೊಂಡದಕುಳಿ ರಾಮಚಂದ್ರ ಹೆಗಡೆ ಮಾತನಾಡಿದರು. ಶ್ರೀಕಾಂತ ಹೆಗಡೆ, ಹರ್ಷ ಕೊಂಡದಕುಳಿ ನಿರೂಪಿಸಿದರು. ಕೊನೆಯಲ್ಲಿ ಹವ್ಯಕ ಮಹಾಸಭಾದ ಕಾರ್ಯದರ್ಶಿ ಪ್ರಶಾಂತಕುಮಾರ ವಂದಿಸಿದರು. ಕ್ಷೇತ್ರದಲ್ಲಿ ವರ್ಧಂತ್ಯುತ್ಸವೂ ನಡೆಯಿತು. ಬೆಳಿಗ್ಗೆ ಗಣಪತಿ ಪೂಜೆ, ಕಲಾವೃದ್ಧಿ ಹವನ, ತತ್ವ ಹವನ, ಕಲಶಾಭಿಷೇಕ ಮಧ್ಯಾಹ್ನ ಮಹಾಅನ್ನಸಂತರ್ಪಣೆ ನಡೆಯಿತು.

ನಾವೆಲ್ಲರೂ ಒಂದಾದರೆ ಮಾತ್ರ ಸನಾತನ ಧರ್ಮದ ರಕ್ಷಣೆ

ಬನವಾಸಿ: ದೇವಸ್ಥಾನಗಳು ಸಂಸ್ಕೃತಿ ಮತ್ತು ಸಂಸ್ಕಾರಗಳನ್ನು ಉಳಿಸಿ ಬೆಳೆಸುವ ಕೇಂದ್ರಗಳಾಗಬೇಕು ಎಂದು ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮದರ್ಶಿ ಡಾ. ಜಿ. ಭೀಮೇಶ್ವರ ಜೋಷಿ ಹೇಳಿದರು.



ಸಮೀಪದ ಹಾಡಲಗಿ ಗ್ರಾಮದ ಶ್ರೀ ಮಾರುತಿ ದೇವಸ್ಥಾನದ ಶಿಖರ ಕಳಸ ಪ್ರತಿಷ್ಠಾಪನೆ ನೆರವೇರಿಸಿ ಬಳಿಕ ನಡೆದ ಧರ್ಮಸಭೆಯ ಸಾನ್ನಿಧ್ಯವಹಿಸಿ ಮಾತನಾಡಿದ ಅವರು, ದೇವಸ್ಥಾನಗಳು ಸುಂದರವಾಗಿದ್ದರೆ ಊರು ಸುಭಿಕ್ಷವಾಗಿರುತ್ತದೆ. ಗ್ರಾಮದಲ್ಲಿದ್ದ ಸಾಧಾರಣ ಗುಡಿಯೊಂದು ಗ್ರಾಮಸ್ಥರ ಒಗ್ಗಟ್ಟಿನಿಂದ ದೇವಾಲಯವಾಗಿ ರೂಪಿಸಿರುವುದು ಶ್ಲಾಘನೀಯ. ಮನುಷ್ಯನ ಅಂತರಂಗ ಶುದ್ಧಿಯಾಗಿದ್ದರೆ ಜೀವನ ಸೌಂದರ್ಯಮಯವಾಗುತ್ತದೆ. ಆದ್ದರಿಂದ ಅಂತರಂಗದ ಶುದ್ಧತೆಗೆ ಪ್ರಾಮುಖ್ಯ ನೀಡಬೇಕು. ದೇವರ ಅನುಗ್ರಹದ ಪ್ರಭೆಯಿಂದ ನಮ್ಮಲ್ಲಿ ಅನೇಕ ಬದಲಾವಣೆ ಕಾಣುತ್ತೇವೆ. ಶ್ರದ್ಧಾ ಕೇಂದ್ರಗಳಿಗೆ ಭೇಟಿ ನೀಡಿದಾಗ ನಮ್ಮಲ್ಲಿ ಪರಿವರ್ತನೆಗಳಾಗುತ್ತವೆ. ನಮ್ಮ ಮನಸ್ಸು, ದೇಹ, ಪಂಚೇಂದ್ರಿಯಗಳು ಶುದ್ಧವಾಗುತ್ತವೆ. ಧರ್ಮದ ಸಾರವನ್ನು ಮುಂದಿನ ಪೀಳಿಗೆಗೆ ಒಯ್ಯುವ ಕಾರ್ಯ ಮಕ್ಕಳದ್ದಾಗಿರುವುದರಿಂದ ಮಕ್ಕಳನ್ನು ದೇವಸ್ಥಾನಗಳ ಕಡೆಗೆ ಆಕರ್ಷಿಸಬೇಕು. ನಮ್ಮ ಸಂಸ್ಕೃತಿ, ಆಚಾರ, ವಿಚಾರ, ಪರಂಪರೆಯನ್ನು ಮಕ್ಕಳಿಗೆ ತಿಳಿಸುವ ಕಾರ್ಯವನ್ನು ಮಾಡಬೇಕು ಎಂದರು.

ನಮ್ಮ ವ್ಯಕ್ತಿತ್ವವನ್ನು ಸರಿದಾರಿಗೆ ತರಲು ಅಂತರಂಗದ ಕನ್ನಡಿ ಅಗತ್ಯ, ಅದನ್ನು ತೆರೆಯುವಂತೆ ದೇವಸ್ಥಾನಗಳು ಪ್ರೇರೇಪಿಸುತ್ತವೆ. ಪ್ರತಿ ಮನೆಗಳಲ್ಲಿ ಗೋಮಾತೆಯನ್ನು ಸಾಕುವುದರ ಜೊತೆಗೆ ಗೋಮಾತೆಯನ್ನು ಪೂಜಿಸುವುದನ್ನು ರೂಢಿಸಿಕೊಳ್ಳಬೇಕು. ಸನಾತನ ಧರ್ಮದ ರಕ್ಷಣೆಯು ಕೇವಲ ಬಾಯಿ ಮಾತಿನಿಂದ ಆಗುವುದಿಲ್ಲ, ನಾವೆಲ್ಲರೂ ಒಂದಾದರೆ ಮಾತ್ರ ಸನಾತನ ಧರ್ಮದ ರಕ್ಷಣೆಯಾಗುತ್ತದೆ. ಶ್ರದ್ಧಾ ಕೇಂದ್ರಗಳನ್ನು ಮುಂದಿಟ್ಟುಕೊಂಡು ಹಿಂದೂಗಳು ಸಂಘಟನೆಯಾಗಬೇಕು. ಆಗ ಮಾತ್ರ. ಹಿಂದೂ ಸಮಾಜವು ಸರ್ವಾಂಗೀಣ ಅಭಿವೃದ್ಧಿ ಹೊಂದಲು ಸಾಧ್ಯವಿದೆ ಎಂದರು.


ಜಡೆ ಸಂಸ್ಥಾನ ಮಠದ ಶ್ರೀ ಡಾ. ಮಹಾಂತ ಮಹಾಸ್ವಾಮಿ ಆಶೀರ್ವಚನ ನೀಡಿ, ನಾಳಿನ ಪೀಳಿಗೆಗಾಗಿ ಒಳಿತನ್ನು ಉಳಿಸಿಕೊಡುವ ಅಗತ್ಯವಿದೆ. ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವ ಜವಾಬ್ದಾರಿಯನ್ನು ಎಲ್ಲರೂ ಅನುಸರಿಸಬೇಕು. ಧರ್ಮ ಕಾರ್ಯ ಗಳಿಂದ ಮನುಷ್ಯನಿಗೆ ಪರಿಪೂರ್ಣತೆ ಬರುತ್ತದೆ. ಭಕ್ತಿಯಿಂದಲೇ ಮನುಷ್ಯನಿಗೆ ಮುಕ್ತಿ ಪ್ರಾಪ್ತಿಯಾಗುತ್ತದೆ ಎಂದರು.

ಶಾಂತಪುರ ಸಂಸ್ಥಾನಮಠದ ಶ್ರೀ ಶಾಂತವೀರ ಶಿವಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿ, ಮೇಲು-ಕೀಳು ಎಂಬ ಭಾವನೆ ಮೂಡಿಸಿ ಭಾರತದಲ್ಲಿ ಸನಾತನ ಧರ್ಮವನ್ನು ಒಡೆಯುವ ಹುನ್ನಾರ ನಡೆಯುತ್ತಿದೆ. ಭಗವಂತನು ಎಲ್ಲರಲ್ಲಿಯೂ ಇದ್ದಾನೆ. ಹೀಗಾಗಿ ನಾವು ಜಾತಿ ಭೇದ ಮರೆತು ಸಹೋದರರಂತೆ ಬಾಳಬೇಕು. ಮಕ್ಕಳಲ್ಲಿ ಸಮಾಜದ ಮತ್ತು ರಾಷ್ಟ್ರದ ಬಗ್ಗೆ ಅರಿವು ಮೂಡಿಸಬೇಕು. ಸ್ವದೇಶಿ ವಸ್ತುಗಳನ್ನು ಹೆಚ್ಚಾಗಿ ಉಪಯೋಗ ಮಾಡಬೇಕು ಎಂದರು.

ಅಧ್ಯಕ್ಷತೆಯನ್ನು ಹಿರಿಯರಾದ ಮುಟ್ಟಪ್ಪ ನಾಯ್ಕ್ ವಹಿಸಿದ್ದರು. ಪ್ರಾಸ್ತಾವಿಕವಾಗಿ ಮಂಜುನಾಥ ಡಿ.ನಾಯ್ಕ್ ಮಾತನಾಡಿದರು. ಸಾವಿರಾರು ಭಕ್ತರು ಪಾಲ್ಗೊಂಡಿದ್ದರು. ಶಿಕ್ಷಕ ಮಹೇಂದ್ರ ಎಸ್.ಬಿ. ನಿರೂಪಿಸಿದರು. ವಾಗ್ದೇವಿ ಶ್ರೀಧರ ಶೆಟ್ಟಿ ಸಂಗಡಿಗರು ಪ್ರಾರ್ಥಿಸಿದರು. ಮಂಜುನಾಥ ಡಿ.ನಾಯ್ಕ್ ಸ್ವಾಗತಿಸಿ, ವಂದಿಸಿದರು.

ಗುಣಮಟ್ಟದ ಕುಶಲಗಾರರಿಗೆ ಸಮಾಜದಲ್ಲಿ ಹೆಚ್ಚಿನ ಬೇಡಿಕೆ

ಯಲ್ಲಾಪುರ: ಶ್ರದ್ಧೆಯಿಂದ ಕೆಲಸ ಮಾಡಿದರೆ ಗೌರವ, ಮಾನಸಿಕ ನೆಮ್ಮದಿ ಸಿಗುತ್ತದೆ ಎನ್ನುವುದಕ್ಕೆ ಸಮಾಜದಲ್ಲಿ ಉಪೇಕ್ಷೆಗೆ ಒಳಗಾದ ಕುಶಲಕರ್ಮಿಗಳನ್ನು ಮುಖ್ಯ ವಾಹಿನಿಗೆ ತಂದು ಗೌರವಿಸಿರುವುದು ನಿದರ್ಶನ ಎಂದು ವಿಶ್ವದರ್ಶನ ಶಿಕ್ಷಣ ಸಂಸ್ಥೆ ಅಧ್ಯಕ್ಷ ಹರಿಪ್ರಕಾಶ ಕೋಣೆಮನೆ ಹೇಳಿದರು.



ತಾಲೂಕಿನ ತೇಲಂಗಾರ ಮೈತ್ರಿ ಕಲಾಬಳಗದ ವತಿಯಿಂದ ಮೈತ್ರಿ ಸಭಾಭವನದಲ್ಲಿ ಕುಶಲಕಾರ್ಮಿಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದು ಕೆಲಸಗಾರರು ಇದ್ದು, ಆದರೆ, ಕೌಶಲ್ಯಪೂರ್ಣವಾಗಿ ಕೆಲಸ ಮಾಡುವವರು ವಿರಳವಾಗಿದ್ದಾರೆ. ಗುಣಮಟ್ಟದ ಕೆಲಸ ಮಾಡುವ ಕುಶಲಗಾರರಿಗೆ ಸಮಾಜದಲ್ಲಿ ಬೇಡಿಕೆ ಹೆಚ್ಚಿದೆ ಎಂದರು.

ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಆರ್. ಎಸ್. ಭಟ್ಟ ಮಾತನಾಡಿ, ಉದ್ಯೋಗ ಅರಸಿ ಬೇರೆಡೆ ಹೋಗುವ ಬದಲು ಸ್ಥಳೀಯ ಕುಶಲಕರ್ಮಿಗಳು ಸ್ಥಳೀಯವಾಗಿಯೇ ವಿಶ್ವಾಸಪೂರ್ಣವಾಗಿ ಕೆಲಸ ಮಾಡುವ ಮೂಲಕ ಜನರ ಪ್ರೀತಿಗೆ ಪಾತ್ರರಾಗಬೇಕು ಎಂದರು.

ಮೈತ್ರಿ ಕಲಾಬಳಗದ ಅಧ್ಯಕ್ಷ ಗಣಪತಿ ಕಂಚಿಪಾಲ್ ಅಧ್ಯಕ್ಷತೆ ವಹಿಸಿದ್ದರು.

ಸರ್ವೋದಯ ಶಿಕ್ಷಣ ಸಮಿತಿ ಉಪಾಧ್ಯಕ್ಷ ಟಿಸಿ ಗಾಂವ್ಕರ ಮಾತನಾಡಿ, ಹಣದ ಹಿಂದೆ ಬಿದ್ದು,ಅಪ್ರಮಾಣಿಕತೆ ರಾರಾಜಿಸುತ್ತಿರುವ ಸಂದರ್ಭದಲ್ಲಿ, ಪ್ರಾಮಾಣಿಕ ಕೆಲಸಗಾರರಿಗೆ ಯಾವಾಗಲೂ ಬೇಡಿಕೆ ಇದ್ದೇ ಇದೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಾಯ ಬಿದ್ರೆಮನೆ ಮಾತನಾಡಿ, ನಾವೊಬ್ಬರೇ ಬದುಕಿದರೆಸಾಲದು,ಅಸಹಾಯಕರಿಗೆ ನೆರವಾಗುವ ಮೂಲಕ ಬದುಕಿಸಿ ಬಾಳುವ ಧ್ಯೇಯ ನಮ್ಮದಾಗಬೇಕು ಎಂದರು.

ವಜ್ರಳ್ಳಿ ಸೊಸೈಟಿ ಅಧ್ಯಕ್ಷ ದತ್ತಾತ್ರಯ ಭಟ್ಟ ತಾರಗಾರ ಗ್ರಾಪಂ ನಿಕಟಪೂರ್ವ ಅಧ್ಯಕ್ಷ ಭಗೀರಥ ನಾಯ್ಕ ಮಾತನಾಡಿದರು.

ಕುಶಲಕರ್ಮಿಗಳಾದ ಗಿರೀಶ ಭಟ್ಟ ವಜ್ರಳ್ಳಿ, ನಾರಾಯಣ ಆಚಾರಿ, ನಾರಾಯಣ ಸರಲೆಗುಡ್ಡೆ, ತಮ್ಮಣ್ಣ ಹೊನ್ನೆಮನೆ, ಜನಾರ್ಧನ ಅಂಬ್ಗೆಮನೆ, ವಿಷ್ಣು ಜಾಂಬಳಿಬೇಣ, ಅರುಣ ಪರ್ತನಜಡ್ಡಿ, ಗಣೇಶ ಗೌಡ, ಗಿರೀಶ ವಡ್ಡರ್, ತಾರಾಕಾಂತ ಆಗೇರ, ಕೃಷ್ಣಾನಂದ ಸೂರ್ಲಮಕ್ಕಿ, ನಾಗರಾಜ ದೇಸಾಯಿ, ದಿಗಂಬರ ಬಂಡಾರಿ, ವಿಠ್ಠಲ್ ಗೌಡ ಕೊಂಬೆಮೂಲೆ, ಮಂಗಲಾ ನಾಯ್ಕ, ವೆಂಕಟೇಶ ಶೇಟ ಚಿಮನಳ್ಳಿ, ಮೊಕ್ಕ ಗೌಡ, ವೆಂಕಟ್ರಮಣ ಭಟ್ಟ , ನಾಗರಾಜ ಹಲಜಡ್ಡಿ, ಗಣೇಶ ಮರಾಮಕ್ಕಿ, ಗುಲಾಬಿ ಗೌಡ, ಸಂತಾನ್ ಫರ್ನಾಂಡೀಸ್, ಸದಾನಂದ ಮಹಾಲೆ, ರಾಘವೇಂದ್ರ ಬಾಳೆಜಡ್ಡಿ ಅವರನ್ನು ಗೌರವಿಸಲಾಯಿತು.

ಬಳಗದ ಪ್ರಮುಖರಾದ ಸತ್ಯನಾರಾಯಣ ಚಿಮನಳ್ಳಿ ಸ್ವಾಗತಿಸಿದರು. ನಾರಾಯಣ ಗಾಂವ್ಕರ ಗೋಡೆಪಾಲ ಪ್ರಸ್ತಾವಿಸಿದರು. ಮಂಜುನಾಥ ಮೂಲೆಮನೆ ನಿರೂಪಿಸಿದರು. ಜಿ.ಎನ್. ಅರುಣ ಕುಮಾರ, ವಿಶ್ವನಾಥ ಗಾಂವ್ಕರ, ಗಣೇಶ ಭಟ್ಟ, ನಾಗರಾಜ ಹೆಗಡೆ, ಪರಿಚಯಿಸಿದರು. ತಿಮ್ಮಣ್ಣ ಭಟ್ಟ ಮತ್ತಿಹಕ್ಲು ವಂದಿಸಿದರು.

ಕಿರುಸುದ್ದಿ

ಏರ್‌ಕ್ರಾಫ್ಟ್ ಹಾರಾಟದಿಂದ ಆತಂಕ ಬೇಡ: ಎಸ್‌ಪಿ

ಹಾವೇರಿ: ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಜೀಯೋಲಜಿಕಲ್ ಸರ್ವೇ ಆಫ್ ಇಂಡಿಯಾ ವತಿಯಿಂದ 2026 ಜು.31ರವರೆಗೆ ಏರ್‌ಕ್ರಾಫ್ಟ್ ಮೂಲಕ ಏರ್‌ಬಾರ್ನ್ ಜಿಯೋಫಿಸಿಕಲ್ ಸರ್ವೆ (Airborne Geophysical Survey) ಕಾರ್ಯ ನಡೆಯುತ್ತಿದ್ದು, ಈ ಹಿನ್ನಲೆಯಲ್ಲಿ ಕೆಲವು ದಿನಗಳಿಂದ ಹಾವೇರಿ ಜಿಲ್ಲೆಯ ಹಿರೇಕೆರೂರು, ಹಾನಗಲ್ ಹಾಗೂ ಶಿಗ್ಗಾವಿ ತಾಲೂಕಿನಲ್ಲಿ ಭೂಮೇಲ್ಮೈ ಇಂದ ಕಡಿಮೆ ಅಂತರದಲ್ಲಿ ಏರ್‌ಕ್ರಾಫ್ಟ್ ಹಾರಾಟ ಕಂಡು ಬರುತ್ತಿದ್ದು, ಇದು ಕೇವಲ ಜಿಯೋಫಿಸಿಕಲ್ ಸರ್ವೆ ಕಾರ್ಯಕ್ಕೆ ಸೀಮಿತವಾಗಿರುವುದರಿಂದ ಸಾರ್ವಜನಿಕರು ಭಯ/ಆತಂಕ ಪಡಬಾರದೆಂದು ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 5 ರಿಂದ ಜಿಲ್ಲಾ ಮಟ್ಟದ ಬೇಸಿಗೆ ಶಿಬಿರ

ಹಾವೇರಿ: ಬಾಲಭವನ ಸೊಸೈಟಿ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಜಿಲ್ಲಾ ಮಟ್ಟದ ಬೇಸಿಗೆ ಶಿಬಿರ ಮೇ 5 ರಿಂದ 15 ದಿನಗಳ ಕಾಲ ಹಾವೇರಿ ಜಿಲ್ಲಾ ಬಾಲಭವನ ಸೊಸೈಟಿಯಲ್ಲಿ ಜರುಗಲಿದೆ. ಐದರಿಂದ 16 ವರ್ಷದೊಳಗಿನ ಸರ್ಕಾರಿ ಶಾಲಾ ಮಕ್ಕಳು, ಗ್ರಾಮೀಣ ಪ್ರದೇಶದ ಹಾಗೂ ಸೌಲಭ್ಯ ವಂಚಿತ ಮಕ್ಕಳು, ವಿಶೇಷಚೇತನ ಮಕ್ಕಳು, ಬಾಲಕರ/ಬಾಲಕೀಯರ ಬಾಲ ಮಂದಿರದ ಮಕ್ಕಳು ಹಾಗೂ ಸರ್ಕಾರಿ ಸುಧಾರಣಾ ಸಂಸ್ಥೆಯ ಮಕ್ಕಳಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ಮೊದಲು ಬಂದ 60 ಮಕ್ಕಳಿಗೆ ಮಾತ್ರ ಪ್ರವೇಶವಿರುತ್ತದೆ.

ಶಿಬಿರದಲ್ಲಿ ಯೋಗ, ನೃತ್ಯ, ಚಿತ್ರಕಲೆ,ಕರಕುಶಲ ಕಲೆ, ಜೇಡಿಮಣ್ಣಿನ ಕಲೆ, ಕರಾಟೆ, ಧ್ಯಾನ, ನಾಟಕ, ಸಮೂಹ ಸಂಗೀತ , ಸಮೂಹ ನೃತ್ಯ, ಇತ್ಯಾದಿ ಚಟುವಟಿಕೆಗಳ ತರಬೇತಿ ನೀಸಲಾಗುವುದು. ದಿನಾಂಕ 04-05-2026ರ ಸಂಜೆ 5 ಗಂಟೆಯೊಳಗಾಗಿ ಮಕ್ಕಳ ಹೆಸರನ್ನು ನೊಂದಾಯಿಸಬೇಕು.ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಬಾಲಭವನ ಕಾರ್ಯಕ್ರಮ ಸಂಯೋಜಕ ಸೋಮನಗೌಡ ಗಾಳಿಗೌಡ್ರ ಮೊ.8970727355 ಹಾಗೂ ಕಚೇರಿ ಸಹಾಯಕ ರಾಮು ಪಾಟೀಲ ಮೊ.6361704213 ಅವರನ್ನು ಸಂಪರ್ಕಿಸಬಹುದೆಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಹಾಗೂ ಜಿಲ್ಲಾ ಬಾಲಭವನ ಸೊಸೈಟಿ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರು ಜನ ಆರೋಪಿಗಳ ಬಂಧನ

ಹಾವೇರಿ: ಜಿಲ್ಲೆಯ ಸವಣೂರು ತಾಲೂಕು ಕಳಲಕೊಂಡ ಗ್ರಾಮದ ಮನೆಯೊಂದರಲ್ಲಿ ನಡೆದಿದ್ದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಆರು ಜನ ಆರೋಪಿಗಳನ್ನು ಪೊಲೀಸರು ಪತ್ತೆ ಮಾಡಿ, ಆರೋಪಿಗಳಿಂದ 6.40ಲಕ್ಷ ರೂ.ಮೌಲ್ಯದ ಚಿನ್ನಾಭರಣವನ್ನು ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ತಿಳಿಸಿದ್ದಾರೆ.ಗದಗ ಜಿಲ್ಲೆ ಲಕ್ಷ್ಮೇಶ್ವರ ತಾಲೂಕು ಆದರಹಳ್ಳಿ ಗ್ರಾಮದ ಅರ್ಜುನ ಲಿಂಗಪ್ಪ ಪವಾರ (28), ಆಕಾಶ ಗೋಪಿ ಲಮಾಣಿ (19), ಡಿಸ್ಟ್ ಲಿಂಗಪ್ಪ ಪವಾರ (40), ಲಿಂಗಪ್ಪ ದದಬಾ ಪವಾರ (52), ಮಲ್ಲಿಕಾರ್ಜುನ ಗೋಪಿ ಲಮಾಣಿ (25) ಹಾಗೂ ಗಣೇಶ ಲಿಂಗಪ್ಪ ಪವಾರ (20) ಎಂಬ ಆರೋಪಿಗಳನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

6.40ಲಕ್ಷ ರೂ. ಮೌಲ್ಯದ ಚಿನ್ನಾಭರಣ ವಶ

ಘಟನೆ ವಿವರ: ಸವಣೂರ ಪೊಲೀಸ್ ಠಾಣೆಯ ವ್ಯಾಪ್ತಿಯ ಕಳಲಕೊಂಡ ಗ್ರಾಮದಲ್ಲಿ ಸಿದ್ಧಲಿಂಗಯ್ಯಸ್ವಾಮಿ ಹಿರೇಮಠ ಎಂಬುವವರ ಮನೆಯಲ್ಲಿ ಏ.14ರಂದು ರಾತ್ರಿ ವೇಳೆ ಮನೆಯ ಬಾಗಿಲಿಗೆ ಹಾಕಿದ್ದ ಕೀಲಿ ಮುರಿದು, ಒಳನುಗ್ಗಿ ತಿಜೋರಿಯಲ್ಲಿದ್ದ 12.40ಲಕ್ಷ ರೂ.ಮೌಲ್ಯದ 12 ತೊಲೆ ಬಂಗಾರದ ಆಭರಣ, 10,800 ರೂ.ಕಿಮ್ಮತ್ತಿನ ಬೆಳ್ಳಿ ಆಭರಣ, 5 ಲಕ್ಷ ರೂ.ನಗದು ಸೇರಿದಂತೆ ಬರೋಬ್ಬರಿ 17.50 ಲಕ್ಷ ರೂ.ಮೌಲ್ಯದ ಸ್ವತ್ತನ್ನು ಕಳ್ಳತನ ಮಾಡಿದ್ದರು. ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ಬಳಿಕ, ಪೊಲೀಸರು ಮೇಲಕಾರಿಗಳ ಮಾರ್ಗದರ್ಶನದಲ್ಲಿ ವಿಶೇಷ ತನಿಖಾ ತಂಡವನ್ನು ರಚಿಸಿ, ಕಾರ್ಯಾಚರಣೆ ನಡೆಸಿದ ಬಳಿಕ ಆರೋಪಿಗಳು ಸಿಕ್ಕಿ ಬಿದ್ದಿದ್ದಾರೆ.

ಬಂತ ಆರೋಪಿಗಳಿಂದ ಈ ಪ್ರಕರಣಕ್ಕೆ ಸಂಬಂಸಿದಂತೆ 6.40 ಲಕ್ಷ ರೂ.ಮೌಲ್ಯದ ಚಿನ್ನಾಭರಣ ವಶಪಡೆಸಿಕೊಳ್ಳಲಾಗಿದೆ.

ಇದೇ ರೀತಿ ಗುತ್ತಲ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದ ಕಳ್ಳತನ ಪ್ರಕರಣಕ್ಕೆ ಸಂಬಂಸಿದಂತೆ 1,70,000 ರೂ., ಲಕ್ಷ್ಮೇಶ್ವರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ 1,20,000 ರೂ.ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.



ಗದಗ: ಪೊಲೀಸ್ ಇಲಾಖೆಯ ಸೈಬರ್ ಕ್ರೈಂ ವಿಭಾಗದಲ್ಲಿ ಸೇವೆ ಸಲ್ಲಿಸಿದ ಚಂದ್ರಶೇಖರ ದೊಡ್ಡಮನಿ ಹೆಡ್ ಕಾನ್ಸ್‌ಟೇಬಲ್ ಆಗಿ ಪದೋನ್ನತಿ ಹೊಂದಿ ನರೇಗಲ್ಲ ಪೊಲೀಸ್ ಠಾಣೆಗೆ ವರ್ಗಾವಣೆಗೊಂಡ ಪ್ರಯುಕ್ತ ನಗರದ ಕ್ರೀಡಾ ಮಳಿಗೆಯಲ್ಲಿ ಜಿಲ್ಲಾ ಸೈಕ್ಲಿಂಗ್ ಅಸೋಸಿಯೇಷನ್ ವತಿಯಿಂದ ಸನ್ಮಾನಿಸಲಾಯಿತು. ಜಿ.ಎಂ. ನದಾಫ, ಮಲ್ಲಿಕಾರ್ಜುನ್ ಮೇಟಿ, ಅನಂತ ದೇಸಾಯಿ, ಶಿವಪುತ್ರಪ್ಪ ಕಣವಿ, ಸಿದ್ದು ಕಪ್ಪತ್ತನವರ, ರಿಯಾಜ್ ಅಹ್ಮದ್ ಗದಗ, ನಿಂಗಪ್ಪ ತೇರಿನಗಡ್ಡಿ, ಇಸ್ಮಾಯಿಲ್ ಕಾಗದ , ನಿಜಗುಣಿ ಕಂಬಳಿ, ನಜೀರ್ ಅಹ್ಮದ್ ಖುದಾವಂದ್ ಇತರರಿದ್ದರು.

ತಿಂಗಳೊಳಗೆ ಕನಕದಾಸರ ಮೂರ್ತಿ ಪ್ರತಿಷ್ಠಾಪನೆ

ಹಾವೇರಿ: ಹಾವೇರಿ ನಗರದ ಕಾಗಿನೇಲೆ ರಸ್ತೆ ಬಳಿಯ ಕನಕದಾಸ ವೃತ್ತವನ್ನು ಸಮಗ್ರ ಅಭಿವೃದ್ದಿಗೊಳಿಸಿ ತಿಂಗಳೊಳಗೆ ದಾಸ ಶ್ರೇಷ್ಠ ಕನಕದಾಸ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುವುದೆಂದು ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಎಸ್.ಎಫ್.ಎನ್ ಗಾಜೀಗೌಡರ ತಿಳಿಸಿದರು.

ಇಲ್ಲಿಯ ಪ್ರವಾಸ ಮಂದಿರದಲ್ಲಿ ಕಾಗಿನೇಲೆ ಶ್ರೀ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದ ಪುರಿ ಮಹಾಸ್ವಾಮಿಗಳಸಮ್ಮುಖದಲ್ಲಿನಡೆದಸಮಾಲೋಚನಾಸಭೆಯಲ್ಲಿ ಈ ವಿಷಯ ತಿಳಿಸಿದ ಅವರು, ವೃತ್ತದ ಅಭಿವೃದ್ದಿಗಾಗಿ ನಗರಾಭಿವೃದ್ಧಿ ಪ್ರಾಧಿಕಾರವು 25, ಲಕ್ಷ ರೂಪಾಯಿ ಖರ್ಚು ಮಾಡುತ್ತಿದೆ, ಇನ್ನು ಕನಕದಾಸರ ಮೂರ್ತಿಗಾಗಿ ನಗರದ ಗಣ್ಯರುಗಳು ಸಹಾಯಧನವನ್ನು ನೀಡುತ್ತಿದ್ದಾರೆಂದು ಸಭೆಗೆ ವಿವರಿಸಿದರು.

ಈಗಾಗಲೆ ಎಸ್ಟಾಂ ಅಧಿಕಾರಿಗಳು, ಲೋಕೊಪಯೋಗಿ ಇಲಾಖೆಯ ಅಧಿಕಾರಿಗಳು, ನಗರಸಭೆ ಅಧಿಕಾರಿಗಳು ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಇಂಜನಿಯರ್ ವೃತ್ತದ ಮತ್ತು ಮೂರ್ತಿ ಪ್ರತಿಷ್ಠಾಪನೆ ಸ್ಥಳನ್ನು ಪರಿಶೀಲನೆಯನ್ನು ಮಾಡಿದ್ದಾರೆ, ಮೂರ್ತಿ ಪ್ರತಿಷ್ಠಾಪನೆಗೆ ಶ್ರೀಕನಕದ ಕುರಿ ಮತ್ತು ಉಣ್ಣಿ ನೇಕಾರರ ಸಹಕಾರಿ ಸಂಘದವರು ಅಗತ್ಯ ಜಾಗವನ್ನು ಬಿಟ್ಟು ಕೊಡಲು ಒಪ್ಪಿಗೆ ನೀಡಿದ್ದಾರೆಂದಂದು ಎಸ್.ಎಫ್ ಎನ್ ಗಾಜೀಗೌಡರ ತಿಳಿಸಿದರು. ಈ ಸಮಾಲೋಚನ ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನಿರಲಗಿ, ಅಫರ್ ಜಿಲ್ಲಾಧಿಕಾರಿ ನಾಗರಾಜ, ಪತ್ರಕರ್ತ ನಿಂಗಪ್ಪ ಚಾವಡಿ ಉಪಸ್ಥಿತರಿದ್ದರು.



ಹಾವೇರಿ:ಇಲ್ಲಿಯ ಪ್ರವಾಸ ಮಂದಿರದಲ್ಲಿ ಕಾಗಿನೇಲೆ ಶ್ರೀ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದ ಪುರಿ ಮಹಾಸ್ವಾಮಿಗಳ ಸಮ್ಮುಖದಲ್ಲಿ ಸಮಾಲೋಚನಾ ಸಭೆ ಸಭೆ ನಡೆಯಿತು.

ಜಂಗಮ ವಟುಗಳಿಗೆ ಅಯ್ಯಾಚಾರ, ಭಕ್ತಾದಿಗಳಿಗೆ ಶಿವದೀಕ್ಷೆ

ಮಕ್ಕಳಿಗೆ ಧರ್ಮ ಸಂಸ್ಕಾರದ ಅರಿವು ಮೂಡಿಸಿ

ಗುತ್ತಲ: ತಂದೆ- ತಾಯಿಗಳು ಮಕ್ಕಳಿಗೆ ಜನ್ಮ ನೀಡಿದರೆ ಸಾಲದು ನಮ್ಮ ಧರ್ಮ ಪರಂರೆಯ ಆಚಾರ-ವಿಚಾರ, ಸಂಸ್ಕಾರ ಬಗ್ಗೆ ಅರಿವು ಮೂಡಿಸುವದರ ಜೊತೆಗೆ ಧರ್ಮ ಪರಿಪಾಲಕರಾಗಿಸಿ ಉತ್ತಮ ಜೀವನ ರೂಪಿಸಿಕೊಳ್ಳುವಂತೆ ಮಕ್ಕಳಿಗೆ ಮಾರ್ಗದರ್ಶನ ಮಾಡಬೇಕು ಎಂದು ನೆಗಳೂರಿನ ಸಂಸ್ಥಾನ ಹಿರೇಮಠದ ಪೂಜ್ಯಗುರು ಶಾಂತೇಶ್ವರ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸಮೀಪದ ನೆಗಳೂರ ಗ್ರಾಮದ ಸಂಸ್ಥಾನ ಹಿರೇಮಠದಲ್ಲಿ ಭಾನುವಾರ ಜಂಗಮ ವಟುಗಳಿಗೆ ಅಯ್ಯಾಚಾರ ಹಾಗೂ ಭಕ್ತಾದಿಗಳಿಗೆ ಶಿವದೀಕ್ಷೆ ನೇರವೇರಿಸಿ ಆಶೀರ್ವಚನ ನೀಡಿದರು.

ಎಲ್ಲಧರ್ಮ ಪರಂಪರೆಯಲ್ಲಿ ದೀಕ್ಷಾ ಸಂಸ್ಕಾರವಿದೆ, ಆದರೆ ವೀರಶೈವ ಧರ್ಮ ಪರಂಪರೆಯ ದೀಕ್ಷಾ ಸಂಸ್ಕಾರ ವೈಶಿಷ್ಟ ಪೂರ್ಣ ಹಾಗೂ ಸರಳವಾದ ನಿಯಮಗಳನ್ನು ಒಳಗೊಂಡಿದ್ದು ಸರ್ವ ಮನುಕುಲದವರಿಗೆ ಶಿವದೀಕ್ಷಾ ಸಂಸ್ಕಾರ ನೀಡುವ ಏಕೈಕ ಧರ್ಮವೆಂದರೇ ವೀರಶೈವ ಧರ್ಮವಾಗಿದೆ. ದೀಕ್ಷೆ ಸಂಸ್ಕಾರ ದಿಂದಜೀವನದಲ್ಲಿ ಬಹಳಷ್ಟು ಬದಲಾವಣೆಗಳಾಗುತ್ತವೆ, ಧರ್ಮಾರಚಣೆ ಮೂಲಕ ಲಿಂಗದೀಕ್ಷೆ ಪಡೆದುಕೊಂಡರೆ ದೇವತಾ ಮನುಷ್ಯರಾಗುತ್ತಾರೆ. ಅದೇ ರೀತಿ ಲಿಂಗದೀಕ್ಷೆ ಪಡೆದವರು ಇನ್ನು ಮುಂದೆ ಧರ್ಮ ಪರಿಪಾಲನೆ ಮಾಡಿಕೊಂಡು ಸನ್ಮಾರ್ಗದಲ್ಲಿ ನಡೆಯಬೇಕು. ವೀರಶೈವ ಸಂಪ್ರದಾಯದಂತೆ ಜಂಗಮವಟುಗಳಿಗೆ ನೀಡುವ ಶಿವದೀಕ್ಷೆ(ಅಯ್ಯಾಚಾರ) ಪದ್ಧತಿಯನ್ನುಜಂಗಮರು ಉಳಿಸಿಕೊಂಡು ಹೋಗಬೇಕು. ಪೂರ್ವಜರ ಆಚಾರ, ವಿಚಾರಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಧರ್ಮರಕ್ಷಣೆಗೆ ಮುಂದಾಗಬೇಕು ಎಂದರು.



▸ ದೀಕ್ಷಾರ್ಥಿಗಳ ಜೋಳಿಗೆಗಳಿಗೆ ಗ್ರಾಮಸ್ಥರು ಧಾನ್ಯ, ನಾಣ್ಯಗಳನ್ನು ಕಾಣಿಕೆ ರೂಪದಲ್ಲಿ ಜೋಳಿಗೆಗೆ ಹಾಕಿ ನಮಸ್ಕರಿಸಿದರು.

▸ ಶ್ರೀಮಠದ ವತಿಯಿಂದ ದೀಕ್ಷಾರ್ಥಿಗಳಿಗೆ ಪ್ರಮಾಣ ಪತ್ರ ನೀಡಿ ಶ್ರೀಗಳು ಆಶೀರ್ವದಿಸಲಾಯಿತು.

ಲಿಂಗಪೂಜೆ ಮಾಡುವ ಮೂಲಕ ತಮ್ಮ ಅಂತರಂಗವನ್ನು ಶುದ್ಧವಾಗಿಟ್ಟುಕೊಳ್ಳಬೇಕು. ಮಣ್ಣಿಗೆ ಸಂಸ್ಕಾರ ಕೊಟ್ಟಲ್ಲಿ ಮಡಿಕೆಯಾಗಿ, ಲೋಹಕ್ಕೆ ಸಂಸ್ಕಾರ ನೀಡಿದ್ದಲ್ಲಿ ಆಭರಣವಾಗಿ, ನೀರಿಗೆ ಸಂಸ್ಕಾರ ನೀಡಿದಲ್ಲಿ ತೀರ್ಥವಾಗುತ್ತದೆ. ಹಾಗೆಯೇ ತಾಯಂದಿರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಬೇಕು. ಮನೆಯಲ್ಲಿ ಮನದಲ್ಲಿ ಜ್ಯೋತಿ ಬೆಳಗುವಂತಾಗಬೇಕು. ಬದುಕಿನಲ್ಲಿ ಸತ್ಯಶುದ್ಧ ಕಾಯಕ ಇರಬೇಕು ಎಂದರು.

ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ 16 ಜನಜಂಗಮ ವಟುಗಳು ಶ್ರೀಗಳಿಂದ ದೀಕ್ಷಾ ಸಂಸ್ಕಾರ ಹೊಂದಿ ಮಂತ್ರೋಪದೇಶ ಪಡೆದರು. ನಂತರಗ್ರಾಮದ ಪ್ರಮುಖ ಬೀದಿಗಳಲ್ಲಿ ದೀಕ್ಷಾರ್ಥಿಗಳು ಮೇರವಣಿಗೆಯ ಮೂಲಕ ಸಾಮೂಹಿಕ ಬೀಕ್ಷಾಟನೆಗೆ ತೆರಳಿ ಮರಳಿ ಶ್ರೀಮಠಕ್ಕೆ ತಲುಪಿದರು.

ಈ ಸಂದರ್ಭದಲ್ಲಿಗ್ರಾಮಸ್ಥರು ದೀಕ್ಷಾರ್ಥಿಗಳ ಜೋಳಿಗೆಗಳಿಗೆ ಧಾನ್ಯ ನಾಣ್ಯಗಳನ್ನು ಕಾಣಿಕೆರೂಪದಲ್ಲಿ ಜೋಳಿಗೆಗೆ ಹಾಕಿ ನಮಸ್ಕರಿಸಿದರು. ನಂತರ ಶ್ರೀಮಠದ ವತಿಯಿಂದ ದೀಕ್ಷಾರ್ಥಿಗಳಿಗೆ ಪ್ರಮಾಣ ಪತ್ರ ನೀಡಿ ಶ್ರೀಗಳು ಆಶೀರ್ವದಿಸಿದರು.

ಇದಕ್ಕೂ ಪೂರ್ವದಲ್ಲಿ ಬೆಳಗಿನ ಜಾವದಲ್ಲಿ ವಟುಗಳಿಗೆ ಹರಿದ್ರಾಲೇಪನ ಮಂಗಲಸ್ನಾನ, ಪುಣ್ಯಾಹ ಸೇರಿದಂತೆ ವಿವಿಧಧಾರ್ಮಿಕ ಪೂಜಾ ವಿಧಿ ವಿಧಾನಗಳು ಜರುಗಿದವು. ಈ ಸಂದರ್ಭದಲ್ಲಿ ಫಕ್ಕೀರಯ್ಯ ಶಾಸ್ತ್ರೀ ತಾರೀಕೊಪ್ಪ, ಬಸಲಿಂಗಯ್ಯ ಶಾಸ್ತ್ರೀ ಹಿರೇಮಠ, ವೀರೇಶ ಶಾಸ್ತ್ರಿ ಹಿರೇಮಠ, ಫಕ್ಕೀರಯ್ಯ ಹಿರೇಮಠ, ಗುರುಶಾಂತಸ್ವಾಮಿ ಹಿರೇಮಠ ಸೇರಿದಂತೆ ಹಾವೇರಿ, ದಾವಣಗೆರೆ, ಶಿವಮೊಗ್ಗ, ಗದಗಜಿಲ್ಲೆಯ ನಾನಾ ಭಾಗಗಳಿಂದ ಭಕ್ತಾಧಿಗಳು ಆಗಮಿಸಿದ್ದರು.

ಕಾಯಕದಲ್ಲಿ ದೇವರ ಕಂಡ ಶರಣರು

ಹಾವೇರಿ: ಸ್ವಾಭಿಮಾನದ ಕಾಯಕದೊಂದಿಗೆ ಸ್ವಾನುಭಾವದ ಬದುಕು ರೂಪಿಸುವ ಮೂಲಕ ಶರಣ ಸಂಸ್ಕೃತಿಯೇ ಶ್ರಮ ಸಂಸ್ಕೃತಿ ಎಂದು ಸಾರಿದ ಹೆಗ್ಗಳಿಕೆ ಅನುಭವ ಮಂಟಪಕ್ಕೆ ಸಲ್ಲುತ್ತದೆ ಎಂದು ಹೊಸಮಠದ ಶ್ರೀ ಶಾಂತಲಿಂಗ ಸ್ವಾಮೀಜಿ ಹೇಳಿದರು.

ಶನಿವಾರ ಸಂಜೆ ನಡೆದ ಬಸವಕೇಂದ್ರ ಶ್ರೀ ಹೊಸಮಠದಲ್ಲಿ ಜರುಗಿದ ಶರಣ ಸಂಗಮ ಹಾಗೂ ಕಾಯಕ ದಿನಾಚರಣೆ ಕಾರ್ಯಕ್ರಮದಲ್ಲಿ ಸಾನ್ನಿಧ್ಯ

ವಹಿಸಿ ಮಾತನಾಡಿದ ಅವರು, ಶ್ರಮಜೀವಿಗಳ ತ್ಯಾಗ, ಸಮರ್ಪಣೆ ಮತ್ತು ಸಮಾಜ ನಿರ್ಮಾಣದಲ್ಲಿ ಅವರನ್ನು ಗೌರವಿಸುವ ದಿನವಾಗಿದೆ, ಶ್ರಮಿಕ ವರ್ಗವನ್ನು ಗೌರವಿಸಿದ ಬಸವಾದಿ ಪ್ರಮಥರು ಕಾಯಕ ಮತ್ತು ದಾಸೋಹ ಸಿದ್ಧಾಂತವನ್ನು ಸಾರಿದರು. ಹೊಟ್ಟೆ ಹಸಿವು ಬದುಕಿನಲ್ಲಿ ಅನೇಕ ಪಾಠ ಕಲಿಸುತ್ತದೆ. ಸತ್ಯ ಶುದ್ಧ ಕಾಯಕ ಜೀವನವನ್ನು ಸದಾ ಕಾಯುತ್ತದೆ ಎಂಬುದನ್ನು ತಿಳಿಸಿಕೊಟ್ಟರು. ಕಾಯಕದೊಳು ನಿರತರಾಗಿ ಅಲ್ಲಿಯೇ ದೇವರನ್ನು ಕಾಣುವ ಶರಣರ ನಡೆ ಸದಾ ಸ್ಫೂರ್ತಿಯ ಚಿಲುಮೆ ಎಂದರು.

ದಲಿತ ಮುಖಂಡ ಉಡಚಪ್ಪ ಮಾಳಗಿ ಮಾತನಾಡಿ, ಕಾರ್ಮಿಕರು ದೇಶದ ಪ್ರಗತಿಗೆ ಶ್ರಮಿಸುತ್ತಿರುವರು.ಸರ್ಕಾರ ಜಾರಿಗೊಳಿಸಿರುವ ಯೋಜನೆಗಳನ್ನು ಸದ್ಬಳಕೆ ಮಾಡಿಕೊಂಡು ತಾವೂ ಪ್ರಗತಿಯತ್ತ ಸಾಗಬೇಕು ಎಂದರು.

ಸಾಮಾಜಿಕ ಹೋರಾಟಗಾರ ಪರಶುರಾಮ ಹರ್ಲಾಪುರ ಅಂಬ್ಯುಲೆನ್ಸ್ ವಾಹನಗಳ ಸಂಘದ ಅಧ್ಯಕ್ಷ ಮಾರುತಿ ಬಣಕಾರ ಮಾತನಾಡಿದರು.

ಇದೇ ಸಂದರ್ಭದಲ್ಲಿ ಪಾದರಕ್ಷೆ ಕಾಯಕಯೋಗಿ ಯಲ್ಲಪ್ಪ ಉಕ್ಕುಂದ, ಕಟ್ಟಡ ನಿರ್ಮಾಣ ಕಾಯಕಯೋಗಿ ಶಿವಪ್ಪ ಹಂಚಿ, ಮಹಿಳಾ ಕಾಯಕಯೋಗಿ ಸುಧಾ ಕಲಾಟಿ, ಪತ್ರಿಕಾ ವಿತರಣಾ ಕಾಯಕಯೋಗಿ ಗೂಳಪ್ಪ ಹಳಕೊಪ್ಪ, ಪೌರ ಕಾರ್ಮಿಕ ಕಾಯಕಯೋಗಿ ದುರ್ಗೇಶ ತಿಮ್ಮಾಪುರ, ರವಿ ಭೂದಗಟ್ಟಿ, ಶ್ರೀಮಠದ ಕಾಯಕಯೋಗಿ ಲಕ್ಷ್ಮಣ ಈಳಗೇರ ಅವರನ್ನು ಗೌರವಿಸಲಾಯಿತು. ಕಮಲಾ ಬುಕ್ಕಶೆಟ್ಟಿ, ರಕ್ಷಿತಾ ಮಡಿವಾಳರ, ಶಶಿಕಲಾ ಬೈಲಣ್ಣನವರ, ಶಾಂತಕ್ಕ ಶಿರೂರ, ಸುಜ್ಞಾನದೇವಿ ಮಠದ,ಶಿವಶರಣಮ್ಮ ಲಕ್ಕಣ್ಣನವರ, ಮಂಜುಳಾ ಕಡ್ಡಿ, ಶಾಂತಾ ಮಡಿವಾಳರ, ಮಲ್ಲೇಶ ಎಚ್ ಉಪಸ್ಥಿತರಿದ್ದರು. ನಿಂಗಪ್ಪ ಆರೇರ ನಿರೂಪಿಸಿದರು. ಗೂಳಪ್ಪ ಅರಳಿಕಟ್ಟಿ ವಂದಿಸಿದರು.



ನಿತ್ಯ ಪೂಜೆ, ಪುನಸ್ಕಾರದಿಂದ ಜನ್ಮ ಸಾರ್ಥಕ

ರಾಣೇಬೆನ್ನೂರ: ಪ್ರತಿಯೊಬ್ಬರೂ ಗುರುವಿನ ಸ್ಥಾನ ದೊಡ್ಡದು ಎಂಬ ಪರಮ ಸತ್ಯವನ್ನು ಜೀವನದಲ್ಲಿ ಅಳವಡಿಸಿಕೊಂಡು ಸಾಗಿದರೆ, ಮಾನವ ಜನ್ಮವೂ ಪರಿಪೂರ್ಣ ಸಾರ್ಥಕವಾಗುವುದು ಎಂದು ಹೊನ್ನಾಳಿ ಹಿರೇಕಲ್ಮಠದ ಶ್ರೀ ಒಡೆಯರ ಚೆನ್ನಮಲ್ಲಿಕಾರ್ಜುನ ಶಿವಾಚಾರ್ಯರು ನುಡಿದರು.

ಇಲ್ಲಿನಮೃತ್ಯುಂಜಯನಗರದಹೊನ್ನಾಳಿ ಸಂಸ್ಕೃತಿ ಪ್ರಸಾರ ಪರಿಷತ್ತು ಸಭಾಭವನದಲ್ಲಿ ನಡೆದ,ಆಗಿ ಹುಣ್ಣಿಮೆ 105ನೇ ಮಾಸಿಕ ಧರ್ಮ ಜಾಗೃತಿ ಸಮಾರಂಭದ ದಿವ್ಯ ಸಾನ್ನಿಧ್ಯವಹಿಸಿ ಮಾತನಾಡಿದರು.

ಭಾರತೀಯ ಪರಂಪರೆ ಧಾರ್ಮಿಕ ಪರಂಪರೆ ಮನುಷ್ಯನ ಶಾಂತಿ ಮತ್ತು ನೆಮ್ಮದಿಗೆ ನಿತ್ಯ ಪೂಜೆ ಪುನಸ್ಕಾರ ಪಾಠ, ಪ್ರವಚನ ಮತ್ತು ಗುರು ಬೋಧನೆಗಳು ಮೇಲಿಂದ ಮೇಲೆ ನಡೆಯುತ್ತಿರುವಾಗ ಮಾತ್ರ ಮಾನವ ಜನ್ಮವೂ ಪರಿಪೂರ್ಣ ಸಾರ್ಥಕತೆ ಪಡೆಯಲಿದೆ ಎಂದು ಶ್ರೀಗಳು ಭಕ್ತ ಸಮುದಾಯಕ್ಕೆ ಸಲಹೆ ನೀಡಿದರು.

ಹಾವೇರಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಉಪನ್ಯಾಸಕ ಡಾ.ಕಾಂತೇಶ್ ಅಂಬಿಗೇರ ಅವರು, ನಮ್ಮ ಚಿತ್ತ- ಗುರು ಭಕ್ತಿಯತ್ತ ವಿಷಯ ಕುರಿತು ಉಪನ್ಯಾಸ ನೀಡಿದರು.

ಪರಮೇಶಪ್ಪ ಗೂಳಣ್ಣನವರ, ಡಾ. ಶಿವಾನಂದ ಹಿತ್ತಲಮನಿ, ಬಸವರಾಜ ಪಟ್ಟಣಶೆಟ್ಟಿ, ಉಮೇಶ್ ಗುಂಡಗಟ್ಟಿ, ಎಸ್. ಎನ್. ಜಂಗಳೇರ, ಬಿದ್ದಾಡಪ್ಪ ಚಕ್ರಸಾಲಿ, ಜಗದೀಶ್ ಮಳೆಮಠ, ಮತ್ತಿತರರು ಉಪಸ್ಥಿತರಿದ್ದರು.

ಸ್ಥಳೀಯ ಕಲಾವಿದರು ಸಂಗೀತ ಸೇವೆ ಸಲ್ಲಿಸಿದರು. ವಿ.ವಿ. ಹರಪನಹಳ್ಳಿ ಸ್ವಾಗತಿಸಿ ಅಮೃತ ಗೌಡ ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಸ್ತೂರಿ ಪಾಟೀಲ ನಿರೂಪಿಸಿ, ಎಂ ಕೆ ಹಾಲ್ ಸಿದ್ದಯ್ಯ ಶಾಸ್ತ್ರಿಗಳು ವಂದಿಸಿದರು. ಅಕ್ಕನ ಜಾಗೃತಿ ಬಳಗ ದಾನೇಶ್ವರಿ ಜಾಗೃತಿ ಬಳಗವು ಸಹಯೋಗ ನೀಡಿದ್ದರು.



ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆ: ಶೇ 91.08ರಷ್ಟು ಮತದಾನ

ರಟ್ಟೀಹಳ್ಳಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಟ್ಟಿಹಳ್ಳಿ ತಾಲೂಕು ಪದಾಧಿಕಾರಿಗಳ ಆಯ್ಕೆಗಾಗಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಶೇ 91.08ರಷ್ಟು ಮತದಾನವಾಗಿದೆ. ರಟ್ಟೀಹಳ್ಳಿ ತಾಲೂಕಿನ 370 ಪ್ರಾಥಮಿಕ ಶಾಲಾ ಶಿಕ್ಷಕ-ಶಿಕ್ಷಕಿಯರು ಮತದಾನದ ಹಕ್ಕನ್ನು ಪಡೆದಿದ್ದಾರೆ. ಒಟ್ಟು 8 ಜನ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಾಗಿದ್ದು ಚುನಾವಣಾಕಣದಲ್ಲಿ 18 ಜನ ಸ್ಪರ್ಧಿಗಳು ಭಾಗವಹಿಸಿದ್ದಾರೆ.

ಚುನಾವಣಾಕಣದಲ್ಲಿ 14 ಜನ ಪುರುಷ ಅಭ್ಯರ್ಥಿಗಳು ಸ್ಪರ್ಧಿಸಿದ್ದು 6 ಜನರ ಆಯ್ಕೆ ಮಾಡಬೇಕಾಗಿದೆ. ಮಹಿಳೆಯರ ವಿಭಾಗದಲ್ಲಿ 2 ಅಭ್ಯರ್ಥಿಗಳ ಆಯ್ಕೆಗಾಗಿ 4 ಮಹಿಳೆಯರು ಸ್ಪರ್ಧಾಕಣದಲ್ಲಿ ಇದ್ದರು.

ಪಟ್ಟಣದ ಎಂ.ಕೆ.ಬಿ.ಎಸ್. ಶಾಲೆಯಲ್ಲಿ ಸ್ಥಾಪಿಸಲಾಗಿದ್ದ ಮತಗಟ್ಟೆಯಲ್ಲಿ ಬೆಳಿಗ್ಗೆ 8.30 ರಿಂದ ಶಿಕ್ಷಕ-ಶಿಕ್ಷಕಿಯರು ಆಗಮಿಸಿ ಮತದಾನ ಮಾಡುತ್ತಿರುವುದು ಕಂಡು ಬಂದಿತು. ಬಿಸಿಲು ಏರುತ್ತಿದ್ದಂತೆ ಮತದಾನ ನೀರಸವಾದರೂ ಸಾಮಾಜಿಕ ಜಾಲತಾಣದಲ್ಲಿ ಶಿಕ್ಷಕರ ಕೋರಿಕೆಯ ಮೇರೆಗೆ ಆಗಮಿಸಿ ಮತದಾನ ಮಾಡುತ್ತಿದ್ದರು.

ಪತ್ರಿಕೆಯಲ್ಲಿ ಬೆಂಗಳೂರಿನ ಸಂಘಕ್ಕೆ ಚುನಾವಣೆ ನಡೆಸಲು ಕೋರ್ಟ ತಡೆಯಾಜ್ಞೆ ನೀಡಿದ ವರದಿ ಪ್ರಕಟವಾಗಿದ್ದ ಕಾರಣ ಗೊಂದಲ ಉಂಟಾಗಬಾರದೆಂದು ಶಿಕ್ಷಕರು ವಿಷಯವನ್ನು ತಿಳಿದುಕೊಂಡು ಅದು ಕೇವಲ ಬೆಂಗಳೂರಿನ ಮತ್ತು ಕೋರ್ಟಗೆ ದಾವೆ ಹೂಡಿದ ಸಂಬಂಧಿಸಿದ ಮತಕ್ಷೇತ್ರಕ್ಕೆ ಮಾತ್ರ ತಡೆಯಾಜ್ಞೆ ಎಂದು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿದರು. ಇದರಿಂದ ಅನೇಕ ಶಿಕ್ಷಕರು ಮತದಾನಕ್ಕೆ ಮತಗಟ್ಟೆಗೆ ಬಂದರು.

ಅಲ್ಲಲ್ಲಿಚರ್ಚೆ ನಡೆಯಿತು.ಆದರೂ ಮತದಾನ ಪ್ರಕ್ರಿಯೆ ಸಾಂಗವಾಗಿ ನಡೆಯಿತು. ಎರಡು ಬಣಗಳ ನಡುವೆತೀವ್ರ ಪೈಪೋಟಿಇದ್ದರೂಎಲ್ಲರೂಒಂದುಗೂಡಿ ಮತದಾನ ಪ್ರಕ್ರಿಯೆ ಶಾಂತವಾಗಿ ಭಾಗವಹಿಸಿ ಪೂರೈಸಿದರು. ಮತಗಟ್ಟೆ ಅಧಿಕಾರಿಗಳಾಗಿ ಎಂ.ಎಸ್.ಬ್ಯಾಡಗಿ ಮತ್ತು ಡಿ.ಎಸ್.ಹೊಸಮನಿ ಕಾರ್ಯನಿರ್ವಹಿಸಿದರು.



ಚೆಸ್ ಪಂದ್ಯಾವಳಿ: ಆಯಾನ್ ಸಾಧನೆ

ರಾಣೇಬೆನ್ನೂರ: ಇಲ್ಲಿನ ವಿದ್ಯಾನಿಕೇತನ ಖನ್ನೂರ ಪ್ರಾಥಮಿಕ ಶಾಲೆಯ 10 ವರ್ಷದ ವಿದ್ಯಾರ್ಥಿ ಆಯಾನ್ ಕರ್ನಾಟಕ ರಾಜ್ಯ ಚೆಸ್ ಪಂದ್ಯಾವಳಿಯಲ್ಲಿ ಚಾಂಪಿಯನ್‌ಶಿಪ್-2026 ಸಾಧನೆ ಮೆರೆದು ಕೀರ್ತಿ ತಂದಿದ್ದಾನೆ

ಖನ್ನೂರ ವಿದ್ಯಾನಿಕೇತನ ಶಾಲೆಯ ಸಿಬಿಎಸ್‌ಇ ವಿದ್ಯಾರ್ಥಿಯಾಗಿದ್ದು ಅತೀ ಕಿರಿಯ ವಯಸ್ಸಿನಲ್ಲಿ ತನ್ನ ಪ್ರತಿಭೆ ಮೆರೆದು ವಸ್ತು ಟೂರ್ನಿಯಲ್ಲಿ ಅದ್ಭುತ ಪ್ರದರ್ಶನ ನೀಡಿ ಒಟ್ಟು 9 ಪಂದ್ಯಗಳಲ್ಲಿ 8 ಅಂಕಗಳನ್ನು ಗಳಿಸಿ (7 ಜಯಗಳು, 2 ಡ್ರಾ) ಸೋಲಿಲ್ಲದೆ ಪ್ರಬುದ್ಧತೆ ಮೆರೆದಿದ್ದಾರೆ ಆಯಾನ್.

ಅವರ ತೀಕ್ಷ್ಣ ತಂತ್ರಜ್ಞಾನ, ಸ್ಥಿರ ಮನೋಭಾವ ಮತ್ತು ಒತ್ತಡದ ಸಂದರ್ಭಗಳಲ್ಲಿ ಅನುಸರಿಸಿದ ಶಾಂತ ಆಟ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಇದೆ ಸ್ಪರ್ಧೆಯಲ್ಲಿ ಕೃಷ್ಣ ದ್ವಿತೀಯ ಸ್ಥಾನ , ಪಡೆದುಕೊಂಡರೆ, ಸುದರ್ಶನ ಭಟ್ ತೃತೀಯ ಹಾಗೂ ಸಿದ್ದಾಂತ್ ಪೂಂಜಾ ಚತುರ್ಥ ಸ್ಥಾನವನ್ನು ಗಳಿಸಿದ್ದಾರೆ.

ಆಯಾನ್ ಅವರ ಈ ಐತಿಹಾಸಿಕ ಗೆಲುವು ಕರ್ನಾಟಕದ ಚೆಸ್ ವಲಯದಲ್ಲಿ ಸಂಭ್ರಮವನ್ನುಂಟುಮಾಡಿದ್ದು, ಭವಿಷ್ಯದಲ್ಲಿ ರಾಷ್ಟ-ಅಂತರಾಷ್ಟೀಯ ಮತ್ತಷ್ಟು ಸಾಧನೆ ಮಾಡಲೆಂದು ಶಿಕ್ಷಣ ಸಂಸ್ಥೆಯ ಮುಖ್ಯೋಪಾಧ್ಯಾಯರು ಮತ್ತು ಆಡಳಿತ ಮಂಡಳಿ, ಸಹಶಿಕ್ಷಕರು ಮತ್ತು ಸಿಬ್ಬಂದಿ ಹಾರ್ದಿಕವಾಗಿ ಅಭಿನಂದಿಸಿ, ಶುಭ ಹಾರೈಸಿದ್ದಾರೆ.



ಸಮಾಜದ ಅನಿಷ್ಟ ತೊಡೆಯಲು ಬುದ್ಧನ ವಿಚಾರಧಾರೆ ಅಗತ್ಯ

ಹಾವೇರಿ: ಸರ್ಕಾರವು ಸದುದ್ದೇಶದಿಂದ ಜಯಂತಿಗಳನ್ನು ಆಚರಿಸುತ್ತಿದೆ. ಆದರೆ ಇವು ಕೇವಲ ಒಂದು ಜಾತಿಗೆ ಸೀಮಿತವಾಗದೆ ಎಲ್ಲರೂ ಒಗ್ಗೂಡಿ ಆಚರಿಸಿದಾಗ ಮಾತ್ರ ಬುದ್ಧನ ಅಹಿಂಸೆ ಮತ್ತು ಶಾಂತಿ ತತ್ವಗಳು ಸಮಾಜಕ್ಕೆ ತಲುಪಲು ಸಾಧ್ಯ ಎಂದು ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್. ಎನ್. ಗಾಜಿಗೌಡ್ರ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ಶುಕ್ರವಾರ ಜಿಲ್ಲಾ ಆಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಬುದ್ಧ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಇಂದಿನ ಕಾಲಘಟ್ಟದಲ್ಲಿ ಜಯಂತಿಗಳು ಕೇವಲ ಸಾಂಕೇತಿಕವಾಗುತ್ತಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರು. ಬುದ್ಧ ಯಾರೋ ಒಬ್ಬರಿಗೆ ಸೇರಿದವರಲ್ಲ ಅವರು ಇಡೀ ಜಗತ್ತಿಗೆ ದಾರಿದೀಪ. ಜಾತಿ-ಮತಗಳ



ಬೇಲಿ ಹಾಕಿ ಮಹಾಪುರುಷರನ್ನು ಹಂಚಿಕೊಳ್ಳುವ ಬದಲು ಅವರ ವಿಚಾರಧಾರೆಗಳನ್ನು ಅರಿಯುವತ್ತ ಯುವ ಪೀಳಿಗೆ ಮತ್ತು ವಿದ್ಯಾರ್ಥಿಗಳು ಗಮನಹರಿಸಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅಪರ ಜಿಲ್ಲಾಧಿಕಾರಿ ನಾಗರಾಜ್ ಎಲ್. ಅಜಂತಾ, ಎಲ್ಲೋರಾದಂತಹ ಗುಹೆಗಳು ಬುದ್ಧನ ಇತಿಹಾಸಕ್ಕೆ ಜೀವಂತ ಸಾಕ್ಷಿಯಾಗಿವೆ. ಅಂದಿನ ಕಾಲದ ಯಾಗ, ಯಜ್ಞಗಳ ಹೆಸರಿನಲ್ಲಿ ನಡೆಯುತ್ತಿದ್ದ ಹಿಂಸೆಯನ್ನು ತಡೆಯಲು ಬುದ್ಧ ಅಹಿಂಸೆಯ ಮಾರ್ಗ ತೋರಿದರು. ರೋಹಿಣಿ ನದಿಯ ನೀರಿಗಾಗಿ ನಡೆದ ಸಂಘರ್ಷದ ವೇಳೆ ಸಿದ್ಧಾರ್ಥನು ತೋರಿದ ಶಾಂತಿ ಮತ್ತು ಸೋದರತೆಯ ಗುಣಗಳೇ ಇಂದು ನಮ್ಮ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಜಲನೀತಿ ರೂಪಿಸಲು ಪ್ರೇರಣೆಯಾದವು. ಬುದ್ಧ, ಬಸವ ಮತ್ತು ಅಂಬೇಡ್ಕರ್ ಈ ಮೂವರು ಮಹಾನ್ ಮಾನವತಾವಾದಿಗಳು ಸಮಾಜದ ಕಂದಾಚಾರಗಳನ್ನು ತೊಡೆದು ಹಾಕಿದ ಆಶಾಕಿರಣಗಳು ಎಂದು ಬಣ್ಣಿಸಿದರು. ಹಾಗೆಯೇ ಬೌದ್ಧ ಧರ್ಮದ ಅಹಿಂಸಾ ತತ್ವ, ಸಹೋದರತೆ ಹಾಗೂ ಮಾನವೀಯ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ತಿಳಿಸಿದರು. ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮಹನೀಯರ ವಿಚಾರಧಾರೆಗಳನ್ನು ತಿಳಿದುಕೊಳ್ಳಬೇಕು, ಬುದ್ಧನ ತತ್ವಗಳು ಸಮಾಜದಲ್ಲಿ ಶಾಂತಿ ಮತ್ತು ಸಮಾನತೆಯನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದರು.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿ ಡಾ.ಟಿ.ಎಂ. ಭಾಸ್ಕರ ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮವು ನಾಡಗೀತೆಯೊಂದಿಗೆ ಆರಂಭವಾಗಿ ವಂದನಾರ್ಪಣೆಯೊಂದಿಗೆ ಮುಕ್ತಾಯ ಗೊಂಡಿತು. ಕಾರ್ಯಕ್ರಮ ದಲ್ಲಿ ತಹಶೀಲ್ದಾರ ಶರಣಮ್ಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ ಸೇರಿದಂತೆ ಸಮುದಾಯದ ಮುಖಂಡರು ಹಲವು ಗಣ್ಯರು ಉಪಸ್ಥಿತರಿದ್ದರು.

ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕಲಿ

ಹಾನಗಲ್: ತಾಲೂಕಿನ ಸರ್ಕಾರಿ ಶಾಲೆಗಳು ಸುಧಾರಣೆ ಕಾಣಬೇಕು, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕಬೇಕು. ಈ ನಿಟ್ಟಿನಲ್ಲಿ ಕಾಳಜಿ ವಹಿಸಿ ಕೆಲಸ ಮಾಡಲಾಗುತ್ತಿದೆ. ಸಮುದಾಯ ಹಾಗೂ ಸಂಘ, ಸಂಸ್ಥೆಗಳ ಸಹಭಾಗಿತ್ವದಡಿ ಶಾಲೆಗಳಿಗೆ ಸೌಲಭ್ಯ ಕಲ್ಪಿಸಿ ಕಲಿಕೆಗೆ ಪೂರಕ ವಾತಾವರಣ ಸೃಷ್ಟಿಸಲು ಗಮನ ನೀಡಲಾಗಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ಶನಿವಾರ ಸಂಜೆ ತಾಲೂಕಿನ ಶೀಗಿಹಳ್ಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಬೆಂಗಳೂರಿನ ಶಿ ಫಾರ್ ಸೊಸೈಟಿ ವತಿಯಿಂದ ನೂತನವಾಗಿ ನಿರ್ಮಿಸಿದ ಕಂಪ್ಯೂಟರ್ ಪ್ರಯೋಗಾಲಯ ಉದ್ಘಾಟಿಸಿ ಅವರು ಮಾತನಾಡಿದರು. ದೇಶದ 75 ನೇ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ 50%-50% ಎನ್ನುವ ಕಾರ್ಯಕ್ರಮದ



ಘೋಷಣೆ ಮಾಡಲಾಗಿತ್ತು. ಈ ಕಾರ್ಯಕ್ರಮದಡಿ 125 ಶಾಲೆಗಳನ್ನು 3.25 ಕೋಟಿ ರೂ. ವೆಚ್ಚದಲ್ಲಿ ಸುಧಾರಿಸಲಾಗಿದೆ. ಈ ಪೈಕಿ ಅರ್ಧ ಹಣವನ್ನು ಗ್ರಾಮಸ್ಥರು ಭರಿಸಿದ್ದರೆ, ಉಳಿದರ್ಧ ಹಣ ವೈಯಕ್ತಿಕವಾಗಿ ನೀಡಲಾಗಿದೆ. ಓಸ್ಯಾಟ್, ರೌಂಡ್ ಟೇಬಲ್, ರೋಟರಿ, ಡ್ರೀಮ್ ಸ್ಕೂಲ್ ಫೌಂಡೇಶನ್‌ನಂಥ ಹಲವು ಸಂಸ್ಥೆಗಳ ಸಹಭಾಗಿತ್ವದಡಿ ಶಾಲಾ ಕಟ್ಟಡ ನಿರ್ಮಾಣ, ಮಕ್ಕಳಿಗೆ ತರಬೇತಿಯಂತ ಅನುಕೂಲತೆ ಪಡೆಯಲಾಗುತ್ತಿದೆ. ಪರಿವರ್ತನ ಕಲಿಕಾ ಕೇಂದ್ರದ ಮೂಲಕ ಜಾಗತಿಕ ಸ್ಪರ್ಧೆಗೆ ತಾಲೂಕಿನ ವಿದ್ಯಾರ್ಥಿಗಳು, ಯುವ ಸಮೂಹವನ್ನು ಸಜ್ಜುಗೊಳಿಸಲು ತರಬೇತಿ ನೀಡಲಾಗುತ್ತಿದೆ ಎಂದು ಹೇಳಿದ ಅವರು ಶಿ ಫಾರ್ ಸೊಸೈಟಿಯ ಸದಸ್ಯರು ಕಂಪ್ಯೂಟರ್ ಸಾಕ್ಷರತೆ ಹೆಚ್ಚಿಸುವ ಉದ್ದೇಶದಿಂದ ಕಂಪ್ಯೂಟರ್ ಲ್ಯಾಬ್‌ಗೆ ನೆರವು ನೀಡಿರುವುದು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅನುಕೂಲವಾಗಲಿದೆ ಎಂದರು.

ಶಿ ಫಾರ್ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷೆ ಹರ್ಷಿಣಿ ವೆಂಕಟೇಶ, ನಿರ್ದೇಶಕಿ ಕವಿತಾ ಪ್ರಭಾಕರ ಮಾತನಾಡಿ, ಕಳೆದ ಹಲವು ವರ್ಷಗಳಿಂದ ರಾಜ್ಯದ ಸುಮಾರು 45 ಶಾಲೆಗಳಲ್ಲಿ ಕಂಪ್ಯೂಟರ್ ಲ್ಯಾಬ್ ಆರಂಭಕ್ಕೆ ಅಗತ್ಯ ಹಣಕಾಸಿನ ನೆರವು ಒದಗಿಸಲಾಗಿದೆ. ಸಂಸ್ಥೆ ಆರೋಗ್ಯ ಜಾಗೃತಿ ಕಾರ್ಯಕ್ರಮಗಳ ಜೊತೆಗೆ ಶೈಕ್ಷಣಿಕ ಚಟುವಟಿಕೆಗಳಲ್ಲಿಯೂ ಸಹ ಕಾರ್ಯಶೀಲವಾಗಿದೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಪ್ರತಿಯೊಂದು ಮಗುವೂ ಸಹ ಕಂಪ್ಯೂಟರ್ ಜ್ಞಾನ ಹೊಂದುವ ಅಗತ್ಯವಿದೆ ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಸಿದ್ದನಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ತಾಲೂಕಾ ಶಿಕ್ಷಣ ಸುಧಾರಣಾ ಸಮಿತಿ ಸದಸ್ಯೆ ಅನಿತಾ ಶಿವೂರ, ಬಿಇಒ ಆರ್.ವಿ.ಚಿನ್ನಿಕಟ್ಟಿ, ಇಸಿಒ ವಿ.ಟಿ.ಪಾಟೀಲ, ಬಿ.ಎನ್. ಸಂಗೂರ, ಸಿಆರ್‌ಪಿ ನಾಗರಾಜ ಸಿಂಗಾಪೂರ ಸೇರಿದಂತೆ ಎಸ್‌ಡಿಎಂಸಿ ಸದಸ್ಯರು, ಶಿಕ್ಷಕರು, ಗ್ರಾಮಸ್ಥರು, ಹಳೆ ವಿದ್ಯಾರ್ಥಿಗಳು ಇದ್ದರು.

ಕಿರುಸುದ್ದಿ

ಕ್ರಿಕೆಟ್ ಬೆಟ್ಟಿಂಗ್: ಆರೋಪಿ ಬಂಧನ

ಬೆಳಗಾವಿ: ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ಓರ್ವನನ್ನು ಕ್ಯಾಂಪ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಶಾಸ್ತ್ರಿ ನಗರದ ನಿವಾಸಿ ಸಾಹೀಲ ರಮೇಶ ಪಾಟೀಲ್ ಬಂಧಿತ ಆರೋಪಿಯಿಂದ 12,900 ರೂ. ಹಣ ಹಾಗೂ ಬೆಟ್ಟಿಂಗ್ ಬಳಸುತ್ತಿದ್ದ ಮೋಬೈಲ್ ಫೋನ್ ಜಪ್ತಿ ಮಾಡಿಕೊಂಡಿದ್ದಾರೆ. ಈ ವಿಶೇಷ ತಂಡದಲ್ಲಿ ಕಾರ್ಯ ನಿರ್ವಹಿಸಿದ ಅಧಿಕಾರಿ ಮತ್ತು ಸಿಬ್ಬಂದಿಯವರಾದ ಎಸ್. ಎಸ್. ಸೊಲ್ಲಾಪೂರೆ, ಎಎಸ್ಐ ಸಿಬ್ಬಂದಿ ಜನರಾದ ಬಸವರಾಜ. ಪ. ಉಜ್ಜಿನಕೊಪ್ಪ, ಪಿ. ಟಿ. ಪವಾರ್, ಭರಮಾ. ಎಮ್. ಕರೆಗಾರ, ಸಿ. ಜಿ. ನಾಯ್ಕ ಇವರೆಲ್ಲರ ಕಾರ್ಯವನ್ನು ಮಾನ್ಯ ಪೊಲೀಸ್ ಆಯುಕ್ತರು ಶ್ಲಾಘಿಸಿದ್ದಾರೆ.

ಸೈನಿಕನ ನಿಧನಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸಂತಾಪ

ಬೆಳಗಾವಿ: ನಗರದ ಹೊರ ವಲಯದಲ್ಲಿರುವ ಕರ್ಲೆ ಗ್ರಾಮದ ಸೈನಿಕ ನಾಯಕ್ ರಾಮಚಂದ್ರ ಮೋಹನ್ ಪಾಟೀಲ್ ಅವರ ಅಕಾಲಿಕ ನಿಧನಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸಂತಾಪ ಸೂಚಿಸಿದ್ದಾರೆ. ಅವರ ನಿಧನ ನಮಗೆಲ್ಲರಿಗೂ ಅತ್ಯಂತ ದುಃಖ ತಂದಿದೆ. ಭಾರತ ಮಾತೆಯ ಸೇವೆಗಾಗಿ ಅವರು ಸಲ್ಲಿಸಿದ ತ್ಯಾಗ ಅನನ್ಯವಾದುದು.ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಮತ್ತು ಅವರ ಕುಟುಂಬಕ್ಕೆ ಈ ನೋವನ್ನು ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದ್ದಾರೆ. ಯುವ ಮುಖಂಡ ಮೃಣಾಲ್ ಹೆಬ್ಬಾಳಕರ್ ಗ್ರಾಮಕ್ಕೆ ತೆರಳಿ ಅಂತಿಮ ಗೌರವ ಸಲ್ಲಿಸಿ ಕುಟುಂಬಸ್ಥರಿಗೆ ಸಮಾಧಾನವನ್ನು ಹೇಳಿದರು.

ಜೂಜಾಟ: ಬಂಧನ

ಬೆಳಗಾವಿ: ನಗರದ ವಿವಿಧ ಭಾಗಗಳಲ್ಲಿ ಅಕ್ರಮವಾಗಿ ಜೂಜಾಟ ಅಡ್ಡೆಯ ಮೇಲೆ ದಾಳಿ ಮಾಡಿ ಆರು ಜನ ಆರೋಪಿಗಳನ್ನು ಮಾರ್ಕೆಟ್ ಪೊಲೀಸರು ಬಂಧಿಸಿದ್ದಾರೆ. ಜೂಜಾಟ ಆರೋಪಿಗಳಾದ ಮೋಶಿನಖಾನ ಮುನಿರಖಾನ ಪಠಾಣ (36), ಶೋಹಬ ಮನ್ಸೂರ ಮಕಾನದಾರ, (34), ಹರೂನರಶೀದ ರಾಜೇಸಾಬ ತಿಗಡಿ (46), ಜಾಫರಸಾಧಿಕ ಇಮ್ತಿಯಾಜ ಫೀವಾಲೆ (31), ಮೊಹಮ್ಮದರಶಿದ ಮಹಮ್ಮದಸಲೀಮ ಬೇಪಾರಿ ಬಂಧಿತರು. ಜಾಫರ ಮೀರಾಸಾಬ ಸನದಿ (43) ಪರಾರಿಯಾಗಿದ್ದಾರೆ.

ವ್ಯಕ್ತಿ ಕಾಣೆ

ಬೆಳಗಾವಿ: ತಾಲೂಕಿನ ಅಂಬೇವಾಡಿ ಗ್ರಾಮದ ನಿವಾಸಿ ಮಲ್ಲಪ್ಪಾ ಸಿದ್ದಪ್ಪ ಲೋಹಾರ (75) ಮೇ 2 ರಂದು ಸ್ವಗೃಹದಿಂದ. ಬೆಳಗಾವಿ ನಗರದ ಸಿವಿಲ್ ಆಸ್ಪತ್ರೆಗೆ ಹೋಗಿ ಬಿ.ಪಿ ಮಾತ್ರೆಗಳನ್ನು ತೆಗೆದುಕೊಂಡು ಪೇಟೆಯಲ್ಲಿ ಸಂತೆ ಮಾಡಿಕೊಂಡು ಬರುತ್ತೇನೆ ಎಂದು ಹೇಳಿ



ಸೈಕಲ ಮೇಲೆ ಹೋದವರು ಸಂಜೆಯಾದರು ಮನೆಗೆ ವಾಪಸ್ ಬಂದಿಲ್ಲ. ಈ ಕುರಿತು ಕುಟುಂಬಸ್ಥರು ಕಾಕತಿ ಪೊಲೀಸರಿಗೆ ದೂರು ನೀಡಿದ್ದಾರೆ. ಈ ವ್ಯಕ್ತಿ ಎಲ್ಲಾದರು ಯಾರಿಗಾದರು ಕಂಡು ಬಂದಲ್ಲಿ ಕಾಕತಿ ಪಿಎಸ್, ಪೊಲೀಸ್ ಠಾಣೆ ; ಪಿಎಸ್ಐ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೀದಿ ನಾಯಿಗಳ ದಾಳಿಗೆ ಜಿಂಕೆ ಸಾವು

ಬೆಳಗಾವಿ: ಆಹಾರ ಅರಸಿ ನಾಡಿಗೆ ಬಂದ ಜಿಂಕೆಯೊಂದು ಬೀದಿ ನಾಯಿಗಳ ದಾಳಿಗೆ ಸಿಲುಕಿ ಮೃತಪಟ್ಟ ಘಟನೆ ಜಿಲ್ಲೆಯ ಖಾನಾಪುರ ತಾಲೂಕಿನ ಲೋಂಡಾ ಪಟ್ಟಣದಲ್ಲಿ ನಡೆದಿದೆ. ಪಟ್ಟಣದ ಮಾರುಕಟ್ಟೆ ಪ್ರದೇಶದಲ್ಲಿ



ಅನಿರೀಕ್ಷಿತವಾಗಿ ಜಿಂಕೆಯೊಂದು ಕಾಣಿಸಿಕೊಂಡಿತ್ತು. ಕಾಡು ಬಿಟ್ಟು ಜನವಸತಿ ಪ್ರದೇಶಕ್ಕೆ ಬಂದಿದ್ದ ಈ ಅಪರೂಪದ ಅತಿಥಿಯನ್ನು ಕಂಡ ಬೀದಿ ನಾಯಿಗಳ ಹಿಂಡು ಅದರ ಬೆನ್ನಟ್ಟಿವೆ. ಬೀದಿ ನಾಯಿಗಳ ಅಟ್ಟಹಾಸಕ್ಕೆ ಬೆದರಿದ ಜಿಂಕೆಯು, ಪ್ರಾಣ ಉಳಿಸಿಕೊಳ್ಳಲು ದಿಕ್ಕಾಪಾಲಾಗಿ ಓಡಿದೆ. ನಾಯಿಗಳ ದಾಳಿಯಿಂದ ತಪ್ಪಿಸಿಕೊಳ್ಳುವ ಭರದಲ್ಲಿ ಓಡುವಾಗ ಜಿಂಕೆಯು ತೀವ್ರವಾಗಿ ಗಾಯಗೊಂಡಿದೆ. ಗಾಬರಿಯಿಂದಲೇ ಓಡಿದ ಜಿಂಕೆಯು ಸಮೀಪದ ಅರಣ್ಯ ಇಲಾಖೆಯ ಕಚೇರಿ ಆವರಣಕ್ಕೆ ನುಗ್ಗಿದೆ. ಈ ಬಗ್ಗೆ ಸ್ಥಳೀಯರು ತಕ್ಷಣವೇ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಅರಣ್ಯ ಸಿಬ್ಬಂದಿ ಕೂಡಲೇ ಜಿಂಕೆಯನ್ನು ರಕ್ಷಣೆ ಮಾಡಿ ಪ್ರಾಥಮಿಕ ಚಿಕಿತ್ಸೆ ನೀಡಲು ಮುಂದಾದರು. ಚಿಕಿತ್ಸೆ ಬಳಿಕ ಮರಳಿ ಕಾಡಿಗೆ ಬಿಡುವಷ್ಟರಲ್ಲೇ ತೀವ್ರ ಆಘಾತ ಮತ್ತು ಗಾಯದ ನೋವಿನಿಂದಾಗಿ ಜಿಂಕೆ ಮೃತಪಟ್ಟಿದೆ.



ಸಂಕೇಶ್ವರ : ಸಮೀಪದ ಬಾಡ ಗ್ರಾಮದಲ್ಲಿನ ಅಂಬೇಡ್ಕರ್ ಭವನದಲ್ಲಿ ಬುದ್ಧ ಜಯಂತಿಯನ್ನು ಅತ್ಯಂತ ಸಡಗರ ಮತ್ತು ಭಕ್ತಿಭಾವದಿಂದ ಆಚರಿಸಲಾಯಿತು. ಬುದ್ಧ ಮತ್ತು ಬಾಬಾಸಾಹೇಬ್ ಅಂಬೇಡ್ಕರ್ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿ, ಗೌರವ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ರಾಹುಲ್ ತಳವಾರ, ಪ್ರಜ್ವಲ ಮುದ್ದಾಯಿಗೊಳ, ಮಯೂರ ನಾಗಯಿಗೊಳ, ರೋಹಿತ ಮುದ್ದಾಯಿಗೊಳ, ಆನಂದ ತರವಾಳ, ದರ್ಶನ ಕಾಂಬಳೆ ಇದ್ದರು.

ಬಿಸಿಲಿನ ತಾಪಕ್ಕೆ ಸಂತೆಗೆ ಬಾರದ ಜನ

ಬೆಳಗಾವಿ: ಸೂರ್ಯನ ಪ್ರಖರತೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದ್ದು, ಬಿಸಿಲಿನ ಬೇಗೆಗೆ ಬೆಚ್ಚಿಬಿದ್ದಿರುವ ಜನತೆ ಮನೆಯಿಂದ ಹೊರಬರಲು ಹಿಂದೇಟು ಹಾಕುತ್ತಿದ್ದು, ಭಾನುವಾರ ಖಾಸಬಾಗದ ವಾರದ ಸಂತೆಯ ಮೇಲೆ ಗಂಭೀರ ಪರಿಣಾಮ ಬೀರಿದೆ. ಕುಂದಾನಗರಿ ಬೆಳಗಾವಿಯಲ್ಲಿ ಸೂರ್ಯನ ಪ್ರಖರ ಪ್ರಕಾಶಕ್ಕೆ ಜನಜೀವನ ಅಕ್ಷರಶಃ ತತ್ತರಿಸಿ ಹೋಗಿದೆ. ನಗರದ ಪ್ರಮುಖ ಮಾರುಕಟ್ಟೆ ಕೇಂದ್ರವಾಗಿರುವ ಹಾಗೂ ಖಾಸಬಾಗ, ಶಹಾಪೂರ, ವಡಗಾಂವ ಭಾಗದ ಸಾವಿರಾರು ಜನರಿಗೆ ಆಸರೆಯಾಗಿರುವ ಖಾಸಬಾಗ ವಾರದ ಸಂತೆಯ ಮೇಲೆ ಈ ಬಾರಿ ಬಿಸಿಲಿನ ಕರಿನೆರಳು ಬಿದ್ದಿದೆ. ತರಕಾರಿ ಬೆಳೆಗಾರರು ಮತ್ತು ವ್ಯಾಪಾರಿಗಳು ಬೆಳ್ಳಂಬೆಳಗ್ಗೆಯೇ ಮಾರುಕಟ್ಟೆಗೆ ಆಗಮಿಸಿದರೂ, ಬಿಸಿಲಿನ ಬೇಗೆಗೆ ಹೆದರಿ ಗ್ರಾಹಕರು ಮಾರುಕಟ್ಟೆಗೆ ಆಗಮಿಸಿದೆ ಇರುವುದರಿಂದ ವ್ಯಾಪಾರಸ್ಥರು ವ್ಯಾಪಾರ ಇಲ್ಲದೆ ಕಂಗಾಲಾದರು. ಮಧ್ಯಾಹ್ನದ ವೇಳೆಗೆ ಜನಜಂಗುಳಿಯಿಂದ ಕೂಡಿರಬೇಕಿದ್ದ ಮಾರುಕಟ್ಟೆ ಮೈದಾನ ಜನರಿಲ್ಲದೆ ಬಿಕೋ ಎನ್ನುತ್ತಿದ್ದು, ಮಾರುಕಟ್ಟೆಯ ಆರ್ಥಿಕ ವಹಿವಾಟು ಸಂಪೂರ್ಣವಾಗಿ ಜನಗಳು ಇಲ್ಲದೆ ಬಿಕೋ ಎನ್ನುತಿತ್ತು. ಬಿಸಿಲಿನ ಬೇಗೆಗೆ ಕಂಗೆಟ್ಟಿರುವ ಬೆಳಗಾವಿ ಜನತೆ ತಂಪು ಪಾನೀಯಗಳ ಮೊರೆ ಹೋಗುತ್ತಿದ್ದು, ಹಸಿರು ತರಕಾರಿಗಳು ಕೂಡ ಸೂರ್ಯನ ಶಾಖಕ್ಕೆ ಬಾಡಿ ಹೋಗುತ್ತಿವೆ. ನಿರೀಕ್ಷಿತ ಪ್ರಮಾಣದಲ್ಲಿ ವಹಿವಾಟು ನಡೆಯದ ಕಾರಣ ಲಕ್ಷಾಂತರ ರೂಪಾಯಿ ಮೌಲ್ಯದ ತರಕಾರಿ ವ್ಯರ್ಥವಾಗುವ ಭೀತಿಯಲ್ಲಿ ವ್ಯಾಪಾರಿಗಳಿದ್ದು, ಬಿಸಿಲ ಹೊಡೆತಕ್ಕೆ ಮಾರುಕಟ್ಟೆ ವ್ಯವಸ್ಥೆಯೇ ತಲೆಕೆಳಗಾಗುವುದು ಬೆಳಗಾವಿಯಲ್ಲಿ ಖಾಸಭಾಗದ ತರಕಾರಿ ಮಾರುಕಟ್ಟೆ ಸಾಕ್ಷಿಯಾಗಿದೆ.



ಬೆಳಗಾವಿ: ನಗರದ ಪ್ರಮುಖ ಮಾರುಕಟ್ಟೆ ಕೇಂದ್ರವಾಗಿರುವ ಹಾಗೂ ಖಾಸಬಾಗ, ಶಹಾಪುರ, ವಡಗಾಂವ ಭಾಗದ ಸಾವಿರಾರು ಜನರಿಗೆ ಆಸರೆಯಾಗಿರುವ ಖಾಸಬಾಗ ವಾರದ ಸಂತೆಯ ಮೇಲೆ ಈ ಬಾರಿ ಬಿಸಿಲಿನ ಕರಿನೆರಳು ಬಿದ್ದಿದೆ. ತರಕಾರಿ ಬೆಳೆಗಾರರು ಮತ್ತು ವ್ಯಾಪಾರಿಗಳು ಬೆಳ್ಳಂಬೆಳಗ್ಗೆಯೇ ಮಾರುಕಟ್ಟೆಗೆ ಆಗಮಿಸಿದರೂ, ಬಿಸಿಲಿನ ಬೇಗೆಗೆ ಹೆದರಿ ಗ್ರಾಹಕರು ಮಾರುಕಟ್ಟೆಗೆ ಆಗಮಿಸಿದೆ ಇರುವುದರಿಂದ ವ್ಯಾಪಾರಸ್ಥರು ವ್ಯಾಪಾರ ಇಲ್ಲದೆ ಕಂಗಾಲಾದರು.

ಉದ್ಘಾಟನೆ ದಿನವೇ ಕಿತ್ತೂರು ಘಟಕ ಕಾರ್ಯಾರಂಭ

ಬಸ್ ಡಿಪೋಗೆ ಚಾಲನೆ ಇಂದು

ಉಳವಯ್ಯ ಹಿರೇಮಠ

ಚನ್ನಮ್ಮನಕಿತ್ತೂರು: ಐತಿಹಾಸಿಕ ಚನ್ನಮ್ಮಾಜಿಯ ಕಿತ್ತೂರಿನಲ್ಲಿ ಬಸ್ ಡಿಪೋ ಮೇ 4 ರಂದು ಉದ್ಘಾಟನೆಯಾಗುತ್ತಿದ್ದು, ಉದ್ಘಾಟನೆಗೊಂಡ ದಿನದಿಂದಲೇ ಡಿಪೋ ಕಾರ್ಯಾರಂಭ ಮಾಡುತ್ತಿರುವುದು ವಿಭಾಗದಲ್ಲಿಯೇ ಪ್ರಥಮ ಎಂಬ ಹೆಗ್ಗಳಿಕೆ ಪಾತ್ರವಾಗಿದೆ.

ರಾಷ್ಟೀಯ ಹೆದ್ದಾರಿ ಪಕ್ಕದಲ್ಲಿ ನಿರ್ಮಾಣವಾಗಿರುವ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬೆಳಗಾವಿ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕಿತ್ತೂರು ಘಟಕ ಉದ್ಘಾಟನೆಗೆ ಕೊಂಚ ವಿಳಂಬವಾದರೂ ಘಟಕ ಕಾರ್ಯಾರಂಭ ಮಾಡುತ್ತಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಹಲವಾರು ಕಡೆಗಳಲ್ಲಿ ಬಸ್ ಘಟಕಗಳು ಉದ್ಘಾಟನೆಗೊಂಡು ಹಲವಾರು ತಿಂಗಳುಗಳು, ವರ್ಷಗಳೂ ಉರುಳಿದರೂ ಕಾರ್ಯಾರಂಭವಿಲ್ಲದೇ ಕೇವಲ ಉದ್ಘಾಟನೆಗೆ ಮಾತ್ರ ಸೀಮಿತವಾಗಿದ್ದು, ನಮ್ಮ ಘಟಕವು ಶಾಸಕ ಬಾಬಾಸಾಹೇಬ ಪಾಟೀಲ ಇವರ ಪ್ರಯತ್ನದ ಫಲವಾಗಿ ನೂತನ ಬಸ್‌ಗಳು, ಬೇಕಾದ ಸಿಬ್ಬಂದಿ ಸೇರಿದಂತೆ ಘಟಕ ಕಾರ್ಯಾರಂಭಕ್ಕೆ ಯಾವುದೇ ಕೊರತೆ ಇಲ್ಲದೇ ಸಿದ್ಧಪಡಿಸಿದ್ದು ವಿಶೇಷವಾಗಿದೆ.

ಈ ಭಾಗದ ಗ್ರಾಮೀಣ ಪ್ರದೇಶಗಳ ಶಾಲಾ, ಕಾಲೇಜಿನ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಕಿತ್ತೂರಿಗೆ ಬರಲು ಮತ್ತು ಇಲ್ಲಿಂದ ಧಾರವಾಡ, ಬೆಳಗಾವಿ ಕಡೆಗೆ ಸಂಚರಿಸಲು ಹೆಚ್ಚಿನ ಅನುಕೂಲವಾಗಲಿದೆ.

ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲ ಒದಗಿಸಲು 25 ಬಸ್‌ಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಸಂಚರಿಸಲಿವೆ. 15 ಬಸ್‌ಗಳು ಪಟ್ಟಣದಿಂದ ಬೆಂಗಳೂರು, ಚಿಕ್ಕಮಗಳೂರು, ಕೊಲ್ಲಾಪೂರ, ಬಾಗಲಕೋಟ, ಪಣಜಿ, ಜಮಖಂಡಿ, ಕೊಪ್ಪಳ ಸೇರಿದಂತೆ ಹಲವಾರು ಜಿಲ್ಲಾ ಸ್ಥಳಗಳಿಗೆ, ರಾಜ್ಯಕ್ಕೆ ಇಲ್ಲಿಂದ ನೇರವಾಗಿ ಸಂಚರಿಸಲಿವೆ ಇದರಿಂದ ಈ ಭಾಗದ ಸಾರ್ವಜನಿಕರಿಗೆ ಉತ್ತಮ ಸಾರಿಗೆ ಸೌಲಭ್ಯ ದೊರೆಯಲಿದೆ.



15 ಹೊಸ ಬಸ್

ಈ ನೂತನ ಘಟಕಕ್ಕೆ ಪ್ರಥಮ ಹಂತದಲ್ಲಿ 15 ನೂತನ ಬಸ್‌ಗಳು ಸೇರಿ 40 ಬಸ್‌ಗಳು ಕಾರ್ಯಾರಂಭ ಮಾಡಲಿವೆ. ಚಾಲಕ, ನಿರ್ವಾಹಕ ಸೇರಿ 40 ಸಿಬ್ಬಂದಿಗಳು, 15 ತಾಂತ್ರಿಕ ಸಿಬ್ಬಂದಿಗಳು, ಒಬ್ಬರು ಡಿಪೋ ಮ್ಯಾನೇಜರ ಸೇರಿ 10 ಸಿಬ್ಬಂದಿಗಳು ಕಾರ್ಯ ನಿರ್ವಹಿಸುವರು. ಮುಂದೆ ಹಂತ, ಹಂತವಾಗಿ ಅಗತ್ಯಕ್ಕೆ ತಕ್ಕಂತೆ ಬಸ್‌ಗಳು, ಸಿಬಂದಿಗಳು ಕಾರ್ಯನಿರ್ವಹಿಸಲಿವೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಕೆ ಎನ್ ಗುಡೆನ್ನವರ ಹಾಗೂ ವಿಭಾಗೀಯ ತಾಂತ್ರಿಕ ಶಿಲ್ಪಿ ನೀತಿನ್ ಗಡದೆ ಮಾಹಿತಿ ನೀಡಿದರು.

ಪ್ರಯಾಣಿಕರಿಗೆ ಸಂತಸ

2012 ರಲ್ಲಿ ಕಿತ್ತೂರು ನೂತನ ತಾಲೂಕಾಗಿದ್ದರೂ ಬಸ್ ಘಟಕವಿರಲಿಲ್ಲ ಮುಂದೆ 2022ರಲ್ಲಿ ಆಗಿನ ಶಾಸಕ ಮಹಾಂತೇಶ ದೊಡ್ಡಗೌಡರ ಅವರ ಅವಧಿಯಲ್ಲಿ ಸುಮಾರು ರೂ 5 ಕೋಟಿ ವೆಚ್ಚದ ನೂತನ ಬಸ್ ಘಟಕಕ್ಕೆ ಭೂಮಿ ಪೂಜೆ ನೆರವೇರಿಸಿದ್ದರು. ನಂತರದ ಅವಧಿಯಲ್ಲಿ ಶಾಸಕ ಬಾಬಾಸಾಹೇಬ ಪಾಟೀಲರ ಅವಧಿಯಲ್ಲಿ ನೂತನ ಘಟಕಕ್ಕೆ ಅವಶ್ಯಕವಿರುವ ಮೂಲ ಸೌಲಭ್ಯಗಳನ್ನು ಒದಗಿಸುವದರ ಜೊತೆಗೆ ಬಸ್ ಘಟಕಕ್ಕೆ ಹೋಗಲು 1.5 ಕೋಟಿ ವೆಚ್ಚದಲ್ಲಿ ರಸ್ತೆ, ವಿದ್ಯುತ್ ದೀಪದ ವ್ಯವಸ್ಥೆ ಕಲ್ಪಿಸಲಾಗಿದೆ. ಉದ್ಘಾಟನೆಯ ಜೊತೆಗೆ ಘಟಕ ಕಾರ್ಯಾರಂಭ ಮಾಡುವದಕ್ಕೆ ಸಿದ್ಧವಾಗಿರುವದು ಕಿತ್ತೂರ ಭಾಗದ ಸಾರ್ವಜನಿಕರಲ್ಲಿ ಸಂತಸ ತಂದಿದೆ.

ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ಪ್ರಯತ್ನ

ರಾಯಬಾಗ: ತಾಲೂಕಿನ ಬಾವನಸೌಂದತ್ತಿ ಗ್ರಾಮ ಪಂಚಾಯತಿಗಳ ಆಡಳಿತದ ಅವಧಿ ಮುಗಿದಿದ್ದರೂ ಸಹ ನಾವೆಲ್ಲರೂ ಗ್ರಾಮದ ಹಿತ ದೃಷ್ಟಿಯಿಂದ ಚರ್ಚಿಸಿ ಶಾಸಕ ದುರ್ಯೋಧನ ಐಹೊಳೆ ಅವರ ಸಹಕಾರದ ಮೇರೆಗೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದು ಮಾಜಿ ಗ್ರಾಪಂ ಸದಸ್ಯ ಧೂಳಗೌಡ ಪಾಟೀಲ ಹೇಳಿದರು.

ಬಾವನ ಸೌಂದತ್ತಿ ಗ್ರಾಮದಲ್ಲಿನ ಕುಡಿಯುವ ನೀರಿನ ಸಮಸ್ಯೆಗೆ ತಾತ್ಕಾಲಿಕ ಪರಿಹಾರವಾಗಿ ಗ್ರಾಮದ ರೈತರಾದ ಅಕ್ಬರ್ ಚಂದೂರೆ ಹಾಗೂ ಅನೀಲ ಹಂಜೆಯವರ ಎರಡು ಖಾಸಗಿ ಪೈಪ್ ಲೈನ್ ಗಳಿಂದ ನೀರು ಪಡೆದು ಗ್ರಾಮಕ್ಕೆ ಸಪ್ಲೈ ಮಾಡಲಾಯಿತು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಧೂಳಗೌಡ ಪಾಟೀಲ ಅವರು, ಮೇ ತಿಂಗಳಲ್ಲಿ ಬಿಸಿಲಿನ ತಾಪಮಾಣ ಹೆಚ್ಚಾಗಿ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗುತ್ತದೆ. ಅಲ್ಲದೇ ಕೃಷ್ಣಾನದಿ ನೀರಿನ ಮಟ್ಟವೂ ಕ್ಷಿಣಿಸಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ಉದ್ಭವವಾಗಿದೆ. ಗ್ರಾಮಸ್ಥರು ನೀರನ್ನು ಹಿತಮಿತವಿಯವಾಗಿ ಉಪಯೋಗಿಸಿ, ಪೋಲು ಮಾಡಬೇಡಿ ಎಂದು ಸಲಹೆ ನೀಡಿದ್ದೇವೆ. ಸದ್ಯಕ್ಕೆ ನೀರಿನ ಕೊರತೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ಹಿಂದೆ 2005 ರಲ್ಲಿಯೂ ನೀರಿನ ಸಮಸ್ಯೆ ಉದ್ಭವವಾಗಿತ್ತು. ಆಗಲೂ ಬಗೆಹಸಿದ್ದೇವೆ. ಈಗಲೂ ಬಗೆಹರಿಸುತ್ತಿದ್ದೇವೆ. ನಾವು ರಾಜಕಾರಣದಲ್ಲಿ ರಾಜಕಾರಣ ಮಾಡುತ್ತೇವೆ. ಗ್ರಾಮ ಅಭಿವೃದ್ಧಿ ವಿಷಯದಲ್ಲಿ ರಾಜಕೀಯ ಬದಿಗೊತ್ತಿ ಕಾರ್ಯ ನಿರ್ವಹಿಸುತ್ತೇವೆ. ನಮಗೆ ಗ್ರಾಮದ ಹಿತ ಬಹಳ ಮುಖ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಗ್ರಾಪಂ ಅಧ್ಯಕ್ಷ ರಾಮಚಂದ್ರ ಕಾಟೆ, ಅನೀಲ ಹಂಜೆ, ಅರುಣ ಶಿಂಧೆ, ಕುಂತಿನಾಥ ಮಗದುಮ, ಅಜೀತ ಕುಂಬಾರ, ರಮೇಶ ಬೆಳಗಲಿ, ಅಣ್ಣಾಸಾಹೇಬ್ ಮಗದುಮ, ಅಭಿವೃದ್ಧಿ ಅಧಿಕಾರಿ ಎಸ್ ಎಸ್ ನ್ಯಾಮಗೌಡರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ವಿವಿಧ ಕಾಮಗಾರಿಗಳಿಗೆ ಶಾಸಕರಿಂದ ಚಾಲನೆ



ನೇಸರಗಿ: ಸಮೀಪದ ಮರಡಿನಾಗಲಾಪೂರ ಗ್ರಾಮದಲ್ಲಿ ಶನಿವಾರ ಸಿಸಿ ಹಾಗೂ ಕಡಿ ರಸ್ತೆ ನಿರ್ಮಾಣದ ಸುಮಾರು 57 ಲಕ್ಷ ರೂಪಾಯಿಗಳ ಕಾಮಗಾರಿಗಳಿಗೆ ಕಿತ್ತೂರು ಶಾಸಕ ಬಾಬಾಸಾಹೇಬ ಪಾಟೀಲ ಅವರು ಭೂಮಿಪೂಜೆ ನೆರವೇರಿಸುವುದರ ಮೂಲಕ ಚಾಲನೆ ನೀಡಿದರು.

ನಂತರ ಮಾತನಾಡಿ, ಕ್ಷೇತ್ರದ ಎಲ್ಲ ವಿಭಾಗಗಳ ಕೆಲಸ ಕಾರ್ಯಗಳು ಭರದಿಂದ ಸಾಗುತಿದ್ದು, ಇದರ ಸದುಪಯೋಗ ಪಡೆಯಬೇಕು ಎಂದರು.

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರು, ಗ್ರಾಮಸ್ಥರು, ಅಧಿಕಾರಿಗಳು ಇದ್ದರು.



ಗೋಕಾಕ: ನಗರದ ಹೊರವಲಯದಲ್ಲಿ ವೈದ್ಯ ಮಿತ್ರರ ಪ್ರಾಯೋಜಕತ್ವದಲ್ಲಿ ಆಯೋಜಿಸಿದ್ದ ಇಂಟರ್ ಗೋಕಾಕ ಫುಟಬಾಲ್ ಪ್ರೀಮಿಯರ್ ಲೀಗ್ ಪಂದ್ಯಾವಳಿಗೆ ಶನಿವಾರದಂದು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಡಾ.ಮಲ್ಲಿಕಾರ್ಜುನ ಬೀರನಗಡ್ಡಿ, ಡಾ.ಕೀರ್ತಿ ಬೀರನಗಡ್ಡಿ, ಡಾ.ಕಿರಣ ನಾವಲಗಟ್ಟಿ, ಡಾ.ಮಿಲಿಂದ ಜಾಧವ, ಡಾ.ಸಂದೀಪ ಶಿರಹಟ್ಟಿ, ಡಾ.ನವೀನ ಗೊಲಭಾಂವಿ, ಡಾ.ರಮೇಶ ಪಟಗುಂದಿ, ಡಾ.ಅರುಣ ವಣ್ಣೂರ, ಸಂಘಟಕರಾದ ಸೋಮನಾಥ ಮಗದುಮ, ಪ್ರವೀಣ ಗೌಡರ, ಆರ್ಯನ ಸಾಯನ್ನವರ, ವಿಶ್ವನಾಥ ರಾಮತೀರ್ಥ, ಸುಮೀತ ಜಾಧವ ಇದ್ದರು.

ಸಾಧಕರನ್ನು ಸನ್ಮಾನಿಸಿದ ಶಾಸಕ ಜಾರಕಿಹೊಳಿ

ಗೋಕಾಕ: ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಕ್ಷೇತ್ರದಲ್ಲಿ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗಿದ್ದು, ಇದರ ಸದುಪಯೋಗದಿಂದ ವಿದ್ಯಾರ್ಥಿಗಳು ಪ್ರತಿಭಾನ್ವಿತರಾಗಿರೆಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಅವರು, ಭಾನುವಾರದಂದು ನಗರದ ತಮ್ಮ ಕಾರ್ಯಾಲಯದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲ ಯದವರು ಹಮ್ಮಿಕೊಂಡ ಗೋಕಾಕ ವಲಯದಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 4ನೇ ರ್ಯಾಂಕ್ ಬಂದ ವಿದ್ಯಾರ್ಥಿಗಳು ಹಾಗೂ ವಲಯದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು ಮತ್ತು ಶೇ100ರಷ್ಟು ಫಲಿತಾಂಶ ಪಡೆದ ಶಾಲಾ ಮುಖ್ಯೋಪಾಧ್ಯಾಯರನ್ನು ಸತ್ಕರಿಸಿ ಮಾತನಾಡಿದರು.

ಶಿಕ್ಷಕರು ವಿದ್ಯಾರ್ಥಿಗಳಿಗೆ ಗುಣ ಮಟ್ಟದ ಶಿಕ್ಷಣ ನೀಡಿ ಅವರನ್ನು ಸಾಧ ಕರನ್ನಾಗಿ ಮಾಡಬೇಕು. ಪಾಲಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿ ಸಹಕರಿಸಿ. ವಿದ್ಯಾರ್ಥಿಗಳ ಈ ಸಾಧನೆ ಪ್ರಶಂಶಿಸಿದ ಅವರು, ಇನ್ನು ಹೆಚ್ಚಿನ ಸಾಧನೆ ಮಾಡಿ ಅದಕ್ಕೆ ಪೂರಕವಾದ ಎಲ್ಲ ರೀತಿಯ ಸಹಾಯ ಸಹಕಾರ ನೀಡುವದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ತಹಶೀಲದಾರ ಡಾ.ಮೋಹನ ಭಸ್ಮೆ, ತಾಪಂ ಕಾರ್ಯ ನಿರ್ವಾಹಕ ಅಧಿಕಾರಿ ಪರಶುರಾಮ ಘಸ್ತೆ, ಶಾಸಕ ಆಪ್ತ ಸಹಾಯಕ ಭೀಮಗೌಡ ಪೋಲಿಸಗೌಡರ, ಕಾಂತು ಎತ್ತಿನಮನಿ, ಸುರೇಶ ಸನದಿ ಸೇರಿದಂತೆ ವಿವಿಧ ಶಾಲೆಗಳ ಶಿಕ್ಷಕರು, ಇಲಾಖೆಯ ಅಧಿಕಾರಿಗಳು ಇದ್ದರು.



> ಎಸೆಸ್ಸೆಲ್ಸಿ ಪರೀಕ್ಷೆಯನ್ನು ವಲಯದಲ್ಲಿ 4069 ವಿದ್ಯಾರ್ಥಿಗಳು ಬರೆದಿದ್ದು ಅದರಲ್ಲಿ 3750ವಿದ್ಯಾರ್ಥಿಗಳು ಉತ್ತೀರ್ಣರಾಗಿ 92.18ಪ್ರತಿಶತ ಫಲಿತಾಂಶ ಬಂದಿದೆ. ಇದಕ್ಕೆ ಸಹಕಾರ ನೀಡಿದ ಎಲ್ಲರಿಗೂ ಅಭಿನಂದನೆ.
> ■ ಜಿ.ಬಿ. ಬಳಗಾರ, ಕ್ಷೇತ್ರ ಶಿಕ್ಷಣಾಧಿಕಾರಿ

1 ಟಾಪ್, ಬೆಸ್ ಸೌಂಡ್ ಸಿಸ್ಟಮ್ ಹಚ್ಚುವುದಕ್ಕೆ ಅವಕಾಶ ನೀಡಲು ಮನವಿ

ಬೆಳಗಾವಿ: 1ಟಾಪ್ , ಬೆಸ್ ನಿಯಮದಡಿ ಸೌಂಡ್ ಸಿಸ್ಟಮ್ ಬಳಸಲು ಅನುಮತಿ ನೀಡಬೇಕೆಂದು ಆಗ್ರಹಿಸಿ ಬೆಳಗಾವಿ ತಾಲೂಕಿನ ಸೌಂಡ್ ಸಿಸ್ಟಮ್ ಅಸೋಸಿಯೇಷನ್‌ನಿಂದ ಬೆಳಗಾವಿಯ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಯಿತು.

ಶನಿವಾರ ಬೆಳಗಾವಿಯ ಖಾನಾಪೂರ ಸೌಂಡ್ ಸಿಸ್ಟಮ್ ಅಸೋಸಿಯೇಷನ್'ನಿಂದ ಇರ್ಫಾನ್ ತಾಳಿಕೋಟಿ ಅವರ ನೇತೃತ್ವದಲ್ಲಿ ಬೆಳಗಾವಿಯ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಯಿತು.

ಕಳೆದ 10 ವರ್ಷಗಳಿಂದ ಸುಮಾರು 10 ಲಕ್ಷ ರೂಪಾಯಿ ಸಾಲ ಪಡೆದು ಸೌಂಡ್ ಸಿಸ್ಟಮ್ ಖರೀದಿಸಿ ಬಾಡಿಗೆ ನೀಡುವ ವ್ಯವಸಾಯವನ್ನು ಮಾಡುತ್ತಿದ್ದೇವೆ. ಆದರೆ, ಹೈಕೋರ್ಟ್ ಆದೇಶದನ್ವಯ ಅನುಮತಿಯಿಲ್ಲದೇ ಸೌಂಡ್ ಸಿಸ್ಟಮ್ ಬಳಸದಂತೆ ಪೊಲೀಸರು ಒತ್ತಡ ಹೇರುತ್ತಿದ್ದಾರೆ. ಅಲ್ಲದೇ ಸಿಸ್ಟಮ್'ಗಳನ್ನು ಸೀಜ್ ಮಾಡಲಾಗುತ್ತಿದೆ. ಇದರಿಂದ ಸೌಂಡ್ ಸಿಸ್ಟಮ್ ವ್ಯವಹಾರವನ್ನೇ ನಂಬಿಕೊಂಡವರು ಬೀದಿಗೆ ಬರುವಂತಾಗಿದೆ. ಆದಾಯಕ್ಕಿಂತ ಹೆಚ್ಚಿನ ದಂಡ ವಿಧಿಸುತ್ತಿರುವುದು ಆರ್ಥಿಕ ಹೊರೆಯಾಗುತ್ತಿದೆ ಎಂದು ಕಾರ್ತಿಕ್ ಖಾನಾಪೂರೆ ಅವರು ಹೇಳಿದರು.

ಇರ್ಫಾನ್ ತಾಳಿಕೋಟಿ ಅವರು ಜಿಲ್ಲಾಧಿಕಾರಿಗಳು 1 ಟಾಪ್ , ಬೆಸ್ ನಿಯಮದಡಿ ಆದರೂ ಅನುಮತಿ ನೀಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡರು.

ಈ ವೇಳೆ ಖಾನಾಪೂರ ಸೌಂಡ್ ಸಿಸ್ಟಮ್ ಅಸೋಸಿಯೇಷನ್'ನ ಸದಸ್ಯರು ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ವಿಶ್ವಮಾಂಗಲ್ಯ ಸಭೆಯ ಮಾತೃ ಸಮಾಗಮ ಉದ್ಘಾಟನೆ

ಬೆಳಗಾವಿ: ಕೆ.ಎಲ್.ಎಸ್. ಗೋಗಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ವಿಶ್ವಮಾಂಗಲ್ಯ ಸಭೆಯ ಕರ್ನಾಟಕ ಪ್ರಾಂತದ ಮಾತೃ ಸಮಾಗಮ ಕಾರ್ಯಕ್ರಮ ಭಾನುವಾರ ಅತ್ಯಂತ ವಿಜೃಂಭಣೆಯಿಂದ ಜರುಗಿತು.

ಸಮಾಜದ ಪ್ರಗತಿಯಲ್ಲಿ ಮಹಿಳೆಯರ ಪಾತ್ರ ಮತ್ತು ಪರಂಪರೆಯ ಮಹತ್ವವನ್ನು ಈ ಸಮಾವೇಶವು ಎತ್ತಿ ಹಿಡಿಯಿತು.

ಸಂಸ್ಕಾರ, ಸಾಮರ್ಥ್ಯ, ಸದಾಚಾರ ಮತ್ತು ಸೇವೆಯ ಧ್ಯೇಯವಾಕ್ಯದೊಂದಿಗೆ ನಡೆದ ಈ ಉದ್ಘಾಟನಾ ಸತ್ರವನ್ನು ಖ್ಯಾತ ಸಾಮಾಜಿಕ ಕಾರ್ಯಕರ್ತೆ ತೇಜಸ್ವಿನಿ ಅನಂತ ಕುಮಾರ್ ಅವರು ಉದ್ಘಾಟಿಸಿ ಮಾತನಾಡಿದ ಅವರು, ಸಂಪ್ರದಾಯ ಮತ್ತು ಪ್ರಗತಿಯ ನಡುವೆ ಸಮತೋಲನ ಕಾಯ್ದುಕೊಳ್ಳುವಲ್ಲಿ ಮಾತೃಶಕ್ತಿಯ ಕೊಡುಗೆ ಅಪಾರ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ವಿಶ್ವಮಾಂಗಲ್ಯ ಸಭೆಯ ರಾಷ್ಟ್ರೀಯ ಮಾರ್ಗದರ್ಶಕ ಪ್ರಶಾಂತ್ ಹರತಾಳಕರ್, ರಾಷ್ಟ್ರೀಯ ಸಹ ಸಂಘಟನಾ ಮಂತ್ರಿ ಗಾಯತ್ರಿ ಲೋಮಟೆ ಹಾಗೂ ಕೆ.ಎಲ್.ಎಸ್ ಸಂಸ್ಥೆಯ ಅಧ್ಯಕ್ಷ ರಾಜೇಂದ್ರ ಬೆಳಗಾಂವಕರ್ ಅತಿಥಿಗಳಾಗಿ ಭಾಗವಹಿಸಿದ್ದರು.

ಬೆಳಗಾವಿ ಘಟಕದ ಅಧ್ಯಕ್ಷೆ ರಶ್ಮಿ ಜೋಗದಂಡ ಹಾಗೂ ಉಪಾಧ್ಯಕ್ಷೆ ಸಂಧ್ಯಾ ಶಾನಭಾಗ್ ಅವರ ನೇತೃತ್ವದಲ್ಲಿ ನಡೆದ ಈ ಸಮಾವೇಶವು, ಭಾರತೀಯ ಸಂಸ್ಕೃತಿಯ ಪರಿಪಕ್ವತೆಯನ್ನು ಸಾರುವಲ್ಲಿ ಯಶಸ್ವಿಯಾಯಿತು. ಬಳಿಕ ಸಾಧಕರನ್ನು ಸನ್ಮಾನಿಸಲಾಯಿತು.



ಕೆ.ಎಲ್.ಎಸ್ ಸಂಸ್ಥೆಯ ಅಧ್ಯಕ್ಷ ರಾಜೇಂದ್ರ ಬೆಳಗಾಂವಕರ, ರತ್ನಪ್ರಭಾ ಬೆಲ್ಲದ, ಪುಷ್ಪಾ ಜೋಗದಂಡ, ಮಾಧುರಿ ಶಾನಭಾಗ, ರಾಧಿಕಾ ಕುಲಕರ್ಣಿ, ಡಾ. ಸೋನಾಲಿ ಸರನೋಬತ್, ಅರುಂಧತಿ ಸುಂಠನಕರ, ಜ್ಯೋತ್ಸ್ನಾ ಪೈ, ಸಾನಿಕಾ ಸಾವಂತ, ಅನುರಾಧಾ ದೇಶಪಾಂಡೆ, ಗೀತಾ ಪೈ, ಪ್ರಿಯಂಕಾ ಕೆಳಕರ, ಸೇರಿದಂತೆ ಹಲವರು ಇದ್ದರು.

ಕುಮಾರ ಚೌಗಲಾಗೆ ಪಿಎಚ್‌ಡಿ ಪದವಿ: ಸನ್ಮಾನ

ಚಿಕ್ಕೋಡಿ: ಇಲ್ಲಿನ ಕೆಎಲ್ಇ ಎಂಜಿನಿಯರಿಂಗ್ ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಕುಮಾರ ಚೌಗಲಾ ಮಂಡಿಸಿದ ಥಿಯಾರಿಟಿಕಲ್ ಆ್ಯಂಡ್ ಎಕ್ಸಪೆರಿಮೆಂಟಲ್ ಇನವೆಸ್ಟಿಗೇಶನ್ ಆಫ್ ಪೂಲ್ ಬಾಯಿಲಿಂಗ್ ಹೀಟ್ ಟ್ರಾನ್ಸಫರ್ ಫಿನಾಮಿನಾ ಯುಜಿಂಗ್ ಗ್ರಾಫಿನ್ ಮಲ್ಟಿವಾಲ್ಡ್ ಕಾರ್ಬನ್ ನ್ಯಾನೊಟ್ಯೂಬ್ ಹೈಬ್ರಿಡ್ ನ್ಯಾನೊಫ್ಲುಯಿಡ್ಸ್ ವಿಷಯದ ಪ್ರಬಂಧಕ್ಕೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಪಿಎಚ್‌ಡಿ ಪದವಿ ನೀಡಿದೆ ಎಂದು ಪ್ರಾಚಾರ್ಯ ಡಾ. ದರ್ಶನಕುಮಾರ ಬಿಳ್ಳೂರ ತಿಳಿಸಿದ್ದಾರೆ.

ಎಸ್. ಜೆ. ಬಾಳೆಕುಂದ್ರಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಸಿದ್ರಾಮಪ್ಪ ಆಲೂರ ಮಾರ್ಗದರ್ಶನ ನೀಡಿದ್ದರು.

ಡಾ. ಕುಮಾರ ಚೌಗಲಾ ಇವರನ್ನು ಪ್ರಾಚಾರ್ಯ ಡಾ. ದರ್ಶನಕುಮಾರ ಬಿಳ್ಳೂರ ಸತ್ಕರಿಸಿದರು. ಈ ಸಂದರ್ಭದಲ್ಲಿ ವಿಭಾಗ ಮುಖ್ಯಸ್ಥ ಡಾ. ವೀರಣ್ಣಾ ಮೋದಿ, ಪ್ರೊ. ರಾಜು ಹೆಬ್ಬಾಳೆ, ಡಾ. ಸಂಜಯ ಅಂಕಲಿ, ಡಾ. ಜಗನ್ನಾಥ ಜಾಧವ, ಡಾ. ಸಂಜಯ ಹನಗಂಡಿ, ಡಾ. ಸುನೀಲ ಶಿಂಧೆ, ಡಾ. ಸಚೀನ ಮೆಕ್ಕಳಕಿ ಉಪಸ್ಥಿತರಿದ್ದರು.



ಶಂಕರಣ್ಣ ಮಗದುಮ್ಮ ಸಾಂಸ್ಕೃತಿಕ ಪ್ರತಿಷ್ಠಾನದಿಂದ

ವೈದ್ಯ ಸಾಹಿತಿ ಡಾ. ನೂಲಿಗೆ ಪ್ರಶಸ್ತಿ ಪ್ರದಾನ

ಚಿಕ್ಕೋಡಿ: ಪಟ್ಟಣದ ಜಿಎಸ್ಇ ಸಂಸ್ಥೆಯ ಆವರಣದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ವೈದ್ಯ ಸಾಹಿತಿ ಡಾ. ದಯಾನಂದ ನೂಲಿ ಅವರಿಗೆ ಶಂಕರಣ್ಣ ಮಗದುಮ್ಮ ಸಾಂಸ್ಕೃತಿಕ ಪ್ರತಿಷ್ಠಾನದ 2026ನೇ ಸಾಲಿನ ಶಂಕರ ಸಾಹಿತ್ಯ ರತ್ನ ಪುರಸ್ಕಾರ ವನ್ನು ವಿಶ್ರಾಂತ ಪ್ರಾಚಾರ್ಯ ಬಸವರಾಜ ಜಗಜಂಪಿ ಪ್ರದಾನ ಮಾಡಿದರು. ಜಿಎಸ್ಇ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಶಂಕರಣ್ಣ ಮಗದುಮ್ಮ, ಸಂಪಾದನಾ ಸ್ವಾಮೀಜಿ, ಹಿರಿಯ ಸಾಹಿತಿ ಪ್ರೊ ಎಸ್ ವೈ ಹಂಜಿ, ಪ್ರಾಚಾರ್ಯ ವಿವೇಕಾನಂದ ಹಲ್ಲೊಳ್ಳಿ, ಪಿ ಜಿ ಕೆಂಪಣ್ಣವರ, ಎಂ ಬಿ ಹೂಗಾರ ಇತರರು ಇದ್ದರು.



ಮೇ 7ರಂದು ಸಾರಿಗೆ ಇಲಾಖೆಯ ಕುಂದುಕೊರತೆ ಸಭೆ

ಬೈಲಹೊಂಗಲ: ಪಟ್ಟಣದ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಮೇ 7ರಂದು ಮಧ್ಯಾಹ್ನ 12 ಗಂಟೆಗೆ ಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಕುಂದು-ಕೊರತೆಗಳನ್ನು ಆಲಿಸಿ ಪರಿಹರಿಸುವ ಉದ್ದೇಶದಿಂದ ಸಾರಿಗೆ ಅದಾಲತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಹಾಗೂ ವಾಹನ ಮಾಲೀಕರು ತಮ್ಮ ಸಮಸ್ಯೆಗಳು, ಸಲಹೆಗಳು ಹಾಗೂ ಅಹವಾಲುಗಳನ್ನು ಈ ಅದಾಲತ್‌ನಲ್ಲಿ ಮಂಡಿಸಬಹುದಾಗಿದೆ. ಕಾರ್ಯಕ್ರಮದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳುವಂತೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ ಜಯಾನಂದ ನರಸನ್ನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಿರುಸುದ್ದಿ

ಮಹಾಕೂಟೇಶ್ವರ ದೇವರ ಗಡ್ಡಿರಥೋತ್ಸವ

ಬಾದಾಮಿ: ತಾಲೂಕಿನ ಮಹಾಕೂಟದಲ್ಲಿ ಮಹಾಕೂಟೇಶ್ವರ ರಥೋತ್ಸವ ಅದ್ದೂರಿಯಾಗಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಜರುಗಿತು.

ಮಹಾಕೂಟೇಶ್ವರ ದೇವರ ಹೂವಿನಿಂದ ಅಲಂಕಾರಗೊಂಡ ಹೂವಿನ ರಥೋತ್ಸವಕ್ಕೂ ಅತ್ಯಧಿಕ ಭಕ್ತರು ಪಾಲ್ಗೊಂಡು ತೇರು ಎಳೆದಿದ್ದರು. ಚಾಲುಕ್ಯರ ಕಾಲದಲ್ಲಿ ವಿಜಯದ ಸಂಕೇತ ಎಂಬ ಇತಿಹಾಸದ ಪುಟದಲ್ಲಿರುವ ಮಹಾಕೂಟ ಕ್ಷೇತ್ರಕ್ಕೆ ಭಕ್ತಸಾಗರ ಹರಿದು ಬಂದಿತ್ತು. ಎರಡು ದಿನಗಳ ಕಾಲ ಇಲ್ಲಿಯೇ ಬೇಡು ಬಿಟ್ಟು ಎರಡು ದಿನಗಳ ರಥೋತ್ಸವದಲ್ಲಿ ಪಾಲ್ಗೊಂಡು ಭಕ್ತರು ಉತ್ತತ್ತಿ, ಹೂವು ಅರ್ಪಿಸಿದರು. ಮಹಾಕೂಟೇಶ್ವರ ಟ್ರಸ್ಟ್ ವತಿಯಿಂದ ಎರಡು ದಿನಗಳ ಕಾಲ ಉಚಿತ ಪ್ರಸಾದ ವ್ಯವಸ್ಥೆ ಹಮ್ಮಿಕೊಂಡು ಆಗಮಿಸಿದ ಭಕ್ತ ವರ್ಗಕ್ಕೆ ಉದುರು ಸಜ್ಜಕ, ಹುಗ್ಗಿ ಸಿಹಿಯನ್ನು ಉಣಬಡಿಸಿದರು. ಶಾಸಕ ಭೀಮಸೇನ ಚಿಮ್ಮನಕಟ್ಟಿ, ಟ್ರಸ್ಟ್ ಮುಖ್ಯಸ್ಥ ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ಡಿಸಿಸಿ ಬ್ಯಾಂಕಿನ ಮಾಜಿ ನಿರ್ದೇಶಕ ಕುಮಾರಗೌಡ ಜನಾಲಿ, ಶಾಂತಾದೇವಿ ಪಟ್ಟಣಶೆಟ್ಟಿ, ಎಂ.ಬಿ.ಹಂಗರಗಿ, ಬಿ.ಆರ್.ಪಾಟೀಲ, ಮುತ್ತಣ್ಣ ಕಳ್ಳಿಗುಡ್ಡ, ಮುಕ್ಕನಗೌಡ ಜನಾಲಿ, ಶಂಕರ ಶಾಸ್ತ್ರಿ, ಕುಮಾರ ಪಟ್ಟಣಶೆಟ್ಟಿ, ಮುತ್ತಣ್ಣ ಚಿನಿವಾಲರ, ಮಹಾಂತೇಶ ಬೆಣ್ಣಿ, ಮಹೇಶ ಪಾಟೀಲ, ಪಿಎಸ್ಐ ಹನಮಂತ ನರಳೆ ಸೇರಿದಂತೆ ಭಕ್ತರು ಇದ್ದರು.

ರಸಗೊಬ್ಬರ ಮಾರಾಟ ಪರವಾನಗಿ ಅಮಾನತು

ಬಾಗಲಕೋಟೆ: ರಸಗೊಬ್ಬರ ನಿಯಂತ್ರಣ ಆದೇಶ 1985ರ ಉಲ್ಲಂಘನೆಯಡಿ ತಾಲೂಕಿನ ಗದ್ದನಕೇರಿ ಕ್ರಾಸ್‌ನಲ್ಲಿರುವ ಬಸವೇಶ್ವರ ಟ್ರೇಡರ್ಸ್ ರಸಗೊಬ್ಬರ ಮಳಿಗೆ ಮಾರಾಟ ಪರವಾನಿಗಿ ಅಮಾನತು ಮಾಡಿ ಸಹಾಯಕ ಕೃಷಿ ನಿರ್ದೇಶಕರು ಹಾಗೂ ಸಕ್ಷಮ ಪ್ರಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ ಎಂದು ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ ತಿಳಿಸಿದ್ದಾರೆ. ಕಲಾದಗಿ ರೈತ ಸಂಪರ್ಕ ಕೇಂದ್ರ ಕೃಷಿ ಅಧಿಕಾರಿಗಳು ಇತ್ತೀಚೆಗೆ ಗದ್ದನಕೇರಿ ಕ್ರಾಸ್‌ನಲ್ಲಿರುವ ಬಸವೇಶ್ವರ ಟ್ರೇಡರ್ಸ್ ಮಳಿಗೆ ತಪಾಸಣೆ ಮಾಡಿ, ರಸಗೊಬ್ಬರ ನಿಯಂತ್ರಣ ಆದೇಶ 1985ರ ಉಲ್ಲಂಘಿಸಿರುವುದಾಗಿ ಸಹಾಯಕ ಕೃಷಿ ನಿರ್ದೇಶಕರಿಗೆ ವರದಿ ಸಲ್ಲಿಸಿದ್ದರು. ವರದಿ ಮೇರೆಗೆ ಸಹಾಯಕ ಕೃಷಿ ನಿರ್ದೇಶಕರು, ರಸಗೊಬ್ಬರ ಪರವಾನಿಗೆ ಸಕ್ಷಮ ಪ್ರಾಧಿಕಾರಿಗಳು ಪರವಾನಿಗೆ ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ. ರಸಗೊಬ್ಬರದ ವಿತರಣೆಗೆ ರೈತರ ಎಫ್‌ಐಡಿ ಕಡ್ಡಾಯಗೊಳಿಸಲಾಗಿದ್ದು, ಎಲ್ಲ ರೈತರು ಸಮೀಪದ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ತಮ್ಮ ಎಫ್‌ಐಡಿಗೆ ಎಲ್ಲ ಸರ್ವೆ ನಂಬರ್ ಜೋಡಣೆ ಮಾಡಿಟ್ಟುಕೊಳ್ಳುವಂತೆ ಕೋರಲಾಗಿದೆ. ರಸಗೊಬ್ಬರದ ಅಕ್ರಮ ದಾಸ್ತಾನು, ಸಾಗಾಣಿಕೆ ಮತ್ತು ಬಳಕೆ ಕಂಡುಬಂದಲ್ಲಿ ಅಂತಹವರ ವಿರುದ್ಧ ರಸಗೊಬ್ಬರ ನಿಯಂತ್ರಣ ಆದೇಶ 1985 ರಡಿ ಅಗತ್ಯ ವಸ್ತು ಕಾಯ್ದೆಯನ್ವಯ ಕಾನೂನು ಕ್ರಮ ಜರುಗಿಸಲಾಗುವುದೆಂದು ಜಂಟಿ ಕೃಷಿ ನಿರ್ದೇಶಕರು ಹೇಳಿದರು.

ಅಕ್ರಮ ಮರಳು ಗಣಿಗಾರಿಕೆ: ₹50 ಸಾವಿರ ದಂಡ

ಹುನಗುಂದ: ತಾಲೂಕಿನ ಹಿರೇಮಾಗಿ ಗ್ರಾಮದ ಮಲಪ್ರಭಾ ನದಿ ತೀರದಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಸುವ ಸ್ಥಳಗಳ ಮೇಲೆ ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಹಾಯಕ ನಿರ್ದೇಶಕಿ ಶ್ರಾವಣಿ ಅವರ ನೇತೃತ್ವದಲ್ಲಿ ದಾಳಿ ನಡೆಸಿ ಸ್ಥಳದಲ್ಲಿದ್ದ ಜೆಸಿಬಿ ವಾಹನವನ್ನು ವಶಕ್ಕೆ ಪಡೆದು 50 ರೂ.ಸಾವಿರ ದಂಡ ವಿಧಿಸಿದ್ದಾರೆ.

ನಾಗಲಿಂಗೇಶ್ವರ ನಾಟಕ ಪ್ರದರ್ಶನ ನಾಳೆ

ಬೀಳಗಿ: ತಾಲೂಕಿನ ಬೂದಿಹಾಳ (ಎಸ್‌ಎ) ಗ್ರಾಮದಲ್ಲಿ ಗ್ರಾಮ ದೇವತೆಯ ಉಡಿ ತುಂಬುವ ಕಾರ್ಯಕ್ರಮದ ಅಂಗವಾಗಿ ಬೂದಿಹಾಳ (ಎಸ್‌ಎ) ಗ್ರಾಮದ ರೇವಣ ಸಿದ್ದೇಶ್ವರ ನಾಟ್ಯ ಸಂಘದ ಕಲಾವಿದರಿಂದ ಮೇ 5 ಪ್ರದರ್ಶನ ರಾತ್ರಿ 10ಕ್ಕೆ 'ಅಜಾತ ಗುರು ಶ್ರೀ ನಾಗಲಿಂಗೇಶ್ವರ ಮಹಾತ್ಮೆ' ಎಂಬ ಭಕ್ತಿ ಪ್ರಧಾನ ನಾಟಕ ಕರಿಸಿದ್ದೇಶ್ವರ ಶಾಲೆ ಆವರಣದಲ್ಲಿ ಜರುಗಲಿದೆ ಪ್ರದರ್ಶನಗೊಳ್ಳಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಿಧನಸುದ್ದಿ

ಯಲ್ಲವ್ವ ಹಡಪದ



ಬೀಳಗಿ: ತಾಲೂಕಿನ ಬೂದಿಹಾಳ (ಎಸ್‌ಎ) ಗ್ರಾಮದ ಯಲ್ಲವ್ವ ವೀರಭದ್ರಪ್ಪ ಹಡಪದ(70) ನಿಧನರಾದರು. ಮೃತರಿಗೆ ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವಿದೆ.



ಬಾದಾಮಿ ತಾಲೂಕಿನ ಸುಕ್ಷೇತ್ರ, ಮಹಾಕೂಟದಲ್ಲಿ ಮಹಾಕೂಟೇಶ್ವರ ದೇವರ ರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ಶನಿವಾರ ಜರುಗಿತು.

ಎಸ್ಸೆಸ್ಸೆಲ್ಸಿ ಟಾಪರ್ ಸೌಜನ್ಯಳಿಗೆ ಸನ್ಮಾನ

ಹುನಗುಂದ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಟಾಪರ್ ಆಗಿರು ಹುನಗುಂದ ಪಟ್ಟಣದ ಮುದ್ದೇಬಿಹಾಳ ತಾಲೂಕಿನ ನಾಗರಬೆಟ್ಟ ಆಕ್ಸಫರ್ಡ್ ಶಾಲೆ ವಿದ್ಯಾರ್ಥಿನಿ ಸೌಜನ್ಯ ಬಸವರಾಜ ಕಂದಕೂರ ಅವರನ್ನು ಪಟ್ಟಣದ ಎಸ್.ಎಸ್.ಕಡಪಟ್ಟಿ ಇಂಟರ್‌ನ್ಯಾಶನಲ್ ಪಬ್ಲಿಕ್ ಸ್ಕೂಲ್ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಸಂಸ್ಥೆಯ ಮ್ಯಾನೇಜಿಂಗ ಟ್ರಸ್ಟ್ ಬಸವರಾಜ ಎಸ್.ಕಡಪಟ್ಟಿ ಮಾತನಾಡಿ, ಸೌಜನ್ಯ ಬಸವರಾಜ ಕಂದಕೂರ ಅವರು ಪೂರ್ವ ಪ್ರಾಥಮಿಕದಿಂದ 5ನೇ ತರಗತಿವರೆಗೆ ನಮ್ಮ ಶಾಲೆ ವಿದ್ಯಾರ್ಥಿನಿಯಾಗಿದ್ದಳು. 10ನೇ ತರಗತಿಯಲ್ಲಿ 625 ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿನಿಯ ಶ್ರದ್ಧೆ, ಪರಿಶ್ರಮ, ಪಾಲಕರ ಹಾಗೂ ಶಿಕ್ಷಕರ ಮಾರ್ಗದರ್ಶನದಿಂದ ಈ ಯಶಸ್ಸು ಸಾಧ್ಯವಾಗಿದೆ. ಇದು ನಮ್ಮ ಶಾಲೆಗೆ ಮತ್ತು ಪೋಷಕರಿಗೆ ಹೆಮ್ಮೆಯ ವಿಷಯವಾಗಿದೆ ಎಂದು ಹರ್ಷ ವ್ಯಕ್ತಪಡಿಸುವುದರ ಜೊತೆಗೆ ವಿದ್ಯಾರ್ಥಿನಿಯ ಈ ಸಾಧನೆ ಮುಂದಿನ ದಿನಗಳಲ್ಲಿ ಶಾಲೆಯ ಇತರೆ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಲಿದೆ ಎಂದರು.

ಸನ್ಮಾನ ಸಮಾರಂಭದಲ್ಲಿ ಚೇರಮನ್ ಲತಾ ಬಸವರಾಜ ಕಡಪಟ್ಟಿ, ಶಾಲೆ ಆಡಳಿತ ಮಂಡಳಿಯ ಸದಸ್ಯರು, ಪ್ರಾಚಾರ್ಯ, ಶಿಕ್ಷಕ ವೃಂದದವರು ಹಾಗೂ ವಿದ್ಯಾರ್ಥಿನಿಯ ಪೋಷಕರು ಉಪಸ್ಥಿತರಿದ್ದು, ಸಾಧಕ ವಿದ್ಯಾರ್ಥಿನಿಯನ್ನು ಅಭಿನಂದಿಸಿದರು.



ಹುನಗುಂದ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಟಾಪರ್ ಆಗಿರು ಹುನಗುಂದ ಪಟ್ಟಣದ ಮುದ್ದೇಬಿಹಾಳ ತಾಲೂಕಿನ ನಾಗರಬೆಟ್ಟ ಆಕ್ಸಫರ್ಡ್ ಶಾಲೆ ವಿದ್ಯಾರ್ಥಿನಿ ಸೌಜನ್ಯ ಬಸವರಾಜ ಕಂದಕೂರ ಅವರನ್ನು ಪಟ್ಟಣದ ಎಸ್.ಎಸ್.ಕಡಪಟ್ಟಿ ಇಂಟರ್‌ನ್ಯಾಶನಲ್ ಪಬ್ಲಿಕ್ ಸ್ಕೂಲ್ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಉಪ ಚುನಾವಣೆ: ಸಿಬ್ಬಂದಿಗೆ 2ನೇ ಹಂತದ ಮತ ಎಣಿಕೆ ತರಬೇತಿ

ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿ

ಬಾಗಲಕೋಟೆ: ಮತ ಎಣಿಕೆ ಪ್ರಕ್ರಿಯೆ ಅತ್ಯಂತ ಮಹತ್ವದ್ದಾಗಿದ್ದು, ಪ್ರತಿಯೊಬ್ಬ ಸಿಬ್ಬಂದಿಯೂ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಅವರು ತಿಳಿಸಿದರು.

ಬಾಗಲಕೋಟೆ ಉಪಚುನಾವಣೆ ಹಿನ್ನಲೆಯಲ್ಲಿ ಮತಎಣಿಕೆಸುಗಮವಾಗಿಹಾಗೂಪಾರದರ್ಶಕವಾಗಿ ನಡೆಸುವ ಉದ್ದೇಶದಿಂದ ಭಾನುವಾರ ಜರುಗಿದ ಉಪಚುನಾವಣೆ ಮತ ಎಣಿಕೆಯ 2ನೇ ಹಂತದ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಹಾಗೂ ಉಪ ಚುನಾವಣೆಯ ಸಾಮಾನ್ಯ ವೀಕ್ಷಕ ಪಾರುಲ್ ಪಟವಾರಿ ಅವರ ಸಮ್ಮುಖದಲ್ಲಿ ಮತ ಎಣಿಕೆಯ 2ನೇ ಹಂತದ ತರಬೇತಿ ನೀಡಲಾಯಿತು. ತರಬೇತಿಯಲ್ಲಿ ಮತ ಎಣಿಕೆ ಸಿಬ್ಬಂದಿಗಳಿಗೆ ಮತ ಎಣಿಕೆಯ ಪ್ರಕ್ರಿಯೆ, ಇವಿಎಂ ಮತ್ತು ವಿವಿಪ್ಯಾಟ್ ಯಂತ್ರಗಳ ಬಳಕೆ, ಮತ ಎಣಿಕೆಯ ವೇಳೆ ಪಾಲಿಸಬೇಕಾದ ಮಾರ್ಗಸೂಚಿಗಳು ಹಾಗೂ ಮಾರ್ಗಸೂಚಿಯ ಕುರಿತು ವಿವರವಾದ ಮಾಹಿತಿ ನೀಡಲಾಯಿತು. ಪ್ರತಿ ಹಂತದಲ್ಲಿಯೂ ಕಟ್ಟುನಿಟ್ಟಿನ ಕ್ರಮಗಳನ್ನು ಅನುಸರಿಸುವಂತೆ ಸೂಚಿಸಲಾಯಿತು.



ತರಬೇತಿಯಲ್ಲಿ ವಿಶೇಷವಾಗಿ ಮತ ಎಣಿಕೆ ಟೇಬಲ್ ವ್ಯವಸ್ಥೆ, ಫಲಿತಾಂಶ ದಾಖಲಿಸುವ ವಿಧಾನ, ಅಂತಿಮ ಫಲಿತಾಂಶ ಘೋಷಣೆ ಪ್ರಕ್ರಿಯೆ ಕುರಿತು ತಿಳಿಸಿಕೊಡಲಾಯಿತು. ಸಿಬ್ಬಂದಿಗಳು ಯಾವುದೇ ಗೊಂದಲವಿಲ್ಲದೇ ತಮ್ಮ ಕರ್ತವ್ಯವನ್ನು ನಿರ್ವಹಿಸುವಂತೆ ತಿಳಿಸಲಾಯಿತು.

ಮಾಸ್ಟರಟ್ರೈನರ್ ಸಣತಂಗಿತರಬೇತಿ ನೀಡಿದರು. ತರಬೇತಿಯಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪ ವಿಭಾಗಾಧಿಕಾರಿ ಹಾಗೂ ಚುನಾವಣಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ್ ವಾಸುದೇವ ಸ್ವಾಮಿ ಉಪಸ್ಥಿತರಿದ್ದರು. ತರಬೇತಿ ಕಾರ್ಯದಲ್ಲಿ ಮತ ಎಣಿಕೆ ಮೇಲ್ವಿಚಾರಕರು, ಸಹಾಯಕ ಹಾಗೂ ಮೈಕ್ರೋ ಆಬ್ಸರವರ ಪಾಲ್ಗೊಂಡಿದ್ದರು.

ಮಾನವೀಯತೆ ಉಳಿಸುವುದೇ ಕವಿ ಧ್ಯೇಯವಾಗಲಿ: ಡಾ.ದೊಡ್ಡಮನಿ

ಗುಳೇದಗುಡ್ಡ: ಕವಿಯಾದವನು ಸಮಾಜದ ಸಂಕಟಕ್ಕೆ, ಹಸಿದವರ ನೋವಿಗೆ ಮಿಡಿಯಬೇಕು. ಪ್ರಭುತ್ವ ಶಾಹಿಗಳ ಅಟ್ಟಹಾಸದಲ್ಲಿ ಮನುಷ್ಯತ್ವ ಉಳಿಸುವ ಕವಿ ಜೀವ ಪರ ನಿಲುವನ್ನು ಪ್ರತಿಪಾದಿಸುವ ಕಾವ್ಯ ರಚಿಸಬೇಕೆಂದು ಸಂಶೋಧಕ ಡಾ.ಸಣ್ಣವೀರಣ್ಣ ದೊಡ್ಡಮನಿ ಹೇಳಿದರು.

ಪಟ್ಟಣದ ಚಿತ್ರಚೇತನದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಸಹಕಾರದೊಂದಿಗೆ ಭಾನುವಾರ ಹಮ್ಮಿಕೊಂಡಿದ ಕವಿ ಮಹಾದೇವ ಜಗತಾಪ ರಚನೆ ನೋವು ನಲಿವು ಕೃತಿ ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ದೌರ್ಜನ್ಯ ಎದುರಿಸಿ ಮಾನವೀಯತೆ ಉಳಿಸುವುದೇ ಕವಿ ಧ್ಯೇಯವಾಗಿಲಿ. ಜಗತಾಪ ನೋವು ನಲಿ ಕಾವ್ಯದ ರೂಪಕ್ಕೆ ಇಳಿಸಿ ಸಮಾಜದಲ್ಲಿ ಅದನ್ನು ಪರಿಚಯಿಸುವ ಕಾರ್ಯ ಮಾಡಿದ್ದಾರೆ ಎಂದರು.

ಪ್ರೊ.ಚಂದ್ರಶೇಖರ ಹೆಗಡೆ ಮಾತನಾಡಿ, ಮಹಾದೇವ ಜಗತಾಪ ಅವರ ಕಾವ್ಯ ರಾಷ್ಟ್ರ ಪ್ರೇಮ ಪ್ರತಿಪಾದಿಸುತ್ತದೆ. ಕವಿಯ ಆಲೋಚನೆ ನವೋದಯದ ಛಾಯೆಯಾಗಿ, ಸಾಂಸ್ಕೃತಿಕ ಹಿರಿಮೆ, ಇತಿಹಾಸ, ಚಿತ್ರಕಲಾ ಯೋಗ ಪರಿಣಿತಿಯ ಅನುಭವ ಕನ್ನಡಿಯಾಗಿದೆ ಎಂದರು.

ಡಾ.ರಾಜಶೇಖರ ಬಸುಪಟ್ಟದ ಮಾತನಾಡಿ, ಕವಿ ಮಹಾದೇವ ಜಗತಾಪ ಅವರು ನಿವೃತ್ತಿ ಆದ ನಂತರ ಕಾವ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವುದು ಅವರ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿದೆ ಎಂದರು.

ಡಾ.ವಿ.ಎ.ಬೆಳಕಿನಾಳ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಹಾದೇವ ಯೋಗ ಮತ್ತು ಚಿತ್ರ ಕಲೆ ರೂಢಿಸಿಕೊಂಡು ಇತ್ತೀಚೆಗೆ ಸಾಹಿತ್ಯ ಕ್ಷೇತ್ರದಲ್ಲಿ ನೋವು ನಲಿವು ಕವನ ಸಂಕಲನದ ಮೂಲಕ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದು ಪ್ರಶಂಸನೀಯ ಎಂದರು.

ರಾಜ್ಯ ಅಖಿಲ ಭಾರತ ಸಾಹಿತ್ಯ ಪರಿಷತ್ ಅಧ್ಯಕ್ಷ ಜಿ.ಎಸ್. ಕೋಟಿ, ಥೈಲ್ಯಾಂಡ್‌ನಲ್ಲಿ ಸ್ಪಿರಿಟ್ ಯೋಗ ಕೇಂದ್ರ ಯೋಗ ತರಬೇತಿ ನೀಡುತ್ತಿರುವ ಮಾರುತಿ ಜಗತಾಪ ಅವರನ್ನು ಸನ್ಮಾನಿಸಲಾಯಿತು. ಅಭಾಸಾಪ ಕಾರ್ಯದರ್ಶಿ ಮಲ್ಲಿಕಾರ್ಜುನ ರಾಜನಾಳ ನಿರೂಪಿಸಿ, ವಂದಿಸಿದರು.

ಡಾ.ವಿ.ಎನ್. ಧಾಣಕಶಿರೂರ, ಅಶೋಕ ಹೆಗಡೆ, ಸುರೇಶ ಪರ್ವತೀಕರ, ರವಿ ಅಂಗಡಿ, ಸಿದ್ದು ರಾವಳ, ಎಸ್. ಎಸ್.ಗುರವ, ಸುರೇಶ ವಗ್ಗಾ, ಸಿದ್ದರಾಮಯ್ಯ ಪುರಾಣಿಕಮಠ, ದೀಪಕ ಜಗತಾಪ, ಮೋಹನ ಕರನಂದಿ, ಶಂಕರ ಲಮಾಣಿ,ವಿದ್ಯಾ ಜಗತಾಪ, ಶಶಿಕಲಾ ಜಗತಾಪ, ಹುಚ್ಚೇಶ ಯಂಡಿಗೇರಿ, ಲಕ್ಷ್ಮೀಬಾಯಿ ಜಾಧವ ಇತರರು ಇದ್ದರು.



ಪರೀಕ್ಷಾ ಕೇಂದ್ರಕ್ಕೆ ಡಿಸಿ ಭೇಟಿ, ಪರಿಶೀಲನೆ



ಬಾಗಲಕೋಟೆ: ನಗರದ 10 ಕೇಂದ್ರಗಳಲ್ಲಿ ರವಿವಾರ ನಡೆದ ನೀಟ್ ಪರೀಕ್ಷೆ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಅವರು ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ನವನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜನಲ್ಲಿ ಸ್ಥಾಪಿಸಲಾದ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ, ಭದ್ರತಾ ವ್ಯವಸ್ಥೆ, ಸಿಸಿಟಿವಿ ಅಳವಡಿಕೆ, ಪ್ರವೇಶ ನಿಯಂತ್ರಣ ಕ್ರಮ ಸೇರಿದಂತೆ ಅಗತ್ಯ ಸೌಲಭ್ಯ ವೀಕ್ಷಣೆ ಮಾಡಿದರು. ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎ.ಸಿ.ಮನ್ನಕೇರಿ ಸೇರಿದಂತೆ ಇತರರು ಇದ್ದರು. ನೀಟ್ ಪರೀಕ್ಷೆಗೆ ಒಟ್ಟು 3727 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. ಈ ಪೈಕಿ 3618 ವಿದ್ಯಾರ್ಥಿಗಳು ಹಾಜರಾಗಿ 109 ವಿದ್ಯಾರ್ಥಿಗಳು ಗೈರು ಹಾಜರಾಗಿರುತ್ತಾರೆ ಎಂದು ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯ ಪಾಟೀಲ ತಿಳಿಸಿದ್ದಾರೆ.

ಶಿಷ್ಯ ವೃಂದ ಸಾಧನೆ ಮಾಡಿದಾಗ ಗುರುವಿಗೆ ತೃಪ್ತಿ

ರಬಕವಿ-ಬನಹಟ್ಟಿ: ಗುರುಗಳ ಸ್ಮರಣೆ ನಿರಂತರವಾಗಿರಬೇಕು. ಶಿಷ್ಯ ವೃಂದ ಸಾಧನೆ ಮಾಡಿದಾಗ ಗುರುವಿಗೆ ತೃಪ್ತಿಯಾಗುವುದು ಎಂದು ಶರಣಬಸವ ಶಿವಾಚಾರ್ಯರು ಹೇಳಿದರು.

ಬನಹಟ್ಟಿಯ ಎಸ್‌ಆರ್‌ಎ ಪ್ರೌಢಶಾಲೆಯ 1988-89ನೇ ಸಾಲಿನ ವಿದ್ಯಾರ್ಥಿಗಳು ಲಕ್ಷ್ಮೀದೇವಿ ಸಮುದಾಯ ಭವನದಲ್ಲಿ ಆಯೋಜಿಸಿದ ಸ್ನೇಹ ಸಮ್ಮಿಲನ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿ ಸ್ನೇಹ ಸಮ್ಮಿಲನ ಹಾಗೂ ಗುರುವಂದನೆ ಕೇವಲ ಕಾಟಾಚಾರಕ್ಕಾಗದೆ ಇಲ್ಲೊಂದು ಕಾರ್ಯಕ್ರಮ ಬಡಕುಟುಂಬ ಮಕ್ಕಳಿಗೆ ಆರ್ಥಿಕವಾಗಿ ಸ್ಫೂರ್ತಿದಾಯಕವಾಗಲು ಕಾರಣವಾಯಿತು ಎಂದರು.

ಈ ವೇಳೆ ವರ್ಧಮಾನ ಯಲಗುದ್ರಿ ಎಂಬುವರು ಬಡಸ್ನೇಹಿತನ ಮಗನ ಜ್ಞಾನಾರ್ಜನೆ ಸಲುವಾಗಿ ಪ್ರತಿ ವರ್ಷ 5 ಸಾವಿರ ರೂ.ಗಳ ಸಹಾಯ ಧನ, ಮತ್ತೇ ಕೆಲವರು ಕುಟುಂಬಗಳಿಗೆ ಉದ್ಯೋಗ ಸೃಷ್ಟಿ ಜೊತೆಗೆ ಇತರೆ ಸಹಾಯ ಹೀಗೆ ಉಳ್ಳವರು ದುರ್ಬಲರಿಗೆ ಸಹಾಯವಾಗುವ ಮೂಲಕ ಅರ್ಥಪೂರ್ಣ ಕಾರ್ಯಕ್ರಮ ಜರುಗಿತು.

37 ವರ್ಷಗಳ ನಂತರ ಸೇರಿದ ಹಳೆ ವಿದ್ಯಾರ್ಥಿಗಳು ತಮ್ಮ ಶಾಲಾ ದಿನಗಳ ಸಿಹಿ ನೆನಪು ಹಂಚಿಕೊಂಡು ಹಳೆ ಸ್ನೇಹವನ್ನು ಜೀವಂತಗೊಳಿಸಿದರು. ಕೆಲ ಸಂದರ್ಭಗಳಲ್ಲಿ ಭಾವನಾತ್ಮಕ ಕ್ಷಣಗಳು ಸಾಕ್ಷಿಯಾದವು.

ಹಿರಿಯ ಸಾಹಿತಿ ಜಯವಂತ ಕಾಡದೇವರ, ಅಶೋಕ ಪತ್ತಾರ, ಸಿದ್ದರಾಮ ಹಾವಿನಾಳ, ಎ.ಸಿ. ಹಳ್ಳಿ, ಕಲಾದಗಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿದ ಗುರುಗಳು, ಅವರ ಭವಿಷ್ಯ ಉಜ್ವಲವಾಗಿರಲೆಂದು ಆಶೀರ್ವದಿಸಿದರು.

ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳ ಭಾಷಣ, ಅನುಭವ ಹಂಚಿಕೆ ಮತ್ತು ಸ್ನೇಹಮಿಲನ ಮಾತುಕತೆ ನಡೆಯಿತು.

ಪವನ ಲಡ್ಡಾ, ಕಾಡು ಹಳಿಂಗಳಿ, ಮಲ್ಲಿಕಾರ್ಜುನ ಕುಂಚನೂರ, ಬಸವರಾಜ ಅಮಟಿ, ಬಾಬು ಕಿತ್ತೂರ, ಪ್ರಶಾಂತ ಸೊರಗಾಂವಿ, ಸುಭೋದ ಕೋಪರ್ಡೆ, ಮಲ್ಲು ಕುಳ್ಳಿ, ಬುದ್ನಿ, ಪ್ರಕಾಶ ಭೂತಿ, ಸುಜಾತಾ ಯಾದವಾಡ, ಉಜ್ವಲಾ ಬಾಣಕಾರ, ಭಾರತಿ ಜಾಡಗೌಡ, ಅನಿತಾ ಕೋಲಾರ, ದ್ರಾಕ್ಷಾಯಿಣಿ ಹುನ್ನೂರ, ಮೊಳೆಗಾಂವಿ ಸೇರಿದಂತೆ ಅನೇಕರಿದ್ದರು.



ಮನುಷ್ಯ ಜನ್ಮ ಪಡೆಯುವುದೇ ದೊಡ್ಡ ಪುಣ್ಯ: ಶ್ರೀಧರ

ಜಮಖಂಡಿ: ಪವಾಡ ಪುರುಷರ ಹಾಗೂ ಸತ್ಪುರುಷರ ಆಶೀರ್ವಾದ ನಮ್ಮ ಬದುಕನ್ನು ಉದ್ಧಾರ ಮಾಡುತ್ತದೆ.ದೈವಾನುಗ್ರಹಕ್ಕಾಗಿ ನಾವು ಭಕ್ತಿಯಿಂದ ಪ್ರಾರ್ಥಿಸಬೇಕೆಂದು ಹಿರಿಯ ಚಿತ್ರನಟ ಶ್ರೀಧರ ಹೇಳಿದರು.



ತಾಲೂಕಿನ ಮೈಗೂರ ಗ್ರಾಮದ ಗುರುದೇವಾಶ್ರಮದ ಆವರಣದಲ್ಲಿ ಶಿವಾನಂದ ಮಠದ ಜಾತ್ರಾ ಮಹೋತ್ಸವ ಹಾಗೂ ಲಿ. ಮಲ್ಲಿಕಾರ್ಜುನ ಶ್ರೀಗಳ ಪುಣ್ಯಾರಾಧನೆ ನಿಮಿತ್ತ ಇತ್ತೀಚಿಗೆ ಹಮ್ಮಿಕೊಳ್ಳಲಾಗಿದ ಮೈಗೂರ ಪವಾಡ ಪುರುಷ ಪೌರಾಣಿಕ ನಾಟಕ ಕಾರ್ಯ ಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಕ್ತಿಯಿಂದ ಕೇಳಿದ್ದನ್ನು ನೀಡಲು ಪರಮಾತ್ಮ ಸ್ವಲ್ಪ ವಿಳಂಬ ಮಾಡಬಹುದು. ಆದರೆ ಸದ್ಗುರುಗಳು ಎಂದಿಗೂ ವಿಳಂಬ ಮಾಡುವುದಿಲ್ಲ. ಭಕ್ತರಕಷ್ಟಗಳಿಗೆತಕ್ಷಣ ಸ್ಪಂದಿಸುವ ಶಕ್ತಿ ಮಹಾಗುರುಗಳಿಗಿದೆ. ಮನುಷ್ಯ ಜನ್ಮ ಪಡೆಯುವುದೇ ದೊಡ್ಡ ಪುಣ್ಯ. ಅಂತಹ ಪುಣ್ಯದ ಫಲವಾಗಿ ನಮಗೆ ಮಹಾಪುರುಷರ ಸಾನ್ನಿಧ್ಯದಲ್ಲಿ ಇರುವ ಭಾಗ್ಯ ಸಿಗುತ್ತದೆ. ಜೀವನದ ಕಷ್ಟ-ನೋವುಗಳನ್ನು ನಿವಾರಿಸುವ ಸಾಮರ್ಥ್ಯ ಸತ್ಪುರುಷರಿಗಿದೆ ಎಂದರು.

ಹಿರಿಯ ನಟಿಯರಾದ ಅನು ಪ್ರಭಾಕರ್, ಭವ್ಯಾ, ಶಾಸಕ ನಾಡೋಜ ಜಗದೀಶ ಗುಡಗುಂಟಿ, ಶ್ರೀಮಠದ ಗುರುಪ್ರಸಾದ ಸ್ವಾಮೀಜಿ ಮಾತನಾಡಿದರು. ಹುಲ್ಯಾಳ ಗುರುದೇವಾಶ್ರಮದ ಹರ್ಷಾನಂದ ಸ್ವಾಮೀಜಿ, ಬಾಲ್ಕಿಯ ಶ್ರೀಗಳು ಸಾನ್ನಿಧ್ಯವಹಿಸಿದ್ದರು. ಪರಪ್ಪ ಕಕಮರಿ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ಪಿಎಸ್ಐ ಕುಮಾರ ಮೂಕನವರ, ಮಲ್ಲು ಬಿ. ಪಾಟೀಲ, ಸಂಜು ಖೋತ, ಮುತ್ತಣ್ಣ ಮೂಕನವರ, ಭೂಪಾಲ ಸದಲಗಿ, ರಾಜೇಶ್ವರಿ ಹಿರೇಮಠ, ರಾಮ ಅಂಬಿ, ಅಡವಯ್ಯ ಹಿರೇಮಠ, ಮಹಾದೇವ ಭೀಮನಹಳ್ಳಿ, ಧರನೇಶ ನ್ಯಾಮಗೌಡ, ಶಿವಪ್ರಭು ಭೀಮನಹಳ್ಳಿ ಸಂಗೊಳ್ಳಿ ಮಠಪತಿ ಇದ್ದರು.

ಶಿಕ್ಷಕ ಅಪ್ಪು ಅಂಬಿ ಸ್ವಾಗತಿಸಿದರು, ಶಿಕ್ಷಕ ಎಂ.ಡಿ. ತೇಲಸಂಗ ನಿರೂಪಿಸಿದರು.

'ನೋವುಂಡು ನಲಿದವರು' ಅಭಿನಂದಾನ ಗ್ರಂಥ ಲೋಕಾರ್ಪಣೆ ನಾಳೆ

ಗುಳೇದಗುಡ್ಡ: ಪಟ್ಟಣದ ಹಿರಿಯ ಸ್ವಯಂ ಸೇವಕ ರಂಗಪ್ಪ ಶೇಬಿನಕಟ್ಟಿ ಅಭಿನಂದನಾ ಸಮಿತಿ ವತಿಯಿಂದ ನೋವುಂಡು ನಲಿದವರು ಎಂಬ ಅಭಿನಂದಾನ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ ಮೇ 5ರಂದು ಬೆಳಿಗ್ಗೆ 10.30ಕ್ಕೆ ಪಟ್ಟಣದ ಶಿವಕೃಪಾ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಶಾಸಕ ರಾಜಶೇಖರ ಶೀಲವಂತ ಹೇಳಿದರು.

ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ತಳಮಟ್ಟದ ಕಾರ್ಯಕರ್ತರಾಗಿ, ಸಮಾಜ ಸೇವಕರಾಗಿ ಸಮಾಜಕ್ಕೆ ಸಾಕಷ್ಟುಕೊಡುಗೆನೀಡಿ, 84 ವಸಂತಪೂರೈಸಿದರಂಗಪ್ಪ ಶೇಬಿನಕಟ್ಟಿ ಅವರ ಅಭಿಮಾನಿಗಳಿಂದ ಅಭಿನಂದನಾ ಹಾಗೂ ಸಹಸ್ರ ಚಂದ್ರದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹಂಪಿ ಹೇಮಕೂಟ ಗಾಯತ್ರಿ ಪೀಠದ ದಯಾನಂದಪುರಿ ಶ್ರೀಗಳು, ಸ್ಥಳೀಯ ಗುರುಸಿದ್ದೇಶ್ವರ ಮಠದ ಬಸವರಾಜ ಪಟ್ಟದಾರ್ಯ ಶ್ರೀಗಳು, ಗದ್ದನಕೇರಿಯ ಮಳೆರಾಜೇಂದ್ರಮಠದ ಭಾಸ್ಕರ ಶ್ರೀಗಳು, ದೇವಾಂಗಮಠ ರಾಘವೇಂದ್ರ ಶ್ರೀಗಳು ಸಾನ್ನಿಧ್ಯವಹಿಸಲಿದ್ದು, ಸಂಸದ ಪಿ.ಸಿ. ಗದ್ದಿಗೌಡರ ಅಧ್ಯಕ್ಷತೆ ವಹಿಸುವರು. ಸಂಸದ ಜಗದೀಶ ಶೆಟ್ಟರ್, ಕರ್ನಾಟಕ ದೇವಾಂಗ ಸಂಘದ ಅಧ್ಯಕ್ಷ ರವೀಂದ್ರ ಕಲ್ಬುರ್ಗಿ ಭಾಗವಹಿಸುವರು.



ಭಾರತೀಯ ಶಿಕ್ಷಣ ಮಂಡಳಿ ಅಖಿಲ ಭಾರತೀಯ ಸಂಘಟನಾ ಮಂತ್ರಿ ಶಂಕರನಾಂದಜಿ ಮುಖ್ಯ ವಕ್ತಾರರಾಗಿ ಭಾಗವಹಿಸುವರು. ಸಾಹಿತಿಗಳಾದ ಡಾ.ವಿ.ಎ.ಬೆನಕನಾಳ,ಎಸ್.ವಿ.ಚೌಡಾಪೂರಉಪಸ್ಥಿತರಿರುವರು. ಡಾ.ವಿ.ಎ.ಬೆನಕನಾಳ ಅವರ ರಾಷ್ಟ್ರ ನೇತಾರ ಅಟಲ್ ಬಿಹಾರಿ ವಾಜಪೇಯಿ, ಎಸ್.ವಿ. ಚೌಡಾಪೂರ ಅವರ ದೇವರ ದಾಸಿಮಯ್ಯನವರ ಆಯ್ದ 50 ವಚನಗಳು ಇಂಗ್ಲಿಷ್ ಅವೃತ್ತಿ ಕೃತಿಗಳು ಲೋಕಾರ್ಪಣೆಗೊಳ್ಳಲಿವೆ ಎಂದರು.

ರವೀಂದ್ರ ಪಟ್ಟಣಶೆಟ್ಟಿ, ಡಾ.ವಿ.ಎ.ಬೆನಕನಾಳ, ಪ್ರೊ.ಎನ್.ಬಿ.ಚಿತ್ರಗಾರ, ಸಂಗಣ್ಣ ಹುನಗುಂದ, ಅಶೋಕ ಹೆಗಡೆ, ಪ್ರಕಾಶ ಶೇಬಿನಕಟ್ಟಿ, ವಿಠ್ಠಲ ಪತ್ತಾರ, ಉಮೇಶ ಜಾಲಿಗಿಡದ, ರವಿ ಶೇಬಿನಕಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಸಕ್ಕರೆ ಗಡ್ಡೆ ಬೆಳೆದು ನೂತನ ಪ್ರಯೋಗದತ್ತ ಬಂಗಿ

ಮಲ್ಲಿಕಾರ್ಜುನ ತುಂಗಳ

ದಿಗಂತ ವಿಶೇಷ

ರಬಕವಿ-ಬನಹಟ್ಟಿ: ತಾಲೂಕಿನ ಜಗದಾಳ ಗ್ರಾಮದ ರೈತರಾದ ಸದಾಶಿವ ಮಲ್ಲಪ್ಪ ಬಂಗಿ ತಮ್ಮ ತೋಟದ ಒಂದು ಎಕರೆ ಭೂ ಪ್ರದೇಶದಲ್ಲಿ ಸಕ್ಕರೆ ಗಡ್ಡೆ ಬೆಳೆದು ಹೊಸ ಪ್ರಯೋಗದ ಮೂಲಕ ಹೊಸತನ ಸಾಧಿಸಿದ್ದಾರೆ.

ಶುಗರ್ ಬೀಟ್ ಎಂದು ಕರೆಯಲಾಗುವ ಇದನ್ನು ಸಕ್ಕರೆ ಉತ್ಪಾದನೆ ಮಾಡಲು ಬಳಸುತ್ತಾರೆ. ಈ ಭಾಗದಲ್ಲಿ ಬೆರಳಣಿಕೆಯಷ್ಟು ರೈತರು ಮಾತ್ರ ಇದನ್ನು ಬೆಳೆಯುತ್ತಿದ್ದಾರೆ. ಅಂದಾಜು 100ರಿಂದ 120 ದಿನಗಳ ಬೆಳೆಯಾಗಿದೆ. ನಂತರ ಗಡ್ಡೆ ನೆಲದಿಂದ ಬೇರ್ಪಡಿಸಿ ಕಾರ್ಖಾನೆಗೆ ಕಳುಹಿಸಲಾಗುತ್ತದೆ. ಸಕ್ಕರೆ ಗಡ್ಡೆ ಗುಣಮಟ್ಟ ಚೆನ್ನಾಗಿ ಬಂದರೆ ಸಕ್ಕರೆ, ಇಥೆನಾಲ್ ಉತ್ಪಾದನೆಗೆ ಮಾಡಲು ಕೂಡ ಬಳಸುತ್ತಾರೆ ಎನ್ನುತ್ತಾರ ಸದಾಶಿವ ಬಂಗಿ.



ಒಂದು ಎಕರೆಗೆ ಅಂದಾಜು 1ಕೆಜಿಯಷ್ಟು ಬೀಜ ಬೇಕಾಗುತ್ತದೆ. 1ಕೆಜಿಗೆ ಸಧ್ಯ ರೂ.6000ರಷ್ಟು ಬೆಲೆಯಿದೆ. ಆದರೆ ಕಾರ್ಖಾನೆಯವರು ರಿಯಾಯ್ತಿ ದರದಲ್ಲಿ ರೂ. 2500ಕ್ಕೆ ಬೆಲೆಗೆ ನೀಡಿದ್ದಾರೆ. 1 ಎಕರೆಯಲ್ಲಿ ಅಂದಾಜು 35 ರಿಂದ 40 ಟನ್‌ಗಳಷ್ಟು ಬೆಳೆ ಬೆಳೆಯಬಹು. ಆದರೆ ನಾವು ಇದೇ ಮೊದಲ ಸಲ ಬೆಳೆಯುತ್ತಿರುವುದರಿಂದ ಒಂದು ಎಕರೆಗೆ 25 ಟನ್ ಇಳುವರಿ ಬಂದಿದೆ. ಮುಂದಿನ ಬಾರಿ ಇದಕ್ಕೂ ಹೆಚ್ಚಿನ ಇಳುವರಿ ಪಡೆಯಬಹುದು. ಒಂದು ಟನ್ ಸಕ್ಕರೆ ಗಡ್ಡೆಗೆ ರೂ.3000 ಬೆಲೆ ನೀಡಿದ್ದಾರೆ ಎನ್ನುತ್ತಾರೆ ರೈತ.

ಈ ಬೆಳೆಗೆ ನೀರು ಮತ್ತು ಗೊಬ್ಬರದ ಬಳಕೆ ಕಡಿಮೆ, ವಾರಕ್ಕೆ ಒಂದು ಬಾರಿ ನೀರನ್ನು ನೀಡುವುದರ ಜೊತೆ ಭೂಮಿಯಲ್ಲಿ ತೇವಾಂಶ ಕಾಯ್ದುಕೊಂಡರೆ ಸಾಕಷ್ಟು ಪ್ರಮಾಣದಲ್ಲಿ ಇಳುವರಿ ಬರಬಹುದು. 10;26;26 ಗೊಬ್ಬರ ನೀಡಲಾಗಿದೆ. ಕೀಡೆ ನಿಯಂತ್ರಣಕ್ಕೆ ಬೇವಿನ ಎಣ್ಣೆ, ಸಾಫ ಶೀಲಿಂದ್ರನಾಶಕ ಅದರ ಜೊತೆ ಲಘು ಪೋಷಕಾಂಶ ಸಿಂಪರಣೆ 2 ಬಾರಿ ಮಾಡಲಾಗಿದೆ.

ರಬಕವಿ-ಬನಹಟ್ಟಿ ತಾಲೂಕಿನ ಸಮೀರವಾಡಿ ಸಕ್ಕರೆ ಕಾರ್ಖಾನೆ ಗೋದಾವರಿ ಬಯೋರಿಫೈನರ್ ಮಾರ್ಗದರ್ಶನದಲ್ಲಿ ಸಕ್ಕರೆ ಗಡ್ಡೆ ಬೆಳೆಯುತ್ತಿದ್ದಾರೆ. ಸಕ್ಕರೆ ಗಡ್ಡೆ ಯಶಸ್ವಿಯಾಗಿ ಬಂದರೆ ಕಬ್ಬಿಗೆ ಪರ್ಯಾಯವಾಗಿ ಬೆಳೆ ಆಗಬಹುದು. ಕಬ್ಬು 12 ತಿಂಗಳ ಬೆಳೆಯಾದರೆ ಇದು ನಾಲ್ಕು ತಿಂಗಳ ಬೆಳೆಯಾಗಿದೆ.

ಸಡಗರದ ಲಕ್ಷ್ಮೀನರಸಿಂಹ ಉತ್ಸವ



ಗಲಗಲಿ: ಸ್ಥಳೀಯ ಪ್ರಸಿದ್ಧ ಲಕ್ಷ್ಮೀ ನರಸಿಂಹ ದೇವಸ್ಥಾನದಲ್ಲಿ ಒಂದು ವಾರಗಳ ಕಾಲ ನಡೆದ ಲಕ್ಷ್ಮೀ ನರಸಿಂಹ ದೇವರ ಉತ್ಸವವು ಶ್ರದ್ಧಾ-ಭಕ್ತಿಯಿಂದ ಹಾಗೂ ವೈಭವದಿಂದ ಜರುಗಿತು.

ಉತ್ಸವದ ನಿಮಿತ್ತ ಪ್ರತಿದಿನ ಹೋಮ-ಹವನ ನರಸಿಂಹ ದೇವರಿಗೆ ಅಭಿಷೇಕ ಅಲಂಕಾರ ವಿಶೇಷ ಪೂಜೆ ನಡೆಯಿತು. ಭಕ್ತರಿಗೆ ಪ್ರಸಾದ ವಿತರಣೆ ನಡೆಯಿತು. ನಿತ್ಯ ಸಂಜೆ ನಡೆದ ವಾಹನೋತ್ಸವ ಕ್ಷೇತ್ರಪ್ರದಕ್ಷಿಣೆ ಭಕ್ತರನ್ನು ಆಕರ್ಷಣೆಗೊಳಿಸಿತು.

ಗುರುವಾರ ನರಸಿಂಹ ಜಯಂತಿ, ಶುಕ್ರವಾರ ರಥೋತ್ಸವ, ಶನಿವಾರ ಗೋಪಾಲಕವಲಿ ನಡೆಯಿತು. ಪಂಡಿತರಿಂದ ಪ್ರವಚನ ಮಹಿಳಾಮಂಡಳಿಯಿಂದ ಕೋಲಾಟನೃತ್ಯ ಏಪಡಿಸಲಾಗಿತು. ಲಕ್ಷ್ಮೀ ನರಸಿಂಹದೇವಸ್ಥಾನಟ್ರಸ್ಟ್ ಕಮಿಟಿಅಧ್ಯಕ್ಷಯಧುನಂದನಾಚಾರ್ಯ ಗಲಗಲಿ, ಸೆಕ್ರೆಟರಿ ಶ್ರೀಶ ಗಲಗಲಿ, ನರಸಿಂಹಾಚಾರ್ಯ ಗಲಗಲಿ, ಶ್ರೀನಿವಾಸಾಚಾರ್ಯ ಗಲಗಲಿ, ಸುಧಾನಂದ ಗಲಗಲಿ ಸೇರಿದಂತೆ ಗ್ರಾಮದ ವಿಪ್ರ ಸಮಾಜದ ಪ್ರಮುಖರು ರಾ.ತ.ಮಿ.ಮಂಡಳಿ ಸದಸ್ಯರು ಉಪಸ್ಥಿತರಿದ್ದು ಉತ್ಸವ ಯಶಸ್ವಿಗೊಳಿಸಿದರು.

ರಸ್ತೆ ಕಾಮಗಾರಿ ಪೂರ್ಣಗೊಳಿಸಲು ಆಗ್ರಹ

ಬೀಳಗಿ: ತಾಲೂಕಿನ ಕಾತರಕಿ-ಚಿಕ್ಕಾಲಗುಂಡಿ ರಸ್ತೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಿ ವಾಹನ ಸವಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಗ್ರಾಪಂ ಮಾಜಿ ಸದಸ್ಯಲಕ್ಷ್ಮಣ ಹುದ್ದಾರ ಆಗ್ರಹಿಸಿದ್ದಾರೆ.

ಅನಗವಾಡಿ-ಮುಧೋಳ ಮುಖ್ಯ ರಸ್ತೆಯನ್ನು ಕಾತರಕಿಯಿಂದ ಚಿಕ್ಕಾಲಗುಂಡಿವರೆಗೆ ಅಭಿವೃದ್ಧಿ ಪಡಿಸುವ ಕಾಮಗಾರಿ ಮಂದಗತಿಯಲ್ಲಿ ಸಾಗಿದ್ದರಿಂದ ವಾಹನ ಸವಾರರಿಗೆ ತೊಂದರೆಯಾಗಿ ಪರಿಣಮಿಸಿದೆ.

ಬೈಕ್ ಸವಾರರಂತು ಮೈಮರೆತು ಬಂದರೆ ಅಪಘಾತ ಸಂಭವಿಸುವುದು ಗ್ಯಾರಂಟಿ. ಈಗಾಗಲೇ ಹಲವಾರು ವಾಹನ ಸವಾರರು ಅಪಘಾತಕ್ಕೀಡಾಗಿ ಗಾಯಗಳು ಸಂಭವಿಸುತ್ತಿರುವುದು ಮಾಮೂಲಿಯಾಗಿದೆ. ಈಗಾಗಲೇ ಹಲವಾರು ಜನರು ಗಾಯಗೊಂಡಿರುವುದಕ್ಕೆ ಹೊಣೆಯಾರು ಎಂದು ಪ್ರಶ್ನಿಸಿದರು.

ಚಿಕ್ಕಾಲಗುಂಡಿಯಿಂದ ಕಾತರಕಿ ಕೆಇಬಿವರೆಗೆ ರಸ್ತೆ ಅಭಿವೃದ್ಧಿ ಮಾಡುವ ಕಾಮಗಾರಿ ಇದಾಗಿದ್ದು, ಕಾತರಕಿ ಎಸ್‌ಸಿ ಕಾಲೋಣಿಯಿಂದ ಸಾವಜಿ ಖಾನಾವಳಿವರೆಗೆ ರಸ್ತೆ ಅಭಿವೃದ್ಧಿ ಪಡಿಸದೆ ಹಾಗೆಯೇ ಬಿಟ್ಟು ಸುಮಾರು ದಿನಗಳಾಗಿದ್ದರಿಂದ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಗಿ ಪರಿಣಮಿಸಿದೆ.

ಅಭಿವೃದ್ಧಿ ಹೊಂದಿದ ರಸ್ತೆಯಿಂದ ಹಳೆ ರಸ್ತೆಗೆ ಇಳಿಯುವಲ್ಲಿ ರಸ್ತೆ ಮೇಲೆ ದೊಡ್ಡ ತಗ್ಗುಗಳು ಬಿದ್ದಿದ್ದು, ಇದರ ಪರಿಣಾಮ ವಾಹನಗಳ ಮಧ್ಯೆ ಅಪಘಾತಗಳು ಸಂಭವಿಸಲು ಕಾರಣವಾಗಿದೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಕರೆ ಮಾಡಿ ರಸ್ತೆ ಕಾಮಗಾರಿ ಪೂರ್ಣಗೊಳಿಸಲು ವಿನಂತಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಕಾತರಕಿಯಿಂದ ಕೊಪ್ಪ (ಎಸ್.ಕೆ.) ಗ್ರಾಮಕ್ಕೆ ಹೋಗುವ ರಸ್ತೆ ಎರಡು ಬದಿಯ ಮೇಲೆ ಗುತ್ತಿಗೆದಾರರು ಗರಸು ಹಾಕದೇ ಹಾಗೆಯೇ ಬಿಟ್ಟಿರುವುದರಿಂದ ಅಲ್ಲಿಯೂ ತೊಂದರೆಯಾಗುತ್ತಿದೆ. ಆದ್ದರಿಂದ ಕೂಡಲೇ ರಸ್ತೆಯ ಬದಿಗೆ ಗರಸು ಹಾಕಬೇಕು ಎಂದು ಆಗ್ರಹಿಸಿದರು.



ಕಾತರಕಿ ಎಸ್‌ಸಿ ಕಾಲೋನಿಯಿಂದ ಸಾವಜಿ ಖಾನಾವಳಿ ವರೆಗೆ ಹಾಗೆಯೇ ಬಿಟ್ಟಿರುವ ರಸ್ತೆಯನ್ನು ಬೇಗ ಅಭಿವೃದ್ಧಿ ಪಡಿಸಿ ವಾಹನ ಸವಾರಿಗೆ ಅನುಕೂಲ ಮಾಡಿಕೊಡಬೇಕು. ವಿಳಂಬ ಮಾಡಿದರೆ ವಾಹನ ಅಪಘಾತಗಳಿಂದ ಪ್ರಾಣಹಾನಿ ಸಂಭವಿಸಿದರೆ ಗುತ್ತಿಗೆದಾರರು ಮತ್ತು ಸಂಬಂಧಪಟ್ಟ ಇಲಾಖೆ ನೇರ ಹೊಣೆ ಎಂದು ಎಚ್ಚರಿಸಿದ್ದಾರೆ.

ಕಿರುಸುದ್ದಿ

ಐದನೂರು ವಿದ್ಯಾರ್ಥಿಗಳಿಗೆ ಸನ್ಮಾನ ಮೇ 24 ರಂದು

ವಿಜಯಪುರ: ಎಸ್ಸೆಸ್ಸೆಲ್ಸಿ, ಪಿಯುಸಿಯಲ್ಲಿ ಸಾಧನೆ ತೋರಿದ ಐದನೂರು ವಿದ್ಯಾರ್ಥಿಗಳನ್ನು ಸನ್ಮಾನಿಸುವ ಅಭೂತಪೂರ್ವ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಕಾರ್ಯಕ್ರಮ ವಿಜಯಪುರದ ಕಿತ್ತೂರ ರಾಣಿ ಚೆನ್ನಮ್ಮ ಮಂಗಲ ಕಾರ್ಯಾಲಯದಲ್ಲಿ ಮೇ 24 ರಂದು ನಡೆಯಲಿದೆ ಎಂದು ಪಂಚಮಸಾಲಿ ಸಮಾಜದ ಮುಖಂಡ ಡಾ.ಸುರೇಶ ಬಿರಾದಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲಾಮಟ್ಟದಲ್ಲಿ ಈ ರೀತಿ ಸಮಾಜದ ವಿದ್ಯಾರ್ಥಿಗಳಿಗೆ ನೂರಾರು ಸಂಖ್ಯೆಯಲ್ಲೊ ಒಂದೇ ವೇದಿಕೆಯಲ್ಲಿ ಸನ್ಮಾನಿಸುವ ಕಾರ್ಯಕ್ರಮ ಇದಾಗಲಿದೆ ಎಂದರು.

ವಿದ್ಯಾರ್ಥಿಗಳಿಗೂ ಸ್ಫೂರ್ತಿ ತುಂಬುವ ನಿಟ್ಟಿನಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಿಜಯೋತ್ಸವ ಸಮಿತಿಯಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ತೆರನಾಗಿ ಅನೇಕ ಸಮಾಜ ಮುಖಿ ಕಾರ್ಯಚಟುವಟಿಕೆಗಳನ್ನು ಸಮಿತಿ ವತಿಯಿಂದ ಸಂಘಟಿಸಲಾಗುವುದು ಎಂದರು.

ಪಂಚಮಸಾಲಿ ಸಮಾಜದ ಮುಖಂಡರಾದ ಹಣಮಂತ ಸಾರವಾಡ, ಬಿ.ಎಲ್.ಬಿರಾದಾರ, ಅಶೋಕ ಬಿರಾದಾರ, ಬಸವರಾಜ ಕಳಸಗೊಂಡ, ಮುತ್ತು ಜಂಗಮಶೆಟ್ಟಿ ಮೊದಲಾದವರು ಪಾಲ್ಗೊಂಡಿದ್ದರು.

ಬಾಲಕಿಯರ ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

ಸಿಂದಗಿ: ಶ್ರೀಧರಸ್ವಾಮಿ ವಿದ್ಯಾವರ್ಧಕ ಸಂಘ ವಿಜಯಪುರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದಲ್ಲಿ ನಗರದ ಆರ್.ಡಿ.ಪಾಟೀಲ ಪಪೂ ಕಾಲೇಜಿನ ಎದುರುಗಡೆ ಇರುವ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಕ್ಕೆ 2026–27ನೇ ಸಾಲಿಗೆ ಮೆಟ್ರಿಕ್ ನಂತರದ ಯಾವುದೇ ತರಗತಿಯಲ್ಲಿ ಓದುತ್ತಿರುವ ಗ್ರಾಮೀಣ ಬಾಲಕಿಯರಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತ ವಿದ್ಯಾರ್ಥಿನಿಯರು ಹಿಂದಿನ ಉತ್ತೀರ್ಣರಾದ ಅಂಕಪಟ್ಟಿ ವರ್ಗಾವಣೆ ಪ್ರಮಾಣ ಪತ್ರ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ವಾಸ ಮಾಡುವ ಅಂತರದ ಪ್ರಮಾಣ ಪತ್ರ ಆಧಾರ ಕಾರ್ಡ್, ಬಿಪಿಎಲ್ ಕಾರ್ಡ್ ಫೋಟೋ ಪ್ರತಿಯೊಂದಿಗೆ ನಿಗದಿತ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜೂನ್ 15ಕೊನೆಯ ದಿನ ಎಂದು ಸಂಸ್ಥೆಯ ಅಧ್ಯಕ್ಷ ಕೆ.ಎನ್.ಮೇಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾರ್ಟ್ ಸರ್ಕ್ಯೂಟ್: ಲಕ್ಷಾಂತರ ಮೌಲ್ಯದ ವಸ್ತುಗಳು ಭಸ್ಮ



ವಿಜಯಪುರ: ಆಕಸ್ಮಿಕ ಶಾರ್ಟ್ ಸರ್ಕ್ಯೂಟ್ ನಿಂದ ಹಲವು ಅಂಗಡಿಗಳಲ್ಲಿ ಲಕ್ಷಾಂತರ ಮೌಲ್ಯದ ವಸ್ತುಗಳು ಸುಟ್ಟು ಭಸ್ಮವಾಗಿರುವ ಘಟನೆ ಜಿಲ್ಲೆಯ ಇಂಡಿ ಪಟ್ಟಣದ ರೈಲ್ವೆ ನಿಲ್ದಾಣದ ಬಳಿ ನಡೆದಿದೆ.

ಅಂಗಡಿಯಲ್ಲಿ ಆಕಸ್ಮಿಕವಾಗಿ ಶಾರ್ಟ್ ಸರ್ಕ್ಯೂಟ್‌ನಿಂದ ಈ ಬೆಂಕಿ ಅವಘಡ ಸಂಭವಿಸಿದ್ದು, ಅಕ್ಕಪಕ್ಕದಲ್ಲಿನ ಅಂಗಡಿಗಳಿಗೂ ಬೆಂಕಿ ತಗುಲಿ, ವಿವಿಧ ಅಂಗಡಿಗಳಲ್ಲಿನ ವಸ್ತುಗಳು ಹಾನಿಯಾಗಿವೆ. ಸುದ್ದಿ ತಿಳಿದು ಸ್ಥಳಕ್ಕೆ ಅಗ್ನಿಶಾಮಕ ಸಿಬ್ಬಂದಿಯಿಂದ ಆಗಮಿಸಿ ಬೆಂಕಿ ನಂದಿಸಿದ್ದಾರೆ. ಇಂಡಿ ಶಹರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ನಿಧನಸುದ್ದಿ

ಸತ್ಯವತಿ ಕೊಣದಿ



ವಿಜಯಪುರ: ಸಮೀಪದ ಇಟ್ಟಂಗಿಹಾಳ ಗ್ರಾಮದ ಹಿರಿಯ ಮನೆ ತನದ ಸತ್ಯವತಿ ಬಸಗೊಂಡಪ್ಪ ಕೊಣದಿ(85) ನಿಧನರಾಗಿದ್ದಾರೆ. ಮೃತರು ವಿಜಯಪುರ ಜಿಒಸಿಸಿ ಬ್ಯಾಂಕಿನ ನಿರ್ದೇಶಕರಾದ ಹಣಮಂತ ಕೊಣದಿ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂದು ಬಳಗ ಆಗಲಿದ್ದಾರೆ. ಮೃತರ ಅಂತ್ಯಕ್ರಿಯೆ ರವಿವಾರ ಬೆಳಿಗ್ಗೆ ಸ್ವಗ್ರಾಮ ಇಟ್ಟಂಗಿಹಾಳ ತೋಟದಲ್ಲಿ ನೆರವೇರಿತು.



ಇಂಡಿ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಾದ ಉಮರ ಖತಿಕ ಶೇ.97.28, ಸಾಹಿಲ ವಾಲಿಕಾರ ಶೇ.89.12 ಹೆಚ್ಚು ಅಂಕ ಪಡೆದು ಸಾಧನೆ ಮಾಡಿದ ಹಿನ್ನೆಲೆಯಲ್ಲಿ ಸನ್ಮಾನಿಸಲಾಯಿತು. ಮುಖಂಡರಾದ ಅಯುಬ ನಾಟಿಕಾರ, ಡಾ. ಲಕ್ಷ್ಮೀಕಾಂತ ಮೇತ್ರಿ, ರೈಸ ಅಸ್ಟೇಕರ್, ಅಸ್ಪಾಕ ಕೊಕಣಿ, ಅನೇಕರು ಇದ್ದರು.

ಅಭಿಮಾನೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಿ

ವಿಜಯಪುರ: ಚಿತ್ರದುರ್ಗದಲ್ಲಿ ನಡೆಯಲಿರುವ ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವ ಬಿಜೆಪಿ ಕಾರ್ಯಕರ್ತರ ಪಾಲಿಗೆ ಒಂದು ಅಪೂರ್ವ ಹಬ್ಬವಿದ್ದಂತೆ, ಜಿಲ್ಲೆಯ ಕಾರ್ಯಕರ್ತರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ರೈತ ನಾಯಕ ಬಿ.ಎಸ್ .ಯಡಿಯೂರಪ್ಪಗೆ ಶುಭ ಕೋರಬೇಕು ಎಂದು ನಗರಸಭೆ ಮಾಜಿ ಅಧ್ಯಕ್ಷ ಪರಶುರಾಮಸಿಂಗ್ ರಜಪೂತ ಹೇಳಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು,ಯಡಿಯೂರಪ್ಪ ನಾಡು ಕಂಡ ಶ್ರೇಷ್ಠ ನೇತಾರ, ಸೈಕಲ್ ಮೇಲೆ ಹೆಮ್ಮೆಯ ಭಾರತೀಯ ಜನತಾ ಪಕ್ಷ ಕಟ್ಟಿ ದಕ್ಷಿಣ ಭಾರತದಲ್ಲಿಯೇ ಪ್ರಥಮ ಬಾರಿಗೆ ಆಡಳಿತದ ಹೆಬ್ಬಾಗಿಲು ತೆರೆಯುವಂತೆ ಮಾಡಿದರು. ಸಿಎಂಯಾಗಿ ಭಾಗ್ಯಲಕ್ಷ್ಮೀ ಯೋಜನೆ, ಶಾಲಾ ಮಕ್ಕಳಿಗೆ ಸೈಕಲ್ , ರೈತರಿಗಾಗಿ ಪ್ರತ್ಯೇಕ ಕೃಷಿ ಬಜೆಟ್ ಹೀಗೆ ಅಭೂತಪೂರ್ವ ಕೊಡುಗೆ ನೀಡಿದ್ದಾರೆ, ಅವರ ಅಭಿಮಾನಿಗಳು ಸಂಘಟಿಸಿರುವ ಅಭಿಮಾನೋತ್ಸವದಲ್ಲಿ ಹೆಮ್ಮೆಯಿಂದ ಪಾಲ್ಗೊಳ್ಳಬೇಕಾಗಿದೆ. ವಿಜಯಪುರಕ್ಕೂ ಯಡಿಯೂರಪ್ಪ ಅವರಿಗೂ ಅವಿನಾಭಾವ ಬಾಂಧವ್ಯ, ಇಲ್ಲಿ ಬಿಜೆಪಿ ಪಕ್ಷ ನೆಲೆಯೂರಲು ಯಡಿಯೂರಪ್ಪ ಅವರ ಶ್ರಮ ಅಧಿಕವಾಗಿದೆ, ಹೀಗಾಗಿ ವಿಜಯಪುರದಿಂದಲೂ ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸೋಣ ಎಂದರು.



ವಿಜಯಪುರ: ಬಬಲೇಶ್ವರ ತಾಲೂಕಿನ ಯಕ್ಕುಂಡಿಯಲ್ಲಿ 300 ಲಕ್ಷ ರೂ. ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 34ರ ಯಕ್ಕುಂಡಿ, ಸಂಗಾಪುರ, ಶೇಗುಣಸಿ, ಕಾಖಂಡಕಿ ವ್ಹಾಯಾ ಹರಳಯ್ಯನಗುಂಡ 0 ಕಿಮೀ ಯಿಂದ 3ಕಿಮೀ ವರೆಗೆ ರಸ್ತೆ ಸುಧಾರಣೆ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಭೂಮಿಪೂಜೆ ನೆರವೇರಿಸಿದರು.

ಉಚಿತ ಶೈಕ್ಷಣಿಕ, ಆಧ್ಯಾತ್ಮಿಕ ಬೇಸಿಗೆ ಶಿಬಿರ | ಪಾಲಕರ ಸಭೆ

ಮಕ್ಕಳು ದೇಶದ ಆಸ್ತಿ: ಆನಂದ

ವಿಜಯಪುರ: ಮಕ್ಕಳನ್ನು ಕೇವಲ ಒಳ್ಳೆಯ ಶಾಲೆಗೆ ಸೇರಿಸಿದರೆ ಪಾಲಕರ ಜವಾಬ್ದಾರಿ ಮುಗಿಯುವುದಿಲ್ಲ. ಅವರ ದೈನಂದಿನ ಚಟುವಟಿಕೆಗಳನ್ನು ಗಮನಿಸಿ, ಅವರಲ್ಲಿ ನಾಗರಿಕ ಪ್ರಜ್ಞೆ ಹಾಗೂ ಸಂಸ್ಕಾರ ಬೆಳೆಸುವುದು ತಂದೆ-ತಾಯಂದಿರ ಆದ್ಯ ಕರ್ತವ್ಯವಾಗಿದೆ,'' ಎಂದು ಮೇಜರ್ ಎಸ್ ಸಿ ಆನಂದ ಅಭಿಪ್ರಾಯಪಟ್ಟರು.



ಅವರು ವಿಜಯಪುರ ಜಿಲ್ಲೆಯ ಕನ್ನೂರಿನ ಶಾಂತಿ ಕುಟೀರ ಆಶ್ರಮದಲ್ಲಿ, ಶಾಂತಿ ಕುಟೀರ ಟ್ರಸ್ಟ್ ಹಾಗೂ ಶ್ರೀಶೈಲೇಶ್ವರ ವಿದ್ಯಾಕೇಂದ್ರ ಸಂಡೂರು ಮತ್ತು ಭಾರತೀಯ ಸುರಾಜ್ಯ ಸಂಸ್ಥೆ ಇವರ ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಿರುವ ಉಚಿತ ಶೈಕ್ಷಣಿಕ ಹಾಗೂ ಆಧ್ಯಾತ್ಮಿಕ ಬೇಸಿಗೆ ಶಿಬಿರದಲ್ಲಿ ಪಾಲಕರ ಸಭೆಯಲ್ಲಿ ಮಾತನಾಡಿ, ಮಕ್ಕಳು ನಮ್ಮನ್ನು ಅನುಸರಿಸುತ್ತಾರೆ. ಮಕ್ಕಳು ನಾವು ಹೇಳಿದ್ದನ್ನು ಕೇಳುವುದಕ್ಕಿಂತ ಹೆಚ್ಚಾಗಿ, ನಾವು ಮಾಡುವುದನ್ನು ನೋಡಿ ಕಲಿಯುತ್ತಾರೆ. ಪಾಲಕರು ಮೊದಲು ನಡವಳಿಕೆ ಆದರ್ಶಪ್ರಾಯವಾಗಿಸಿಕೊಳ್ಳಬೇಕು. ಮಕ್ಕಳ ಮುಂದೆ ಮೊಬೈಲ್ ಬಳಸುವುದನ್ನು ಬಿಟ್ಟು ಪುಸ್ತಕ ಹಿಡಿಯುವ ಹವ್ಯಾಸ ಬೆಳೆಸಿಕೊಳ್ಳಿ ಎಂದರು.

ಬಡವ-ಶ್ರೀಮಂತ ಎಂಬ ಭೇದವಿಲ್ಲದೆ ಮಗುವಿನಲ್ಲಿ ಆತ್ಮಸ್ಥೈರ್ಯ ತುಂಬಿದರೆ ಅದು ಎಂತಹ ಕಠಿಣ ಪರಿಸ್ಥಿತಿಯಲ್ಲೂ ಬೆಳೆಯಬಲ್ಲದು. ತಂದೆ-ತಾಯಿಯೇ ಮೊದಲ ಗುರುಗಳಾಗಿದ್ದು, ಆಧುನಿಕ ತಂತ್ರಜ್ಞಾನದ ಜೊತೆಗೆ ನೈತಿಕ ಮೌಲ್ಯ ಕಲಿಸುವುದು ಅಗತ್ಯವಾಗಿದೆ. ನಿಮ್ಮ ಮನೆಯಲ್ಲಿ ಗಂಡ-ಹೆಂಡತಿಯಾಗಿ ಜಗಳವಾಡಿ, ಆದರೆ ಅಪ್ಪ-ಅಮ್ಮನಾಗಿ ಮಕ್ಕಳ ಮುಂದೆ ಕಿತ್ತಾಡಬೇಡಿ. ಕುಟುಂಬದ ಕಲಹಗಳು ಮಕ್ಕಳ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಬೀರುತ್ತವೆ ಎಂದರು.

ಶ್ರೀಶೈಲೇಶ್ವರ ವಿದ್ಯಾಕೇಂದ್ರ, ಸಂಡೂರು ಆಡಳಿತಾಧಿಕಾರಿ ಕುಮಾರ್ ಎಸ್.ನಾನಾವಟೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ರಾಮರಾಜ್ಯ ಕಲಾ ಮೇಳದ ಅಧ್ಯಕ್ಷ ಶ್ರೀಕೃಷ್ಣ ಸಂಪಗಾಂವಕರ ವಿಶೇಷ ಆಹ್ವಾನಿತರ ಪರಿಚಯದೊಂದಿಗೆ ಸ್ವಾಗತಿಸಿದರು.

ಪಾಲಕರು ಅನೇಕ ಪ್ರಶ್ನೆಗಳನ್ನು ಕೇಳಿದರು,ಇದಕ್ಕೆ ಮೇಜರ್ ಸಿ.ಎಸ್.ಆನಂದ ಇವರು ಸಮರ್ಪಕ ಉತ್ತರ ನೀಡಿದರು. ನಂತರ ಕೆಲವು ಪಾಲಕರು ತಮ್ಮ ಅನಿಸಿಕೆಗಳನ್ನು ಹಂಚಿ ಕೊಂಡರು.

ಮಾಜಿ ಸೈನಿಕರಾದ ಶಿವನಗೌಡ ಚನ್ನಪ್ಪಗೌಡ್ರು ಬಿರಾದರ್ ಮತ್ತು ಲಕ್ಷ್ಮಣ ಗಂಗಪ್ಪ ಪತ್ತಾರ ಅವರು ಮೇಜರ್ ಆನಂದ ಅವರಿಗೆ ಶಾಲು ಹೊದಿಸಿ, ಸ್ಮರಣಿಕೆ ನೀಡಿ ಸನ್ಮಾನಿಸಿ ಗೌರವಿಸಿದರು.

ಈ ವೇಳೆ ಶಿಬಿರದ ಹಳೆ ವಿದ್ಯಾರ್ಥಿನಿಯಾದ ಕಾವ್ಯ ಬೆಳ್ಳುಂಡಗಿ 2026 ಎಸ್ಸೆಸ್ಸೆಲ್ಸಿಯಲ್ಲಿ 625ಕ್ಕೆ 603 ಅಂಕ ಪಡೆದು ಶೇ.96.48 ಶಾಲೆಗೆ ಪ್ರಥಮ ಸ್ಥಾನ ಪಡೆಯುವ ಮೂಲಕ ಶಿಬಿರಕ್ಕೆ ಕೀರ್ತಿ ತಂದಿದ್ದಕ್ಕಾಗಿ, ಮೇಜರ್ ಆನಂದ ಮತ್ತು ರಾಮರಾಜ್ಯ ಕಲಾ ಮೇಳದ ಅಧ್ಯಕ್ಷ ಶ್ರೀಕೃಷ್ಣ ಸಂಪಗಾಂವಕರ ಹಾಗೂ ಶ್ರೀಶೈಲೇಶ್ವರ ವಿದ್ಯಾಕೇಂದ್ರದ ಆಡಳಿತಾಧಿಕಾರಿಗಳಾದ ಕುಮಾರ್ ಎಸ್.ನಾನಾವಟೆ ಅವರು ಸನ್ಮಾನಿಸಿ ಆಶೀರ್ವದಿಸಿದರು.

ಆಶ್ರಮದ ನಿವಾಸಿಗಳಾದ ವಿದ್ಯಾ ತಾಯಿ, ಜ್ಞಾನಮಾಲ, ಕ್ಷಮಾಶಾಂತಿ, ಶ್ರೀನಿವಾಸ ಕುಲಕರ್ಣಿ, ಡೊಮನಾಳ ಗ್ರಾಮದ ಶಿಕ್ಷಕರಾದ ಪ್ರಕಾಶ ಪಾಟೀಲ್ ಸಂಡೂರಿನ, ಅಶೋಕ ಜಿ ಎಂ, ವೀರೇಂದ್ರ ಕುಮಾರ್ ಸೇರಿದಂತೆ ಇನ್ನಿತರ ಸಹ ಶಿಕ್ಷಕ, ಶಿಕ್ಷಕಿಯರು ಹಾಗೂ ನೂರಾರು ಪಾಲಕರು ಉಪಸ್ಥಿತರಿದ್ದರು. ವಿಜಯಪುರದ ಚಾಣಕ್ಯ ಕರಿಯರ್ ಅಕಾಡೆಮಿ ಓ.ಒ.ಬಿರಾದಾರ ಕಾರ್ಯಕ್ರಮ ಪ್ರಾಯೋಜಿಸಿದರು.

ಅರ್ಜಿದಾರರಿಗೆ ಮಾಹಿತಿ ನೀಡಲು ಹಿಂಜರಿಯಬೇಡಿ

ವಿಜಯಪುರ: ಮಾಹಿತಿ ಹಕ್ಕಿನಡಿ ಅರ್ಜಿದಾರ ಮಾಹಿತಿ ಕೋರಿ ಅರ್ಜಿ ಸಲ್ಲಿಸಿದರೆ, 30 ದಿನಗಳೊಗಾಗಿ ಉತ್ತರ ಕೊಡಬೇಕು. ಅರ್ಜಿದಾರ ಕೋರಿದ ಮಾಹಿತಿ ನೀಡಲು ಯಾವುದೇ ಕಾರಣಕ್ಕೂ ಹಿಂಜರಿಯಬೇಡಿ ಎಂದು ರಾಜ್ಯ ಮಾಹಿತಿ ಹಕ್ಕು ಆಯೋಗದ ಆಯುಕ್ತ ರುದ್ರಣ್ಣ ಹರ್ತಿಕೋಟೆ ಹೇಳಿದರು.

ನಗರದ ಜಿಪಂ ಸಭಾಂಗಣದಲ್ಲಿ ಇತ್ತೀಚೆಗೆ ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ಇಲಾಖೆಗಳ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಕುರಿತು ಅರಿವು ಮೂಡಿಸುವ ಕಾರ್ಯಾಗಾರ ಮತ್ತು ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಮಾಹಿತಿ ಹಕ್ಕು ಕಾಯ್ದೆ ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಜನಪರ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಭದ್ರ ಬುನಾದಿಯಾಗಿದೆ. ಸರ್ಕಾರದ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರುವುದು ಎಂದರು.

ಈ ಕಾಯ್ದೆ ದುರ್ಬಲಗೊಳ್ಳಬಾರದು ಎಂದೇ ಆಯೋಗ ಜಿಲ್ಲಾ ಮಟ್ಟದಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳುವ ಮೂಲಕ ಅಧಿಕಾರಿಗಳಿಗೆ ಕಾಯ್ದೆಯ ಮಹತ್ವವನ್ನು ಮನದಟ್ಟು ಮಾಡಿಕೊಡಲಾಗುತ್ತಿದೆ. ಅಧಿಕಾರಿಗಳು 30 ಸಂಗತಿಗಳಿರುವ ಈ ಕಾಯ್ದೆ ಹಾಗೂ ಆಗಾಗ್ಗೆ ಈ ಕುರಿತು ಸುಪ್ರಿಂ, ಹೈಕೋರ್ಟ್ ನೀಡಿರುವ ತೀರ್ಪುಗಳನ್ನು ಅಧ್ಯಯನ ಮಾಡಬೇಕು ಎಂದರು.

ರಾಜ್ಯದಲ್ಲಿ 76 ಸಾವಿರಕ್ಕೂ ಹೆಚ್ಚು ಅರ್ಜಿಗಳು ವಿಲೇವಾರಿ ಬಾಕಿ ಇವೆ. ಬೆಳಗಾವಿ ವಿಭಾಗ 3ನೇ ಸ್ಥಾನದಲ್ಲಿದೆ. ಸಾಕಷ್ಟು ಅರ್ಜಿಗಳು ವಿಲೇವಾರಿಗೆ ಬಾಕಿಯಿವೆ. ಇದು ಆಗಬಾರದು, ವಿಜಯಪುರ ಜಿಲ್ಲೆಯಲ್ಲೂ 41ಎ 41 ಬಿ ಅರ್ಜಿ ಶೀಘ್ರದಲ್ಲೇ ವಿಲೇವಾರಿ ಮಾಡಿ ಎಂದರು.

ಆಯುಕ್ತ ರಾಜಶೇಖರ ಎಸ್. ಮಾತನಾಡಿ, ಅಧಿಕಾರಿಗಳು ಸಾರ್ವಜನಿಕರು ಮತ್ತು ಸರ್ಕಾರದ ಕೊಂಡಿ ಇದ್ದಂತೆ ಎಂಬುದು ಮಾಹಿತಿ ಹಕ್ಕು ಕಾಯ್ದೆಯ ಆಶಯವಾಗಿದೆ. ಪಾರದರ್ಶಕವೇ ಈ ಕಾಯ್ದೆಯ ಮೂಲ ಮಂತ್ರ ಎಂದರು.

ಆಯುಕ್ತ ಪ್ರಕಾಶ ನಾರಾಯಣ ಚನ್ನಾಳ, ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಂವಾದ ನಡೆಸಿದರು. ಅಧಿಕಾರಿಗಳಿಂದ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು.

ಜಿಲ್ಲಾಧಿಕಾರಿ ಡಾ. ಆನಂದ ಕೆ., ಜಿಪಂ ಸಿಇಒ ರಿಷಿ ಆನಂದ, ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಸೇರಿದಂತೆ ಹಲವು ಅಧಿಕಾರಿಗಳು ಇದ್ದರು.



ಸ್ವಂತ ಖರ್ಚಿನಲ್ಲಿ ದಾಖಲೆ ನೀಡಿ, ಪರಿಹಾರಕ್ಕೆ ಆಗ್ರಹ

ಮುದ್ದೇಬಿಹಾಳ: ತಾಲೂಕಿನ ಮದರಿ ಮತ್ತು ಗರಸಂಗಿ ಗ್ರಾಮದ ರೈತರ ಜಮೀನು ಕಾಲುವೆ ನಿರ್ಮಾಣವಾಗಿ ಎರಡು ದಶಕಗಳು ಕಳೆದರೂ ಇಲ್ಲಿಯವರೆಗೆ ಯಾವುದೇ ಪರಿಹಾರ ನೀಡದಿರುವುದನ್ನು ಖಂಡಿಸಿ, ಸಂತ್ರಸ್ತ ರೈತರು ಕೃಷ್ಣಾ ಭಾಗ್ಯ ಜಲ ನಿಗಮದ ಅಧಿಕಾರಿಗಳಿಗೆ ಎಲ್ಲ ದಾಖಲೆಗಳೊಂದಿಗೆ ಮುತ್ತಿಗೆ ಹಾಕಿ ಪರಿಹಾರಕ್ಕೆ ಆಗ್ರಹಿಸಿದ್ದಾರೆ.

ಕಳೆದ ಎರಡು ದಶಕಗಳ ಹಿಂದೆ ಗ್ರಾಮದ ವ್ಯಾಪ್ತಿಯಲ್ಲಿ ಹಾಯ್ದು ಹೋಗಿರುವ ಕಾಲುವೆ ಸಂಖ್ಯೆ 16ಎ-ಲ್ಯಾಟರಲ್ ನಂ.2 ಕ್ಕಾಗಿ ರೈತರು ತಮ್ಮ ಫಲವತ್ತಾದ ಜಮೀನನ್ನು ಕೊಟ್ಟಿದ್ದಾರೆ ಆದರೆ. ಕಾಲುವೆ ನಿರ್ಮಾಣವಾಗಿ 20 ವರ್ಷಗಳೇ ಗತಿಸಿವೆ. ರೈತರಿಗೆ ಇದುವರೆಗೂ ಸರ್ಕಾರದಿಂದ ನಯಾಪೈಸೆ ಪರಿಹಾರ ತಲುಪಿಲ್ಲ. ಈ ಸಂಬಂಧ ರೈತರು ಕಳೆದ ಹಲವು ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡುತ್ತಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯ ಮುಂದುವರಿದಿದೆ.

ವಂಚನೆಯ ಆರೋಪ:

ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ಇದ್ದ ಬಿ.ಎಸ್. ಕುಂಟೋಜಿ ಎಂಬ ಅಧಿಕಾರಿಯು ರೈತರಿಗೆ ಸೂಕ್ತವಾಗಿ ಸ್ಪಂದಿಸದೆ ಕಾಲಹರಣ ಮಾಡಿದ್ದಾರೆ ಎಂದು ರೈತರು ಆರೋಪಿಸಿದ್ದು ಅಲ್ಲದೆ, ಖಾಸಗಿ ವ್ಯಕ್ತಿಯೊಬ್ಬರನ್ನು ಕಳುಹಿಸಿ ದಾಖಲೆಗಳ ಸಿದ್ಧತೆಯ ಹೆಸರಿನಲ್ಲಿ ಪ್ರತಿಯೊಬ್ಬ ರೈತರಿಂದ 500 ರೂ.ಗಳನ್ನು ವಸೂಲಿ ಮಾಡಿ ಪರಿಹಾರ ಸಿಕ್ಕಿಲ್ಲ ಎಂದು ರೈತರು ಪತ್ರದಲ್ಲಿ ದೂರಿದ್ದಾರೆ.

ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಅಶೋಕ ಬಿರಾದಾರ ಅವರ ಸೂಚನೆಯಂತೆ, ಆಕ್ರಚಾರಿ, ಆಕಾರ ಬಂಧ, ನಕ್ಷೆ, ಟಿಪ್ಪಣಿ ಉತಾರೆ ಸೇರಿದಂತೆ ಎಲ್ಲಾ ಅಗತ್ಯ ದಾಖಲೆಗಳನ್ನು ಸಿದ್ಧಪಡಿಸಿ ಇಂದು ಅಧಿಕಾರಿಗಳಿಗೆ ಹಸ್ತಾಂತರಿಸಿದ್ದಾರೆ.

ಕಳೆದ 20 ವರ್ಷಗಳಿಂದ ನಾವು ಅನ್ಯಾಯ ಅನುಭವಿಸುತ್ತಿದ್ದೇವೆ. ಇಂದಿನಿಂದ ಒಂದು ತಿಂಗಳ ಒಳಗಾಗಿ ಈ ಬಗ್ಗೆ ಮೇಲಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿ ನಮಗೆ ಪರಿಹಾರ ಕೊಡಿಸಬೇಕು. ಒಂದು ವೇಳೆ ಈ ಬಾರಿಯೂ ಅಧಿಕಾರಿಗಳು ವಿಳಂಬ ಧೋರಣೆ ಅನುಸರಿಸಿದರೆ ಮುಂದಿನ ದಿನಗಳಲ್ಲಿ ತೀವ್ರ ಸ್ವರೂಪದ ಪ್ರತಿಭಟನೆ ನಡೆಸಲಾಗುವುದು. ಆಗುವ ಅನಾಹುತಗಳಿಗೆ ಇಲಾಖೆಯೇ ನೇರ ಹೊಣೆಯಾಗುತ್ತದೆ'' ಎಂದು ರೈತರು ಅಂತಿಮ ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಪ್ರಶಾಂತ ನಾಡಗೌಡ, ಶರಣಬಸು ಗೌಡರ,ಮಹಾಂತೇಶ ಉಗರಗೋಳ, ಸಂಗಮೇಶ ಹಿರೇಮಠ, ಶಿವರಾಜ ಮೇಟಿ ಮುತ್ತಪ್ಪ ಕಾನಿಕ್ಕಿ, ಸಂಗನಬಸಪ್ಪ ತೊಂಡಿಹಾಳ, ಮುನ್ನಾ ನದಾಪ, ಮಲ್ಲಪ್ಪ ತಿಗಳಿ, ಈರಪ್ಪ ಅಂಗಡಿ, ಶರಣಪ್ಪ ವಡ್ಡರ, ಗೋದವ್ವ ನಾಡಗೌಡ, ಹಣಮಂತ ವಾಲಿಕಾರ, ಸೇರಿದಂತೆ ಮದರಿ ಮತ್ತು ಗರಸಂಗಿ ಗ್ರಾಮದ ನೂರಾರು ರೈತರು ಉಪಸ್ಥಿತರಿದ್ದು, ತಮ್ಮ ನ್ಯಾಯಯುತ ಹಕ್ಕಿಗಾಗಿ ಧ್ವನಿ ಎತ್ತಿದರು.



ಮಹಿಳಾ ವಿವಿಗೆ ಎಎಎ ಕಮಿಟಿ ಭೇಟಿ ಇಂದು, ನಾಳೆ

ವಿಜಯಪುರ: ಶೈಕ್ಷಣಿಕ ಮತ್ತು ಆಡಳಿತಾತ್ಮಕ ಪರಿಶೀಲನೆಗೆ (ಎಎಎ ಕಮಿಟಿ) ಉನ್ನತ ಮಟ್ಟದ ತಜ್ಞರ ತಂಡ ಮೇ 4 ಮತ್ತು 5 ರಂದು ಇಲ್ಲಿನ ರಾಜ್ಯ ಅಕ್ಕ ಮಹಾದೇವಿ ಮಹಿಳಾ ವಿಶ್ವವಿದ್ಯಾಲಯಕ್ಕೆ ಭೇಟಿನೀಡಿಪರಿಶೀಲನೆ ನಡೆಸಲಿದೆ.

ವ ' ು ಹ ಳ ಾ ವಿವಿಯ ವಿಶ್ರಾಂತ ಕುಲಪತಿ ಡಾ.ಮೀನಾ ಚಂದಾವರಕರ ಅವರ ನೇತೃತ್ವದ ನಾಲ್ಕು ಜನ ತಜ್ಞರ ತಂಡ ವಿಜಯಪುರದಲ್ಲಿರುವ ವಿವಿಯ ಮುಖ್ಯಆವರಣಕ್ಕೆ ಭೇಟಿ ನೀಡಲಿದೆ.

ತಜ್ಞರ ತಂಡದ ಸದಸ್ಯರಾಗಿ ಕಲಬುರಗಿ ವಿವಿಯ ಗಣಿತ ಅಧ್ಯಯನ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ.ಎನ್.ಬಿ. ನಡವಿನಮನಿ, ಧಾರವಾಡ ದ ಕರ್ನಾಟಕ ವಿವಿಯ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಬಿ.ಎಚ್. ನಾಗೂರ ಮತ್ತು ಕಲಬುರಗಿ ವಿವಿಯ ಇಂಗ್ಲಿಷ್ ವಿಭಾಗದ ಪ್ರಾಧ್ಯಾಪಕ ಪ್ರೊ.ಬಸವರಾಜ ಡೋಣೂರು ಆಗಮಿಸಲಿದ್ದಾರೆ.

ಮೇ 4 ರಂದು ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ವಿವಿಯ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸಾಧನೆ ಪ್ರಸ್ತುತಪಡಿಸುವರು. ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್. ಲಕ್ಕಣ್ಣವರ ಮತ್ತು ಆರ್ಥಿಕ ಅಧಿಕಾರಿ ರಾಮಣ್ಣ ಅಥಣಿ ಪಾಲ್ಗೊಳ್ಳಲಿದ್ದಾರೆ.

ಈ ನಾಲ್ಕು ಜನ ತಜ್ಞರ ತಂಡ ವಿವಿಯ ವಿವಿಧ ವಿಭಾಗಗಳು, ನಿರ್ದೇಶನಾಲಯಗಳು, ಅಧ್ಯಯನಕೇಂದ್ರಗಳು, ಮಹಿಳಾತಂತ್ರಜ್ಞಾನ ಪಾರ್ಕ್, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಪ್ರಸಾರಾಂಗ, ಶಿಶುಪಾಲನಾ ಕೇಂದ್ರ, ವಸತಿ ನಿಲಯಗಳು, ಆಡಳಿತ ವಿಭಾಗ, ಶೈಕ್ಷಣಿಕ ವಿಭಾಗ, ಪರೀಕ್ಷಾ ವಿಭಾಗ, ಆರ್ಥಿಕ ವಿಭಾಗ, ಎಂಜಿನಿಯರಿಂಗ್ ವಿಭಾಗ, ಗ್ರಂಥಾಲಯ, ಕ್ರೀಡಾ ನಿರ್ದೇಶನಾಲಯ, ಕಂಪ್ಯೂಟರ್ ಕೇಂದ್ರ, ಕುಂದುಕೊರತೆ ನಿವಾರಣಾ ಘಟಕ, ರ್‍ಯಾಗಿಂಗ್ ತಡೆ ವಿಭಾಗ, ಸಿಡಿಸಿ, ಪಿಎಂಇ ಬೋರ್ಡ್, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕ, ಸಮಾನ ಅವಕಾಶ ಘಟಕ, ವೃತ್ತಿ ಮಾರ್ಗದರ್ಶನ ಘಟಕ, ಸ್ವಾಮಿ ವಿವೇಕಾನಂದ ಕೇಂದ್ರ, ಕನಕದಾಸ ಅಧ್ಯಯನ ಕೇಂದ್ರ, ಮೌಲಾನಾ ಆಜಾದ್ ಅಧ್ಯಯನ ಕೇಂದ್ರ, ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ಗಾಂಧೀ ಅಧ್ಯಯನ ಕೇಂದ್ರ, ಮಹಿಳಾ ಅಧ್ಯಯನ ಕೇಂದ್ರ, ಭಾಸ್ಕರಾಚಾರ್ಯ ಅಧ್ಯಯನ ಕೇಂದ್ರಗಳಿಗೆ ಭೇಟಿ ನೀಡಲಿದೆ ಎಂದು ತಂಡದ ಸಂಚಾಲಕಿ ಪ್ರೊ. ಶಾಂತಾದೇವಿ ಟಿ. ಮತ್ತು ಸಹ ಸಂಚಾಲಕಿ ಡಾ.ಶ್ವೇತಾ ಬೆಂಗಾರೆ ಜಂಟಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಯಿಗೆ ರೈತ, ಸೈನಿಕ ಶ್ರೇಷ್ಠ ಮಕ್ಕಳು: ಶ್ರೀ

ಇಂಡಿ: ಅನ್ನ ನೀಡುವ ರೈತ ಮತ್ತು ದೇಶ ಕಾಯುವ ಸೈನಿಕ ತಾಯಿಗೆ ಶ್ರೇಷ್ಠ ಮಕ್ಕಳು ಎಂದು ಸಂಗಮೇಶ್ವರ ಶ್ರೀಗಳು ಹೇಳಿದರು.

ತಾಲೂಕಿನ ಸಾಲೋಟಗಿ ಗ್ರಾಮದ ಗಡ್ಡೆಪ್ಪ ರಾವತಪ್ಪ ಕಾಳಿ, ಶ್ರೀಶೈಲ ಗಂಗಪ್ಪ ನಾಟಿಕಾರ ಸೈನ್ಯದಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಆಯೋಜಿಸಿದ ಸಮಾರಂಭದಲ್ಲಿ ಮಾತನಾಡಿ, ಸೈನಿಕ ದೇಶದ ಗಡಿಯಲ್ಲಿ ತನ್ನ ಪ್ರಾಣದ ಹಂಗು ತೊರೆದು ಕೆಲಸ ಮಾಡುತ್ತಾನೆ. ಆದಕ್ಕಾಗಿ ಇಂದು ಸೈನಿಕನಿಗೆ ಸಮಾಜದಲ್ಲಿ ಗೌರವವಿದೆ ಎಂದರು.

ಅರಣ್ಯ ಅಧಿಕಾರಿ ಧನರಾಜ ಮುಜಗೊಂಡ ಮಾತನಾಡಿ, ಪ್ರಾಣತ್ಯಾಗಕ್ಕೂ ಸಿದ್ದರಾಗುವ ಸೈನಿಕರನ್ನು ಸನ್ಮಾನಿಸುವದು ನಮ್ಮ ಕರ್ತವ್ಯ ಎಂದರು.

ಸಾಹಿತಿ ಗೀತಯೋಗಿ ಮಾತನಾಡಿ, ಒಂದು ಹೂವು ತನ್ನ ಜನ್ಮದ ಸಾರ್ಥಕತೆ ಪಡೆಯುವದು ಸೈನಿಕನ ಕೊರಳ ಹಾರವಾದಾಗ ಮಾತ್ರ ಎಂದರು.

ದ್ರಾಕ್ಷಾಯಿಣಿ ತಡಲಗಿ, ಬಸವರಾಜ ಗೊರನಾಳ ಮಾತನಾಡಿದರು.

ಶಂಕರಾನಂದ ಶ್ರೀಗಳು, ಜೀತಪ್ಪ ಕಲ್ಯಾಣಿ, ಅರ್ಜುನ ನೇದಲಗಿ, ಗಡ್ಡೆಪ್ಪ ಯಳಸಂಗಿ, ಈರಯ್ಯ ಮಂಗಳೂರ, ಅಶೋಕ ಈಶ್ವರಗೊಂಡ, ಅನೀಲ ಪರೇಶನವರ, ಬಸವರಾಜ ಕಲ್ಯಾಣಿ, ಸೋಮನಾಥ ಹರನಾಳ, ಶರಣಯ್ಯ ಮಠಪತಿ, ಶಿವಯೋಗಪ್ಪ ತಡಲಗಿ, ರಾಮಪ್ಪ, ದತ್ತಾತ್ರೇಯ ಆಳೂರ, ಸುನೀಲ ರಾಠೋಡ ಮತ್ತಿತರಿದ್ದರು.



ನಿವೃತ್ತ ಸೈನಿಕರಾದ ಗಡ್ಡೆಪ್ಪ ರಾವತಪ್ಪ ಕಾಳಿ, ಶ್ರೀಶೈಲ ಗಂಗಪ್ಪ ನಾಟಿಕಾರ ಇಂಡಿ ರೈಲು ನಿಲ್ದಾಣದಿಂದ ತೆರೆದ ವಾಹನದಲ್ಲಿ ಮತ್ತು ನೂರಾರು ದ್ವಿಚಕ್ರ ವಾಹನಗಳೊಂದಿಗೆ ನಗರದ ಶಿವಾಜಿ ವೃತ್ತ, ಮಹಾವೀರ, ಅಂಬೇಡ್ಕರ್, ಬಸವೇಶ್ವರ, ಸ್ವಾಮಿ ವಿವೇಕಾನಂದ ವೃತ್ತದ ಮೂಲಕ ಸಾಲೋಟಗಿ ಗ್ರಾಮಕ್ಕೆ ತೆರಳಿ ಗ್ರಾಮದಲ್ಲಿ ಭವ್ಯ ಮೆರವಣಿಗೆ ಮಾಡಲಾಯಿತು.

ಬ್ಯಾಂಕ್ ದರೋಡೆ ಪ್ರಕರಣ; ಗ್ರಾಹಕರಿಂದ ಎಸ್‌ಬಿಐ ಬ್ಯಾಂಕ್‌ಗೆ ಮುತ್ತಿಗೆ

ಚಡಚಣ: ಕಳೆದ ವರ್ಷ ಸೆ.16ರಂದು ಇಡಿ ರಾಜ್ಯವೇ ಬೆಚ್ಚಿ ಬೀಳಿಸಿದ ಸ್ಥಳೀಯ ಎಸ್‌ಬಿಐ ಬ್ಯಾಂಕ್ ದರೋಡೆ ಪ್ರಕರಣಕ್ಕೆ ಸಂಬಂಸಿದಂತೆ ಬ್ಯಾಂಕ್‌ನಲ್ಲಿ ಚಿನ್ನ ಅಡವಿಟ್ಟ ಗ್ರಾಹಕರಿಗೆ ಬ್ಯಾಂಕ್ ಇದುವರೆಗೆ ಯಾವದೇ ರೀತಿಯ ಚಿನ್ನ ಅಥವಾ ಹಣ ಮರಳಿ ನೀಡದ ಹಿನ್ನಲೆಯಲ್ಲಿ ಪ್ರತಿದಿನ ಬ್ಯಾಂಕ್‌ಗೆ ಅಲೆದಾಟ ನಡೆಸಿ ರೋಷಿ ಹೋದ ಗ್ರಾಹಕರು ಶನಿವಾರ ಬ್ಯಾಂಕ್‌ಗೆ ಮುತ್ತಿಗೆ ಹಾಕಿ ಬ್ಯಾಂಕ್ ಬಂದ್ ಮಾಡಿದ ಘಟನೆ ನಡೆದಿದೆ.



ಬ್ಯಾಂಕ್‌ಗೆ ಬಂದ ಗ್ರಾಹಕ ಆರ್.ಕೆ.ಬೈರಗೊಂಡ ಅಡವಿಟ್ಟ ಚಿನ್ನದ ಬಗ್ಗೆ ಶಾಖಾ ವ್ಯವಸ್ಥಾಪಕರಿಗೆ ವಿಚಾರಿಸಿದಾಗ ಅವರು ಸರಿಯಾದ ಮಾಹಿತಿ ನೀಡದ ಕಾರಣ ಎಲ್ಲ ಗ್ರಾಹಕರು ಬ್ಯಾಂಕ್ ಬಂದ ಮಾಡಿಸಿ, ಬ್ಯಾಂಕ್ ಮುಂದೆ ಪ್ರತಿಭಟನೆ ನಡೆಸಿದರು.

ನಂತರ ಸ್ಥಳಕ್ಕೆ ಆಗಮಿಸಿದ ಚಡಚಣ ಪಿಎಸ್‌ಐ ಸೋಮೇಶ ಗೆಜ್ಜಿ, ಅಪರಾಧ ವಿಭಾಗ ಪಿಎಸ್‌ಐ. ಎನ್.ಜಿ.ಅಪನಾಯಕ ಹಾಗೂ ಸಿಬ್ಬಂದಿ ಗ್ರಾಹಕರನ್ನು ಸಮಾಧಾನಗೊಳಿಸಲು ಪ್ರಯತ್ನಿಸಿದರೂ ಗ್ರಾಹಕರು ಮಾತಿಗೆ ಕಿವಿಗೊಡದೆ ತಾವು ಅಡವಿಟ್ಟ ಚಿನ್ನ ಕಳುವಾಗಿ 7 ತಿಂಗಳು ಕಳೆದರೂ ಇದುವರೆಗೂ ನಮಗೆ ಯಾವುದೇ ರೀತಿಯ ಹಣ ಅಥವಾ ಚಿನ್ನ ಮರಳಿ ದೊರೆತಿಲ್ಲ. ಇಲ್ಲಿಯವರೆಗೆ ಬ್ಯಾಂಕ್‌ನವರು ಹೇಳಿದ ಹಾಗೆ ನಾವು ಕೇಳಿದ್ದೇವೆ. ದರೋಡೆ ಪ್ರಕರಣ ಸಂಬಂಸಿದ 1 ತಿಂಗಳಲ್ಲಿ ನಿಮಗೆ ನಿಮ್ಮ ಚಿನ್ನ ಅಥವಾ ಅದರ ಮೊತ್ತ ನೀಡುತ್ತೇವೆ ಎಂದು ಹೇಳಿದ್ದರು. ಈಗ ಶುಭ ಕಾರ್ಯಗಳು ನಡೆದಿದ್ದು, ನಮಗೆ ಚಿನ್ನದ ಅವಶ್ಯಕತೆ ಇದೆ. ಇವಾಗ ಕೇಳಿದರೆ ಚಿನ್ನದ ನಿವ್ವಳ ತೂಕದ ಮೊತ್ತ ಹಾಗೂ ಆದಕ್ಕೆ 20% ಹೆಚ್ಚಿಗೆ ಹಣ ನೀಡುತ್ತೇವೆ ಎಂದು ಹೇಳುತ್ತಿದ್ದಾರೆ. ಈ ರೀತಿ ಹಣ ನೀಡಿದರೆ ನಮಗೆ ನಷ್ಟ ಉಂಟಾಗುತ್ತದೆ. ಸಧ್ಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ರೂ.1 ಲಕ್ಷ 50 ಸಾವಿರ ಇದೆ. ಬ್ಯಾಂಕ್‌ನವರು ನಮಗೆ ಸ್ಥೂಲ ತೂಕ ಹಾಗೂ ಇಂದಿನ ಮಾರುಕಟ್ಟೆ ಬೆಲೆ ನೀಡಬೇಕು ಇಲ್ಲವಾದರೆ ನಾವು ಅಡವಿಟ್ಟ ನಮ್ಮ ಚಿನ್ನ ನಮಗೆ ಮರಳಿ ನೀಡಲಿ ಎಂದು ಆಗ್ರಹಿಸಿದರು.

ಬ್ಯಾಂಕ್‌ಗೆ ಆಗಮಿಸಿದ ಪ್ರಾದೇಶಿಕ ವ್ಯವಸ್ಥಾಪಕ ವಿಕಾಸ ಭಗೋತ್ರಾ, ವಿಜಯಪುರ ಶಾಖಾ ವ್ಯವಸ್ಥಾಪಕ ಪ್ರಲ್ಹಾದ ದೇಸಾಯಿ, ವೆಂಕಟೇಶ ಅವರುಗಳು ಗ್ರಾಹಕರಿಗೆ ನೀವು ಅಡವು ಇಟ್ಟ ಚಿನ್ನದ ನಿವ್ವಳ ತೂಕದ ಮೊತ್ತ ಹಾಗೂ ಆದಕ್ಕೆ 20% ಹೆಚ್ಚಿಗೆ ಹಣ ನೀಡುತ್ತೇವೆ ಎಂದು ಭರಸವೆ ನೀಡಿ ಅದಕ್ಕೆ ನಮಗೆ 1 ತಿಂಗಳ ಕಾಲಾವಕಾಶ ನೀಡಬೇಕು ಎಂದು ವಿನಂತಿಸಿಕೊಂಡರು. ಈಗಾಗಲೇ 6 ತಿಂಗಳ ಕಾಲಾವಕಾಶ ನೀಡಿದ್ದೇವೆ. ಆದರೆ ನೀವು ಇದುವರೆಗೂ ನಮಗೆ ಸ್ಪಂದಿಸುತ್ತಿಲ್ಲ. ಇನ್ನು ಕಾಲಾವಕಾಶ ನೀಡಲು ಸಾಧ್ಯವಿಲ್ಲ ಎಂದರು.

ನಮಗೆ 4 ದಿನದೊಳಗಾಗಿ ಇಂದಿನ ಚಿನ್ನದ ಮಾರುಕಟ್ಟೆ ಬೆಲೆ ನೀಡಬೇಕು. ಇಲ್ಲವಾದರೆ ಬ್ಯಾಂಕ್ ಮುತ್ತಿಗೆ ಹಾಕಿ ಬ್ಯಾಂಕ್ ಬಂದ ಮಾಡುತ್ತೇವೆ ಎಂದು ಎಚ್ಚರಿಸಿದರು.

ಮುಖ್ಯ ಕಛೇರಿ ಅಧಿಕಾರಿಗಳಿಗೆ ವಿಚಾರಿಸಿ ಸೂಕ್ತ ಹಣ ನೀಡಲು ನಮಗೆ ಕಾಲಾವಕಾಶ ಬೇಕು. ಎಂದಾಗ ಅದಕ್ಕೆ ಬ್ಯಾಂಕಿನವರು ನಮಗೆ ಲಿಖಿತ ರೂಪದಲ್ಲಿ ನೀಡಿದರೆ ನಾವು ಪ್ರತಿಭಟನೆ ಹಿಂಪಡೆಯುವುದಾಗಿ ಗ್ರಾಹಕರು ಹೇಳಿದರು.

ಆದಕ್ಕೆ ಬ್ಯಾಂಕ್ ಅಧಿಕಾರಿಗಳು ಒಪ್ಪಿಕೊಂಡು ಲಿಖಿತ ರೂಪದಲ್ಲಿ 20 ದಿನಗಳ ಕಾಲಾವಕಾಶ ಕೇಳಿದ ನಂತರ ಗ್ರಾಹಕರು ಪ್ರತಿಭಟನೆ ಹಿಂಪಡೆದರು.

ಪ್ರತಿಭಟನೆಯಲ್ಲಿ ಬ್ಯಾಂಕ್ ಗ್ರಾಹಕರಾದ ಕಾಶೀನಾಥ ಪಾಟೀಲ, ಮಲ್ಲು ಮೇಲಮಳ, ಬಸವರಾಜ ಶರಣಗಾರ, ವಾಸೀಮ ಮುಲ್ಲಾ, ಗುರುಲಿಂಗ ದಂಧರಗಿ, ಆದೀಲ ಶೇಖ, ರಾಘವೇಂದ್ರ ಕುಲಕರ್ಣಿ, ಅಮೀನ ಟಪಾಲ ಸೇರಿದಂತೆ 20ಕ್ಕೂ ಹೆಚ್ಚು ಗ್ರಾಹಕರು ಇದ್ದರು.

ರಸ್ತೆ ಕಾಮಗಾರಿಗೆ ಭೂಮಿಪೂಜೆ

ವಿಜಯಪುರ: ಅಭಿವೃದ್ಧಿಯ ಮೂಲಕ ಗ್ರಾಮೀಣ ಭಾಗದ ರಸ್ತೆಗಳಿಗೆ ಹೊಸ ಮೆರಗು ನೀಡಲಾಗುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಹೇಳಿದರು.

ಬಬಲೇಶ್ವರ ತಾಲೂಕಿನ ಯಕ್ಕುಂಡಿಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ 300 ಲಕ್ಷ ರೂ. ವೆಚ್ಚದಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 34ರ ಯಕ್ಕುಂಡಿ, ಸಂಗಾಪುರ, ಶೇಗುಣಸಿ, ಕಾಖಂಡಕಿ ವ್ಹಾಯಾ ಹರಳಯ್ಯನಗುಂಡ 0 ಕಿಮೀ ಯಿಂದ 3ಕಿಮೀ ವರೆಗೆ ರಸ್ತೆ ಸುಧಾರಣೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಈ ಭಾಗದ ಜನತೆ ಬಹುದಿನಗಳ ನಿರೀಕ್ಷೆಯಾಗಿದ್ದ ರಾಷ್ಟ್ರೀಯ ಹೆದ್ದಾರಿ 34 ರಿಂದ ಹರಳಯ್ಯನಗುಂಡ ರಸ್ತೆಯುವರೆಗೆ ಈ ಕಾಮಗಾರಿ ನಡೆಯಲಿದೆ ಎಂದರು.

ಮುಖಂಡ ಚನ್ನಪ್ಪ ಕೊಪ್ಪದ ಮಾತನಾಡಿದರು.

ಯಕ್ಕುಂಡಿಯ ವೀರೇಶ್ವರ ಶರಣರು, ಮುಖಂಡರಾದ ವಿ. ಎಸ್. ಪಾಟೀಲ, ಮಲ್ಲು ದಳವಾಯಿ, ರಮೇಶ ದೇಸಾಯಿ, ಬಾಬುಗೌಡ ಪಾಟೀಲ, ನಾಗರಾಜ ಕುಲಕರ್ಣಿ, ಪ್ರಭುಗೌಡ ಪಾಟೀಲ, ಶೇಖಪ್ಪ ಕೊಪ್ಪದ, ಮಲ್ಲಪ್ಪ ಕೆಂಪವಾಡ, ಮಹೇಶ ಮಾಳಿ, ರಫೀಕ್ ಸೋನಾರ, ಜಾಫರ್ ನಿಡೋಣಿ, ವಿದ್ಯಾ ರಾಣಿ ತುಂಗಳ, ದಾನಮ್ಮ ಜಿರಲಿ, ಕಾವ್ಯ ಪಡತಾರೆ, ರಂಗಪ್ಪ ಪೂಜಾರಿ, ಮಾದೇವಪ್ಪ ಮಂಡೆಗಾರ, ಬುಡ್ಡಸಾಬ್ ಜಮಾದಾರ, ಇಸಾಕಸಾಬ್ ಜಮಾದಾರ, ಮುತ್ತಪ್ಪ ಪೂಜಾರಿ, ರಾಜಸಾಬ ಜಮಾದಾರ, ಪರಶುರಾಮ ಪಡಗಾರ, ರಾಜೇಸಾಬ್ಲ ಗಲಗಲಿ, ಅಬ್ಬಾ ಸಲಿ ಕಮತೆ, ಸವಿತಾ ವಗ್ಗರ ಇದ್ದರು.

ಹೇಮರೆಡ್ಡಿ ಮಲ್ಲಮ್ಮನ ಪುರಾಣ ನಾಳೆಯಿಂದ

ದೇವರಹಿಪ್ಪರಗಿ: ತಾಲೂಕಿನ ಡೋಣಿ ಕಡಕೋಳ ಗ್ರಾಮದ ಶ್ರೀಮಡಿವಾಳೇಶ್ವರ ಗದ್ದುಗೆ ಹಿರೇಮಠದಲ್ಲಿ ಶ್ರೀಮದ್ ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ ಜಗದ್ಗುರು ಡಾ.ಚನ್ನ ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದರು ಶ್ರೀಶೈಲ ಪೀಠ ಅಮೃತ ಹಸ್ತದಿಂದ ಅಡಿಗಲ್ಲು ಸಮಾರಂಭ, ಹಾನಗಲ್ ಕುಮಾರ ಶಿವಯೋಗಿಗಳ 158ನೇ ಜಯಂತ್ಯುತ್ಸವದ ನಿಮಿತ್ತ ಮೇ 5ರಿಂದ ಮೇ 24ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮ ಜಡಿಮಠದ ಜಡೆ ಸಿದ್ದೇಶ್ವರ ಶಿವಾಚಾರ್ಯರ ನೇತೃತ್ವದಲ್ಲಿ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನ ಮಹಾಪುರಾಣ ಪ್ರತಿದಿನ ಸಂಜೆ 7ಕ್ಕೆ ಜರುಗಲಿದೆ ಎಂದು ಗುರು ಮಠದ ಮಡಿವಾಳೇಶ್ವರ ಶ್ರೀಗಳು ತಿಳಿಸಿದ್ದಾರೆ.



ಸುದ್ದಿಗಾರರ ಜೊತೆ ಮಾತನಾಡಿ, ಮೆ 20ರಂದು ಸಂಜೆ 7ಕ್ಕೆಯುವಜನೋತ್ಸವ, ಮೆ 21 7ಕ್ಕೆ ರೈತರ ಘೋಷ್ಠಿ, ಮೇ 22 ಮುತ್ತೈದಯರ ಉಡಿ ತುಂಬುವ ಕಾರ್ಯಕ್ರಮ, ಮಹಿಳಾ ಘೋಷ್ಠಿ, ಮೇ 23 ಸಂಜೆ 7ಕ್ಕೆ ತುಲಾಭಾರ, ಮೇ 24ರಂದು ಬೆಳಗ್ಗೆ 9ಕ್ಕೆ ಪಂಚಾಚಾರ್ಯ ಧ್ವಜಾರೋಹಣ, ಅಂದು ಬೆಳಗ್ಗೆ 7ಕ್ಕೆ ಬಸವೇಶ್ವರ ಕರ್ತೃ ಗದ್ದುಗೆ ಮಹಾ ರುದ್ರಾಭಿಷೇಕ ಬಿಲ್ವಾರ್ಚನೆ, ಸಂಜೆ 4ಕ್ಕೆ ಧರ್ಮಸಭೆಯಲ್ಲಿ ಕ್ಷೇತ್ರದ ಶಾಸಕ ರಾಜುಗೌಡ ಪಾಟೀಲ ಕುದರಿಸಾಲವಾಡಗಿ, ಮಾಜಿ ಶಾಸಕ ಸೋಮನಗೌಡ ಪಾಟೀಲ ಸಾಸನೂರ, ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಪ್ರಭುಗೌಡ ಲಿಂಗದಳ್ಳಿ ಚಬನೂರ, ಬಿಜೆಪಿ ಮುಖಂಡರು ಬಸನಗೌಡ ಪಾಟೀಲ ಯಡಿಯಾಪೂರ ಸೇರಿದಂತೆ ಅನೇಕ ರಾಜಕೀಯ ಮುಖಂಡರು ಭಾಗವಹಿಸುವರು. ಅಂದು ಶ್ರೀಶೈಲ ಜಗದ್ಗುರುಗಳ ಅಡ್ಡ ಪಲ್ಲಕ್ಕಿ ಮಹೋತ್ಸವದ ನಿಮಿತ್ತ ಆರತಿ, ಕುಂಭ,ಕಳಸ, ಕನ್ನಡಿ, ಡೊಳ್ಳು ಬಾಜಿ ಹಾಗೂ ಭಜಂತ್ರಿಯೊಂದಿಗೆ ಅದ್ದೂರಿಯಾಗಿ ದೇವಸ್ಥಾನ ತಲುಪುವುದು. ಗ್ರಾಮಸ್ಥರು, ಮಠದ ಭಕ್ತರು ಹಾಗೂ ಸುತ್ತಮುತ್ತಲಿನ ಗ್ರಾಮದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಜಗದ್ಗುರುಗಳ ಆಶೀರ್ವಾದ ಕೃಪೆಗೆ ಪಾತ್ರರಾಗಬೇಕು ಎಂದರು.

ಕಿರುಸುದ್ದಿ

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸದಸ್ಯರ ಆಯ್ಕೆ



ಮಾನ್ವಿ: ಪಟ್ಟಣದಲ್ಲಿ ನಡೆದ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಘಟಕಕ್ಕೆ ನಡೆದ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಲ್ಲಿನ 3 ಸ್ಥಾನಗಳಲ್ಲಿ ಸುರೇಶ ಕುರ್ಡಿ 126, ಮಲ್ಲಿಕಾರ್ಜುನ 114, ಸಜ್ಜಲಿ 109 ಮತಗಳನ್ನು ಹಾಗೂ ಮಹಿಳಾ ಮೀಸಲು ಕ್ಷೇತ್ರದಲ್ಲಿ ಮಮತಾ ಎಸ್.ಎಂ. 129 ಮತಗಳನ್ನು ಪಡೆದು ಗೆಲುವು ಸಾಧಿಸಿದ್ದಾರೆ. ಉಳಿದಂತೆ ಮಹಿಳಾ ಮೀಸಲು ಕ್ಷೇತ್ರದಲ್ಲಿಸ್ಪರ್ಧಿಸಿದ ಪದ್ಮಾ ಕೆ.ಎಸ್. 50, ಸಾಮಾನ್ಯ ಕ್ಷೇತ್ರದಲ್ಲಿ ದೇವಮ್ಮ 34, ಕುಮಾರ ದೊಡ್ಡಬಸಪ್ಪನವರ 45, ಸಂಗಮೇಶ ಮೂಧೋಳ್ 66 ಮತಗಳನ್ನು ಪಡೆದಿದ್ದಾರೆ. ಗೆಲುವು ಪಡೆದ ಅಭ್ಯರ್ಥಿಗಳ ಬೆಂಬಲಿಗರು ಸಂಭ್ರಮಾಚರಣೆ ನಡೆಸಿದರು.

ಟಿಬಿ ಡ್ಯಾಂ ಹೂಳು ತೆಗೆಯಲು ಒತ್ತಾಯ

ವಿಜಯನಗರ: ತುಂಗಭದ್ರಾ ಜಲಾಶಯದಲ್ಲಿ ಸಂಗ್ರಹವಾಗಿರುವ ಸುಮಾರು 33 ಟಿಎಂಸಿ ಹೂಳು ತೆರವುಗೊಳಿಸಲು ತಕ್ಷಣವೇ ಅಂತರಾಜ್ಯ ನೀರಾವರಿ ತಜ್ಞರ ಸಮಿತಿ ರಚಿಸಬೇಕೆಂದು ತುಂಗಭದ್ರಾ ರೈತ ಸಂಘವು ಸರ್ಕಾರವನ್ನು ಒತ್ತಾಯಿಸಿದೆ.

ಈ ಕುರಿತು ಉಪಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಅವರಿಗೆ ಭಾನುವಾರ ಟಿ.ಬಿ.ಡ್ಯಾಂನಲ್ಲಿ ಮನವಿ ಸಲ್ಲಿಸಿರುವ ಸಂಘದ ಅಧ್ಯಕ್ಷ ಡಾ.ಪುರುಷೋತ್ತಮಗೌಡ, ಜಲಾಶಯದಲ್ಲಿ ಹೂಳು ತುಂಬಿರುವುದರಿಂದ ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದ ಸುಮಾರು 16.74 ಲಕ್ಷ ಎಕರೆ ಜಮೀನುಗಳಿಗೆ ನೀರಿನ ಕೊರತೆಯಾಗುತ್ತಿದೆ. ಉದ್ದೇಶಿತ ನವಿಲೆ ಸಮಾನಾಂತರ ಜಲಾಶಯ ಯೋಜನೆಗೆ ಅಂತಾರಾಜ್ಯ ಒಪ್ಪಿಗೆ ಹಾಗೂ ಭೂಸ್ವಾಧೀನದ ಪ್ರಕ್ರಿಯೆಗಳಿಗೆ ದೀರ್ಘ ಕಾಲಾವಕಾಶ ಬೇಕಾಗುವುದರಿಂದ ಪ್ರಸ್ತುತ ಜಲಾಶಯದ ಹೂಳು ತೆಗೆಯುವುದೇ ಸೂಕ್ತ ಮಾರ್ಗವಾಗಿದೆ.

ಈ ಹಿನ್ನೆಲೆಯಲ್ಲಿ ಜಲಾಶಯದ ಹಿನ್ನೀರಿನ ಭಾಗದಲ್ಲಿ ರಸ್ತೆ ನಿರ್ಮಿಸಿ, ರೈತರು ಹೂಳು ಮತ್ತು ಮಣ್ಣನ್ನು ಕೊಂಡೊಯ್ಯಲು ಅವಕಾಶ ನೀಡಬೇಕು. ಪ್ರತಿ ವರ್ಷ ಮಾರ್ಚ್‌ನಿಂದ ಮೇ ತಿಂಗಳವರೆಗೆ ಕಾರ್ಖಾನೆಗಳ ಯಂತ್ರೋಪಕರಣಗಳನ್ನು ಹೂಳೆತ್ತಲು ಬಳಸಿಕೊಳ್ಳಬೇಕು. ನಿವೃತ್ತ ಅಭಿಯಂತರರು ಹಾಗೂ ತಜ್ಞರ ವಿಶೇಷ ಸಭೆ ಕರೆದು ಶಾಶ್ವತ ಪರಿಹಾರ ರೂಪಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕೂಡಲೇ ಕ್ರಮ ಕೈಗೊಂಡು ರೈತರ ಹಿತರಕ್ಷಣೆ ಮಾಡಬೇಕೆಂದು ಸಂಘವು ಮನವಿ ಮಾಡಿದರು.

ಸಿಂಧನೂರು ಪಟ್ಟಣಕ್ಕೆ ನಟ ಸುದೀಪ್: ಅಭಿಮಾನಿಗಳಿಗೆ ಹಬ್ಬ

ಸಿಂಧನೂರು: ನಗರದಲ್ಲಿ ಇಂದು ಹಬ್ಬದ ವಾತಾವರಣಕ್ಕೆ ಸಾಕ್ಷಿಯಾಗಿತ್ತು.ಹೌದು ಬಸನಗೌಡ ಫೌಂಡೇಶನ್ ವತಿಯಿಂದ ಆಯೋಜಿಸಲಾದ ಬೃಹತ್ ಸಮಾರಂಭದಲ್ಲಿ ಸ್ಯಾಂಡಲ್‌ವುಡ್ ನಟ ಕಿಚ್ಚ ಸುದೀಪ್ ಹಾಗೂ ಹಾಸ್ಯ ನಟ ಸಾಧುಕೋಕಿಲ ಇಂದು ಆಗಮಿಸಿದರು. ತಾಲೂಕು ಕ್ರೀಡಾಂಗಣದಲ್ಲಿ ಈ ಅದ್ದೂರಿ ಸಮಾರಂಭ ಆಯೋಜನೆಗೊಂಡಿದೆ. ಕಾರ್ಯಕ್ರಮದಲ್ಲಿ ಉಚಿತ ಸಾಮೂಹಿಕ ವಿವಾಹ ಹಾಗೂ 5001 ಮಹಿಳೆಯರಿಗೆ 'ಉಡಿ ತುಂಬುವ' ವಿಶೇ? ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ರಾಜಕೀಯ ನಾಯಕರ ದಂಡು: ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮ ನಡೆಯುತ್ತಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪಾಲ್ಗೊಳ್ಳಲಿದ್ದಾರೆ. ಅವರೊಂದಿಗೆ ಸಚಿವರಾದ ಈಶ್ವರ್ ಖಂಡ್ರೆ, ಆರ್.ವಿ. ತಿಮ್ಮಾಪುರ, ಮಧು ಬಂಗಾರಪ್ಪ ಹಾಗೂ ಎನ್.ಎಸ್. ಬೋಸರಾಜು ಸೇರಿದಂತೆ ಅನೇಕ ರಾಜಕೀಯ ಪಕ್ಷಗಳು ಮುಖಂಡರು, ಮಠಾ೦ಶರು ಹಾಗೂ ವಿಧಾನ ಪರಿ?ತ್ ಸಭಾಪತಿ ಬಸವರಾಜ್ ಹೊರಟ್ಟಿ ಸೇರಿದಂತೆ ಹತ್ತಾರು ಶಾಸಕರು ಇಂದು ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಸಮಾರಂಭ ಆರಂಭವಾಯಿತು. ಈ ವೇಳೆ ನೆಚ್ಚಿನ ನಟ ಹಾಗೂ ನಾಯಕರನ್ನು ನೋಡಿ ಜನ ಸಂತೋಷ ಪಟ್ಟರು.



ಕಲಬುರಗಿ: ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಕಡ್ಡಾಯವಾದ ರಾಷ್ಟ್ರಮಟ್ಟದ ನೀಟ್-2026 ಪರೀಕ್ಷೆ ಭಾನುವಾರ ದೇಶಾದ್ಯಂತ ನಡೆಯುತ್ತಿದ್ದು, ನಗರದ ಜೇವರ್ಗಿ ಕಾಲನಿಯಲ್ಲಿರುವ ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳ ಕೂಲಂಕಷ ಪರಿಶೀಲನೆ ನಡೆಸಿ ಪರೀಕ್ಷಾಕೇಂದ್ರದೊಳಗೆ ಪ್ರವೇಶ ನೀಡಲಾಯಿತು.

ಅಭಿವೃದ್ಧಿಯಲ್ಲಿ ಕಾರ್ಮಿಕರ ಕೊಡುಗೆ ಅಪಾರ

ಯಲಬುರ್ಗಾ: ತಾಲೂಕಿನ ಹಿರೇವಂಕಲಕುಂಟಾ ಗ್ರಾಪಂ ವ್ಯಾಪ್ತಿಯಲ್ಲಿ ಅಕುಶಲ ಕೂಲಿಕಾರರಿಗೆ ನಾಲಾ ಹೂಳೆತ್ತುವ ಕೆಲಸ ನೀಡಲಾಗಿದ್ದು, ಈ ವೇಳೆ ಕಾಮಗಾರಿ ಸ್ಥಳದಲ್ಲಿ ವಿಶ್ವ ಕಾರ್ಮಿಕರ ದಿನಾಚರಣೆಯನ್ನು ಆಚರಿಸಲಾಯಿತು.

ಬಳಿಕ ತಾಲೂಕು ಐಇಸಿ ಸಂಯೋಜಕರಾದ ಶರಣಪ್ಪ ಹಾಳಕೇರಿ ಮಾತನಾಡಿ, ದೇಶದ ಅಭಿವೃದ್ಧಿಯಲ್ಲಿ ಕಾರ್ಮಿಕರ ಕೊಡುಗೆ ಅಪಾರ. ಕಾರ್ಮಿಕರು ಇಲ್ಲದ ದೇಶವನ್ನು ಊಹಿಸಲು ಸಾಧ್ಯವಿಲ್ಲ.ಹೀಗಾಗಿ ನರೇಗಾ ಯೋಜನೆಯಡಿ ಕೆಲಸ ಮಾಡುವ ಎಲ್ಲ ಕಾರ್ಮಿಕರಿಗೂ ಮೇ 1ರ ವಿಶ್ವ ಕಾರ್ಮಿಕ ದಿನಾಚರಣೆಯ ಶುಭಾಶಯಗಳು. ಕಾರ್ಮಿಕರಿಗಾಗಿಯೇ ಜಗತ್ತಿನಾದ್ಯಂತ ಈ ದಿನ ಆಚರಿಸಲಾಗುತ್ತಿದೆ ಎಂದರು.

ನರೇಗಾ ಯೋಜನೆಯಡಿ ಕೈಗೊಳ್ಳುವ ಸಾಮೂಹಿಕ ಕಾಮಗಾರಿಗಳಿಗೆ ಎನ್‌ಎಂಎಂಎಸ್ ಹಾಜರಾತಿ ಮೂಲಕ ವೈಯಕ್ತಿಕ ಫೋಟೋ ತೆಗೆದುಕೊಳ್ಳಲಾಗುತ್ತಿದೆ. ಕೆಲಸಕ್ಕೆ ಬರುವ ಪ್ರತಿಯೊಬ್ಬರೂ ಪೋಟೊ ತೆಗೆಸಿಕೊಂಡಲ್ಲಿ ವೇತನ ಸಮಸ್ಯೆ ಬರುವುದಿಲ್ಲ. ಹೀಗಾಗಿ ಎಲ್ಲರೂ ಕಡ್ಡಾಯವಾಗಿ ಪೋಟೋ ತೆಗೆಸಿಕೊಂಡು ಕೆಲಸ ಮಾಡಬೇಕೆಂದು ಹೇಳಿದರು.

ಕೂಲಿಕಾರರು ಗುಳೆ ಹೋಗುವುದನ್ನು ತಡೆಗಟ್ಟಿ ಇದ್ದೂರಲ್ಲೆ ಕೆಲಸ ಕೊಡಲಾಗುತ್ತಿದೆ. ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಬೇಕು. ಈಗ ಬೇಸಿಗೆ ಇರುವುದರಿಂದ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ನೀರು ಸರಿಯಾಗಿ ಕುಡಿಯಬೇಕು. ಆರೋಗ್ಯ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.



ಯಲಬುರ್ಗಾ: ತಾಲೂಕಿನ ಹಿರೇವಂಕಲಕುಂಟಾ ಗ್ರಾಪಂ ವ್ಯಾಪ್ತಿಯಲ್ಲಿ ಅಕುಶಲ ಕೂಲಿಕಾರರಿಗೆ ನಾಲಾ ಹೂಳೆತ್ತುವ ಕೆಲಸ ನೀಡಲಾಗಿದ್ದು, ಈ ವೇಳೆ ಕಾಮಗಾರಿ ಸ್ಥಳದಲ್ಲಿ ವಿಶ್ವ ಕಾರ್ಮಿಕರ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಮಿಕ ದಿನಾಚರಣೆಯನ್ನು ಕೂಲಿಕಾರರಿಂದ ಕೇಕ್ ಕತ್ತರಿಸಿ ಸಿಹಿ ಹಂಚಲಾಯಿತು. ಗ್ರಾಮ ಕಾಯಕ ಮಿತ್ರರಾದ ಮಂಜುಳಾ ವಾಲ್ಮೀಕಿ, ಕಾಯಕ ಬಂಧುಗಳು, ಕೂಲಿಕಾರರು ಇದ್ದರು.

ಪಿಯು ವಸತಿ ಕಾಲೇಜಿನ ನೂತನ ಕಟ್ಟಡದ ಲೋಕಾರ್ಪಣೆ

ರಾಜ್ಯಕ್ಕೆ ಗವಿಶ್ರೀ ಮಾದರಿ: ಬೊಮ್ಮಾಯಿ

ಕೊಪ್ಪಳ: ಭಾರತದ ಭವಿಷ್ಯ ಲೋಕಸಭೆ ಹಾಗೂ ವಿಧಾನಸಭೆಯಲ್ಲಿ ಇಲ್ಲ ಶಿಕ್ಷಣ ಸಂಸ್ಥೆಗಳ ನಡೆಸುವ ಕೇಂದ್ರಗಳಲ್ಲಿ ಭಾರತದ ಭವಿಷ್ಯ ಇದೆ. ಗವಿಮಠ ಉಚಿತ ಶಿಕ್ಷಣದ ಜೊತೆಗೆ ಒಳ್ಳೆಯ ಸಂಸ್ಕಾರ-ಸಂಸ್ಕೃತಿ ನೀಡುತ್ತಿರುವುದು ಲೋಕಕ್ಕೆ ಹೆಮ್ಮೆಯ ಸಂಗತಿ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಅವರು ಶ್ರೀಶಿವಶಾಂತವೀರ ಮಹಾಸ್ವಾಮೀಜಿ ಚಾರಿಟೇಬಲ್ ಟ್ರಸ್ಟಿನ ಅಡಿಯಲ್ಲಿ ತಾಲೂಕಿನ ಕೋಳೂರು-ಕಾಟ್ರಳ್ಳಿಯ ಹತ್ತಿರ ಶ್ರೀಗವಿಸಿದ್ದೇಶ್ವರ ಗುರುಕುಲ ವಿದ್ಯಾರ್ಥಿನಿಯರ ಪದವಿ ಪೂರ್ವ ವಸತಿ ಕಾಲೇಜು, ವಸತಿ ನಿಲಯ ಹಾಗೂ ಊಟದ ಸಭಾಂಗಣಗಳ ನೂತನ ಕಟ್ಟಡಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮಿಗಳು ರಾಜ್ಯಕ್ಕೆ ಮಾದರಿಯ ಸ್ವಾಮಿಗಳಾಗಿ ಮಾನವೀಯತೆಯ ನೆಲೆಗಟ್ಟಿನಲ್ಲಿ ಮಕ್ಕಳ ಭವಿಷ್ಯವನ್ನು ನಿರ್ಮಿಸುವ ಕನಸು ಕಂಡಿದ್ದು ಅಂತಃಕರಣದ ತಾಯಿಯ ಪ್ರೀತಿಯೊಂದಿಗೆ ಸಾಧಕರ ನಿರ್ಮಾಣದ ಕೆಲಸವನ್ನು ಗವಿಶ್ರೀಗಳು ಮಾಡುತ್ತಿದ್ದಾರೆ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದ ಮುಂಡರಗಿಯ ನಾಡೋಜ ಡಾ.ಅನ್ನದಾನೇಶ್ವರ ಸ್ವಾಮೀಜಿ, ಮುಂಡರಗಿಯ ಅನ್ನದಾನೇಶ್ವರ ಮಠಕ್ಕೂ ಕೊಪ್ಪಳ ಗವಿಸಿದ್ದೇಶ್ವರ ಮಠಕ್ಕೂ ಅವಿನಾಭಾವ ಸಂಬಂಧವಿದೆ.ಮರಿಶಾಂತವೀರಮಹಾಸ್ವಾಮಿಗಳವರ ಆಶೀರ್ವಾದ ಜೊತೆಗೆ ಶ್ರೀಶಿವಶಾಂತವೀರ ಸ್ವಾಮೀಜಿಯವರ ವಿಶ್ವಾಸವನ್ನು ಪಡೆದವರು ನಾವು. ಶ್ರೀಗವಿಸಿದ್ದೇಶ್ವರ ಗುರುಕುಲ ವಿಶೇಷವಾದ ವಾಸ್ತುಶಿಲ್ಪ, ಸಭಾಭವನ, ಕಾಲೇಜಿನ ವಿನ್ಯಾಸ ಬಹಳ ಆಕರ್ಷಣೆಯಾಗಿದೆ. ಇದು ನಾಡಿನ ಹೆಮ್ಮೆಯಾಗಿದೆ. ಮಹಿಳಾ ಸಬಲೀಕರಣಕ್ಕೆ ವಿಶೇಷವಾದ ಸಂಕಲ್ಪ ಕಾರ್ಯವನ್ನು ಮಾಡುತ್ತಿದೆ. ಇದರಿಂದ ಹೆಚ್ಚಿನ ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತಿರುವುದು ಬಹಳ ಶ್ಲಾಘನೀಯ ಕೆಲಸವಾಗಿದೆ ಎಂದು ಹೇಳಿದರು.



> **ಕೊಪ್ಪಳದ ಜನತೆ ನನ್ನನ್ನು ಮನೆ ಮಗನಂತೆ ಕಂಡಿದ್ದು, ಉಚಿತ ವಿದ್ಯಾರ್ಥಿನಿಯರ ಪದವಿಪೂರ್ವ ಕಾಲೇಜಿನ ಪುಣ್ಯ. ಸೇವೆ ಮಾಡಿದ ಕಾಣದ ಕೈಗಳಿಗೆ ಸಲ್ಲುತ್ತದೆ. ಗವಿಸಿದ್ದೇಶ್ವರ ಶಕ್ತಿ ನೀಡಿದರೆ ಬರುವ ದಿನಗಳಲ್ಲಿ ವಿದ್ಯಾರ್ಥಿಗಳಿಗೂ ಸಹ ಉಚಿತ ವಸತಿ ನಿಲಯ ಪ್ರಾರಂಭಿಸುವ ಚಿಂತನೆ ಇದೆ.**
> ■ ಅಭಿನವ ಗವಿಸಿದ್ಧೇಶ್ವರ ಶ್ರೀ, ಗವಿಮಠ

ಬೆಳಗಾವಿಯ ಕೆಎಲ್‌ಇ ಸಂಸ್ಥೆಯ ಪ್ರಮುಖರು, ರಾಜ್ಯಸಭಾ ಸದ್ಯಸರು, ಪದ್ಮಶ್ರೀ ಪುರಸ್ಕೃತರಾದ ಡಾ.ಪ್ರಭಾಕರ ಕೋರೆ ಮಾತನಾಡಿ, ಕರ್ನಾಟಕದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳಿವೆ. ವಿದ್ಯಾರ್ಥಿನಿಯರಿಗಾಗಿ ಉಚಿತ ವಸತಿ ಕಾಲೇಜನ್ನು ಸ್ಥಾಪಿಸಿದ ಕೀರ್ತಿ ಶ್ರೀಗವಿಮಠದ ಪೂಜ್ಯರಾಗಿದೆ. ಶ್ರೀಗಳ ಕಾರ್ಯ ಸಂತೋಷ ತಂದಿದೆ. ವೀರಶೈವ ಮಠಗಳು ಶೈಕ್ಷಣಿಕ ಸೇವೆಗೆ ನೀಡಿದ ಕೊಡುಗೆ ಅಪಾರವಾಗಿದೆ. ದುಡ್ಡು ನೀಡಿದರೂ ಇಷ್ಟು ಅಚ್ಚುಕಟ್ಟಾದ ಹಾಸ್ಟೆಲ್ ಸಿಗದು, ಅದು ಉಚಿತವಾಗಿ ನೀಡುತ್ತಿರುವುದು ಬಹಳ ಅಭಿಮಾನ ಸಂಗತಿ. ವಿಜಯಪುರದ ಸಿದ್ದೇಶ್ವರ ಶ್ರೀಗಳ ಜೊತೆಗೆ ಹೆಚ್ಚಿನ ಭಕ್ತರನ್ನು ಸಂಪಾದಿಸಿದ ಶ್ರೀಗಳೆಂದರೆ ಕೊಪ್ಪಳದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳಾಗಿದ್ದಾರೆ ಎಂದು ಹೇಳಿದರು.

2015 ನೇ ಬ್ಯಾಚ್‌ನ ಐಎಎಸ್ 310ನೇ ರ‍್ಯಾಂಕ್ ಪಡೆದ ಚಿನ್ಮಯಿ ಶಾಸಕರು ಹಾಗೂ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾದ ಬಸವರಾಜ ರಾಯರೆಡ್ಡಿ, ಕೊಪ್ಪಳ ಶಾಸಕರಾದ ರಾಘವೇಂದ್ರ ಹಿಟ್ನಾಳ ಮಾತನಾಡಿದರು. ಜನಪ್ರತಿನಿಧಿಗಳಾದ ಬೆಳಗಾವಿಯ ರಾಜ್ಯಸಭಾ ಸದ್ಯಸರು, ಗಂಗಾವತಿ ಮಾಜಿ ಶಾಸಕರಾದ ಪರಣ್ಣ ಮುನವಳ್ಳಿ, ಮಾಜಿ ಸಚಿವರಾದ ಹಾಲಪ್ಪ ಆಚಾರ ಭಾಗವಹಿಸಿದ್ದರು.

ಗುರುದೇವ ಕಲಾಕೃತಿಗೆ ಭಾರೀ ಬೇಡಿಕೆ



ಹನುಮಸಾಗರ: ಪಟ್ಟಣದ ಜ್ಞಾನೋದಯ ಶಿಕ್ಷಣ ಸಂಸ್ಥೆಯ ಶಿಕ್ಷಕರಾದ ಗುರುದೇವರಜಪೂತ್ ಅವರು ಮೈಸೂರಿನಲ್ಲಿ ನಡೆದ ರಾಜ್ಯಮಟ್ಟದ ಕಲಾ ಪ್ರದರ್ಶನದಲ್ಲಿ ತಮ್ಮ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟದ ಮೂಲಕ ವಿಶೇಷ ಗಮನ ಸೆಳೆದಿದ್ದಾರೆ. ಅವರ ಒಂದು ಕಲಾಕೃತಿಯು 25,000ಕ್ಕೆ ಮಾರಾಟ ವಾಗಿ ಕಲಾವಿದರಿಗೆ ಸಂತಸ ತಂದಿದೆ.

ಮೈಸೂರು ನಗರದ ಕರ್ನಾಟಕ ಕಲಾ ಮಂದಿರದಲ್ಲಿ ಏ.24ರಿಂದ 26ರವರೆಗೆ ಮೈಸೂರು ವಿವಿಧ ಆರ್ಟ್ ಗ್ರೂಪ್ ವತಿಯಿಂದ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಚಿತ್ರಕಲಾ ಪ್ರದರ್ಶನದಲ್ಲಿ ಗುರುದೇವ ರಜಪೂತ್ ಅವರ ಕಲಾಕೃತಿಗಳು ಪ್ರದರ್ಶನಗೊಂಡಿದ್ದವು. ಈ ಪ್ರದರ್ಶನಕ್ಕಾಗಿ ಅವರ 'ಕ್ರಿಯೇಟಿವ್ ಕಲಾಕೃತಿಗಳು' ಮತ್ತು 'ಕಾವಿ ಹಾರ್ಟ್' ಎಂಬ ವಿಷಯಾಧಾರಿತವಾಗಿ ಸಿದ್ಧಪಡಿಸಿದ ಎರಡು ಕ್ರಿಯೇಟಿವ್ ಪೇಂಟಿಂಗ್‌ಗಳು ಹಾಗೂ ಒಂದು ಕಾವಿ ಕಲೆ ಚಿತ್ರಕಲೆ ಆಯ್ಕೆಯಾಗಿದ್ದವು.

ಪ್ರದರ್ಶನದಲ್ಲಿ ಅನೇಕ ಕಲಾವಿದರ ಕೃತಿಗಳ ನಡುವೆ ಗುರುದೇವ್ ಪಿ.ರಜಪೂತ ಅವರ ಕಲಾಕೃತಿಯೊಂದು ಖ್ಯಾತ ವೈದ್ಯರಾದ ಡಾ. ಆಕಾಶ್ ಪುನೀತ್ ರಾಥೋಡ್ ಅವರ ಮೆಚ್ಚುಗೆಗೆ ಪಾತ್ರವಾಗಿ 25,000ಕ್ಕೆ ಮಾರಾಟವಾಯಿತು. ಡಾ.ಆಕಾಶ್ ಪುನೀತ್ ರಾಥೋಡ್ ಹಾಗೂ ಅವರಸ್ನೇಹಿತರು ಹಲವು ಕಲಾಕೃತಿಗಳನ್ನು ಖರೀದಿಸುವ ಮೂಲಕ ಕಲೆಗೆ ಗೌರವ ಸಲ್ಲಿಸಿದರು. ಇದು ಕಲಾವಿದರಿಗೆ ದೊರೆತ ದೊಡ್ಡ ಪ್ರೋತ್ಸಾಹವಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ಕಲಾವಿದ ಗುರುದೇವ್ ಪಿ. ರಜಪೂತ, 'ನನ್ನ ಕಲಾಕೃತಿಯನ್ನು ಮೆಚ್ಚಿ ಖರೀದಿಸಿದ ಡಾ. ಆಕಾಶ್ ಪುನೀತ್ ರಾಥೋಡ್ ಹಾಗೂ ಅವರ ಸ್ನೇಹಿತರಿಗೆ ಹೃತ್ಪೂರ್ವಕ ಧನ್ಯವಾದಗಳು. ಅವರ ಪ್ರೋತ್ಸಾಹ ನನ್ನಂತಹ ಕಲಾವಿದರಿಗೆ ಸ್ಫೂರ್ತಿ,' ಎಂದು ತಿಳಿಸಿದ್ದಾರೆ.

ಕ್ಯಾನ್ವಾಸ್ ಮೇಲೆ ಅತ್ಯಂತ ನೈಪುಣ್ಯದಿಂದ ರೂಪಿಸಿದ ಈ ಕಲಾಕೃತಿಗಳು ಆಯ್ಕೆಯಾಗಿರುವುದು ಮತ್ತು ಮಾರಾಟವಾಗಿರುವುದು ಶಿಕ್ಷಕರ ಪ್ರತಿಭೆಗೆ ಮತ್ತೊಂದು ಮನ್ನಣೆ ದೊರೆತಂತಾಗಿದೆ. ಇವರ ಸಾಧನೆಗೆ ಶಿಕ್ಷಣ ಸಂಸ್ಥೆಯ ಸಹೋದ್ಯೋಗಿಗಳು ಹಾಗೂ ಪಟ್ಟಣದ ಕಲಾಭಿಮಾನಿಗಳು ಅಭಿನಂದನೆ ವ್ಯಕ್ತಪಡಿಸಿದ್ದಾರೆ.

ಸರ್ಕಾರಿ ಯೋಜನೆಗಳ ಸದುಪಯೋಗಕ್ಕೆ ಸಲಹೆ

ಕುಕನೂರು: ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಸರ್ಕಾರ ಸಾಕಷ್ಟು ಯೋಜನೆಗಳನ್ನು ಜಾರಿಗೆ ತಂದಿದೆ. ಅವುಗಳನ್ನು ಸದುಪಯೋಗ ಪಡೆದು ಉನ್ನತ ಸ್ಥಾನಕ್ಕೆ ಬೆಳೆಯಲು ಪ್ರಯತ್ನಿಸಬೇಕೆಂದು ಬೆಂಗಳೂರು ನಿವೃತ್ತ ಡಿಡಿಪಿಐ ಎನ್.ಡಿ.ಸಾಲಿ ಸಲಹೆ ನೀಡಿದರು.

ಇಲ್ಲಿಯ ಶ್ರೀಜಗದ್ಗುರು ಅನ್ನದಾನೇಶ್ವರ ಶಾಖಾ ಮಠ ಹಾಗೂ ಕನ್ನಡ ಸಾಹಿತ್ಯ ಸಂಸ್ಕೃತಿ ಮತ್ತು ಅಭಿವೃದ್ಧಿ ಟ್ರಸ್ಟ್ ಸಹಯೋಗದಲ್ಲಿ ಭಾನುವಾರ ಕುಕನೂರು ತಾಲೂಕಿನ ವಿವಿಧ ಪ್ರೌಢಶಾಲೆ ಗಳಲ್ಲಿ ಶೇ.75 ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು.

ಸ್ಪರ್ಧಾತ್ಮಕ ದಿನಮಾನಗಳಲ್ಲಿ ಇನ್ನೂ ಹೆಚ್ಚು ಮಕ್ಕಳು ತೊಡಗಿಕೊಳ್ಳವಂತಾಗಲು ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ಓದಿ ಶ್ರೇಯಸ್ಸು ಗಳಿಸಬೇಕು. ಸರ್ಕಾರವು ಇಂದಿನ ದಿನಗಳಲ್ಲಿ ವಸತಿ ನಿಲಯಗಳು ಸೇರಿದಂತೆ ಸಾಕಷ್ಟು ಪ್ರಮಾಣದಲ್ಲಿ ಶೈಕ್ಷಣಿಕ ಸೌಲಭ್ಯ ಒದಗಿಸಲು ಪ್ರಯತ್ನಿಸುತ್ತಿವೆ. ಇವುಗಳನ್ನು ಬಳಸಿ ಪಿಯುಸಿ ಹಾಗೂ ಪದವಿ ಇತರ ತಾಂತ್ರಿಕ ಶಿಕ್ಷಣದಲ್ಲಿ ಪ್ರವೇಶ ಪಡೆದು ಆದರ್ಶ ವಿದ್ಯಾರ್ಥಿಗಳಾಗಿ ಜಿಲ್ಲೆಗೆ ಹೆಸರು ತರಬೇಕೆಂದು ನುಡಿದರು.

ಮುಖ್ಯ ಅತಿಥಿಗಳಾಗಿ ವಕೀಲರಾದ ಬಸವರಾಜ್ ಜಂಗ್ಲಿ ಅವರು ಮಾತನಾಡಿ, ವಿದ್ಯಾರ್ಥಿಗಳು ಮೊಬೈಲ್ ದಾಸರಾಗದೆ ಪುಸ್ತಕಗಳ ದಾಸರಾಗಿ ಉತ್ತಮ ವ್ಯಕ್ತಿತ್ವದಿಂದ ಸಮಾಜಕ್ಕೆ ಉತ್ತಮ ಕೊಡುಗೆ ನೀಡಲು ಮುಂದಾಗಬೇಕೆಂದರು. ನಿವೃತ್ತ ಶಿಕ್ಷಕ ಶರಣಪ್ಪ ಕೊಪ್ಪದ ಅಧ್ಯಕ್ಷತೆ ವಹಿಸಿದ್ದರು.

ಡಾ.ಮಹಾದೇವ ಮಹಾಸ್ವಾಮೀಜಿ ಅವರು ಸಾನ್ನಿಧ್ಯ ವಹಿಸಿದ್ದರು.

ಸಿಆರ್‌ಸಿ ಸಂಯೋಜಕ ಪೀರ ಸಾಬ್ ದಫೇದ, ಮುರಾರಿ ಭಜಂತ್ರಿ , ವಕೀಲ ರಮೇಶ್ ಗಜಾಕೋಶ್, ಪಪಂ ಮಾಜಿ ಉಪಾಧ್ಯಕ್ಷ ಪ್ರಶಾಂತ ಆರಬೇರಳಿನ್, ಸಂಸ್ಥೆಯ ಅಧ್ಯಕ್ಷ ರುದ್ರಪ್ಪ ಭಂಡಾರಿ ಇತರರಿದ್ದರು. ನೀಲಮ್ಮ ಶಿರೂರು ಮಠ, ಗಾಯಕ ಶರಭಯ್ಯ ಶಿರೂರು ಮಠ ಅವರು ಭಕ್ತಿಗೀತೆ, ಜಾನಪದ ಗೀತೆಗಳನ್ನು ಪ್ರಸ್ತುತ ಪಡಿಸಿದರು. ತಾಲೂಕಿನ ಸುಮಾರು 45 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸತ್ಕರಿಸಿಗೌರವಿಸಲಾಯಿತು. ಕನಕರಾಯ ಭಜಂತ್ರಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಬಸವರಾಜ್ ಕೊಡ್ಲಿ ಸ್ವಾಗತಿಸಿದರು.



ನಾರೀಶಕ್ತಿ ವಂದನ್ ಬಿಲ್ ತಕ್ಷಣ ಜಾರಿಗೆ ಒತ್ತಾಯ

ಕಲಬುರಗಿ: ನಾರೀಶಕ್ತಿ ವಂದನ್ ಬಿಲ್-2023 ತಕ್ಷಣವೇ ಜಾರಿಗೆ ತರಬೇಕು ಹಾಗೂ ಮಹಿಳಾ ಮೀಸಲಾತಿಯಲ್ಲಿ ಓಬಿಸಿ ಮಹಿಳೆಯರಿಗೂ ಅವಕಾಶ ಕಲ್ಪಿಸಬೇಕು ಎಂದು ಕಲಬುರಗಿ ಜಿಲ್ಲಾ ಮಹಿಳಾ ಕಾಂಗ್ರೆಸ್ ಘಟಕ ಆಗ್ರಹಿಸಿದೆ. ಈ ಸಂಬಂಧ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ಪತ್ರ ಬರೆದು ಅಂಚೆ ಮೂಲಕ ಕಳುಹಿಸುವ ಮೂಲಕ ತಮ್ಮ ಮನವಿಯನ್ನು ವ್ಯಕ್ತಪಡಿಸಲಾಗಿದೆ.

ಈ ವೇಳೆ ಮಾತನಾಡಿದ ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ರೇಣುಕಾ ಸಿಂಗ್, ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರವಾದರೂ ಅದನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ವಿಳಂಬ ಮಾಡುತ್ತಿರುವುದು ಮಹಿಳೆಯರ ಆಶಯಗಳಿಗೆ ಧಕ್ಕೆಯಾಗುತ್ತಿದೆ ಎಂದು ಆರೋಪಿಸಿದರು.

ಮಹಿಳೆಯರಿಗೆ ರಾಜಕೀಯ ಅವಕಾಶಗಳನ್ನು ವಿಸ್ತರಿಸುವ ಹೆಸರಿನಲ್ಲಿ ಘೋಷಣೆಗಳಷ್ಟೇ ನಡೆಯುತ್ತಿದ್ದು, ವಾಸ್ತವದಲ್ಲಿ ಅನುಷ್ಠಾನದಲ್ಲಿ ಸ್ಪಷ್ಟತೆ ಕಾಣುತ್ತಿಲ್ಲ ಎಂದು ಟೀಕಿಸಿದರು.

ಮಹಿಳಾ ಮೀಸಲಾತಿಯಲ್ಲಿ ಹಿಂದುಳಿದ ವರ್ಗಗಳ ಮಹಿಳೆಯರಿಗೂ ಸಮಾನ ಅವಕಾಶ ದೊರೆಯಬೇಕು. ಓಬಿಸಿ ಮಹಿಳೆಯರನ್ನು ಮೀಸಲಾತಿಯ ವ್ಯಾಪ್ತಿಗೆ ಸೇರಿಸುವ ಮೂಲಕ ಸಾಮಾಜಿಕ ನ್ಯಾಯದ ಆಶಯವನ್ನು ಸಾಕಾರಗೊಳಿಸಬೇಕು ಎಂದು ಅವರು ಒತ್ತಾಯಿಸಿದರು.



ದೇಶದ ರಾಜಕೀಯ ಪರಿಸ್ಥಿತಿಯಲ್ಲಿ ಜನರ ಧ್ವನಿಯೇ ಅಂತಿಮವಾಗಿದ್ದು, ಮಹಿಳೆಯರ ಹಕ್ಕುಗಳು, ಸಮಾನತೆ ಮತ್ತು ಸಾಮಾಜಿಕ ನ್ಯಾಯದ ವಿಚಾರದಲ್ಲಿ ಕಾಂಗ್ರೆಸ್ ಪಕ್ಷ ಹೋರಾಟ ಮುಂದುವರಿಸಲಿದೆ ಎಂದು ತಿಳಿಸಿದರು.

ಸುಳ್ಳು ಪ್ರಚಾರ, ದ್ವೇಷ ರಾಜಕೀಯ ಹಾಗೂ ಜನವಿರೋಧಿ ನೀತಿಗಳ ವಿರುದ್ಧ ಜನಜಾಗೃತಿ ಮೂಡಿಸುವ ಕಾರ್ಯಕ್ಕೂ ಮಹಿಳಾ ಕಾಂಗ್ರೆಸ್ ಹೆಚ್ಚು ಒತ್ತು ನೀಡಲಿದೆ ಎಂದರು.

ಸಂಗೀತಾ ಪಾಟೀಲ್, ಅನುರಾಧಾ, ಗೀತಾ ಮುದಗಲ್, ಜಯಶ್ರೀ ಚಿಂತಪಳ್ಳಿ, ಲಕ್ಷ್ಮಿ ಸರಸಂಬಕರ್, ಶಹನಾಜ್ ಅಕ್ತರ್, ಸಹೇರಾ ಬಾನು ಸೇರಿದಂತೆ ಹಲವಾರು ಕಾರ್ಯಕರ್ತೆಯರು ಭಾಗವಹಿಸಿದ್ದರು.

ಬೇಸಿಗೆಯಲ್ಲಿ ಉಚಿತ ಮಜ್ಜಿಗೆ ಸೇವೆ

ಕಲಬುರಗಿ: ನಗರದ ಗುರುನಾನಕ್ ದ್ವಾರದಲ್ಲಿ ಗುರು ಕೇ ಸೇವಕ ತಂಡದ ವತಿಯಿಂದ ಸಾರ್ವಜನಿಕರಿಗೆ ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ ನಡೆಯುತ್ತಿದೆ. ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ಈ ಸೇವೆಯನ್ನು ತಂಡದ ಸದಸ್ಯರು ತಮ್ಮ ಸ್ವಂತ ಹಣದಿಂದ ನಡೆಸುತ್ತಿದ್ದು,ಈ ವರ್ಷವೂ ಬೇಸಿಗೆಯ ಎಂಟು ವಾರಗಳ ಕಾಲ ಸೇವೆಯನ್ನು ಮುಂದುವರಿಸಿದ್ದಾರೆ.

ಬೇಸಿಗೆಯ ಉಷ್ಣತೆಯನ್ನು ತಣಿಸುವ ಉದ್ದೇಶದಿಂದ ಪ್ರತಿ ಭಾನುವಾರ ತಂಪಾದ ಮಜ್ಜಿಗೆಯನ್ನು ಸಾರ್ವಜನಿಕರಿಗೆ ಉಚಿತವಾಗಿ ನೀಡಲಾಗುತ್ತಿದೆ. ಈ ಸೇವೆಗೆ ಸ್ಥಳೀಯರಿಂದ ಉತ್ತಮ ಸ್ಪಂದನೆ ದೊರೆಯುತ್ತಿದೆ.ಈ ಸೇವೆಯಲ್ಲಿ ಜೈಜೀತ್ ಸಿಂಗ್, ಸುಖದೀಪ್ ಸಿಂಗ್, ರಣದೀಪ್ ಸಿಂಗ್, ಸುಮಿತ್, ರಿತೀಕ್, ಅಮರದೀಪ್, ಕುಲದೀಪ್, ಜೀತ್, ಮಾನವ್, ಸನ್ನಿ, ಮನ್ನಿ, ಗುರುಮಿತ್ ಸಿಂಗ್, ಹರಮೀತ್ ಸಿಂಗ್, ಶಾರದಾ, ಹರಶರನ್ ಕೌರ್ ಹಾಗೂ



ನೀತು ಸೇರಿದಂತೆ ಅನೇಕರು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ.

ಇದೇ ಸಂದರ್ಭದಲ್ಲಿ ಗುರುನಾನಕ್ ದ್ವಾರದಲ್ಲಿ ದಿನನಿತ್ಯ ಲಂಗರ್ ಸೇವೆಯೂ ನಡೆಯುತ್ತಿದ್ದು, ಸಮಾಜ ಸೇವೆಯ ಉತ್ತಮ ಮಾದರಿಯಾಗಿ ಈ ತಂಡದ ಕಾರ್ಯ ಪ್ರಶಂಸೆಗೆ ಪಾತ್ರವಾಗಿದೆ.

ಮಕ್ಕಳನ್ನು ಆಸ್ತಿಯನ್ನಾಗಿಸಲು ಸಂಕಲ್ಪ ಮಾಡಿ: ಬಸವರಾಜ

ಕುಷ್ಟಗಿ: ತಾಲೂಕಿನ ಬಿಜಕಲ್ ಸರ್ಕಾರಿ ಪ್ರೌಢ ಶಾಲೆ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶದಲ್ಲಿ ಶೇ.100 ಮಾಡಿ ಸಾಧನೆ ಮಾಡಿರುವುದರಿಂದ ಗ್ರಾಮಸ್ಥರು ಹಾಗೂ ಶಿಕ್ಷಣಾಭಿಮಾನಿಗಳು ಸಾಧನೆಗೈದ ವಿದ್ಯಾರ್ಥಿಗಳನ್ನು ಹಾಗೂ ಶಿಕ್ಷಕರನ್ನು ಸನ್ಮಾನಿಸುವ ಸಲುವಾಗಿ ಗ್ರಾಮದ ಸಾರ್ವಜನಿಕ ನಿರುಪಾದಿ ಕಟ್ಟೆ ಬಯಲು ಜಾಗದಲ್ಲಿ ಶನಿವಾರ ಸಂಜೆ ಅಭಿನಂದನಾ ಸಮಾರಂಭವನ್ನು ಏರ್ಪಡಿಸಿದ್ದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಲಾ ಮುಖ್ಯೋಪಾಧ್ಯಾಯ ಬಸವರಾಜ ಬಾಗಲಿ, ಇದೊಂದು ಶೈಕ್ಷಣಿಕ ಜಾಗೃತಿ ಕಾರ್ಯಕ್ರಮವಾಗಿದೆ. ಪಾಲಕರು ಮಕ್ಕಳಿಗಾಗಿ ಆಸ್ತಿ ಮಾಡುವುದಕ್ಕಿಂತ ಮಕ್ಕಳನ್ನೇ ಒಂದು ಅದ್ಭುತ ಆಸ್ತಿಯನ್ನಾಗಿ ಮಾಡಲು ಸಂಕಲ್ಪ ತೊಡಬೇಕು ಎಂದರು.

ಸರ್ಕಾರಿ ಶಾಲೆಗಳಲ್ಲಿರುವ ಸೌಲಭ್ಯಗಳ ಕುರಿತು ಮಾಹಿತಿ ನೀಡುತ್ತಾ, ಎಲ್ಲ ರೀತಿಯ ಮೂಲ ಸೌಲಭ್ಯಗಳನ್ನು ಹೊಂದಿರುವ ಹಾಗೂ ಅನುಭವಿ ಶಿಕ್ಷಕರಿಂದ ಬೋಧನೆ ಸಿಗುತ್ತಿರುವುದರಿಂದ ನಿಮ್ಮ ಮಕ್ಕಳನ್ನು ಬೇರೆ ಕಡೆ ಶಾಲೆಗೆ ಕಳುಹಿಸುವುದಕ್ಕಿಂತ ಇದೇ ಗ್ರಾಮದ ಈ ಸಾಧನೆಗೈದಿರುವ ಶಾಲೆಗೆ ಕಳುಹಿಸಲು ಹಾಗೂ ಮಕ್ಕಳ ಭವಿಷ್ಯ ಉಜ್ವಲವಾಗುವಂತೆ ರೂಪಿಸಿಕೊಳ್ಳಲು ಗ್ರಾಮದ ಪಾಲಕರಲ್ಲಿ ವಿನಂತಿಸಿದರು.



ಇಲಾಖೆಯ ನಿಯಮದಂತೆ ಎಲ್‌ಬಿವಿ ಆಶಿಕ್ಷಕರಾದ ಹಂಪಯ್ಯ ಜಂಬಲದಿನ್ನಿ ಸಂತೋಷ ನಾಗಲೋಟ ಪ್ರಸನ್ನಕುಮಾರ, ಶಶಿಧರ ಗೊರಬಾಳ, ವಿಜಯಲಕ್ಷ್ಮಿ ದೇಸಾಯಿ , ಗ್ರಾಮಸ್ಥರ ಪರವಾಗಿ ಭೀಮಣ್ಣ ಹೂಗಾರ ಕುಂಟೆಪ್ಪ ತಳವಾರ ಗ್ರಾಮದ ಅಭಿವೃದ್ಧಿಗಾಗಿ ಶಿಕ್ಷಣದ ಮಹತ್ವ ಕುರಿತು ಮಾತನಾಡಿದರು

ಫಲಿತಾಂಶದಲ್ಲಿ ಸಾಧನೆ ಮಾಡಿದ ಮಹಾಲಕ್ಷ್ಮಿ ವೀರಾಪುರ , ಬಸಮ್ಮ ಗಡಾದ , ಬಸಮ್ಮ ಹಿರೇಕೊಡಲಿ , ಮಹಾದೇವಿ ಕ್ಯಾದಿಗುಂಪಿ ಮತ್ತು ಸಾಧನೆಗೈಯಲು ಕಾರಣೀಭೂತರಾದ ಶಾಲಾ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರನ್ನು ಮತ್ತು ದಾನಿಗಳನ್ನು ಗ್ರಾಮದ ಪರವಾಗಿ ಸನ್ಮಾನಿಸಿ ಗೌರವಿಸಲಾಯಿತು ಕಾರ್ಯಕ್ರಮದ ಉದ್ದಕ್ಕೂ ಗ್ರಾಮದ ಕಲಾವಿದ, ಹಾಡುಗಾರ ನರಸಿಂಹದಾಸ್ ತೋಟದ್ ಅವರಿಂದ ಅನೇಕ ಶೈಕ್ಷಣಿಕ ಜಾಗೃತಿ ಗೀತೆಗಳು ಮೂಡಿಬಂದವು.

ಗ್ರಾಮದ ಪ್ರಮುಖರಾದ ಎಸ್‌ಡಿಎಂಸಿ ಅಧ್ಯಕ್ಷ ವೀರನಗೌಡ ಪೊಲೀಸ್ ಪಾಟೀಲ, ಗೋಕುಲ ಕೃಷ್ಣಪ್ಪ ತೆಗ್ಗಿನಮನಿ, ಮಾರುತಿ ಭೋವಿ, ಬಸವಂತಪ್ಪ ಕರಿಚಂದನ, ಹನುಮಂತ ಭೋವಿ, ಮಲ್ಲಮ್ಮ ವೀರಾಪುರ, ನಾಗಮ್ಮ ಕಂಬಳಿ, ಸಾವಿತ್ರಿ ತಳುವಗೇರಾ, ಮಳ್ಳಪ್ಪ ಕಲಕೇರಿ, ನೀಲಕಂಠಪ್ಪ ಕಮ್ಮಾರ , ಸಂಗಪ್ಪ ಕೊಪ್ಪಳ, ಮಲ್ಲಿಕಾರ್ಜುನ ಉಪನಾಳ, ಶ್ರೀಧರ ವಂಕಲಕುಂಟಿ ಸೇರಿದಂತೆ ಅನೇಕರು ವೇದಿಕೆಯಲ್ಲಿದ್ದರು.

ಮಹಾಲಕ್ಷ್ಮಿ ಹಾಗೂ ಸಂಗಡಿಗರು ಪ್ರಾರ್ಥನೆಗೈದರೆ, ದೇವರಾಜ್ ವಿಶ್ವಕರ್ಮ ಹಾಗೂ ಮಂಜುನಾಥ್ ಗುಜಮಾಗಡಿ ನಿರ್ವಹಿಸಿ, ವಂದಿಸಿದರು.

ಸಬ್ಸಿಡಿ ಘೋಷಣೆ ಉತ್ತಮ ನಿರ್ಧಾರ: ಡಾ.ಪೆರ್ಲ

ಕಲಬುರಗಿ: ಬೆಂಗಳೂರಿನಿಂದ ಬೀದರ್ ಮತ್ತು ಕಲಬುರಗಿಗೆ ವಿಮಾನ ಸೇವೆ ಅಬಾಧಿತವಾಗಿ ಮುಂದುವರಿಸಲು ರಾಜ್ಯ ಸರ್ಕಾರ ಒಟ್ಟು ಯೋಜನಾ ವೆಚ್ಚ 28.47 ಕೋಟಿ ರೂ. ಸಬ್ಸಿಡಿ ನೀಡಲು ನಿರ್ಧರಿಸಿರುವುದು ಸ್ವಾಗತಾರ್ಹ ಎಂದು ದಕ್ಷಿಣ ಕನ್ನಡ ಸಂಘದ ಮಾಜಿ ಅಧ್ಯಕ್ಷರಾದ ಡಾ. ಸದಾನಂದ ಪೆರ್ಲ ಹೇಳಿದ್ದಾರೆ.

ರಾಜ್ಯ ಸಚಿವ ಸಂಪುಟದ ಸಭೆಯಲ್ಲಿ ಏ.30ರಂದು ಮೂಲ ಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಒಟ್ಟು ಯೋಜನಾ ವೆಚ್ಚದಡಿ ವಿಮಾನಸೇವೆ ಪುನರಾರಂಭಿಸಲು (ವಿಜಿಎಫ್) 28.47 ಕೋಟಿ. ರೂ. ಸಬ್ಸಿಡಿ ಘೋಷಿಸಿದೆ ಬೀದರ್ ಮತ್ತು ಕಲಬುರಗಿಯಿಂದ ಬೆಂಗಳೂರಿಗೆ ವಿಮಾನ ಸೇವೆ ಒದಗಿಸಲು ಅನುದಾನವನ್ನು 80:20 ಅನುಪಾತದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಡಿ ಅನುಮೋದನೆ ನೀಡಿದೆ.

ಬೆಂಗಳೂರು-ಬೀದರ್-ಬೆಂಗಳೂರು, ಹಾಗೂ ಬೆಂಗಳೂರು-ಕಲಬುರಗಿ -ಬೆಂಗಳೂರು ಮಾರ್ಗಗಳಲ್ಲಿ ವಿಮಾನಯಾನ ಕಾರ್ಯಾಚರಣೆ ಕಾಯ್ದೆ 1999 ಕಲಂ 4 (ಜಿ) ಅಡಿಯಲ್ಲಿ ವಿನಾಯಿತಿ ಪಡೆದ ನಂತರ ಕೆಎಸ್‌ಐಐಡಿಸಿ ನಿಗಮವು ಗೋದಾವತ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್ (ಸ್ಟಾರ್ ಏರ್ ಲೈನ್ಸ್) ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸಂಪುಟ ಸಭೆಯಲ್ಲಿ ಅನುದಾನ ನೀಡಿ ವಿಮಾನ ಸೇವೆ ಆರಂಭಕ್ಕೆ ಒಪ್ಪಿಗೆ ಸೂಚಿಸಿದೆ.

ಈ ಮಾರ್ಗ ನಡುವೆ ನಿಯಮಿತವಾಗಿ ವಿಮಾನ ಸಂಚಾರ ಪುನರಾರಂಭಿಸಿ ಪ್ರಯಾಣ ಸಮಯವನ್ನು ಗಮನಾರ್ಹವಾಗಿ ಕಡಿಮೆ ಮಾಡಿ ಹೂಡಿಕೆ ಆಕರ್ಷಣೆಗೆ ಪ್ರೋತ್ಸಾಹಿಸಿ ವೃತ್ತಿಪರರು ಮತ್ತು ಅಧಿಕಾರಿಗಳ ತ್ವರಿತ ಪ್ರಯಾಣ ಸಾಧ್ಯತೆ ಹೆಚ್ಚಿಸಿ ಕಲ್ಯಾಣ ಕರ್ನಾಟಕ ಭಾಗದ ಸಂಪರ್ಕ ವ್ಯಾಪಾರ ಉದ್ಯಮ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಸರಕಾರದ ಕ್ರಮವು ಶ್ಲಾಘನೀಯ ಎಂದರು.



ಮಂಗಳೂರು, ಮುಂಬೈಗೆ ಹೆಚ್ಚಿದ ಒತ್ತಡ

ಕಲಬುರಗಿಯಿಂದ ಮಂಗಳೂರು ಮುಂಬೈ ದೆಹಲಿ ತಿರುಪತಿ ಮುಂತಾದಡೆಗಳಿಗೆ ವಿಮಾನ ಸಂಚಾರ ಪ್ರಾರಂಭಿಸುವಂತೆ ಪ್ರಯಾಣಿಕರು ತೀವ್ರ ಒತ್ತಡ ಹೇರುತ್ತಿದ್ದಾರೆ. ಈ ಮಾರ್ಗಗಳಲ್ಲಿ ವಿಮಾನ ಸಂಚಾರ ಆರಂಭಗೊಂಡರೆ ಅಂತರಾಜ್ಯ ಮಟ್ಟದಲ್ಲಿ ಸಂಪರ್ಕ ಸಾಧಿಸಲು ಹಾಗೂ ಅಭಿವೃದ್ಧಿ ಹೊಂದಲು ಉತ್ತಮ ಅವಕಾಶಗಳಿವೆ ಎಂದು ಡಾ. ಸದಾನಂದ ಪೆರ್ಲ ತಿಳಿಸಿದ್ದಾರೆ.

▸▸ ಬೀದರ್- ಬೆಂಗಳೂರು, ಕಲಬುರಗಿ-ಬೆಂಗಳೂರು ನಡುವೆ ವಿಮಾನ ಸೇವೆಗೆ ಹಸಿರು ನಿಶಾನೆ

ಕಿರುಸುದ್ದಿ

ಮೆಡಿಕಲ್ ಶಾಪ್‌ಗಳಿಗೆ ಎಸ್ಪಿ, ಡಿಸಿ ದಿಢೀರ್ ಭೇಟಿ, ಪರಿಶೀಲನೆ

ವಿಜಯನಗರ: ಔಷಧ ಅಂಗಡಿಗಳಲ್ಲಿ (ಮೆಡಿಕಲ್ ಸ್ಟೋರ್) ಸಿಗುವ ಕೆಲವೊಂದು ಬಗೆ ಔಷಧಗಳನ್ನು ಮಾದಕ ಪದಾರ್ಥದ ರೀತಿಯಲ್ಲಿ ಬಳಸುವ ಶಂಕೆ ಇರುವ ಹಿನ್ನೆಲೆಯಲ್ಲಿ ಇತ್ತೀಚೆಗೆ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಮತ್ತು ಎಸ್ಪಿ ಎಸ್.ಜಾಹ್ನವಿ ನಗರಕ್ಕೆ ಭೇಟಿ ನೀಡಿ ಜಂಟಿಯಾಗಿ ಕಾರ್ಯಾಚರಣೆ ನಡೆಸಿದರು.

ಬೆಳಿಗ್ಗೆ ಬಸ್ ನಿಲ್ದಾಣ ಸಮೀಪದ ಹಲವು ಔಷಧ ಅಂಗಡಿಗಳಿಗೆ ತೆರಳಿದ ಅವರು ವೈದ್ಯರ ಚೀಟಿ ಇಲ್ಲದೆ ಯಾರಿಗೂ ಯಾವುದೇ ಬಗೆ ಔಷಧ ನೀಡದಂತೆ ಹಾಗೂ ಮುಂದೆ ಗ್ರಾಹಕರಿಗೆ ಕಾಣುವ ರೀತಿಯಲ್ಲಿ ವೈದ್ಯರ ಚೀಟಿ ಇಲ್ಲದೆ ಔಷಧ ಕೊಡುವುದಿಲ್ಲ ಎಂಬ ಫಲಕ ಅಳವಡಿಸುವಂತೆ ಮೆಡಿಕಲ್ ಸ್ಟೋರ್ ಮಾಲೀಕರಿಗೆ ಸೂಚಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿಸಿ ಕವಿತಾ, ಕೆಲವೊಂದು ಮಂದಿ ಮಾದಕ ವಸ್ತು ಸಿಗಲಿಲ್ಲ ಎಂಬ ಕಾರಣಕ್ಕೆ ನಿದ್ದೆ ಮಾತ್ರೆಯಂತಹ ಔಷಧ ಅತೀಯಾಗಿ ಸೇವಿಸಿ ತಮ್ಮ ಆರೋಗ್ಯ ಹಾಳು ಮಾಡಿಕೊಳ್ಳುವ ಸಾಧ್ಯತೆ ಇದೆ. ಹೀಗಾಗಿ 1940ರ ಔಷಧ ಮತ್ತು ಕಾಂತಿವರ್ಧಕ ಕಾಯ್ದೆಯಂತೆ (ಡ್ರಗ್ಸ್ ಆ್ಯಂಡ್ ಕಾಸ್ಮೆಟಿಕ್ಸ್ ಆ್ಯಕ್ಟ್) ಔಷಧ ಅಂಗಡಿಯವರು ನಿಯಮ ರೂಪಿಸಿ ತಮ್ಮಲ್ಲಿ ಅಳವಡಿಸಿಕೊಳ್ಳಬೇಕು ಎಂಬುದೇ ಜಿಲ್ಲಾಡಳಿತದ ಉದ್ದೇಶ ಎಂದರು. ಎಸ್ಪಿ ಎಸ್.ಜಾಹ್ನವಿ ಮಾತನಾಡಿ, ಔಷಧ ಅಂಗಡಿಯವರು ವೈದ್ಯರ ಚೀಟಿ ಇಲ್ಲದೆ ಔಷಧ ಕೊಡಬಾರದು ಎಂಬ ಕಟ್ಟುನಿಟ್ಟಿನ ಸೂಚನೆ ನೀಡಿದ್ದೇವೆ. ಅದನ್ನು ಉಲ್ಲಂಘಿಸಿದ್ದು ಕಂಡುಬಂದರೆ ಅಂತಹ ಅಂಗಡಿಗಳ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದರು.

ಅಶೋಕ್ ಭೀಮ ನಾಯ್ಕ್ ವಜಾ: ಬೆಂಬಲಿಗರ ಆಕ್ರೋಶ

ಹಗರಿಬೊಮ್ಮನಹಳ್ಳಿ: ಕಾಂಗ್ರೆಸ್ ಪಕ್ಷದ ಜಿಲ್ಲಾ ಯುವ ಘಟಕದ ಅಧ್ಯಕ್ಷ ಅಶೋಕ್ ಭೀಮ ನಾಯ್ಕ್ ಅವರನ್ನು ವಜಾಗೊಳಿಸಿರುವುದು ಕಾಂಗ್ರೆಸ್ ಪಕ್ಷದ ಯುವ ಸಮೂಹದಲ್ಲಿ ಭೀಮ ನಾಯ್ಕ್ ಬೆಂಬಲಿಗರಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ.



ಅಶೋಕ್ ಭೀಮ ನಾಯ್ಕ್ ಜಿಲ್ಲಾ ಯುವ ಘಟಕದ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿದರಿಂದ ಜಿಲ್ಲೆಯಲ್ಲಿ ಕಾಂಗ್ರೆಸ್ ಒಳ ರಾಜಕೀಯದ ಬೇಗುದಿಯಿಂದ ಪಕ್ಷದ ನಿಷ್ಠಾವಂತರಿಗೆ ಅನ್ಯಾಯವಾಗಿದೆ. ಪಕ್ಷಕ್ಕೆ ದ್ರೋಹ ಮಾಡುವವರಿಗೆ ಮಣೆ ಹಾಕಲಾಗುತಿದೆ ಎಂಬ ಗಂಭೀರ ಆರೋಪ ಕಾಂಗ್ರೆಸ್‌ನ ಯುವ ಸಮೂಹದಲ್ಲಿ ಬಲವಾಗಿ ಕೇಳಿ ಬರುತ್ತಿದೆ.

ಯುವಜನರಿಗೆ ಫಾಸಿ: ಅಶೋಕ್ ಬಿ.ನಾಯ್ಕ ಅವರು ವಿಜಯನಗರ ಭಾಗದಲ್ಲಿ ಯುವಕರನ್ನು ಸಂಘಟಿಸಿ, ಕಾಂಗ್ರೆಸ್ ಯುವ ಪಡೆಯನ್ನು ಶಕ್ತಿಶಾಲಿಯಾಗಿ ರೂಪಿಸಿದ ಉತ್ಸಾಹಿ ಯುವ ನಾಯಕ. ವಿನಾಕಾರಣ ಕೆಲವರು ತಮ್ಮ ಸ್ವಹಿತಾಸಕ್ತಿಗೆ, ದಾರಿ ತಪ್ಪಿಸುವವರಿಗೆ ಪಕ್ಷದಲ್ಲಿ ಮಣೆ ಹಾಕಲಾಗುತ್ತಿದೆ ಎಂದರು.

ಹೈಕಮಾಂಡ್‌ಗೆ ಯುವಜನರ ಮನವಿ: ನಿಷ್ಠಾವಂತರನ್ನು ದೂರವಿಡುವುದು ಪಕ್ಷದ ಹಿತದೃಷ್ಟಿಯಿಂದ ಒಳಿತಲ್ಲ, ಪರೋಕ್ಷವಾಗಿ ಪಕ್ಷದ್ರೋಹಿಗಳಿಗೆ ಮಣೆ ಹಾಕುವಂತಿದೆ. ಈ ಬೆಳವಣಿಗೆಗಳು ಕಾಂಗ್ರೆಸ್ ಪಕ್ಷಕ್ಕೆ ಕೇವಲ ಒಂದು ಘಟನೆಯಲ್ಲ ಭವಿಷ್ಯಕ್ಕೆ ಎಚ್ಚರಿಕೆಯ ಘಂಟೆ. ಹೈಕಮಾಂಡ್ ಇಂತಹ ಒಳರಾಜಕೀಯದ ಆಟಗಳಿಗೆ ಮಣಿಯದೇ, ನಿಷ್ಠಾವಂತ ಕಾರ್ಯಕರ್ತರಿಗೆ ನ್ಯಾಯ ಒದಗಿಸಬೇಕು ಬಹು ಜನ ಯುವ ನಾಯಕರ ಅಭಿಪ್ರಾಯವಾಗಿದೆ.

ಪಿಯುಸಿ ಉಚಿತ ದಾಖಲಾತಿಗೆ ಅರ್ಜಿ ಆಹ್ವಾನ

ಬಳ್ಳಾರಿ: ನಗರದ ಹೊಸಪೇಟೆ ರಸ್ತೆಯ ಬಿಐಟಿಎಂ ಎಂಜಿನಿಯರಿಂಗ್ ಕಾಲೇಜ್ ಸಮೀಪದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಬಾಲಕಿಯರ ಪದವಿ ಪೂರ್ವ ವಸತಿ ಕಾಲೇಜು (ಅಲ್ಲೀಪುರ) ಇಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳ ದಾಖಲಾತಿಗಾಗಿ ಅರ್ಹ ವಿದ್ಯಾರ್ಥಿನಿಯರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪ್ರಥಮ ಪಿಯುಸಿ ವಿಜ್ಞಾನ ವಿಭಾಗಕ್ಕೆ 60 ಮತ್ತು ವಾಣಿಜ್ಯ ವಿಭಾಗಕ್ಕೆ 60 ಸೀಟ್‌ಗಳು ಲಭ್ಯವಿದ್ದು, ಎಸ್.ಎಸ್.ಎಲ್.ಸಿಯಲ್ಲಿ ಉತ್ತೀರ್ಣರಾದ ಬಾಲಕಿಯರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಮೆರಿಟ್ ಮತ್ತು ರೋಸ್ಟರ್ ಆಧಾರದ ಮೇಲೆ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು ಕಾಲೇಜಿನ ಪ್ರಾಂಶುಪಾಲ ನಾಗಯ್ಯ ಹಿರೇಮಠ ಅವರು ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಲು http://dom.karnataka.gov.in ಜಾಲತಾಣಕ್ಕೆ ಭೇಟಿ ನೀಡಬಹುದು. ಅರ್ಜಿ ಸಲ್ಲಿಸಲು ಮೇ 16 ಕೊನೆಯ ದಿನವಾಗಿದೆ.



ವಿಜಯನಗರ: ಔಷಧ ಅಂಗಡಿಗಳಲ್ಲಿ (ಮೆಡಿಕಲ್ ಸ್ಟೋರ್) ಸಿಗುವ ಕೆಲವೊಂದು ಬಗೆ ಔಷಧಗಳನ್ನು ಮಾದಕ ಪದಾರ್ಥದ ರೀತಿಯಲ್ಲಿ ಬಳಸುವ ಶಂಕೆ ಇರುವ ಹಿನ್ನೆಲೆಯಲ್ಲಿ ಇತ್ತೀಚೆಗೆ ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಮತ್ತು ಎಸ್ಪಿ ಎಸ್.ಜಾಹ್ನವಿ ನಗರಕ್ಕೆ ಭೇಟಿ ನೀಡಿ ಜಂಟಿಯಾಗಿ ಕಾರ್ಯಾಚರಣೆ ನಡೆಸಿದರು.

ಬಿಕ್ಕಿ ಮರಡಿ ದುರುಗಮ್ಮ ದೇವಿ ಪುರ ಪ್ರವೇಶ

ಕೊಟ್ಟೂರು: ಪಟ್ಟಣದ ಕೆರೆ ದಂಡೆ ಪ್ರದೇಶದಲ್ಲಿ ದವನದ ಹುಣ್ಣಿಮೆಯ ದಿನವಾದ ಶುಕ್ರವಾರ ಬಿಕ್ಕಿ ಮರಡಿ ದುರುಗಮ್ಮ ದೇವಿ ರಥೋತ್ಸವದ ಮೂರು ದಿನಗಳ ಬಳಿಕ ದೇವಿಯ ಪುರ ಪ್ರವೇಶದ ಮೆರವಣಿಗೆ ಭಾನುವಾರ ಅದ್ದೂರಿಯಾಗಿ ಜರುಗಿತು.

ಹುಣ್ಣಿಮೆ ದಿನವಾದ ಶುಕ್ರವಾರ ದೇವಿ ರಥೋತ್ಸವ ಜರುಗಿತು. ಅದೇ ದಿನ ರಾತ್ರಿ ಕೆರೆ ದಂಡೆಯಲ್ಲಿ ಗಂಗೆ ಪೂಜೆ, ಶನಿವಾರ ಪ್ರಸಾದ ವಿತರಣೆ ಮಾಡಲಾಗಿತ್ತು. ಭಾನುವಾರ ಬೆಳಗ್ಗೆ ಕೆರೆ ದಂಡೆಯಲ್ಲಿನ ದೇವಸ್ಥಾನದಿಂದ ದೇವಿ ಮೂರ್ತಿಯನ್ನು ಪಲ್ಲಕಿಯಲ್ಲಿ ಮೆರವಣಿಗೆ ಮೂಲಕ ಪುರಕ್ಕೆ ಕರೆತರಲಾಯಿತು. ಸಮಾಳ, ಡ್ರಮ್ಸ್‌ಗಳ ನಾದಕ್ಕೆ ಮುಖಕ್ಕೆಲ್ಲಾ ಕುಂಕುಮ ಹಚ್ಚಿಕೊಂಡಿದ್ದ ಯುವಕರು ಹಾಗೂ ದೇವಿ ಭಕ್ತರು ಹೆಜ್ಜೆ ಹಾಕಿದರು. ದೇವಸ್ಥಾನದಿಂದ ಕೆಳಗೇರಿ, ಗಚ್ಚಿನಮಠ, ದ್ವಾರ ಬಾಗಿಲು, ಮುಖ್ಯರಸ್ತೆ, ಉಜ್ಜಯಿನಿ ರಸ್ತೆ ಮೂಲಕ ಅದ್ದೂರಿ ಮೆರವಣಿಗೆಯಲ್ಲಿ ದೇವಿಯ ಮೂರ್ತಿಯನ್ನು ದೇವಸ್ಥಾನಕ್ಕೆ ಪುನಃ ಕರೆತಂದು ಪ್ರತಿಷ್ಠಾಪಿಸಲಾಯಿತು.

ಮೆರವಣಿಗೆ ಉದ್ದಕ್ಕೂ ರಸ್ತೆಯಲ್ಲಿ ದೇವಿಯನ್ನು ಹೊತ್ತ ಪಲ್ಲಕ್ಕಿಯ ಕೆಳಗೆ ಕುಳಿತಿದ್ದ ಭಕ್ತರನ್ನು ಹಾದು ಪಲ್ಲಕ್ಕಿ ನಡೆಯಿತು. ಎಲ್ಲ ವರ್ಗದ ಜನರು ದೇವಿಗೆ ಅಕ್ಕಿ, ಉತ್ತುತ್ತಿ, ಬಾಳೆಹಣ್ಣು ಉಡಿ ನೀಡಿ ಭಕ್ತಿ ಅರ್ಪಿಸಿದರು.

ಬೆಳಗ್ಗೆ ಆರಂಭವಾದ ದೇವಿ ಮೆರವಣಿಗೆ ಮಧ್ಯಾಹ್ನದ ಹೊತ್ತಿಗೆ ದೇವಸ್ಥಾನಕ್ಕೆ ತಲುಪಿ ಸಂಪನ್ನಗೊಂಡಿತು.



ಕೊಟ್ಟೂರು: ಪಟ್ಟಣದ ಕೆರೆ ದಂಡೆ ಪ್ರದೇಶದಲ್ಲಿ ದವನದ ಹುಣ್ಣಿಮೆಯ ದಿನವಾದ ಶುಕ್ರವಾರ ಬಿಕ್ಕಿ ಮರಡಿ ದುರುಗಮ್ಮ ದೇವಿ ರಥೋತ್ಸವದ ಮೂರು ದಿನಗಳ ಬಳಿಕ ದೇವಿಯ ಪುರ ಪ್ರವೇಶದ ಮೆರವಣಿಗೆ ಭಾನುವಾರ ಅದ್ದೂರಿಯಾಗಿ ಜರುಗಿತು.

ವಾಹನಗಳ ಸಂಚಾರಕ್ಕೆ ಪರದಾಟ | ಸಾರ್ವಜನಿಕರ ಆಕ್ರೋಶ

ದಶಕ ಕಳೆದರೂ ಅಭಿವೃದ್ಧಿ ಕಾಣದ ತಳಕಲ್ ರಸ್ತೆ

ವೀರೇಶ ಕಲ್ಮಠ

ದಿಗಂತ ವಿಶೇಷ

ಹೂವಿನಹಡಗಲಿ: ತಾಲೂಕಿನ ಅಡವಿಮಲ್ಲನಕೇರಿ ಗ್ರಾಮದ ಮಾರ್ಗವಾಗಿ ತಳಕಲ್ ಗ್ರಾಮಕ್ಕೆ ಹಾದುಹೋಗುವ ಸುಮಾರು 6 ಕಿಮೀ. ಉದ್ದದ ರಸ್ತೆ ಕಳೆದ 15 ವರ್ಷಗಳಿಂದ ಡಾಂಬರೀಕರಣ ಕಾಣದೆ ಸಂಪೂರ್ಣವಾಗಿ ಹದಗೆಟ್ಟಿದೆ.

ಈ ರಸ್ತೆಯು ಕೇವಲ ಹೆಸರಿಗೆ ಮಾತ್ರ ರಸ್ತೆಯಾಗಿದ್ದು, ಇಲ್ಲಿ ಸಂಚರಿಸುವುದು ಸಾವು-ಬದುಕಿನ ನಡುವಿನ ಹೋರಾಟದಂತಾಗಿದೆ.

ಈ ರಸ್ತೆಯು ಕೇವಲ ಒಂದು ಗ್ರಾಮಕ್ಕೆ ಸೀಮಿತವಾಗಿಲ್ಲ. ಅಡವಿಮಲ್ಲನಕೇರಿ, ಅಡವಿಮಲ್ಲನಕೇರಿ ತಾಂಡಾ, ಸೋಗಿ ತಾಂಡಾ, ತಳಕಲ್, ಮಹಾಜನದಹಳ್ಳಿ ಹಾಗೂ ಇಟ್ಟಿಗಿ ಸೇರಿದಂತೆ 5-6 ಹಳ್ಳಿಗಳ ಸಾವಿರಾರು ಜನರು ದೈನಂದಿನ ಕೆಲಸಗಳಿಗಾಗಿ ಇದೇ ರಸ್ತೆಯನ್ನು ಅವಲಂಬಿಸಿದ್ದಾರೆ. ಆದರೆ, ಹತ್ತು ವರ್ಷಗಳ ಹಿಂದೆ ಜಲ್ಲಿಕಲ್ಲುಗಳನ್ನು ಹಾಕಿದ್ದೇ ಕೊನೆ, ಅಂದಿನಿಂದ ಇಂದಿನವರೆಗೆ ಯಾವುದೇ ಸುಧಾರಣೆ ಕಂಡಿಲ್ಲ. ಚದುರಿ ಹೋಗಿರುವ ಜಲ್ಲಿಕಲ್ಲುಗಳಿಂದಾಗಿ ದ್ವಿಚಕ್ರ ವಾಹನ ಸವಾರರು ಆಯತಪ್ಪಿ ಬಿದ್ದು ಅಪಘಾತಕ್ಕೀಡಾಗುತ್ತಿದ್ದಾರೆ. ರಸ್ತೆಯ ದುಸ್ಥಿತಿ ಕಂಡು ಆಟೋ ರಿಕ್ಷಾ ಚಾಲಕರು ಈ ಮಾರ್ಗಕ್ಕೆ ಬರಲು ನಿರಾಕರಿಸುತ್ತಿದ್ದಾರೆ. ತುರ್ತು ಆರೋಗ್ಯ ಸಮಸ್ಯೆಯಾದಲ್ಲಿ ರೋಗಿಗಳನ್ನು ಆಸ್ಪತ್ರೆಗೆ ಕರೆದೊಯ್ಯಲು ವಾಹನ ಸಿಗದೆ ಪರದಾಡುವಂತಾಗಿದೆ. ಇದರಿಂದಾಗಿ ಶಾಲಾ ಮಕ್ಕಳು ಮತ್ತು ವಯಸ್ಸಾದವರು ಪ್ರತಿನಿತ್ಯ ಇದೇ ಜಲ್ಲಿ ರಸ್ತೆಯ ಮೇಲೆ ಹರಸಾಹಸ ಪಡುತ್ತಾ ಸಾಗಬೇಕಾದ ಅನಿವಾರ್ಯತೆ ಇದೆ.

ಜನಪ್ರತಿನಿಧಿಗಳ ಮತ್ತು ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯಿಂದ ಬೇಸತ್ತಿರುವ ಗ್ರಾಮಸ್ಥರು, ಕೂಡಲೇ ರಸ್ತೆ ಕಾಮಗಾರಿ ಆರಂಭಿಸಬೇಕು. ಇಲ್ಲವೇ ಮುಂದಿನ ದಿನಗಳಲ್ಲಿ ತೀವ್ರ ಪ್ರತಿಭಟನೆ ನಡೆಸುವುದಾಗಿ ಸಾರ್ವಜನಿಕರು ಎಚ್ಚರಿಸಿದ್ದಾರೆ.



> ಸರ್ಕಾರ ನಮ್ಮ ಮತಕ್ಷೇತ್ರದ ರಸ್ತೆಗಳಿಗೆ ಅಷ್ಟೊಂದು ಅನುದಾನ ಕಲ್ಪಿಸಿಲ್ಲ. ಮುಂದಿನ ದಿನಗಳಲ್ಲಿ ಅನುದಾನ(ಗ್ರಾಂಟ್) ಬಂದ ತಕ್ಷಣ ಖಂಡಿತವಾಗಿಯೂ ರಸ್ತೆ ದುರಸ್ತಿ ಮಾಡಿಸುತ್ತೇನೆ.
> ■ ಕೃಷ್ಣನಾಯಕ, ಶಾಸಕ

> ಮಾನ್ಯ ಶಾಸಕರಿಗೆ ಸಾಕಷ್ಟು ಬಾರಿ ಈ ಬಗ್ಗೆ ಗಮನಕ್ಕೆ ತಂದಿದ್ದೇನೆ. ಆದರೆ ಕಳೆದ ಮೂರು ವರ್ಷಗಳಿಂದ 'ಅನುದಾನವಿಲ್ಲ' ಎಂಬ ಸಬೂಬನ್ನೇ ಹೇಳುತ್ತಾ ಸತಾಯಿಸುತ್ತಿದ್ದಾರೆ.
> ■ ಚಂದ್ರಪ್ಪ ತಳಕಲ್ಲು, ಅಧ್ಯಕ್ಷರು, ಅಂಗವಿಕಲರ ಮತ್ತು ಪಾಲಕರ ಒಕ್ಕೂಟ

> ಈಗಾಗಲೇ ವರಕನಹಳ್ಳಿ ಮಧ್ಯೆ ಮಾರ್ಗದಿಂದ ತಳಕಲ್ ಗ್ರಾಮಕ್ಕೆ ಹಾದು ಹೋಗುವ ರಸ್ತೆ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಕೆಲಸ ಪ್ರಗತಿಯಲ್ಲಿದೆ.
> ■ ಜಾಹಿರುದ್ದೀನ್, ಪಿಡಬ್ಲ್ಯುಡಿ ಎಂಜಿನಿಯರ್

ಅಭಿಮಾನೋತ್ಸವ ಯಶಸ್ವಿಗೊಳಿಸಿ

ಸಿರುಗುಪ್ಪ: ದಣಿವರಿಯದ ನಾಯಕ, ರೈತನಾಯಕ ದಿನದಲಿತರನಾಯಕ, ಮಾಜಿ ಮುಖ್ಯಮಂತ್ರಿ 'ಬಿ.ಎಸ್ ಯಡಿಯೂರಪ್ಪ' ಅವರ "ಜನಸೇವೆಯಲ್ಲಿ ಸಾರ್ಥಕ 50ನೇ ವರ್ಷದ ಅಭಿಮಾನೋತ್ಸವ" ಸಮಾರಂಭ ಹಿನ್ನೆಲೆ ಭಾನುವಾರ ತಾಲೂಕಿನ ತೆಕ್ಕಲಕೋಟೆ ಪಟ್ಟಣದಲ್ಲಿ ಕ್ಷೇತ್ರದ ಜನಪ್ರಿಯ ಮಾಜಿ ಶಾಸಕ ಎಂ. ಎಸ್ ಸೋಮಲಿಂಗಪ್ಪ ಅವರ ನೇತೃತ್ವದಲ್ಲಿ ಪೂರ್ವಭಾವಿ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು.

ಮಾಜಿ ಶಾಸಕ ಎಂ.ಎಸ್.ಸೋಮಲಿಂಗಪ್ಪ ಮಾತನಾಡಿ, ಚಿತ್ರದುರ್ಗದಲ್ಲಿ ಮೇ 9ರಂದು ಆಯೋಜಿಸಿರುವ, ಮಾಜಿ ಮುಖ್ಯಮಂತ್ರಿ, ಜನನಾಯಕ, ಮುತ್ಸದ್ದಿ ರಾಜಕಾರಣಿ ಬಿ.ಎಸ್.ಯಡಿಯೂರಪ್ಪ ಅವರ ಜನಸೇವೆಯಲ್ಲಿ ಸಾರ್ಥಕ 50ನೇ ವರ್ಷದ ಅಭಿಮಾನೋತ್ಸವ ಸಮಾರಂಭಕ್ಕೆ ಪ್ರತಿಯೊಬ್ಬರು ಭಾಗವಹಿಸಿ ಯಶಸ್ವಿಗೊಳಿಸಬೇಕು. ರಾಜ್ಯ ಕಾಂಗ್ರೆಸ್ ಜನವಿರೋಧಿ ಸರ್ಕಾರವನ್ನು ಕಿತ್ತೊಗೆಯಲು ರಾಜ್ಯದ ಜನರು ತುದಿಗಳ ಮೇಲೆ ನಿಂತಿದ್ದು, ಮತ್ತೆ ನಮ್ಮ ಭಾಜಪ ಸರ್ಕಾರವೇ ಅಸ್ತಿತ್ವಕ್ಕೆ ಬರಲಿದೆ, ಇದರಲ್ಲಿ ಅನುಮಾನವೇ ಬೇಡ. ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರು ಅವಧಿಯಲ್ಲಿ ಅನೇಕ ಜನಪರ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ದೇಶದಲ್ಲೇ ಮಾದರಿಯಾಗಿದ್ದಾರೆ. ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ನೀರಿನಂತೆ ಅನುದಾನ ಬಿಡುಗಡೆಗೊಳಿಸಿದ್ದು, ನಮ್ಮ ನಾಯಕರನ್ನು ಎಂದು ಮರೆಯುವ ಮಾತೇ ಇಲ್ಲ. ಅವರ 50 ವರ್ಷದ ಸಾರ್ಥಕ ಜನಸೇವೆ ಹಿನ್ನೆಲೆ ಮೇ 9ರಂದು ಚಿತ್ರದುರ್ಗದಲ್ಲಿ ಆಯೋಜಿಸಿದ ಅಭಿಮಾನೋತ್ಸವ ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಿರುಗುಪ್ಪ ವಿಧಾನಸಭಾ ಕ್ಷೇತ್ರದಿಂದ ತೆರಳಿ, ಬಿ.ಎಸ್.ಯಡಿಯೂರಪ್ಪನವರಿಗೆ ಮತ್ತಷ್ಟು ಶಕ್ತಿಯನ್ನು ತುಂಬುವ ಕೆಲಸ ನಾವೆಲ್ಲರೂ ಮಾಡೋಣ ಎಂದು ಮಾಜಿ ಶಾಸಕರು ಈ ಸಭೆಯಲ್ಲಿ ಮನವಿ ಮಾಡಿದರು. ಸಿರುಗುಪ್ಪ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ ಅವರು ಮಾತನಾಡಿದರು.

ಬಿಜೆಪಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಇಬ್ರಾಂಪುರ ವೀರನಗೌಡ, ಹಿರಿಯರಾದ ಪ್ರತಾಪ್ ಚೌದ್ರಿ, ಎಂ.ಆರ್. ಗೌಡ್ರು, ಖಾಜಾಸಾಬ್, ಬಿಜಿ ಹುಲಗಪ್ಪ, ಜಡೆಸಿವರುದ್ರಪ್ಪ, ಮಲ್ಲನಗೌಡ ಬಾಕಟ್ಟೆ, ಈರಯ್ಯ, ಚಿದಾನಂದ ಗೌಡ, ಗಂಗಪ್ಪ, ನಾಗೇಶಪ್ಪ, ಲಕ್ಷ್ಮಿಪತಿ ಗೌಡ, ಎಚ್ ಶೇಕಪ್ಪ, ಶಂಕ್ರಪ್ಪ ಶೇಖರ ಗೌಡ, ಚನ್ನಬಸಪ್ಪ, ಸುಧಾಕರ, ರಾಮರಾಜು, ಹೊನ್ನಪ್ಪ, ಬಸವರಾಜ, ಶಿವ್ ರೆಡ್ಡಿ, ಜಬಿವುಲ್ಲಾ ಸೇರಿದಂತೆ ಪಕ್ಷದ ಹಿರಿಯ ಮುಖಂಡರು, ನೂರಾರು ಕಾರ್ಯಕರ್ತರು, ಪಕ್ಷದ ಪದಾಧಿಕಾರಿಗಳು ಬಿಎಸ್‌ವೈ ಅವರ ಅಭಿಮಾನಿಗಳು ಭಾಗವಹಿಸಿದ್ದರು.



ಶಿಕ್ಷಕರ ಸಂಘದ ಚುನಾವಣೆ: ಸ್ಪಂದನ ಶೀಲ ತಂಡಕ್ಕೆ ಗೆಲುವು

ಹಗರಿಬೊಮ್ಮನಹಳ್ಳಿ; ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆ ನಡೆಯಿತು. ಶುಕ್ರವಾರ ಗುರುಭವನದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಘಟಕದ ಹತ್ತು ಸ್ಥಾನಗಳಿಗೆ ಬೆಳಿಗ್ಗೆ 8 ಗಂಟೆಯಿಂದ ಸಂಜೆ 4-30ರವರೆಗೆ ಚುನಾವಣೆ ನಡೆದ ಈ ಚುನಾವಣೆಯಲ್ಲಿ 514 ಮತಗಳಿದ್ದವು. ಚುನಾವಣೆಯಲ್ಲಿ 492 ಮತ ಯಾಚನೆಯದವು. ಸಂಜೆ 6 ಗಂಟೆಯಿಂದ ಮತ ಎಣಿಕೆಯಲ್ಲಿ ನಡೆಯಿತು.

ಈ ಚುನಾವಣೆಯಲ್ಲಿ ಪ್ರಾಮಾಣಿಕ ಸ್ಪಂದನಾ ಶೀಲ ತಂಡದ 10 ಜನ ಹಾಗೂ ಪ್ರಾಮಾಣಿಕ ಸಮಾನ ಮನಸ್ಕರ ತಂಡದ 10 ಜನ ಮತ್ತು ಸ್ವತಂತ್ರ ಅಭ್ಯರ್ಥಿಗಳು ಇಬ್ಬರು ಸೇರಿದಂತೆ 22 ಜನ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು.

ಈ ಹತ್ತು ಸ್ಥಾನಗಳ ಪೈಕಿ 3 ಸ್ಥಾನಗಳು ಮಹಿಳೆಯರಿಗೆ ಮೀಸಲಾಗಿದ್ದರಿಂದ 6 ಜನ ಮಹಿಳೆಯರು ಚುನಾವಣೆಯಲ್ಲಿ ಸ್ಪರ್ಧಿಸಿದ್ದರು.

ಈ ಪೈಕಿ ಪ್ರಾಮಾಣಿಕ ಸ್ಪಂದನಾ ಶೀಲ ತಂಡದ ಹ್ಯಾಟಿ ಲೋಕಪ್ಪ 317 ಮತ, ಬಿ.ಕೊಟ್ರಪ್ಪ 301 ಮತ, ಮೋಹನ್ ಅಣಜಿ 274 ಮತ ಎಚ್.ಎಂ.ಬಸಯ್ಯ 225 ಮತ ಜಗಳೂರು ಕೊಟ್ರೇಶ್ 208 ಹಾಗೂ ಮಹಿಳೆಯರಲ್ಲಿ ಮಾಲವಿ ಶಾಲೆಯ ಶಿಕ್ಷಕಿ ಸರೋಜ 294 ಮತ್ತು ದಾದಿಭಿ 292 ಮತ್ತು ಪ್ರಾಮಾಣಿಕ ಸಮಾನ ಮನಸ್ಕರ ತಂಡದ ಇಟಗಿ ಪ್ರಭಕರ್ 278 ಮತ ರುದ್ರೇಶ್ 208 ಮತ ಕೆ.ಬಿ.ದೀಪಿಕಾ 254 ಮತ ಹಾಗೂ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಟಿ.ಸೋಮಶೇಖರ 211 ಮತ ಪಡೆಯುವ ಮೂಲಕ ಜಯಗಳಿಸಿದರು.

ಆದರೆ ಎರಡು ತಂಡಗಳ ಜಗಳೂರು ಕೊಟ್ರೇಶ್ ಮತ್ತು ರುದ್ರೇಶ್ ಅವರು ಸಮಾನ ಮತ ಪಡೆದಿದ್ದರಿಂದ ಚೀಟಿ ಎತ್ತಲಾಯಿತು. ಇದರಲ್ಲಿ ಜಗಳೂರು ಕೊಟ್ರೇಶ್ ಆಯ್ಕೆಯಾದರು. ಈ ವೇಳೆ ಚುನಾವಣಾ ಅಧಿಕಾರಿಯಾಗಿ ಕೊಟ್ರು ದೇವರು ಕಾರ್ಯ ನಿರ್ವಹಿಸಿದರು.

ನೌಕರರ ಸಂಘದ ಅಧ್ಯಕ್ಷ ಎಂ ಪಿ.ಎಂ. ಮಂಜುನಾಥ ಶಿಕ್ಷಣ ಇಲಾಖೆಯ ಪರಮೇಶ್ವರಯ್ಯ ಸೊಪ್ಪಿಮಠ, ಶಿಕ್ಷಕ ವೃಂದ ಇದ್ದರು.



ಏತನೀರಾವರಿ ಕಾಮಗಾರಿ ಕಳಪೆ: ತನಿಖೆಗೆ ಆಗ್ರಹ

ವಿಜಯನಗರ: ಜಿಲ್ಲೆಯ ಹೊಸಪೇಟೆ ತಾಲೂಕಿನ ಕೆರೆ ತುಂಬಿಸುವ ಯೋಜನೆಯಲ್ಲಿ ನಡೆದಿರುವ ಭ್ರಷ್ಟಾಚಾರದ ವಿರುದ್ಧ ತನಿಖೆ ನಡೆಸಬೇಕು ಹಾಗೂ ಸ್ಥಗಿತಗೊಂಡಿರುವ ಸಕ್ಕರೆ ಕಾರ್ಖಾನೆಯನ್ನು ತಕ್ಷಣವೇ ಪುನರಾರಂಭಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಆಗ್ರಹಿಸಿದೆ.

ಈ ಕುರಿತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಭಾನುವಾರ ತುಂಗಭದ್ರಾ ಅಣೆಕಟ್ಟೆಯಲ್ಲಿ ಮನವಿ ಸಲ್ಲಿಸಿ, ಏತ ನೀರಾವರಿ ಯೋಜನೆಯಡಿ ಹೊಸಪೇಟೆ ಭಾಗದ 13ಕ್ಕೂ ಹೆಚ್ಚು ಕೆರೆಗಳಿಗೆ ನೀರು ತುಂಬಿಸಲು ಸರ್ಕಾರ ಸುಮಾರು 247 ಕೋಟಿ ರೂಪಾಯಿ ಒದಗಿಸಿತ್ತು. ಆದರೆ, ಕಾಮಗಾರಿ ಅಪೂರ್ಣಗೊಂಡಿದೆ. ಗುತ್ತಿಗೆದಾರರು ಮತ್ತು ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಪೈಪ್‌ಲೈನ್ ಕಾಮಗಾರಿ ಕಳಪೆಯಾಗಿದ್ದು, ನೀರು ಬಿಡುವ ಮೊದಲೇ ಪೈಪ್‌ಗಳು ಒಡೆದು ಹೋಗಿವೆ. ಈ ಬೃಹತ್ ಹಗರಣದ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು.

ಕಳೆದ 10 ವರ್ಷಗಳಿಂದ ಸಕ್ಕರೆ ಕಾರ್ಖಾನೆ ಮುಚ್ಚಿರುವುದರಿಂದ ರೈತರು ಪ್ರತಿ ಟನ್ ಕಬ್ಬಿಗೆ ಸಾವಿರ ರೂಪಾಯಿಗಳವರೆಗೆ ನಷ್ಟ ಅನುಭವಿಸುತ್ತಿದ್ದಾರೆ. ಚುನಾವಣೆ ವೇಳೆ ನೀಡಿದ ಭರವಸೆಯಂತೆ ಸರ್ಕಾರ ಕೂಡಲೇ ಕಾರ್ಖಾನೆ ಆರಂಭಿಸಬೇಕು. ಇಲ್ಲದಿದ್ದಲ್ಲಿ ಮುಂಬರುವ ದಿನಗಳಲ್ಲಿ ತೀವ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ರೈತರು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಟಿ. ನಾಗರಾಜ್, ತಾಲೂಕು ಅಧ್ಯಕ್ಷ ಸಣ್ಣಕ್ಕಿ ರುದ್ರಪ್ಪ ಹಾಗೂ ನೂರಾರು ರೈತರು ಇದ್ದರು.



ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

ಹುಣಸಗಿ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹುಣಸಗಿ ತಾಲೂಕ ಘಟಕ 2026-2031ನೇ ಸಾಲಿನ ತಾಲೂಕು ಕಾರ್ಯಕಾರಿ ಸಮಿತಿ ಚುನಾವಣೆ ಫಲಿತಾಂಶ ಶುಕ್ರವಾರ ಸಾಯಂಕಾಲ ಘೋಷಣೆ ಆಗಿದ್ದು, ಮಹಿಳಾ ಪ್ರತಿನಿಧಿ 2, ಪುರುಷ ಪ್ರತಿನಿಧಿ 4 ಒಟ್ಟು 6 ಸ್ಥಾನಕ್ಕೆ ಚುನಾವಣೆ ನಡೆದಿದ್ದು, ಮಹಿಳಾ ಸ್ಥಾನಕ್ಕೆ ಅಕ್ಕಮಹಾದೇವಿ ಹಾದಿಮನಿ 157 ಮತ ಪಡೆದು ಪ್ರಥಮ ಸ್ಥಾನ, ಶೋಭಾ ನಾಯ್ಕೋಡಿ 122 ಮತಗಳನ್ನು ಪಡೆದು ದ್ವಿತೀಯ ಸ್ಥಾನದಲ್ಲಿ ಆಯ್ಕೆಯಾಗಿದ್ದಾರೆ. ಪುರುಷರಲ್ಲಿ ಗುರುನಾಥ ರಾಠೋಡ 139 ಮತಗಳು, ಹಾಜಿ ಮಲಂಗ 111 ಮತಗಳು, ಸುರೇಶ ಹಾದಿಮನಿ 100 ಮತಗಳು, ಪ್ರಕಾಶ ಬಡಿಗೇರ 91 ಮತಗಳನ್ನು ಪಡೆದು ಎಲ್ಲಾ ಅಭ್ಯರ್ಥಿಗಳು ಬಹುಮತದಿಂದ ಆಯ್ಕೆಯಾಗಿದ್ದಾರೆ.

ಪುರುಷ ಅಭ್ಯರ್ಥಿಗಳು 16, ಮಹಿಳಾ ಅಭ್ಯರ್ಥಿಗಳು 4 ಸೇರಿದಂತೆ ಒಟ್ಟು 20 ಅಭ್ಯರ್ಥಿಗಳು ಕಣದಲ್ಲಿದ್ದರು. ಚುನಾವಣೆ ಅತ್ಯಂತ ಶಿಸ್ತು ಹಾಗೂ ಶಾಂತತೆಯಿಂದ ಪೊಲೀಸ್ ಬಿಗಿಬಂದೋಬಸ್ತಿನೊಂದಿಗೆ ನಡೆಯಿತು. ವಿಜೇತ ಅಭ್ಯರ್ಥಿಗಳಿಗೆ ಚುನಾವಣೆ ಅಧಿಕಾರಿ ಯಲ್ಲಪ್ಪ ಚಂದನಕೇರಿ ಉಪ ಚುನಾವಣೆ ಅಧಿಕಾರಿ ಬಸವರಾಜ ಕೋಳೂರು ಪ್ರಮಾಣ ಪತ್ರ ವಿತರಿಸಿದರು.

ಕೊಟ್ರೇಶ ಕೋಳೂರು, ಬಸವರಾಜ ತೆಗ್ಗೆಳ್ಳಿ, ನಾಗನಗೌಡ ಪಾಟೀಲ, ರವಿ ಕನಕರೆಡ್ಡಿ, ವೀರನಗೌಡ ಪಾಟೀಲ, ಗುರುನಾಥ ಹುಲಕಲ್, ಭೀಮಣ್ಣ ವಾಲ್ಮೀಕಿ, ಷಣ್ಮುಕಪ್ಪ ನುಚ್ಚಿ, ಕಾಂತೇಶ ಹಲಗಿಮನಿ, ಶಿವಾನಂದ ತೋಟದ, ನಿಂಗನಗೌಡ ಪಾಟೀಲ, ರಂಗಯ್ಯ ಗುತ್ತೇದಾರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಜಲಾಶಯದ ಹೂಳು ತೆರವುಗೊಳಿಸಲು ಆಗ್ರಹ

ಬಳ್ಳಾರಿ: ತುಂಗಭದ್ರಾ ಜಲಾಶಯದಲ್ಲಿ 33ಕ್ಕೂ ಹೆಚ್ಚು ಟಿಎಂಸಿ ಹೂಳು ಸಂಗ್ರಹವಾಗಿದ್ದು, ಇದರಿಂದ ಪ್ರತಿ ವರ್ಷ ನೀರಿಗಾಗಿ ರೈತರು, ಜನರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಹೂಳು ತೆರವುಗೊಳಿಸಿದರೆ, ನೀರಿನ ಸಂಗ್ರಹ ಹೆಚ್ಚಾಗಿ ನೀರಿನ ಬವಣೆ ತಪ್ಪಲಿದೆ. ಕೂಡಲೇ ಹೂಳು ತೆರವುಗೊಳಿಸಲು ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ತಜ್ಞರ ಸಮಿತಿ ಸಭೆ ನಡೆಸಿ, ಜಲಾಶಯದ ಹೂಳೆತ್ತಲು ಮುಂದಾಗಬೇಕು ಎಂದು ಒತ್ತಾಯಿಸಿ ಇಲ್ಲಿನ ತುಂಗಭದ್ರಾ ರೈತ ಸಂಘದ ಪದಾಧಿಕಾರಿಗಳು ಡಿಸಿಎಂ ಡಿ.ಕೆ.ಶಿವಕುಮಾರಗೆ ಭಾನುವಾರ ಮನವಿ ಸಲ್ಲಿಸಿದರು.

ರೈತ ಸಂಘದ ಸಂಸ್ಥಾಪಕ ಅಧ್ಯಕ್ಷ ಡಾ.ಜಿ.ಪುರುಷೋತ್ತಮ ಗೌಡ ಅವರು ಮಾತನಾಡಿ, ನಮ್ಮ ಲಕ್ಷಾಂತರ ರೈತರ ಜೀವನಾಡಿ ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್ ನಿರ್ಮಾಣ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು, ಸಂತಸ ಮೂಡಿಸಿದೆ. ಅತ್ಯಂತ ತ್ವರಿತಗತಿಯಲ್ಲಿ ತುಂಗಭದ್ರಾ ಜಲಾಶಯದ ಗೇಟುಗಳ ಅಳವಡಿಕೆ ಕಾರ್ಯ ಪೂರ್ಣಗೊಂಡ ಹಿನ್ನೆಲೆಯಲ್ಲಿ ವೀಕ್ಷಣೆಗೆ ಆಗಮಿಸುವುದು ಸಂತಸ ಮೂಡಿಸಿದೆ. ತುಂಗಭದ್ರಾ ಜಲಾಶಯದಲ್ಲಿ ಸಂಗ್ರಹಗೊಂಡ 33 ಟಿಎಂಸಿ ಹೂಳು ತೆರವು ಕಾರ್ಯಾಚರಣೆ ಕುರಿತು ಸಾಕಷ್ಟು ಬಾರಿ ಮನವಿ ಸಲ್ಲಿಸಿದೆ. ಕೆಲ ಅಧಿಕಾರಿಗಳ, ಕೆಲ ಜನಪ್ರತಿನಿಧಿಗಳ ತಪ್ಪು ಮಾಹಿತಿಯಿಂದ ಸರ್ಕಾರ ಹೂಳು ತೆರವುಗಾಗಿ ಮುಂದಾಗುತ್ತಿಲ್ಲ, ಇದಕ್ಕೆ ಪರ್ಯಾಯವಾಗಿ ಗಂಗಾವತಿಯ ಬಳಿ ಸಮಾನಾಂತರ ಜಲಾಶಯ ನಿರ್ಮಿಸಲು ಮುಂದಾಗಿದೆ.

ಇದಕ್ಕೆ ಆಂಧ್ರ ಪ್ರದೇಶ ,ತೆಲಂಗಾಣ ರಾಜ್ಯಗಳ ಅನುಮತಿಯು ಬೇಕಾಗಿದೆ ಮತ್ತು ನವಿಲೇ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾಗಲಿರುವ 9 ಹಳ್ಳಿಗಳ ಸ್ಥಳಾಂತರ, ಜಮೀನು ಕಳೆದುಕೊಂಡ ರೈತರಿಗೆ ಪರಿಹಾರ, ಜಮೀನು ಮಂಜೂರು ಸೇರಿದಂತೆ ನಾನಾ ರೀತಿಯಲ್ಲಿ ಪರ್ಯಾಯ ವ್ಯವಸ್ಥೆಗಳನ್ನು ಕೈಗೊಳ್ಳಲು ಅನೇಕ ವರ್ಷಗಳೇ ಬೇಕಾಗಲಿದೆ. ಆದರೆ, ಜಲಾಶಯದಲ್ಲಿ ತುಂಬಿರುವ ಹೂಳು ತೆರವುಗೊಳಿಸಲು ಯಾರ ಅನುಮತಿಯು ಬೇಕಿಲ್ಲ ಮತ್ತು ನಮಗೆ (ಮೈನಿಂಗ್ ಫ್ರೆಂಡ್) ಗಣಿಗಾರಿಕೆ ಇಂದ ಬರುವ ತೆರಿಗೆ ಹಣವು ಇದೆ ಹಾಗೂ ಕಬ್ಬಿಣ ಕಾರ್ಖಾನೆಗಳವರ ಸಾಮಗ್ರಿಗಳ ಅನುಕೂಲ ಸಿಗಲಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ಹೂಳು ತೆರವುಗಾಗಿ ಅಗತ್ಯ ಕ್ರಮ ಕೈಗೊಂಡು ರೈತರ ಹಿತಕಾಪಡಬೇಕು ಎಂದು ಒತ್ತಾಯಿಸಿದರು.

ಬುಡಾ ಅಧ್ಯಕ್ಷ ಜೆ.ಎಸ್. ಆಂಜನೇಯಲೂ, ಸೇರಿದಂತೆ ವಿವಿಧ ರೈತ ಮುಖಂಡರು, ಇತರರು ಉಪಸ್ಥಿತರಿದ್ದರು.



ಪತ್ರಕರ್ತರ ಮಕ್ಕಳಿಗೆ ಶೇ.50 ರಿಯಾಯ್ತಿ ಕಲ್ಪಿಸಿ

ಬಳ್ಳಾರಿ: ನಗರ ಸೇರಿದಂತೆ ಜಿಲ್ಲಾದ್ಯಂತ ಖಾಸಗಿ ಶಾಲೆ, ಕಾಲೇಜುಗಳಲ್ಲಿ ಶುಲ್ಕದ ಭಾರ ಏರಿಕೆಯಾಗುತ್ತಿದ್ದು, ಇದು ನಮ್ಮ ಪತ್ರಕರ್ತರಿಗೆ ಸಾಕಷ್ಟು ಹೊರೆಯಾಗುತ್ತಿದೆ. ಕೂಡಲೇ ನಮ್ಮ ಕಾರ್ಯನಿರತ ಪತ್ರಕರ್ತರ ಮಕ್ಕಳಿಗೆ ಶುಲ್ಕದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಬೇಕು ಎಂದು ಒತ್ತಾಯಿಸಿ ಇಲ್ಲಿನ ಕರ್ನಾಟಕ ಕಾರ್ಯನಿರತ ಪತ್ರಕರ್ತರಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿಗೆ, ಎಡಿಸಿ, ಡಿಡಿಪಿಐ, ಪಿಯು ಡಿಡಿ, ಜಿಪಂ ಸಿಇಒಗೆ ಮನವಿ ಸಲ್ಲಿಸಿದರು.

ಈ ವೇಳೆ ಕಾನಿಪ ಸಂಘದ ಜಿಲ್ಲಾಧ್ಯಕ್ಷ ಎನ್.ವೀರಭದ್ರಗೌಡ ಮಾತನಾಡಿ, ಇತ್ತೀಚೆಗೆ ಖಾಸಗಿ ಶಾಲಾ, ಕಾಲೇಜುಗಳಲ್ಲಿ ಶುಲ್ಕ ವೆಚ್ಚ ವರ್ಷದಿಂದ ವರ್ಷಕ್ಕೆ ದ್ವಿಗುಣವಾಗುತ್ತಿದೆ. ಇದು ಪತ್ರಕರ್ತರಿಗೆ ಸಾಕಷ್ಟು ಹೊರೆಯಾಗುತ್ತಿದೆ. ಮಾಧ್ಯಮ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅನೇಕ ಪತ್ರಕರ್ತರಿಗೆ ನಿಗದಿತ ವೇತನದ ವ್ಯವಸ್ಥೆಯಿಲ್ಲ, ಇದರಿಂದ ಆರ್ಥಿಕ ಅನಿಶ್ಚಿತತೆ ಎದುರಾಗುತ್ತಿದೆ. ಸಮಾಜದ ಹಿತಕ್ಕಾಗಿ ನಿರಂತರವಾಗಿ ದುಡಿಯುವ ಪತ್ರಕರ್ತರ ಜೀವನಮಟ್ಟ ಸುಧಾರಣೆ ಅಗತ್ಯವಾಗಿದ್ದು, ಸರ್ಕಾರದಿಂದ ಸೂಕ್ತ ಬೆಂಬಲ ದೊರಕಬೇಕು ಎಂದರು.

ಈ ಕ್ರಮ ಜಾರಿಯಾದಲ್ಲಿ ಮಾಧ್ಯಮ ಕ್ಷೇತ್ರದಲ್ಲಿ ದುಡಿಯುವ ಕುಟುಂಬಗಳಿಗೆ ಶಿಕ್ಷಣದ ಆರ್ಥಿಕ ಭಾರ ಸ್ವಲ್ಪ ಪ್ರಮಾಣದಲ್ಲಿ ಕಡಿಮೆಯಾಗುವುದರ ಜೊತೆಗೆ ಮಕ್ಕಳಿಗೆ ಉತ್ತಮ ಭವಿಷ್ಯ ರೂಪಿಸಲು ಸಹಕಾರಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾನಿಪ ಸಂಘದ ರಾಜ್ಯ ಸಮಿತಿ ಸದಸ್ಯ ಎಚ್.ಬಸವರಾಜ್, ಪತ್ರಕರ್ತರಾದ ನರಸಿಂಹಮೂರ್ತಿ ಕುಲಕರ್ಣಿ, ಗುರುಶಾಂತ, ಎಂ.ಜಂಬುನಾಥ್, ಹರಿಶಂಕರ್, ನಾಗರಾಜ್, ವಿನಾಯಕ ಬಡಿಗೇರ ಶ್ರೀನಿವಾಸ್ ಶೆಟ್ಟಿ, ನಂದೀಶ್, ವೆಂಕೋಬಿ ಸಂಗನಕಲ್ಲು, ತಿಮ್ಮಪ್ಪ ಚೌದರಿ, ಕೆ.ಎಂ.ಮಂಜುನಾಥ, ರೇಣುಕಾರಾಧ್ಯ, ಶಿವು, ಸಿದ್ದಪ್ಪ ಪೂಜಾರ್, ವಿರೇಶ್, ಸಿದ್ದಿಕ್, ಶಿವರಾಮ್ , ನಾಗರಾಜ ಸ್ವಾಮಿ, ದಿವಾಕರ ರೆಡ್ಡಿ, ಮುರುಳಿ, ಪ್ರಭಾಕರ್, ಖಲಂದರ್, ರುದ್ರಮುನಿ ಸ್ವಾಮಿ, ಗೋವರ್ಧನ್ ರೆಡ್ಡಿ, ಪ್ರಸಾದ್, ಗುರುರಾಜ್ ಉಪಸ್ಥಿತರಿದ್ದರು.



> ಇಂದಿನ ದಿನಗಳಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಶುಲ್ಕಗಳು ಗಣನೀಯವಾಗಿ ಹೆಚ್ಚುತ್ತಿವೆ. ಈ ಹಿನ್ನೆಲೆಯಲ್ಲಿ ಪತ್ರಕರ್ತರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು ಕಷ್ಟಕರವಾಗಿದೆ. ಈ ಹಿನ್ನೆಲೆ ಖಾಸಗಿ ಶಾಲಾ-ಕಾಲೇಜುಗಳಲ್ಲಿ ಶೇ.50ರಷ್ಟು ಶುಲ್ಕ ರಿಯಾಯಿತಿ ನೀಡಲು ಸರ್ಕಾರದಿಂದ ಸ್ಪಷ್ಟ ಸೂಚನೆ ನೀಡಬೇಕು.
> ■ ಎಚ್.ಬಸವರಾಜ್, ಕಾನಿಪ ರಾಜ್ಯ ಸಮಿತಿ ಸದಸ್ಯ